****

Bhakt Narsingh Mehta

(Kannad)

****

॥ ಶ್ರೀಹರಿಃ ॥

ವಿಷಯಾನುಕ್ರಮಣಿಕೆ

ಕ್ರಮಸಂಖ್ಯೆ	ವಿಷಯ		ಪುಟಸಂಖ್ಯೆ
೧.	ಮಹಾತ್ಮರ ಕೃಪೆ	.....	5
೨.	ಕುಟುಂಬ ವಿಸ್ತಾರ	.....	9
೩.	ಶಿವನ ಅನುಗ್ರಹ	.....	14
೪.	ರಾಸ ದರ್ಶನ	.....	20
೫.	ಅನನ್ಯಾಶ್ರಯ	.....	25
೬.	ಕುಂವರಾ ಬಾಯಿಯನ್ನು ಗಂಡನ ಮನೆಗೆ ಕಳಿಸಿಕೊಡುವುದು	.....	34
೭.	ಮಗನ ನೆಂಟತನ	.....	40
೮.	ಶ್ಯಾಮಲದಾಸನ ಮದುವೆ	.....	48
೯.	ಪುತ್ರನ ಮೃತ್ಯು	.....	54
೧೦.	ಪಿತೃಶ್ರಾದ್ಧ	.....	56
೧೧.	ಭಜನೆಯ ಪ್ರಭಾವ	.....	67
೧೨.	ಶ್ಯಾಮಲ ಶಾಹನಿಗೆ ಹುಂಡೀ	.....	76
೧೩.	ಕುಂವರಾ ಬಾಯಿಯ ಸಂಸಾರ	.....	83
೧೪.	ಭಕ್ತ ಸುತೆಯ ಸೀಮಂತ	.....	88
೧೫.	ದ್ವೇಷದ ಪ್ರತೀಕಾರ	.....	95
೧೬.	ಭಕ್ತರಾಜರ ಪರೀಕ್ಷೆ	.....	104
೧೭.	ರಾಜದರಬಾರಿನಲ್ಲಿ ಭಕ್ತರಾಜರು	.....	107
೧೮.	ಹಾರಪ್ರದಾನ	.....	114
೧೯.	ಭಕ್ತ ಮತ್ತು ಭಗವಂತ	.....	119
೨೦.	ಅಂತಿಮ ಸ್ಥಿತಿ	.....	123

॥ ಶ್ರೀಹರಿಃ ॥

ಭಕ್ತ ನರಸಿಂಹ ಮೆಹತಾ

ಮಹಾತ್ಮರ ಕೃಪೆ

ಪುಣ್ಯಭೂಮಿ ಆರ್ಯಾವರ್ತದ ಸೌರಾಷ್ಟ್ರಪ್ರಾಂತ್ಯದಲ್ಲಿ ಜೀರ್ಣದುರ್ಗ ಹೆಸರಿನ ಅತ್ಯಂತ ಪ್ರಾಚೀನ ಐತಿಹಾಸಿಕ ಒಂದು ನಗರವಿದೆ. ಅದನ್ನು ಇಂದು 'ಜೂನಾಗಡ' ಎಂದು ಹೇಳುತ್ತಾರೆ. ಭಕ್ತಪ್ರವರ ಶ್ರೀನರಸಿಂಹ ಮೆಹತನ ಜನ್ಮವು ಅಂದಾಜು ಸಂವತ್ ೧೪೭೦ರಲ್ಲಿ ಇದೇ ಜೂನಾಗಡದ* ಒಂದು ಪ್ರತಿಷ್ಠಿತ ನಾಗರ ಬ್ರಾಹ್ಮಣ ಪರಿವಾರದಲ್ಲಿ ಆಗಿತ್ತು. ಅವರ ತಂದೆಯ ಹೆಸರು ಕೃಷ್ಣ ದಾಮೋದರದಾಸ ಮತ್ತು ತಾಯಿಯ ಹೆಸರು ಲಕ್ಷ್ಮೀಗೌರೀ ಎಂದಿತ್ತು. ಇವರಿಗೆ ವಂಶೀಧರ ಎಂಬ ಓರ್ವ ಅಣ್ಣನೂ ಇದ್ದನು. ವಂಶೀಧರನ ವಯಸ್ಸು ೨೨ ವರ್ಷ ಮತ್ತು ನರಸಿಂಹರಾಮನ ವಯಸ್ಸು ಹೆಚ್ಚುಕಡಿಮೆ ೫ ವರ್ಷವಿದ್ದಾಗ ಅವರ ತಂದೆ-ತಾಯಿಯರ ದೇಹಾಂತವಾಯಿತು. ಬಳಿಕ ನರಸಿಂಹರಾಮನ ಲಾಲನೆ-ಪಾಲನೆ ಅಣ್ಣ ಮತ್ತು ಅಜ್ಜಿ ಜಯಕುಂವರಿ ಇವರು ಮಾಡುತ್ತಿದ್ದರು.

ನರಸಿಂಹರಾಮನು ಬಾಲ್ಯದಿಂದಲೇ ಮೂಕನಾಗಿದ್ದನು. ಸಾಧಾರಣ ಎಂಟು ವರ್ಷಗಳವರೆಗೂ ಮಾತಾಡುತ್ತಿರಲಿಲ್ಲ. ಇದರಿಂದಾಗಿ ಅವನನ್ನು ಜನರು ಮೂಗ ಎಂದೇ ಕರೆಯುತ್ತಿದ್ದರು. ಇದರಿಂದಾಗಿ ಅಜ್ಜಿಗೆ ತುಂಬಾ ದುಃಖವಾಗುತಿತ್ತು. ಈ ನನ್ನ ಮೊಮ್ಮಗ ಎಂದಿಗೆ ಮಾತಾಡುವನು ಎಂಬ ಚಿಂತೆ ಸದಾಕಾಲ ಅವಳಿಗಿತ್ತು. ಮೂಕನನ್ನು ವಾಚಾಳಿ ಯಾರು ಮಾಡಬಲ್ಲರು ! ಹೆಳವನಿಗೆ ಪರ್ವತ ಹತ್ತುವ ಶಕ್ತಿಯಾರು ಕೊಡಬಲ್ಲರು ? ಆದರೆ ಇಂತಹ ಆ ಶಕ್ತಿಯನ್ನು

---

*ಕೆಲವು ಜನರ ಅಭಿಪ್ರಾಯದಂತೆ ನರಸಿಂಹ ಮೆಹತಾನ ಜನ್ಮವು ಜೂನಾಗಡದ ಸಮೀಪ 'ತಲಾಜಾ' ಎಂಬ ಊರಿನಲ್ಲಿ ಆಗಿತ್ತು, ಬಳಿಕ ಅವರ ಪರಿವಾರ ಜೂನಾಗಡದಲ್ಲಿ ಬಂದು ನೆಲೆಸಿತು ಎಂದು ಹೇಳುತ್ತಾರೆ. ಇದರ ಪುಷ್ಟಿಯು ನರಸಿಂಹಮೆಹತನ ಒಂದು ಪದ್ಯದಿಂದಲೂ ಆಗುತ್ತದೆ.

ಗಾಮ ಕೃಲಾಜಾಮಾಂ ಜನ್ಮ ಮಾರೋ ಥಯೋ,
ಭಾಭೀಪ ಮೂರಖ ಕಹೀ ಮೇಹೇಣು ದೀಧೂಂ ।
ವಚನ ವಾಗ್ಯುಂ ಏಕ ಅಪೂಜ ಶಿವಲಿಂಗನುಂ,
ವನಮಾಂಹೇ ಜಇ ಪೂಜನ ಕೀಧುಂ ॥

ಕೇವಲ ಪರಮಾತ್ಮನು ಮಾತ್ರ ಕೊಡಬಲ್ಲನೆಂಬ ವಿಶ್ವಾಸ ಜಯಕುಂವರಿಗೆ ಇತ್ತು. ಅವನ ದಯೆ ಉಂಟಾದಾಗ ನನ್ನ ಮೊಮ್ಮಗನಿಗೂ ಮಾತನಾಡುವ ಸಾಮರ್ಥ್ಯ ಬಂದೀತು. ಆ ದಯಾಮಯ ಜಗನ್ನಾಥನ ಕೃಪೆಯು ಸಾಧಾರಣ ಮನುಷ್ಯರಿಗೆ ಅವನ ಪ್ರಿಯಭಕ್ತರ ಮೂಲಕವೇ ಉಂಟಾಗುತ್ತದೆ ಎಂದು ಅವಳು ನಂಬಿದ್ದಳು. ಆದುದರಿಂದ ಸ್ವಾಭಾವಿಕವಾಗಿಯೇ ಅವಳಲ್ಲಿ ಸಾಧು-ಮಹಾತ್ಮರ ಕುರಿತು ಶ್ರದ್ಧೆ ಮತ್ತು ಆದರದ ಭಾವವಿತ್ತು. ಎಲ್ಲೇಯಾಗಲೀ ಯಾರಾದರೂ ಸಾಧು - ಮಹಾತ್ಮರು ಸಿಕ್ಕಿದರೆ ಅವರ ದರ್ಶನ ಹಾಗೂ ಯಥಾಶಕ್ತಿ ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದಳು.

ಶ್ರದ್ಧೆಯು ಉತ್ಕಟವಾದಾಗ ಒಂದಿಲ್ಲ ಒಂದು ದಿನ ಫಲಿಸುತ್ತದೆ ಎಂದು ಹೇಳುತ್ತಾರೆ. ಕೊನೆಗೆ ಜಯಕುಂವರಿಯ ಶ್ರದ್ಧೆಯು ಪೂರ್ಣವಾಗುವ ಅವಕಾಶ ಬಂತು. ಫಾಲ್ಗುಣ ಶುದ್ಧ ಪಂಚಮಿಯ ದಿನ, ವಸಂತ ಋತುವಿನ ಸುಖಿಮಯ ಸಾಮ್ರಾಜ್ಯ ಜಗತ್ತಿನಲ್ಲೆಲ್ಲ ಹರಡಿತ್ತು. ಋತುರಾಜನ ಸುಖಿಮಯ ಮಂದಾನಿಲವು ಜಗತ್ತಿನ ಪ್ರಾಣಿಗಳಲ್ಲಿ ನವಜೀವನದ ಸಂಚಾರ ಮಾಡುತ್ತಿತ್ತು. ಊರಿನ ಸ್ತ್ರೀ-ಪುರುಷರು ಪ್ರತಿದಿನ ಸಂಜೆಯ ಹೊತ್ತಿನಲ್ಲಿ ಹಾಟಕೇಶ್ವರ ಮಹಾದೇವನ ದರ್ಶನಕ್ಕಾಗಿ ಹೋಗುತ್ತಿದ್ದರು, ಸ್ತ್ರೀಯರು ಮಂದಿರದಲ್ಲಿ ಒಂದೆಡೆ ಸೇರಿ ಭಕ್ತಿಯುಕ್ತ ಭಜನೆಗಳನ್ನೂ, ರಾಸಗೀತೆಗಳನ್ನು ಹಾಡುತ್ತಿದ್ದರು. ನಿತ್ಯದಂತೆ ಅಂದೂ ಕೂಡ ದೇವಸ್ಥಾನದಲ್ಲಿ ಜನರ ಸಂದಣಿನೆರೆದಿತ್ತು. ಜಯಕುಂವರಿಯೂ ಮೊಮ್ಮಗನನ್ನು ಕರೆದುಕೊಂಡು ಹಾಟಕೇಶ್ವರನ ದರ್ಶನಕ್ಕಾಗಿ ಬಂದಿದ್ದಳು. ದೇವರ ದರ್ಶನ ಮಾಡಿ ಮರಳುವಾಗ ಮಂದಿರದ ಮೂಲೆಯಲ್ಲಿ ವ್ಯಾಘ್ರಾಂಬರದ ಮೇಲೆ ಪದ್ಮಾಸನಹಾಕಿ ಕುಳಿತಿದ್ದ ಓರ್ವ ಮಹಾತ್ಮರತ್ತ ಅವಳ ದೃಷ್ಟಿಹರಿಯಿತು. ಅವರು 'ನಾರಾಯಣ - ನಾರಾಯಣ' ಎಂದು ಜಪ ಮಾಡುತ್ತಿದ್ದರು. ಅವರ ಮುಖಮಂಡಲವು ಅಪೂರ್ವ ತೇಜಸ್ಸಿನಿಂದ ಹೊಳೆಯುತಿತ್ತು. ಇವರು ಯಾರೋ ಪರಮಸಿದ್ಧಯೋಗಿಗಳು ಎಂದು ನೋಡಿದಾಗಲೇ ತಿಳಿಯುತ್ತಿತ್ತು. ಅವರ ದಿವ್ಯ ತಪದಿಂದ ಪಡೆದ ಪ್ರತಿಭೆಗೆ ಆಕರ್ಷಿತಳಾದ ಜಯಕುಂವರಿಯು ಜೊತೆಗಿನ ಮಹಿಳೆಯರೊಂದಿಗೆ ಅವರ ದರ್ಶನಕ್ಕಾಗಿ ತೆರಳಿದಳು. ಅವಳು ದೂರದಿಂದಲೇ ತುಂಬಾ ಆದರ ಮತ್ತು ಭಕ್ತಿಯೊಂದಿಗೆ ನಮಸ್ಕರಿಸಿ, ಕೈಜೋಡಿಸಿ ವಿನಂತಿಸಿಕೊಂಡಳು. ಮಹಾತ್ಮರೇ! ಇವನು ನನ್ನ ಮೊಮ್ಮಗನಾಗಿದ್ದು ಇವನ ತಂದೆ - ತಾಯಿಯರು ಕಾಲವಾಗಿದ್ದಾರೆ. ಇವನ ಹೆಸರು ನರಸಿಂಹರಾಮನೆಂದು,

ಎಂಟು ವರ್ಷದವನಾದರೂ ಇವನು ಮಾತಾಡಲೊಲ್ಲನು ; ಜನರು ಮೂಕ ನೆಂದೇ ಇವನನ್ನು ಕರೆಯುತ್ತಾರೆ, ಅದರಿಂದ ನನಗೆ ತುಂಬಾ ದುಃಖವಾಗಿದೆ. ಸ್ವಾಮಿ ! ಈ ಬಾಲಕನು ಮಾತಾಡುವಂತೆ ನೀವು ಅನುಗ್ರಹಿಸಬೇಕು.

ಗೋಸ್ವಾಮಿ ತುಲಸೀದಾಸರು ಹೇಳಿರುವರು-

ಸಂತ ಹೃದಯ ನವನೀತ ಸಮಾನಾ । ಕಹಾ ಕವಿನ್ಹ ಪರಿ ಕಹೈ ನ ಜಾನಾ ॥
ನಿಜ ಪರಿತಾಪ ದ್ರವಇ ನವನೀತಾ । ಪರ ದುಖಿ ದ್ರವಹಿ ಸಂತ ಸುಪುನೀತಾ ॥

ಮಹಾತ್ಮರ ಹೃದಯವು ಬೆಣ್ಣೆಯಂತೆ ಇರುತ್ತದೆ. ಇಷ್ಟೇ ಅಲ್ಲ, ಬೆಣ್ಣೆ ಯಾದರೋ ಕೇವಲ ತಾನು ಬಿಸಿಯಾದಾಗ ಕರಗುತ್ತದೆ; ಆದರೆ ಸತ್ಪುರುಷರು ಬೇರೆಯವರ ದುಃಖದಲ್ಲೂ ದ್ರವೀಭೂತರಾಗುತ್ತಾರೆ.

ಈ ಮಹಾತ್ಮರಾದರೋ ದೈವೀಶಕ್ತಿ ಸಂಪನ್ನರಾಗಿದ್ದರು. ಆ ವೃದ್ಧೆಯ ಮನೋಕಾಮನೆಯನ್ನು ಪೂರ್ಣಮಾಡಲೆಂದೇ ದೇವರಿಂದ ಪ್ರೇರಿತರಾಗಿ ಬಂದಂತಿತ್ತು. ಅವರು ಬಾಲಕನನ್ನು ತಮ್ಮ ಬಳಿಯಲ್ಲಿ ಕುಳ್ಳಿರಿಸಿಕೊಂಡು, ಅವನನ್ನು ಒಮ್ಮೆ ಲಕ್ಷ್ಯವಿಟ್ಟು ನೋಡಿ ಹೇಳಿದರು- 'ಈ ಬಾಲಕನಾದರೋ ಭಗವಂತನ ದೊಡ್ಡ ಭಕ್ತನಾಗುವನು.' ಇಷ್ಟು ಹೇಳಿ ಅವರು ತಮ್ಮ ಕಮಂಡಲುವಿನ ಜಲವನ್ನು ಬಾಲಕನ ಮೇಲೆ ಪ್ರೋಕ್ಷಿಸಿ, ಕಿವಿಯಲ್ಲಿ ಮಗೂ ! **'ರಾಧೇ ಕೃಷ್ಣ-ರಾಧೇ ಕೃಷ್ಣ'** ಹೇಳು ಎಂದು ಉಪದೇಶಿಸಿದರು.

ಮಹಾತ್ಮರ ಕೃಪೆಯಿಂದ ಹುಟ್ಟು ಮೂಕನಾದ ಬಾಲಕನು **'ರಾಧೇ ಕೃಷ್ಣ-ರಾಧೇ ಕೃಷ್ಣ'** ಎಂದು ಹೇಳತೊಡಗಿದ. ನೆರೆದ ಜನರೆಲ್ಲ ಆಶ್ಚರ್ಯ ಚಕಿತರಾದರು ಹಾಗೂ ಮಹಾತ್ಮರ ಜಯಕಾರ ಗೈದರು.

ಮೂಕನಾದ ಮೊಮ್ಮಗನ ಬಾಯಿಂದ ಭಗವಂತನ ನಾಮೋಚ್ಚಾರಣೆ ಯನ್ನು ಕೇಳಿದ ವೃದ್ಧಳಾದ ಜಯಕುವರಿಗೆ ಆದ ಸಂತೋಷವನ್ನು ಯಾರು ವರ್ಣಿಸಬಲ್ಲರು ? ಅವಳು ಮಹಾತ್ಮರಿಗೆ ಬಾರಿ-ಬಾರಿ ನಮಸ್ಕರಿಸಿ ಕೈಜೋಡಿಸಿ ಪ್ರಾರ್ಥಿಸಿಕೊಂಡಳು. ಸ್ವಾಮಿ ! ನಿಮ್ಮ ಕೃಪೆಯಿಂದಲೇ ನನ್ನ ಮೊಮ್ಮಗನು ಮಾತನಾಡತೊಡಗಿದನು. ನನ್ನ ಹಿರಿಯ ಮೊಮ್ಮಗ ರಾಜ್ಯದಲ್ಲಿ ಅಮಲದಾರ ನಾಗಿರುವನು. ನೀವು ನಮ್ಮ ಮನೆಗೆ ದಯಮಾಡಿಸಿ ಕೃಪೆಮಾಡಬೇಕು ಹಾಗೂ ಯಥಾಶಕ್ತಿ ನಿಮ್ಮ ಸೇವೆಯ ಅವಕಾಶವನ್ನು ನನಗೆ ದಯಪಾಲಿಸಬೇಕು. ನಿಮ್ಮ ಪಾದಧೂಳಿಯಿಂದ ನಮ್ಮ ಮನೆಯೂ ಪವಿತ್ರವಾದೀತು.

ಆದರೆ ನಿಜವಾದ ಮಹಾತ್ಮರಿಗೆ ಸೇವೆ ಅಥವಾ ಪುರಸ್ಕಾರದ ಆಶೆಯೇ ಇರುವುದಿಲ್ಲ. ಅವರಾದರೋ ಸದಾಕಾಲ ಸ್ವಭಾವದಿಂದಲೇ ಲೋಕಕಲ್ಯಾಣದ ಪ್ರಯತ್ನ ಮಾಡುತ್ತಿರುತ್ತಾರೆ. ಮಹಾತ್ಮರು ಪ್ರಸನ್ನತೆಯಿಂದ ಹೇಳಿದರು ಅಮ್ಮಾ ! ನನ್ನಲ್ಲಿ ಯಾವುದೇ ಯೋಗಬಲ, ತಪೋಬಲವಿಲ್ಲ. ಈ ಜಗತ್ತಿನಲ್ಲಿ ಆಗುವುದೆಲ್ಲವೂ ಕೇವಲ ಪ್ರಭುವಿನ ಕೃಪೆಯಿಂದಲೇ ಆಗುತ್ತದೆ. ಆ ಮಹಾ ಮಹಿಮ ಪರಮಾತ್ಮನ ಮಾಯೆ 'ಅಘಟನ- ಘಟನಾಪಟೀಯಸೀ' ಎಂದು ಕರೆಸಲ್ಪಡುತ್ತದೆ. ಆದ್ದರಿಂದ ನನ್ನ ಉಪಕಾರವನ್ನು ಮರೆತು ಆ ಪರಮಾತ್ಮನಿಗೇ ಕೃತಜ್ಞತೆಯನ್ನು ಸಲ್ಲಿಸಿರಿ ಹಾಗೂ ಅವನ ನಾಮಸ್ಮರಣೆ, ಭಜನೆ, ಪೂಜೆ ಮಾಡಿರಿ. ನಾನು ಈ ರೀತಿ ಕಾರಣವಿಲ್ಲದೆ ಅಥವಾ ಗೌರವಕ್ಕಾಗಿ ಯಾರ ಗೃಹಸ್ಥರ ಮನೆಗೂ ಹೋಗುವುದಿಲ್ಲ. ನೀವು ಮನೆಗೆ ಹೋಗಿ ದೇವರ ಭಜನೆಮಾಡಿರಿ, ನಿಮಗೆ ಶ್ರೇಯಸ್ಸಾಗಲಿ. ನಾನು ಈಗ ಗಿರಿನಾರಕಡೆಗೆ ಹೋಗುತ್ತೇನೆ. ನಿಮ್ಮ ಇಚ್ಛಾನುಸಾರ ಕೆಲವೇ ದಿನಗಳಲ್ಲಿ ಓರ್ವ ಕುಲೀನ ಸುಂದರ ಕನ್ಯೆಯೊಡನೆ ಇವನ ವಿವಾಹವಾಗುವುದು ಎಂದು ಹೇಳಿ ಹೊರಟುಹೋದರು.

ಜಯಕುವರಿಗೆ ಮಹಾತ್ಮರಲ್ಲಿ ವಿಶೇಷ ಆಗ್ರಹಪಡಿಸುವ ಧೈರ್ಯ ವಾಗಲಿಲ್ಲ. ಮೊಮ್ಮಗನ ಜೊತೆಗೆ ಸಂತೋಷದಿಂದ ತನ್ನ ಮನೆಗೆ ಬಂದಳು ಮತ್ತು ವಂಶೀಧರನಲ್ಲಿ ಮಹಾತ್ಮರ ಚಮತ್ಕಾರವನ್ನು ಹೇಳಿದಳು. ವಂಶೀಧರನು ಮಹಾತ್ಮರ ದರ್ಶನದ ಇಚ್ಛೆಯಿಂದ ಸಿಪಾಹಿಗಳಿಂದ ತುಂಬಾ ಹುಡುಕಿಸಿದನು. ಆದರೆ ಎಲ್ಲಿಯೂ ಅವರ ಸುಳಿವು ಸಿಗಲಿಲ್ಲ. ನಮ್ಮ ಭಾವೀಭಕ್ತ ನರಸಿಂಹ ಮೆಹತಾನಿಗೆ ಇಷ್ಟಮಂತ್ರ ಮತ್ತು ಮಾತನ್ನು ಕೊಟ್ಟ ಸಿದ್ಧ ಪುರುಷನು ಸ್ವತಃ ಭಗವಾನ್ ಶ್ರೀಕೃಷ್ಣನೇ ಆಗಿದ್ದನು ಎಂದು ಜನರು ನಂಬಿದ್ದರು.

ಕುಟುಂಬ ವಿಸ್ತಾರ

ಆ ಸಮಯದಲ್ಲಿ ಹುಮಾಯುನ್ ಭಾರತದ ಸಾಮ್ರಾಟನಾಗಿದ್ದನು. ಅವನ ಅಧೀನದಲ್ಲಿಯೇ ಜೂನಾಗಡದ ಶಾಸಕ ರಾವ್‌ಮಾಂಡಲೀಕ್ ಎಂಬ ಕ್ಷತ್ರಿಯ ರಾಜನಿದ್ದನು. ಸಾಮ್ರಾಟ ಹುಮಾಯುನನ ಅಧೀನನಾಗಿದ್ದರೂ ಆಳ್ವಿಕೆಯಲ್ಲಿ ಅವನು ಸ್ವತಂತ್ರನಾಗಿದ್ದನು. ಕೇವಲ ನಿಶ್ಚಿತವಾದ ಕಂದಾಯವನ್ನು ಸಲ್ಲಿಸ ಬೇಕಾಗಿತ್ತು. ರಾಜಕಾರ್ಯದಲ್ಲಿ ಆಗ ನಾಗರ ಜಾತಿಯು ಅತ್ಯಂತ ಪ್ರವೀಣವಾಗಿತ್ತು. ರಾಜ್ಯದ ಪ್ರಧಾನ ಮಂತ್ರಿಯಿಂದ ಹಿಡಿದು ಓರ್ವ ಸಾಧಾರಣ ಸಿಪಾಯಿಯವರೆಗಿನ ಎಲ್ಲ ಹುದ್ದೆಗಳು ಹೆಚ್ಚಿನಂಶ ನಾಗರ ಜಾತಿಯವರ ಕೈಯಲ್ಲೇ ಇತ್ತು. ನಾಗರ ಜಾತಿಯು ಲೇಖನೀ, ಸೌಟು ಮತ್ತು ಭರ್ಚಿ ಇವುಗಳ ಮೂಲಕ ಅತ್ಯಂತ ಪ್ರತಿಷ್ಠಿತ ಹಾಗೂ ಸಂಪನ್ನವಾಗಿತ್ತು. ಇಂದು ಕೂಡಾ ರಾಜಕೀಯ ವಿಭಾಗದಲ್ಲಿ ನಾಗರ ಜಾತಿಯ ವಿಶೇಷ ಕೈವಾಡವಿರುವುದು ಇದೇ ಕಾರಣವಾಗಿದೆ.

ವಂಶೀಧರನೂ ಇದೇ ಜಾತಿಯಲ್ಲಿ ಹುಟ್ಟಿದ್ದನು. ಆದ್ದರಿಂದ ರಾಜನ ಕಡೆಯಿಂದ ತಿಂಗಳ ಒಂದು ನೂರು ರೂಪಾಯಿಯ ಮೇಲೆ ಅಮಲ್‌ದಾರನಾಗಿ ನಿಯುಕ್ತನಾಗಿದ್ದನು. ರಾಜನ ಕಡೆಯಿಂದ ಅವನಿಗೆ ಸಾಕಷ್ಟು ಆಳು-ಕಾಳುಗಳು ಮತ್ತು ವಾಹನಾದಿಗಳು ದೊರಕಿದ್ದುವು. ಆದ್ದರಿಂದ ಅವರ ಪರಿವಾರವು ತುಂಬಾ ಸುಖದಿಂದ ಜೀವನ ಸಾಗಿಸುತ್ತಿತ್ತು ಹಾಗೂ ಸಮಾಜದಲ್ಲಿ ಬೇಕಾದಷ್ಟು ಗೌರವ ಪಡೆದಿತ್ತು. ಏನಾದರೂ ಕೊರತೆ ಇದ್ದಿದ್ದರೆ ಅದು ಅವನ ಪತ್ನೀ ದುರಿತಗೌರಿಯ ಸ್ವಭಾವವು ಚೆನ್ನಾಗಿರಲಿಲ್ಲ. ಅವಳಿಗೆ ಪತಿಯ ಅಮಲ್‌ದಾರಿಕೆಯ ಬಗ್ಗೆ ಹೆಚ್ಚಾದ ಅಭಿಮಾನವಿತ್ತು. ಸುಳ್ಳು-ಪಳ್ಳು ಷಡ್‌ಯಂತ್ರ ರಚಿಸುವುದು ಮತ್ತು ಬೇರೆಯವರಿಗೆ ಕಷ್ಟ ಕೊಡುವುದು ಅವಳ ಸ್ವಭಾವವೇ ಆಗಿಹೋಗಿತ್ತು. ಅವಳ ದುರ್ಗುಣಗಳನ್ನು ನೋಡಿದಾಗ ಅವಳಿಗಿಟ್ಟ 'ದುರಿತಗೌರೀ' ಹೆಸರು ಅಕ್ಷರಶಃ ಸತ್ಯವಾಗಿದೆ ಎಂದೆನಿಸುತ್ತಿತ್ತು. 'ಯಥಾ ನಾಮ ತಥಾ ಗುಣ' ಎಂಬ ನಾಲ್ನುಡಿಯು ಪೂರ್ಣವಾಗಿ ಅವಳಲ್ಲಿ ಸಾರ್ಥಕವಾಗಿತ್ತು. ಆದರೂ ಕೂಡ ಸಂಸಾರವು ಸುಖ-ಶಾಂತಿಯಿಂದಲೇ ಸಾಗುತಿತ್ತು.

ಬಾಲಕ ನರಸಿಂಹರಾಮನು ಮಹಾತ್ಮರ ಕೃಪೆಯಿಂದ ಮಾತನಾಡತೊಡಗಿ ದಂದಿನಿಂದ ಅಜ್ಜಿ ಜಯಕುಂವರಿಗೆ ಅವನ ವಿವಾಹದ ಚಿಂತೆ ಇಟ್ಟುಕೊಂಡಿತ್ತು.

ಆದಷ್ಟು ಬೇಗ ತಮ್ಮ ಮಕ್ಕಳನ್ನು ವಿವಾಹ ಬಂಧನದಲ್ಲಿ ತೊಡಗಿಸುವುದು ಭಾರತೀಯ ತಂದೆ-ತಾಯಿಯರು ತಮ್ಮ ಒಂದು ಕರ್ತವ್ಯವೆಂದು ತಿಳಿಯುತ್ತಾರೆ. ಈ ಪ್ರಕಾರದಿಂದ ಅವರು ಪಿತೃ ಋಣದಿಂದ ತಮ್ಮನ್ನು ಮುಕ್ತರಾಗಿಸಿ ಕೊಳ್ಳಲು ಬಯಸುತ್ತಾರೆ. ಜಯಕುಂವರಿಯೂ ಈ ಭಾವನೆಯಿಂದಲೇ ನರಸಿಂಹರಾಮನ ವಿವಾಹದ ಪ್ರಯತ್ನವನ್ನು ಮಾಡಲು ಪ್ರಾರಂಭಿಸಿದಳು. ಮನೆತನವು ಪ್ರತಿಷ್ಠಿತ ಹಾಗೂ ಶ್ರೀಮಂತವಾದ್ದರಿಂದ ಅವಳಿಗೆ ಇದರಲ್ಲಿ ಬೇಗನೇ ಸಫಲತೆ ಉಂಟಾಯಿತು. ಅಂದಾಜು ಒಂಭತ್ತು ವರ್ಷದಲ್ಲೇ ಅವಳು ನರಸಿಂಹರಾಮನ ವಿವಾಹವು 'ಮಾಣಿಕಗೌರೀ' ಎಂಬ ಹೆಸರಿನ ಏಳು ವರ್ಷದ ಸುಂದರ, ಸುಗುಣ ಬಾಲಿಕೆಯೊಂದಿಗೆ ಮಾಡಿಬಿಟ್ಟಳು. ಸುಲಕ್ಷಣಳಾದ, ಮನವೊಪ್ಪಿದ ಮಾಣಿಕ ಗೌರಿಯನ್ನು ಸೊಸೆಯಾಗಿ ಪಡೆದು ಅವಳಿಗೆ ತುಂಬಾ ಸಂತಸವಾಯಿತು.

ವಂಶೀಧರನು ತಮ್ಮನಾದ ನರಸಿಂಹರಾಮನ ಪಾಲನೆ-ಪೋಷಣೆ ಮತ್ತು ವಿವಾಹ ಬಗ್ಗೆ ಚಿಂತಿಸಲಿಲ್ಲ, ಆದರೆ ಅವನ ಶಿಕ್ಷಣದ ಕಡೆಗೆ ಗಮನಕೊಟ್ಟನು. ಅವನು ನರಸಿಂಹರಾಮನನ್ನು ಒಂದು ಸಂಸ್ಕೃತ ಪಾಠಶಾಲೆಯಲ್ಲಿ ಕಲಿಯಲು ಸೇರಿಸಿದನು ; ಆದರೆ ನರಸಿಂಹರಾಮನ ಮನಸ್ಸು ಓದಿನ ಕಡೆಗೆ ತೊಡಗಲಿಲ್ಲ. ಮಹಾತ್ಮರಿಂದ ಅವನಿಗೆ ಇಷ್ಟಮಂತ್ರದ ಪ್ರಾಪ್ತಿಯಾದಾಗಿನಿಂದ ಅವನ ಮನಸ್ಸು ಹೆಚ್ಚೆಚ್ಚು ಭಗವಂತನೆಡೆಗೆ ಆಕೃಷ್ಟವಾಯಿತು. ಅವನು ನಿರಂತರ 'ರಾಧೇ ಕೃಷ್ಣ - ರಾಧೇ ಕೃಷ್ಣ' ಎಂಬ ನಾಮವನ್ನು ಕೊಂಡಾಡುತ್ತಿದ್ದನು. ಬೆಳಿಗ್ಗೆ-ಸಂಜೆ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಪೂಜೆ ಮಾಡುತ್ತಿದ್ದನು. ಭಜನೆ-ಕೀರ್ತನೆ ಕೇಳುತ್ತಿದ್ದನು. ಶಿವನಲ್ಲಿ ಅವನಿಗೆ ಹೆಚ್ಚಿನ ಭಕ್ತಿಯಿತ್ತು. ಅವನು ಶಿವದೇವಸ್ಥಾನಕ್ಕೆ ಹೋಗಿ ತುಂಬಾ ಶ್ರದ್ಧೆ ಮತ್ತು ಪ್ರೇಮದಿಂದ ಉಮಾ-ಮಹೇಶ್ವರನ ಪೂಜೆ-ಅರ್ಚನೆ ಗೈದು, ಪ್ರೇಮಾನಂದದಲ್ಲಿ ನಿಮಗ್ನನಾಗಿ ಶಂಕರನ ಗುಣಗಾನ ಮಾಡುತ್ತಿದ್ದನು. ಅಲ್ಲದೇ ಎಲ್ಲಾದರೂ ಪುರಾಣ-ಭಾಗವತ ಕಥೆ ನಡೆಯುತ್ತಿದ್ದರೆ ಅಲ್ಲಿಗೆ ಹೋಗಿ ಅದನ್ನು ಮನಸ್ಸಿಟ್ಟು ಕೇಳುತ್ತಿದ್ದನು. ದ್ವಾರಕೆಗೆ ಬಂದು ಹೋಗುವ ಸಾಧು - ಸತ್ಪುರುಷರು ಆ ಊರಿಗೆ ಬಂದಾಗ ಅವರ ದರ್ಶನ ಮಾಡಿ, ಯಥಾಸಾಧ್ಯ ಅವರ ಸೇವೆ ಮಾಡುತ್ತಾ, ಅವರ ಉಪದೇಶಗಳನ್ನು ಕೇಳುತ್ತಿದ್ದನು. ಯಾರಾದರು ಭಜನೆ-ಕೀರ್ತನೆ ಮಾಡುತ್ತಿದ್ದರೆ ಸ್ವತಃ ಅವರೊಂದಿಗೆ ಕುಳಿತು ಭಜನೆ ಹಾಡುತ್ತಿದ್ದನು, ಅಥವಾ ತಾಳ - ಚಿಟಿಕೆ ಬಾರಿಸುತ್ತಿದ್ದನು. ಒಂದು ವೇಳೆ ಯಾರಾದರು ಭಾವಮಗ್ನರಾಗಿ ನೃತ್ಯ ಮಾಡತೊಡಗಿದರೆ ಇವನೂ

ಅವರೊಂದಿಗೆ ಕುಣಿಯುತ್ತಿದ್ದನು. ಎಂದಾದರೂ ರಾಸಮಂಡಳಿಯು ಆ ಊರಿಗೆ ಬಂದರೆ ಇವನ ಆನಂದಕ್ಕೆ ಪಾರವೇ ಇರುತ್ತಿರಲಿಲ್ಲ. ಪ್ರತಿದಿನವು ರಾಸಲೀಲೆಯನ್ನು ನೋಡುತ್ತಿದ್ದನು. ಶ್ರೀರಾಧೆ, ಶ್ರೀಲಲಿತಾ ಮುಂತಾದವರ ಹಾಗೂ ವ್ರಜದ ಇತರ ಗೋಪ-ಗೋಪಿಯರ ಭಗವತ್ ಪ್ರೇಮವನ್ನು ಕಂಡು ದೇಹಭಾವವೇ ಇಲ್ಲದಷ್ಟು ತಲ್ಲೀನನಾಗಿ ಬಿಡುತ್ತಿದ್ದನು. ಕೆಲವೊಮ್ಮೆ ಸ್ವತಃ ಆ ಮಂಡಳಿಯೊಂದಿಗೆ ಸೇರಿ ರಾಸಲೀಲೆಯಲ್ಲಿ ಗೋಪಿಯಾಗಿ ಕುಣಿಯುವ ಅವಕಾಶ ಸಿಕ್ಕಿದರೆ ಅಪಾರ ಆನಂದವನ್ನು ಅನುಭವಿಸುತ್ತಾ ಕೃಷ್ಣಪ್ರೇಮದಲ್ಲಿ ಕುಣಿಯುತ್ತ-ಕುಣಿಯುತ್ತಾ ಎಚ್ಚರತಪ್ಪಿ ಬೀಳುತ್ತಿದ್ದನು. ಅವನಿಗೆ ತನ್ನ ಆ ಗುಂಗಿನಲ್ಲೇ ಊಟ-ತಿಂಡಿಯ ಕಡೆಗೂ ಲಕ್ಷ್ಯವಿರುತ್ತಿರಲಿಲ್ಲ. ಕೆಲದಿನಗಳಂತೂ ಮನೆಗೆ ಹೋಗುತ್ತಿರಲಿಲ್ಲ. ಇದರಿಂದ ಅವನು ಅಣ್ಣ-ಅತ್ತಿಗೆಯರ ಬೈಗಳೂ ಕೇಳಬೇಕಾಗುತ್ತಿತ್ತು, ಕೆಲವುಸಲ ಏಟೂ ತಿನ್ನಬೇಕಾಗುತಿತ್ತು. ಸಮಾಜದಲ್ಲಿ ನಿಂದೆಗೆ ಗುರಿಯಾಗಬೇಕಾಗುತಿತ್ತು. ಆದರೂ ಅವನ ನಡತೆಯಲ್ಲಿ ಬದಲಾವಣೆ ಆಗುತ್ತಿರಲಿಲ್ಲ. ಒಂದು ಸಲ ಅಮೃತ ಸ್ವರೂಪೀ ಭಗವತ್ ಪ್ರೇಮದ ಆಸ್ವಾದನೆ ಪಡೆದವನು ಅದರಿಂದ ದೂರ ಸರಿಯಬಲ್ಲನೇ ? ಭಕ್ತ ನರಸಿಂಹರಾಮನು ಓದು-ಬರಹ, ಊಟ-ತಿಂಡಿ, ಮಲಗುವುದು, ಆಟಪಾಟಗಳು, ಸುಖ-ದುಃಖ, ನಿಂದಾ-ಸುತ್ತಿ ಅವೆಲ್ಲವೂ ಒಂದು ಭಗವತ್ ಪ್ರೇಮಕ್ಕಾಗಿ ನಿವಾಳಿಸಿ ಬಿಟ್ಟಿದ್ದನು.

ವಂಶೀಧರನು ಅವನನ್ನು ಸರಿ ದಾರಿಗೆ ತರಲಿಕ್ಕಾಗಿ ಯಾವುದೇ ಮಾತು ಬಾಕಿ ಇಟ್ಟಿಲ್ಲ. ಅತ್ತಿಗೆಯು ಬೇಕಾದಷ್ಟು ನಿಂದಿಸುತ್ತಾ, ಪತಿ-ಪತ್ನಿಯರಿಗೆ ಕಷ್ಟ ಕೊಡುವುದರಲ್ಲಿ ಯಾವುದನ್ನು ಉಳಿಸಿಕೊಂಡಿಲ್ಲ. ಆದರೆ 'ಕಪ್ಪಾದ ಕಂಬಳಿಗೆ ಬೇರೆ ಯಾವುದೇ ಬಣ್ಣ ಹತ್ತುವುದಿಲ್ಲ' ಹಾಗೆಯೇ ನರಸಿಂಹ ರಾಮನ ಭಕ್ತಿಯ ಮುಂದೆ ಯಾವ ಪ್ರಭಾವವೂ ಬೀರದೆಹೋಯಿತು. ವಯಸ್ಸಾಗುತ್ತಾ ಆಗುತ್ತ ಹದಿನೈದು ವರ್ಷಗಳು ಕಳೆದವು. ಯಾವಾಗ ನರಸಿಂಹರಾಮನ ಓದು ಬರಹ ಇನ್ನು ನಡೆಯುವುದು ಕಷ್ಟವೆಂದು ತಿಳಿದ ಅಣ್ಣ ವಂಶೀಧರನು ಅವನಿಗೆ ಕುದುರೆಗಳನ್ನು ನೋಡಿಕೊಳ್ಳಲು ಮತ್ತು ಹುಲ್ಲನ್ನು ತರುವ ಕೆಲಸಕ್ಕೆ ಹಚ್ಚಿದನು. ಇಂತಹ ಕೀಳಾದ ಕೆಲಸದಿಂದಲೂ ನರಸಿಂಹರಾಮನಿಗೆ ಕಷ್ಟವಾಗಲಿಲ್ಲ. ಅವನು ಸಂತೋಷವಾಗಿಯೇ ಭಗವನ್ನಾಮ ಸ್ಮರಣೆಮಾಡುತ್ತಾ ತನ್ನ ಪಾಲಿನ ಎಲ್ಲ ಕೆಲಸವನ್ನೂ ಮಾಡತೊಡಗಿದನು.

ವಯಸ್ಸು ಹದಿನಾರು ಆದಾಗ ನರಸಿಂಹರಾಮನ ಪತ್ನೀ ಮಾಣಿಕ ಗೌರಿಯು ಒಂದು ಹೆಣ್ಣು ಮಗುವಿಗೆ ಜನ್ಮವಿತ್ತಳು. ಅನಂತರ ಎರಡು ವರ್ಷ ಕಳೆದಾಗ ಒಂದು ಪುತ್ರರತ್ನನ ಜನನವಾಯಿತು. ಹೆಣ್ಣು ಮಗುವಿಗೆ ಕುಂವರಬಾಯಿ ಮತ್ತು ಗಂಡುಮಗುವಿಗೆ ಶ್ಯಾಮಲದಾಸ ಎಂದು ಹೆಸರು ಇಡಲಾಯಿತು. ಈ ರೀತಿ ನರಸಿಂಹರಾಮನಿಗೆ ಎರಡು ಸಂತಾನ ಪಡೆಯುವ ಸೌಭಾಗ್ಯ ಪ್ರಾಪ್ತಿಯಾಯಿತು.

ಆದರೆ ಅವನ ಈ ಸೌಭಾಗ್ಯವು ದುರಿತಗೌರಿಯ ಕಣ್ಣಿಗೆ ಮುಳ್ಳಾಯಿತು. ಮೊದಲೇ ನಾದಿನೀ ಮೈದುನರನ್ನು ನೋಡಿ ಯಾವಾಗಲೂ ಉರಿಯುತ್ತಿದ್ದಳು; ಈಗಲಾದರೋ ಅವರ ಪರಿವಾರದ ವೃದ್ಧಿಯನ್ನು ನೋಡಿ ಅವಳಿಗೆ ಇನ್ನೂ ಸಹನೆ ಮಿತಿಮೀರಿತು. ಭಕ್ತ ದಂಪತಿಗಳಿಬ್ಬರೂ ಆಳುಗಳಂತೆ ಹಗಲು-ರಾತ್ರಿ ಮನೆಯ ಎಲ್ಲ ಕೆಲಸ ಮಾಡುತ್ತಿದ್ದರೂ ಕೂಡ ದುರಿತಗೌರಿಯು ಇವರು ಪುಕ್ಕಟೆಯಾಗಿ ಮನೆಯಲ್ಲಿ ಕುಳಿತು ತಿನ್ನುತ್ತಿದ್ದಾರೆ, ಅದರಿಂದ ದಿನದಿಂದ ದಿನಕ್ಕೆ ಖರ್ಚು ಹೆಚ್ಚುತ್ತಾ ಇದೆ ಎಂದು ತಿಳಿಯುತ್ತಿದ್ದಳು. ಆದುದರಿಂದ ಅವಳು ಪ್ರತಿದಿನವೂ ಅವರ ಕೆಲಸದಲ್ಲಿ ಕಾರಣವಿಲ್ಲದೆ ಕುಂದು-ಕೊರತೆಗಳನ್ನು ಎತ್ತಿ ತೋರಿಸುತ್ತಿದ್ದಳು ಹಾಗೂ ಸುಳ್ಳು-ಸುಳ್ಳೆ ಅವರ ಕುರಿತು ಇಲ್ಲ ಸಲ್ಲದ ಚಾಡಿಯ ಮಾತುಗಳಿಂದ ಗಂಡನ ಕಿವಿತುಂಬುತ್ತಿದ್ದಳು. ಬೇರೆ-ಬೇರೆ ಕಾರಣಗಳನ್ನು ತೋರಿಸಿ ಅವರಿಗೆ ಕಷ್ಟ ಕೊಡುತ್ತಿದ್ದಳು. ವಂಶೀಧರನು ನನ್ನ ಪತ್ನಿಯು ತುಂಬಾ ದುಷ್ಟಳಾಗಿದ್ದಾಳೆ. ದ್ವೇಷದಿಂದ ತಮ್ಮನ ಮೇಲೆ ಅವನ ಪತ್ನಿಯ ಮೇಲೆ ದೋಷಾರೋಪಣೆ ಮಾಡುತ್ತಿರುವಳು, ಅವರು ಪಾಪ ನಿರ್ದೋಷ ಮತ್ತು ಪವಿತ್ರರಾಗಿದ್ದಾರೆ ಎಂದು ತಿಳಿದಿದ್ದರೂ, ಕೆಲವೊಮ್ಮೆ ಹೆಂಡತಿಯ ಮಾತಿನಂತೆ ಅವನು ತಮ್ಮನನ್ನು ಬೈಯುತ್ತಿದ್ದನು. ಈ ಪ್ರಕಾರ ಪರಿವಾರದಲ್ಲಿ ಕಲಹದ ಬೀಜಾಂಕುರವಾಯಿತು.

ಮುದುಕಿಯಾದ ಜಯಕುಂವರಿಯು ಈ ಜಗಳದಿಂದ ಮುಂದಾಗುವ ಕೆಟ್ಟ ಪರಿಣಾಮಗಳನ್ನು ಯೋಚಿಸಿ ದುಃಖಿಸಿದಳು. ಆದರೆ ಮೃತ್ಯುಶಯ್ಯೆಯಲ್ಲಿ ಮಲಗಿಕೊಂಡಿರುವ ಆ ಮುದುಕಿಯ ಮಾತನ್ನು ಯಾರು ಕೇಳುತ್ತಾರೆ? ಅವಳು ಸುಮ್ಮನೆ ನೋಡುತ್ತಿದ್ದಳು. ಆಯಸ್ಸು-ಕೂಡಾ ಹತ್ತಿರ-ಹತ್ತಿರ ೯೫ರ ಸಮೀಪ ಬಂದಿತ್ತು. ಇನ್ನು ನನ್ನ ಜೀವನ ಮುಗಿಯುತ್ತ ಬಂತು, ನರಸಿಂಹರಾಮನ ಮಗಳ ಮದುವೆ ನನ್ನ ಕಣ್ಣಮುಂದೆಯೇ ಆದರೆ ನನ್ನ ಈ ಅಭಿಲಾಷೆಯೂ ನೆರವೇರಿ

ಸುಖವಾಗಿ ಕಣ್ಣು ಮುಚ್ಚಬಹುದು ಮತ್ತು ಆ ಬಡಪಾಯಿಯು ಒಂದು ದಡಸೇರಬಹುದು ಎಂದು ಯೋಚಿಸುತ್ತಾ ಒಂದು ದಿನ ವಂಶೀಧರನನ್ನು ಬಳಿಗೆ ಕರೆದು ತನ್ನ ಮನದ ಇಂಗಿತವನ್ನು ಅವನಲ್ಲಿ ತಿಳಿಸಿದಳು.

ವಂಶೀಧರನು ಮುದಕಿಯಾದ ಅಜ್ಜಿಯ ಆಜ್ಞೆಯನ್ನು ತಿರಸ್ಕರಿಸುವುದು ಸರಿಯಲ್ಲವೆಂದು ತಿಳಿದು, ಓರ್ವ ಕುಲೀನ ಹಾಗೂ ಯೋಗ್ಯ ವರನನ್ನು ಹುಡುಕಲು ಕುಲಪುರೋಹಿತರನ್ನು ಕಳಿಸಿಕೊಟ್ಟನು. ಪುರೋಹಿತರು ಅಲ್ಲಿ-ಇಲ್ಲಿ ಸುತ್ತುತ್ತಾ ಕಾಠಿಯಾವಾಡದ 'ಊನಾ' ಎಂಬ ಊರಿಗೆ ಬಂದು, ಅಲ್ಲಿಯ ಶ್ರೀಮಂತ ನಾಗರ ಶ್ರೀರಂಗ ಮೆಹತಾನ ಮಗನಾದ ವಸಂತರಾಯನೊಂದಿಗೆ ಕು°ವರಬಾಯಿಯ ವಿವಾಹವನ್ನು ನಿಶ್ಚಯಿಸಿದನು. ನಿಶ್ಚಯಿಸಿದ ಶುಭದಿನದಲ್ಲಿ ವೈಭವದಿಂದ ಕು°ವರಬಾಯಿಯ ಮದುವೆ ನಡೆಯಿತು. ವೃದ್ಧಳಾದ ಜಯಕು°ವರಿಯ ಅಭಿಲಾಷೆ ಪೂರ್ಣವಾಯಿತು. ಅನಂತರ ಮೂರು ತಿಂಗಳಲ್ಲಿ ಶಾಂತಿಯಿಂದ ಈ ಅಸಾರವಾದ ಜಗತ್ತನ್ನು ಎಂದೆಂದಿಗೂ ತೊರೆದು ಬಿಟ್ಟಳು.

ಶಿವನ ಅನುಗ್ರಹ

ಅಣ್ಣನ ಆಜ್ಞೆಯಂತೆ ನರಸಿಂಹರಾಮನು ತುಂಬಾ ಎಚ್ಚರಿಕೆಯಿಂದ ಪಶುಗಳ ಪಾಲನೆ ಮಾಡುತ್ತಿದ್ದನು. ತಿಳಿದೂ-ತಿಳಿದೂ ತನ್ನ ಕೆಲಸದಲ್ಲಿ ಎಂದೂ ಅಲಕ್ಷ್ಯಮಾಡುತ್ತಿರಲಿಲ್ಲ. ಇದರಲ್ಲಿ ಸಮಯಸಿಕ್ಕಿದಾಗ ಭಜನೆ-ಪೂಜೆ ಮಾಡುತ್ತಿದ್ದನು, ಕಥಾ-ಕೀರ್ತನೆಗೆ ಹೋಗುತ್ತಿದ್ದನು ಅಥವಾ ಸಾಧುಸಂಗದಲ್ಲಿರುತ್ತಿದ್ದನು. ಆದರೆ ಅತ್ತಿಗೆಯು ಇದರಿಂದ ಎಂದಿಗೂ ಸಂತುಷ್ಟಳಾಗುತ್ತಿರಲಿಲ್ಲ. ಅವಳು ಯಾವಾಗಲೂ ಅವನಿಗೆ ಕಷ್ಟಕೊಡಲು ಒಂದಲ್ಲ ಒಂದು ಸಂದರ್ಭವನ್ನು ಹುಡುಕುತ್ತಿದ್ದಳು. ನರಸಿಂಹರಾಮನು ಅವಳ ದುಷ್ಟ ಸ್ವಭಾವದ ಕಾರಣ ಅವಳಿಂದ ತುಂಬಾ ಹೆದರುತ್ತಿದ್ದನು. ತನ್ನ ಕಡೆಯಿಂದ ಅವಳಿಗೆ ಯಾವುದೇ ನೆಪಸಿಗುವ ಸಂದರ್ಭ ಸಿಗದಂತೆ ಪ್ರಯತ್ನ ಮಾಡುತ್ತಿದ್ದನು. ಅವನು ಹೆಚ್ಚಾಗಿ ಅಣ್ಣನು ಮನೆಯಲ್ಲಿದ್ದಾಗಲೇ ಮನೆಗೆ ಬರುತ್ತಿದ್ದನು. ಎಂದಾದರು ಸರಕಾರೀ ಕೆಲಸಕ್ಕೆ ವಂಶೀಧರನು ಹೊರ ಊರಿಗೆ ಹೋದಾಗ ನರಸಿಂಹರಾಮನ ದುರ್ದಶೆ ಹೇಳ ತೀರದು. ದುರಿತಗೌರಿಯ ಎಲ್ಲ ದಿನಗಳ ಸಿಟ್ಟು ಅದೇ ದಿನ ಒಂದಾಗಿ ಜಾಗ್ರತವಾಗಿ ಎಷ್ಟು ಕಷ್ಟ ಕೊಡಬಹುದೋ ಅಷ್ಟೂ ಪತಿ-ಪತ್ನಿಯರಿಬ್ಬರಿಗೆ ಕಷ್ಟ ಕೊಡುತ್ತಿದ್ದಳು. ಆದರೂ ಕೂಡಾ ಭಕ್ತರಾಜನು ಎಂದೂ ವಿಚಲಿತನಾಗುತ್ತಿರಲಿಲ್ಲ. ಶ್ರೀ ಮದ್ಭಗವದ್ಗೀತೆಯಲ್ಲಿ ಭಗವಂತನು ಹೇಳಿರುವಂತೆ -

ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ।
ವೀತರಾಗ ಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥ (೨/೫೬)

'ಯಾರ ಮನಸ್ಸು ದುಃಖ ಪ್ರಾಪ್ತವಾದಾಗ ಉದ್ವೇಗರಹಿತವಾಗಿರುತ್ತದೋ, ಸುಖದ ಪ್ರಾಪ್ತಿಯಲ್ಲಿ ಸ್ಪೃಹೆಯು ಯಾರಿಗೆ ದೂರವಾಗಿರುತ್ತದೋ, ಯಾರ ರಾಗ, ಭಯ, ಕ್ರೋಧಗಳು ನಾಶವಾಗಿವೆಯೋ, ಇಂತಹ ಮುನಿಯು ಸ್ಥಿರಬುದ್ಧಿಯವನೆಂದು ಹೇಳಲ್ಪಡುತ್ತಾನೆ.' ಸರಿಯಾಗಿ ಇದೇ ಸ್ಥಿತಿಗನುಸಾರವಾಗಿ ಎಲ್ಲವನ್ನೂ ಶಾಂತಿಯಿಂದ ಸಹಿಸುತ್ತಾ ಅವನು ಆನಂದವಾಗಿ ತನ್ನ ಕೆಲಸ ಮಾಡುತ್ತಿದ್ದನು.

ಒಂದು ದಿನ ವಂಶೀಧರನು ರಾಜ್ಯಕಾರ್ಯಕ್ಕಾಗಿ ಹೊರಗೆ ಹೋಗಿದ್ದನು. ನರಸಿಂಹರಾಮನು ಬೆಳಿಗ್ಗೆಯೇ ಮನೆಯ ಕೆಲಸ ಮುಗಿಸಿ ಹುಲ್ಲು ಕೊಯ್ಯಲು ಹೋದನು. ಸಂಜೆ ಹುಲ್ಲಿನ ಹೊರೆಯನ್ನು ಹೊತ್ತುಕೊಂಡು ಮನೆಗೆ ಮರಳಿ ಕುದುರೆಗಳಿಗೆ ಹುಲ್ಲುಹಾಕಿ ಸ್ನಾನಮಾಡಿದನು. ದಿನವಿಡೀ ಕಾಡಿನಲ್ಲಿ ಅಲೆದು

ಹುಲ್ಲು ಕೊಯ್ಯುತ್ತಿದ್ದುದರಿಂದ ಹಸಿವೆಯಿಂದ ಕಂಗೆಟ್ಟಿದ್ದನು. ಆದುದರಿಂದ ಅವನು ಅತ್ತಿಗೆಯ ಬಳಿ ಊಟವನ್ನು ಕೇಳಿದನು.

ಇದರಿಂದ ದುರಿತಗೌರಿಯು ಕೆರಳಿ-ನೋಡು! ದೊಡ್ಡ ಭಕ್ತ ಬಂದಿದ್ದಾನೆ. ಪ್ರತಿದಿನ ಹುಲ್ಲು ಕೊಯ್ಯುವ ನೆಪಮಾಡಿ ಮನೆಬಿಟ್ಟು ಹೋಗುತ್ತಾನೆ. ದಿನವಿಡೀ ಭಿಕ್ಷುಕರ ಜೊತೆಯಲ್ಲಿ ಅಲೆಯುತ್ತಾ ಇರುತ್ತಾನೆ. ಮನೆತನದ ಯಾವ ಪರಿವೆಯು ಮಾಡುವುದಿಲ್ಲ ಹಾಗೂ ಹೇಳುತ್ತಾನೆ ಹಸಿವೆಯಾಗಿದೆ ಎಂದು.

ನರಸಿಂಹರಾಮನು-ಇಂದು ನಾನು ಸತ್ಸಂಗಕ್ಕೆ ಖಂಡಿತವಾಗಿ ಹೋಗಲಿಲ್ಲ, ಬೆಳಿಗ್ಗಿನಿಂದಲೇ ಹುಲ್ಲು ತರಲು ಹೋಗಿದ್ದೆ, ಈಗೀಗ ಹುಲ್ಲಿಗಾಗಿ ಕಾಡಿನಲ್ಲಿ ತುಂಬಾ ದೂರ ಹೋಗಬೇಕಾಗುತ್ತದೆ ; ಅದರಿಂದ ತಡವಾಗುತ್ತಿದೆ. ಈ ಪ್ರಕಾರ ತನ್ನ ನಿರ್ದೋಷತೆಯನ್ನು ಪ್ರಕಟ ಪಡಿಸುವ ಸಾಹಸ ಮಾಡಿದನು.

ಇಷ್ಟರಲ್ಲಿ ದುರಿತಗೌರಿಯು ಕೆಲವು ಹಳಸಿದ ರೊಟ್ಟಿಗಳನ್ನು ನರಸಿಂಹರಾಮನ ಮುಂದೆ ತಂದು ಕುಕ್ಕಿದಳು. ಮನೆಯಲ್ಲಿ ಅನೇಕ ಒಳ್ಳೊಳ್ಳೆಯ ತಿನ್ನುವ ಪದಾರ್ಥಗಳಿದ್ದರೂ ಅವು ನರಸಿಂಹರಾಮನಿಗೆ ಯೋಗ್ಯವಲ್ಲವೆಂದು ಅವಳು ತಿಳಿದಳು. ನೆಗಣ್ಣಿಯ ಈ ವ್ಯವಹಾರವನ್ನು ಕಂಡ ಪತಿಪರಾಯಣಳಾದ ಮಾಣಿಕಬಾಯಿಗೆ ಅತೀವ ದುಃಖವಾಯಿತು. ಬೇರೆಯವರ ದೃಷ್ಟಿಯಲ್ಲಿ ಎಲ್ಲ ಪ್ರಕಾರದಿಂದ ಅಯೋಗ್ಯವಾಗಿದ್ದರೂ ಒರ್ವ ಪತಿವ್ರತೆ ತನ್ನ ಜೀವನ ಸರ್ವಸ್ವ ಪತಿಯ ದುರ್ದಶೆಯನ್ನು ಹೇಗೆ ಸಹಿಸಬಲ್ಲಳು ? ಮಾಣಿಕಬಾಯಿಯ ಹೃದಯ ಕರಗಿ ಹೋಯಿತು, ಅವಳ ಕಣ್ಣುಗಳಿಂದ ಒಂದೇ ಸಮನೆ ಕಣ್ಣೀರಿನ ರೂಪದಿಂದ ಅದು ಹರಿಯತೊಡಗಿತು. ಅಂತಹ ಸಮಯದಲ್ಲಿ ಅವಳಿಂದ ಬೇರೆ ಏನಾಗಬಲ್ಲದು ! ಹಣಗಳಿಸುವಲ್ಲಿ ಅಶಕ್ತನಾದ, ಪರಾಧೀನ ಪತಿಯ ಸ್ತ್ರೀಗೆ ಮನೆಯಲ್ಲಿ ಅಧಿಕಾರವಾದರೂ ಎಷ್ಟಿರುತ್ತದೆ ?

ನರಸಿಂಹರಾಮನು ಹಸಿವಿನ ಜ್ವಾಲೆಯನ್ನು ಶಾಂತಗೊಳಿಸಲು ಹಾಗೂ-ಹೀಗೂ ಕೆಲವು ರೊಟ್ಟಿಯ ತುಂಡುಗಳನ್ನು ನುಂಗಿದನು ಹಾಗೂ ನೀರು ಕುಡಿದು ಎದ್ದು ಬಿಟ್ಟನು. ಸರಿ ! ದುರಿತಗೌರಿಯ ಕ್ರೋಧಾಗ್ನಿಯಲ್ಲಿ ತುಪ್ಪದ ಆಹುತಿ ಹಾಕಿದಂತಾಯಿತು. ಅವಳು ಗಟ್ಟಿಯಾಗಿ ಬೊಬ್ಬೆ ಹಾಕುತ್ತ-ನೋಡು ! 'ಭಜನೆಯಲ್ಲಿ ಸಾಧು-ಊಟದಲ್ಲಿ ಭೀಮ' ಇಂತಹ ವಿಚಾರ ನನ್ನ ಮನೆಯಲ್ಲಿ ನಡೆಯಲಾರದು. ಇಷ್ಟು ಕಷ್ಟವನ್ನು ನಾನು ನಿನ್ನ ಅಣ್ಣನಿಗಾಗಿಯೂ ಸಹಿಸುವುದಿಲ್ಲ, ಅವರಾದರೋ ಪಾಪ ಬಾಯಿಮುಚ್ಚಿಕೊಂಡು ಬಿದ್ದಿರುತ್ತಾರೆ. ಇದಾದರೋ

ಅತೀಯಾಯಿತು. 'ಭಾಗ ಆಳಿನದು ಮನಸ್ಸು ರಾಜನದು' ನಾನು ಹೇಳಿ ಬಿಡುತ್ತೇನೆ - ನಾಳೆಯಿಂದ ಒಳ್ಳೆ ಊಟ ಎಲ್ಲಿ ಸಿಗುವುದೋ ಅಲ್ಲೇ ಹೋಗಿ ತಿನ್ನು. ಇಂದಿನಿಂದ ನನ್ನ ಮನೆಯಲ್ಲಿ ನಿನಗೆ ಯಾವ ಕೆಲಸವೂ ಇಲ್ಲ. ನಾನು ನಿನ್ನ ಮತ್ತು ನಿನ್ನ ಈ ಕುಭಾರ್ಯೆಯ ಸೇವಕಿ ಅಲ್ಲ.

ಕಾರಣವಿಲ್ಲದೇ ಅತ್ತಿಗೆಯು ಈ ರೀತಿ ಸಿಟ್ಟುಗೊಂಡದ್ದನ್ನು ಕಂಡು ನರಸಿಂಹರಾಮನಿಗೆ ಏನೂ ಮಾತಾಡಲಾಗಲಿಲ್ಲ. ಸುಮ್ಮನೆ ಅವಳ ಮಾತುಗಳನ್ನು ಕೇಳುತ್ತಲೇ ಇದ್ದನು. ಆದರೆ ಅವನ ಮೌನದಿಂದ ದುರಿತಗೌರಿಯ ಸಿಟ್ಟು ಬೆಳೆಯುತ್ತಲೇ ಹೋಯಿತು, ಅವಳು ರಣಚಂಡೀಯಾಗಿ ಕಿರಿಚಾಡುತ್ತಾ ಹಿಡಿ ಶಾಪಗಳನ್ನು ಹಾಕುತ್ತಲೇ ಇದ್ದಳು.

ಇಷ್ಟರಲ್ಲೇ ವಂಶೀಧರನು ಬಂದು ತಲುಪಿದನು. ಗಂಡನನ್ನು ನೋಡುತ್ತಲೇ ದುರಿತಗೌರಿಯು ತನ್ನ ಮಾಯೆಯನ್ನು ಬೀಸಿದಳು. ಅವಳು ಅಳುತ್ತಾ ಈ ಮನೆಯಲ್ಲಿ ಇನ್ನು ನನಗೇನೂ ಕೆಲಸವಿಲ್ಲ ; ಈ ಭಕ್ತದಂಪತಿಗಳೊಂದಿಗೆ ಸುಖವಾಗಿ ಇರಿ. ಗಳಿಸುವ ಮಾತೇ ಇಲ್ಲ ಆದರೆ ಎಷ್ಟೊಂದು ಪ್ರೊಗರು! ನಾನಾದರೋ ಈಗ ಸುಸ್ತಾಗಿ ಹೋಗಿದ್ದೇನೆ. ಸಾಕು ! ಈ ಮನೆಯಲ್ಲಿ ಒಂದೋ ನರಸಿಂಹ ಇರಬಾರದು, ಅಥವಾ ನಾನಿರುವುದಿಲ್ಲ.

ಮಾಯಾವಿ ಪತ್ನಿಯ ಷಡ್ಯಂತ್ರದಲ್ಲಿ ಸಿಲುಕಿಕೊಂಡು ಒಳ್ಳೊಳ್ಳೆ ಪುರುಷರೂ ಕೂಡ ಮಂಗನಂತಾಗುತ್ತಾರೆ, ಹಾಗಿರುವಾಗ ಬಡಪಾಯಿ ವಂಶೀಧರನ ದೋಷವಾದರೂ ಏನಿದೆ ? ದುರಿತಗೌರಿಯ ಪಕ್ಷವಹಿಸಿಕೊಂಡು ಅವನೂ ನರಸಿಂಹನನ್ನು ದೋಷಿಯೆಂದು ತಿಳಿದುಕೊಂಡು ಬೈಯ್ಯತೊಡಗಿದನು ಹಾಗೂ ಕೊನೆಗೆ ಕಠೋರವಾಗಿ ಮನೆಬಿಟ್ಟು ಹೋಗುವ ಆಜ್ಞೆಯನ್ನು ಕೊಟ್ಟನು.

ಈಗ ನರಸಿಂಹರಾಮನಿಗೆ ಯಾವ ಆಸರೆ ಇತ್ತು? ಅವನು ಪತ್ನಿಯನ್ನು ಅಲ್ಲೇ ಬಿಟ್ಟು ಖಿನ್ನಮನಸ್ಕನಾಗಿ ಮನೆಯಿಂದ ಹೊರಟು ಕಾಲೆಳೆದಲ್ಲಿಗೆ ಹೋಗುತ್ತಿದ್ದನು. ವೈಶಾಖ ಶುಕ್ಲ ಪೌರ್ಣಿಮೆಯ ಪೂರ್ಣಚಂದ್ರನು ಷೋಡಶ ಕಲೆಗಳಿಂದ ಪ್ರಕಾಶಿತನಾಗಿ ಭೂಮಿಯ ಮೇಲೆ ಅಮೃತದ ಮಳೆಗರೆಯುತ್ತಿದ್ದರೂ ಅದರಿಂದ ನರಸಿಂಹರಾಮನಿಗೆ ಸ್ವಲ್ಪವೂ ಶಾಂತಿ ಸಿಗಲಿಲ್ಲ. ನಿರ್ಜನ ಪ್ರದೇಶದಲ್ಲಿ ಒಂದೆಡೆ ಕುಳಿತು, ಸಿಟ್ಟು ಇಳಿದ ಮೇಲೆ ಅಣ್ಣನಿಗೆ ಅವಶ್ಯವಾಗಿ ಪಶ್ಚಾತ್ತಾಪ ಉಂಟಾಗಿ ನನ್ನನ್ನು ಕರೆಯಲು ಬರುವನೆಂದು ಯೋಚಿಸುತ್ತಾ ಅರ್ಧರಾತ್ರಿ ಕಳೆದುಹೋಯಿತು. ಭಗವದ್ ಧ್ಯಾನದಲ್ಲಿ ಅಲ್ಲೇ ನಿದ್ದೆ ಬಂತು.

ಬೆಳಗಾಯಿತು ಆದರೆ ಯಾರೂ ನರಸಿಂಹರಾಮನನ್ನು ಹುಡುಕಿಕೊಂಡು ಕರೆಯಲು ಬಂದಿಲ್ಲ. ಈ ನಶ್ವರ ಪ್ರಪಂಚದಲ್ಲಿ ಎಲ್ಲ ಸಂಬಂಧಿಗಳು ಸ್ವಾರ್ಥ ದಿಂದಲೇ ಪ್ರೀತಿಸುತ್ತಾರೆ. ನಿಃಸ್ವಾರ್ಥ ಪ್ರೀತಿಸುವವನು ಓರ್ವ ವಿಶ್ವಂಭರ ಪರಮಾತ್ಮನೇ ಆಗಿದ್ದಾನೆ ಎಂದು ಮನಸ್ಸಿನಲ್ಲೇ ವಿಚಾರ ಮಾಡಿ ಇನ್ನು ಈಗ ಮನೆಗೆ ಹೋಗುವುದರಲ್ಲಿ ಯಾವ ಲಾಭವೂ ಇಲ್ಲ ಎಂದು ನಿಶ್ಚಯಿಸಿಕೊಂಡನು.

ನರಸಿಂಹರಾಮನು ಅಲ್ಲಿಂದ ಎದ್ದು ನಡೆಯತೊಡಗಿದನು. ಎಲ್ಲಿಗೆ ಏಕೆ ಹೋಗುತ್ತಿರುವೆ ಎಂಬ ಎಚ್ಚರವೂ ಅವನಿಗೆ ಇರಲಿಲ್ಲ. ಅವನು ನಡೆಯುತ್ತಾ-ನಡೆಯುತ್ತಾ ಒಂದು ನಿರ್ಜನ ಭೀಷಣ ಅಡವಿಯನ್ನು ತಲುಪಿದನು. ಹಸಿವು-ಬಾಯಾರಿಕೆಯಿಂದ ಮತ್ತು ನಡೆದು ಬಂದ ಕಾರಣದಿಂದ ತುಂಬಾ ಬಳಲಿದ್ದನು. ಆದುದರಿಂದ ವಿಶ್ರಾಂತಿ ಪಡೆಯಲು ಒಂದು ಆಲದ ಮರದ ನೆರಳಿನಲ್ಲಿ ಕುಳಿತುಬಿಟ್ಟನು. ಆಗ ಸಂಜೆ ಆಗುತ್ತಾ ಬಂತು. ಈಗ ಎಲ್ಲಿಗೆ ಹೋಗುವುದು ? ಈ ಜಗತ್ತಿನಲ್ಲಿ ನನ್ನವರು ಎಂದು ಯಾರಿದ್ದಾರೆ ? ಸರ್ವ ಸಂತಾಪಹಾರೀ ಪರಮ ಮಂಗಲಕಾರೀ ಭಗವಾನ್ ಶಿವನಲ್ಲದೆ ಆಶ್ರಯ ಕೊಡುವವರು ಬೇರೆ ಯಾರೂ ಇಲ್ಲ. ಸಾಧಾರಣವಾಗಿ ಎಂಟು ವರ್ಷಗಳಿಂದ ಪ್ರತಿದಿನ ಶಿವನಪೂಜೆ ಮಾಡುತ್ತಾ ಬಂದಿದ್ದೇನೆ. ಪ್ರತಿ ಸೋಮವಾರ ರುದ್ರಸೂಕ್ತದಿಂದ ಅಭಿಷೇಕ ಮಾಡಿದ್ದೇನೆ. ಶ್ರಾವಣ ತಿಂಗಳ ಪೂರ್ತಿ ಬಿಲ್ವಾರ್ಚನೆ ಮಾಡಿದ್ದೇನೆ ; ಆದ್ದರಿಂದ ಭಕ್ತ ಭಯಭಂಜನ ಭಗವಾನ್ ಭವಾನೀಪತಿ ಶಿವನು ಖಂಡಿತವಾಗಿ ನನ್ನನ್ನು ರಕ್ಷಿಸುವನು ಎಂದು ಯೋಚಿಸುತ್ತಿದ್ದನು.

ನರಸಿಂಹರಾಮನು ಹೀಗೆ ವಿಚಾರಮಗ್ನನಾಗಿದ್ದಾಗ ಅವನ ದೃಷ್ಟಿ ಸನಿಹ ದಲ್ಲಿರುವ ಒಂದು ಪಾಳುಬಿದ್ದ ಶಿವನ ದೇವಸ್ಥಾನದ ಕಡೆಗೆ ಹರಿಯಿತು. ಅಲ್ಲಿ ಒಂದು ಸುಂದರವಾದ ಸರೋವರವೂ ಇತ್ತು. ಇದನ್ನು ಕಂಡು ಅವನಿಗೆ ತುಂಬಾ ಸಂತೋಷವಾಯಿತು. ಇಷ್ಟರವರೆಗಿನ ಬಳಲಿಕೆಯೆಲ್ಲ ಮಾಯವಾಯಿತು. ಅತೀವ ಉತ್ಸಾಹದಿಂದ ಸರೋವರದಲ್ಲಿ ಸ್ನಾನಮಾಡಿ, ಹೂವು, ಬಿಲ್ವಪತ್ರೆಗಳಿಂದ ಶಿವನ ಪೂಜೆಯನ್ನು ಭಕ್ತಿಯಿಂದ ಮಾಡಿ ಅವನೆದುರು ಸಾಷ್ಟಾಂಗ ನಮಸ್ಕಾರ ಮಾಡಿ ಅಳುತ್ತಾ ಪ್ರಾರ್ಥಿಸಿದನು - ಹೇ ದೀನಾನಾಥಾ ! ನನ್ನ ಅವಸ್ಥೆಯ ಕುರಿತು ನಿನಗೆ ದಯೆಯುಂಟಾಗುವುದಿಲ್ಲವೆ ? ಅಣ್ಣ-ಅತ್ತಿಗೆಯರು ನನ್ನನ್ನು ಮನೆಯಿಂದ ಹೊರಹಾಕಿದರು. ಈಗ ನೀನಲ್ಲದೆ ಬೇರೆಯಾರ ಆಸರೆ ನನಗಿದೆ ? ಬಾಲ್ಯದಿಂದಲೇ ನಿನ್ನ ಭರವಸೆಯ ಮೇಲೆ, ನಿನ್ನ ನಾಮದ ಬಲದಿಂದಲೇ

ಇದ್ದೇನೆ. ಒಂದು ವೇಳೆ ನೀನೂ ಕಾಪಾಡದಿದ್ದರೆ ಈ ಶರಣಾಗತನನ್ನು ಬೇರೆ ಯಾರು ಕಾಯುವರು ? ಈಗ ನಾನು ನಿನ್ನ ಬಾಗಿಲಿಗೆ ಬಂದಿರುವೆ, ಪ್ರಸನ್ನನಾಗು. ಇಲ್ಲದಿದ್ದರೆ ನಾನು ಅನ್ನ-ನೀರು ಬಿಟ್ಟು ನನ್ನ ಪ್ರಾಣಗಳನ್ನು ನಿನಗೆ ಅರ್ಪಿಸಿಬಿಡುವೆ.

ನರಸಿಂಹರಾಮನ ದೃಷ್ಟಿಯಲ್ಲಿ ಶಿವಲಿಂಗವು ಕಲ್ಲಾಗಿರಲಿಲ್ಲ, ಸಾಕ್ಷಾತ್ ಕೈಲಾಸನಾಥನೇ ಆಗಿದ್ದನು. ಆದ್ದರಿಂದ ಅವನು ಒಂದೇ ಸವನೆ ವಿಶ್ವಾಸದಿಂದ ಪ್ರಾರ್ಥಿಸುತ್ತಾ ಅಳತೊಡಗಿದನು. ಭಯವನ್ನು ಹುಟ್ಟಿಸುವಂತಹ ಕಾಡಿನ ಭೀಷಣ ರಾತ್ರಿಯಾಗಿತ್ತು. ನಾನಾ ಪ್ರಕಾರದ ಹಿಂಸಕ ಪ್ರಾಣಿಗಳು ನಾಲ್ಕೂ ಕಡೆಗಳಲ್ಲಿ ಗರ್ಜಿಸುತ್ತಿದ್ದುವು. ಎಷ್ಟೋ ಪ್ರಾಣಿಗಳು ಆ ಮಂದಿರದಲ್ಲಿ ತಂಗಲು ಬರುತ್ತಿದ್ದುವು. ಅಲ್ಲಿ ಮನುಷ್ಯನನ್ನು ಕಂಡು ಭಯದಿಂದ ಹಾಗೆಯೇ ಮರಳುತ್ತಿದ್ದುವು. ಆದರೆ ನರಸಿಂಹರಾಮನಿಗೆ ಇದರತ್ತ ಗಮನವೇ ಇರಲಿಲ್ಲ, ಅವನಾದರೋ ಅಖಿಲ ಭುವನಗಳೊಡೆಯನ ಧ್ಯಾನದಲ್ಲಿ ತನ್ಮಯನಾಗಿದ್ದನು ಮತ್ತು ಅವನನ್ನೇ ಕೂಗಿ ಕರೆಯುತ್ತಿದ್ದನು.

ನಿಧಾನವಾಗಿ ರಾತ್ರಿಯು ಸರಿಯಿತು. ಭಗವಾನ್ ಭಾಸ್ಕರನ ಉದಯದಿಂದ ಪೃಥ್ವಿಯ ಅಂಧಕಾರವು ಎಲ್ಲಿ ಅಡಗಿತೋ ಏನೋ. ಆದರೆ ಬ್ರಾಹ್ಮಣ ನರಸಿಂಹ ಮೆಹತಾ ನೆಲದಲ್ಲಿ ಬಿದ್ದುಕೊಂಡು ಅದೇ ಸ್ಥಿತಿಯಲ್ಲಿ ಅಳುತ್ತಾ-ಪ್ರಾರ್ಥಿಸುತ್ತಾ ಇದ್ದನು. ಬಳಿಕ ಹಗಲು ಸಂದಿತು, ರಾತ್ರಿ ಬಂತು. ಹೀಗೆ ದಿನಗಳ ಮೇಲೆ ದಿನಗಳು ಉರುಳಿದರೂ ಅವನು ಹಾಗೆಯೇ ಬಿದ್ದು ಕೊಂಡಿದ್ದನು. ಆದರೆ ಅವನು ಶ್ರದ್ಧೆ ಮತ್ತು ಸಂಕಲ್ಪದಿಂದ ಕಿಂಚಿತ್ತೂ ವಿಚಲಿತನಾಗಲಿಲ್ಲ.

ಈ ಪ್ರಕಾರ ಏಳುದಿನಗಳ ಉಗ್ರತಪಸ್ಸಿನಿಂದ ಕೈಲಾಸಪತಿಯ ಆಸನವು ಅಲುಗಾಡಿತು, ಏಳನೇದಿನ ಮಧ್ಯರಾತ್ರಿ ಕಳೆದಾಗ ಭಗವಾನ್ ಭವಾನೀಪತಿಯು ಭಕ್ತನ ಮುಂದೆ ಸಾಕ್ಷಾತ್ ಪ್ರಕಟನಾದನು. ಅವನನ್ನು ನೋಡುತ್ತಲೇ ಆನಂದ ತುಂದಿಲನಾಗಿ ಅವನ ಪಾವನ ಚರಣಗಳಲ್ಲಿ ಹೊರಳಾಡುತ್ತಾ - ಹೇ ಭೋಲೇನಾಥಾ, ಶಂಭುವೇ ಬಾ ! ಬಾ ! ಎಂದು ವಿನೀತನಾಗಿ ಪ್ರಾರ್ಥಿಸಿಕೊಂಡನು.

ಭಗವಾನ್ ಶಂಕರನು- ಮಗು ! ನಿನ್ನ ಏಳು ದಿನಗಳ ಘೋರ ತಪಸ್ಸಿನಿಂದ ನಾನು ಪ್ರಸನ್ನನಾಗಿರುವೆ, ನೀನು ಬೇಕಾದ ವರವನ್ನು ಕೇಳಿಕೋ ಎಂದು ಹೇಳಿದನು.

ಭಕ್ತರಾಜನು ನಮ್ರತೆಯಿಂದ ಪ್ರಾರ್ಥಿಸಿದನು- ಸ್ವಾಮಿ ! ನನಗೇನು ಬೇಕು ಎಂಬುದೇ ತಿಳಿಯದು, ಅಲ್ಲದೆ ವರಬೇಡುವ ಇಚ್ಛೆಯೂ ನನಗಿಲ್ಲ. ಆದರೂ ನೀನು ವರಕೇಳಲು ಹೇಳಿರುವುದರಿಂದ 'ನಿನಗೆ ಯಾವ ವಸ್ತುವು ಅತ್ಯಂತ ಪ್ರಿಯವಾಗಿದೆಯೋ ಅದನ್ನೇ ನನಗೆ ಅನುಗ್ರಹಿಸು' ಎಂದು ಬೇಡಿದನು.

ಮಗೂ ! ನೀನಾದರೋ ತುಂಬಾ ಸುಂದರವಾದ ವರವನ್ನು ಕೇಳಿರುವೆ. ಜಗತ್ತಿನಲ್ಲಿ ಭಗವಾನ್ ಶ್ರೀಕೃಷ್ಣನಿಗಿಂತ ಪ್ರಿಯವಾದ ವಸ್ತುವು ನನ್ನ ದೃಷ್ಟಿಯಲ್ಲಿ ಬೇರೆಯಾವುದೂ ಇಲ್ಲ. ಒಂದು ವೇಳೆ ನೀನು ಬಯಸುವೆಯಾದರೆ ನಿನಗೆ ಭಗವಾನ್ ಶ್ರೀಕೃಷ್ಣನ ದರ್ಶನ ಮಾಡಿಸುತ್ತೇನೆ, ಎಂದು ಸದಾಶಿವನು ನುಡಿದನು.

ಭಗವಂತಾ ! ಇದೇ ಈ ಅಸಾರ ಸಂಸಾರದಲ್ಲಿ ಸಾರಭೂತವಾದ ಮತ್ತು ದುರ್ಲಭವಾದ ವಸ್ತುವಾಗಿದೆ. ಅದರಲ್ಲಿಯೂ ಯಾವ ವಸ್ತುವು ನಿನಗೆ ಪರಮಪ್ರಿಯವಾಗಿದೆಯೋ ಅದನ್ನು ಅಪ್ರಿಯವೆಂದು ಹೇಳುವ ಧೃಷ್ಟತೆ ಯಾರು ಮಾಡಿಯಾರು ? ನರಸಿಂಹನ ಇಂತಹ ನಿಷ್ಠೆಯನ್ನು ಕಂಡು ಶಿವನಿಗೆ ಸಂತೋಷ ವಾಯಿತು. ಅವನು ಭಕ್ತರಾಜನಿಗೆ ದಿವ್ಯದೇಹವನ್ನು ಕರುಣಿಸಿ, ಅವನನ್ನು ಜೊತೆಯಲ್ಲಿ ಕರಕೊಂಡು ಗೋಲೋಕಕ್ಕೆ ಶೀಘ್ರವಾಗಿ ಪ್ರಯಾಣ ಬೆಳೆಸಿದನು.

ರಾಸದರ್ಶನ

ಭಗವಾನ್ ಶಿವನು ನಂದಿಯನ್ನೇರಿ ಭಕ್ತರಾಜ ನರಸಿಂಹ ಮೆಹತಾನೊಂದಿಗೆ ಭಗವಾನ್ ಶ್ರೀಕೃಷ್ಣಚಂದ್ರನ ಪರಮಧಾಮ ಗೋಲೋಕಕ್ಕೆ ತಲುಪಿದನು. ಈ ದಿವ್ಯ ಲೋಕದ ಅಲೌಕಿಕ ಶೋಭೆಯನ್ನು ನೋಡಿ ಭಕ್ತರಾಜನು ಮುಗ್ಧನಾದನು. ಅವರು ಆ ಧಾಮದ ಬಗ್ಗೆ ಹೇಳುವಾಗ - ಅಲ್ಲಿಯ ಭೂಮಿ ಚಿನ್ನದ್ದಾಗಿತ್ತು. ಅಲ್ಲಿಯ ಸೌಧಗಳ ಖಂಬಗಳು ಮರಕತ ಮಣಿಯಿಂದ ನಿರ್ಮಿತವಾಗಿದ್ದವು, ಮೇಲ್ಛಾವಣಿಯು ರತ್ನಗಳಿಂದ ಅಲಂಕೃತವಾಗಿತ್ತು. ಆ ದಿವ್ಯಧಾಮವು ನಿತ್ಯ ನವ-ನವೀನ ಶೃಂಗಾರಗಳಿಂದ ಸುಸಜ್ಜಿತವಾಗಿತ್ತು. ಅದರ ತೇಜವು ಭೂಲೋಕ ದಲ್ಲಿಯ ಪ್ರಕಾಶಕ್ಕಿಂತ ಕೋಟಿಪಟ್ಟು ಹೆಚ್ಚಾಗಿತ್ತು. ಅಲ್ಲಿಯ ಪ್ರಕಾಶದಿಂದಲೇ ಸೂರ್ಯ-ಚಂದ್ರರಿಗೆ ಬೆಳಕು ಪ್ರಾಪ್ತವಾಗಿತ್ತು. ಅಲ್ಲಿಯ ಪ್ರಕಾಶವನ್ನು ಸೂರ್ಯ-ಚಂದ್ರರ ಪ್ರಕಾಶಕ್ಕೆ ಏನು ತುಲನೆಮಾಡಬಲ್ಲದು! ಕೋಟಿ ಸೂರ್ಯರ ಪ್ರಭೆಯಾದರೋ ಕೇವಲ ಭಗವಂತನ ಒಂದು ನಖಿದಲ್ಲಿಯೇ ಇತ್ತು.

ಇಂತಹ ಪರಮ ಧಾಮದ ದಿವ್ಯ ಶೋಭೆಯನ್ನು ನೋಡುತ್ತಾ ಭಗವಾನ್ ಶಂಕರನು ದ್ವಾರಕಾಧೀಶನ ಅರಮನೆಯನ್ನು ತಲುಪಿದನು. ಆ ಸಮಯ ಅಲ್ಲಿ ಭಗವಂತನ ಧರ್ಮಸಭೆ ನೆರೆದಿತ್ತು. ರಾಜರಾಜೇಶ್ವರ ದೇವಕೀನಂದನ ಶ್ರೀಕೃಷ್ಣನು ರಾಜಸಿಂಹಾಸನದಲ್ಲಿ ವಿರಾಜಮಾನನಾಗಿದ್ದನು. ಅವನ ಸಭೆಯ ಸಭಾಸದರು ಪರಮ ಭಾಗವತ ಉಗ್ರಸೇನ, ಬಲರಾಮ, ಅಕ್ರೂರ, ಉದ್ಧವ, ವಿದುರ, ಅರ್ಜುನ ಮೊದಲಾದವರು ಅವರವರ ಸ್ಥಾನಗಳಲ್ಲಿ ಕುಳಿತಿದ್ದರು ಹಾಗೂ ಭಗವಂತನ ಹದಿನಾರು ಸಾವಿರದ ಒಂದು ನೂರ ಎಂಟು ಪಟ್ಟಮಹಿಷಿಯರೂ ಉಪಸ್ಥಿತರಿದ್ದರು. ಭಗವಾನ್ ಶಿವನನ್ನು ನೋಡಿ ಎಲ್ಲ ಸಭಾಸದರು ಎದ್ದು ನಿಂತರು ಸ್ವತಃ ಭಗವಂತನು ಆಗಲೇ ಆಸನವನ್ನು ಬಿಟ್ಟು ಲಗುಬಗೆಯಿಂದ ಶಿವನ ಸ್ವಾಗತಕ್ಕಾಗಿ ಮುಂದುವರಿದನು. ಅವನು ಕೈ ಜೋಡಿಸಿ ಶಂಕರನ ಸ್ವಾಗತ ಗೈದು ಅವನನ್ನು ಒಂದು ದಿವ್ಯ ಆಸನದಲ್ಲಿ ಕುಳ್ಳಿರಿಸಿದನು. ಅನಂತರ ವಿಧಿವತ್ ಅವನ ಪೂಜೆ ಮಾಡಿ ಬಂದ ಕಾರಣವನ್ನು ಕೇಳಿದನು.

ಸದಾಶಿವನು ಉತ್ತರಿಸಿದನು - ಭಗವಂತಾ ! ಇವನು ಜೂನಾಗಡದ ಓರ್ವ ಉಚ್ಚ ಬ್ರಾಹ್ಮಣಕುಲೋತ್ಪನ್ನ ವೈಷ್ಣವ ಭಕ್ತನಾಗಿರುವನು. ಇವನು ಏಳು ದಿನಗಳ ವರೆಗೆ ಕಠೋರ ತಪಸ್ಸನ್ನು ಮಾಡಿ ನನ್ನನ್ನು ಮೆಚ್ಚಿಸಿದನು ಮತ್ತು ನಾನು ಇವನಿಗೆ ವರದಾನವಾಗಿ ನನ್ನ ಪ್ರಿಯವಸ್ತುವನ್ನು ಕೊಡುವ ಮಾತನ್ನು

ಕೊಟ್ಟಿರುವೆ. ಅದಕ್ಕಾಗಿ ಇಂದು ನಾನು ಈ ವೈಷ್ಣವ ಭಕ್ತನನ್ನು ನಿನ್ನ ಪಾವನ ಚರಣ ಕಮಲಗಳಲ್ಲಿ ಸಮರ್ಪಿಸಲು ಕರೆತಂದಿರುವೆ. ನೀನು ಭಕ್ತವತ್ಸಲನಾಗಿರುವೆ, ಸದಾ ಭಕ್ತರ ಅಧೀನನಾಗಿರುತ್ತೀಯೆ. ಆದುದರಿಂದ ನನ್ನ ಪ್ರಾರ್ಥನೆಯನ್ನು ಅವಶ್ಯವಾಗಿ ಸ್ವೀಕರಿಸುವೆ ಎಂದು ಆಶಿಸುತ್ತೇನೆ.

ಇಷ್ಟು ಕೇಳುತ್ತಲೇ ಭಗವಾನ್ ಶ್ರೀಕೃಷ್ಣನು ಸಂತೋಷವಾಗಿ ಭಕ್ತರಾಜ ನರಸಿಂಹರಾಮನ ತಲೆಯಮೇಲೆ ಕೈಯಿರಿಸಿ ಅವನನ್ನು ಸ್ವೀಕರಿಸಿಕೊಂಡನು. ಭಗವಾನ್ ಶಿವನು ಅಲ್ಲಿಂದ ಬಿಳ್ಕೊಂಡನು. ಭಕ್ತರಾಜನು ಪ್ರೇಮದಿಂದ ಗದ್ಗದಿತನಾಗಿ ಶ್ರೀಪ್ರಭುವಿನ ಚರಣಗಳಲ್ಲಿ ಹೊರಳಾಡಿದನು ಮತ್ತು ಕಣ್ಣಿರಿನಿಂದ ಅವನ ಶ್ರೀಚರಣಗಳನ್ನು ತೊಳೆದನು. ಭಗವಂತನು ಭಕ್ತರಾಜನನ್ನು ಸಂಬೋಧಿಸುತ್ತಾ-ವತ್ಸಾ! ನನ್ನ ಮತ್ತು ಮಹೇಶ್ವರನ ಸ್ವರೂಪದಲ್ಲಿ ಕಿಂಚಿನ್ಮಾತ್ರ ಭೇದವಿಲ್ಲ. ನಾನು ಶಂಕರನನ್ನು ನನ್ನ ಆರಾಧ್ಯ ದೇವರೆಂದು ತಿಳಿಯುತ್ತೇನೆ ಮತ್ತು ಶಿವನು ನನ್ನನ್ನು ಆರಾಧ್ಯನೆಂದು ತಿಳಿಯುತ್ತಾನೆ. ಈ ಪ್ರಕಾರ ನಮ್ಮಿಬ್ಬರಲ್ಲಿ ಭಿನ್ನತೆಯಿಲ್ಲದ ಕಾರಣ ನೀನು ಗೈದ ಶಿವನ ಪೂಜೆಯು ವಾಸ್ತವವಾಗಿ ನನ್ನ ಪೂಜೆಯೇ ಆಗಿದೆ.

ಪ್ರಭೂ! ನಾನು ಏನು ಯೋಗ್ಯನಾಗಿದ್ದೇನೆ? ನಾನಾದರೋ ಭಗವಾನ್ ಸದಾಶಿವನ ಕೃಪೆಯಿಂದ **'ಶ್ರೀಕೃಷ್ಣಃ ಶರಣಂ ಮಮ'** ಇಷ್ಟನ್ನು ಮಾತ್ರ ತಿಳಿಯಬಲ್ಲವನಾಗಿದ್ದೇನೆ. ಈ ಪ್ರಕಾರ ನರಸಿಂಹರಾಮನು ನಮ್ರತೆಯಿಂದ ನಿವೇದಿಸಿಕೊಂಡನು.

ಮಗೂ! ಯಾವ ಮನುಷ್ಯನು ನನ್ನನ್ನು ತನ್ನ ಸ್ವಾಮಿ ಎಂದು ತಿಳಿಯುತ್ತಾನೋ, ನಾನು ಅವನ ದಾಸನಾಗುತ್ತೇನೆ. ನಿನ್ನ ನೈಷ್ಠಿಕ ಭಕ್ತಿಯನ್ನು ನೋಡಿ ಇಂದು ನಾನು ಅತ್ಯಂತ ಪ್ರಸನ್ನನಾಗಿದ್ದೇನೆ. ಇಷ್ಟು ಹೇಳಿ ಭಗವಂತನು ನರಸಿಂಹರಾಮನಿಗೆ ತನ್ನ ಅಂತಃಪುರಕ್ಕೆ ಕರಕೊಂಡು ಹೋಗಿ ಅಲ್ಲಿಯ ಎಲ್ಲಾ ವೈಭವವನ್ನು ತೋರಿಸಿದನು.

ಆಗಿನಿಂದ ನರಸಿಂಹರಾಮನು ಸ್ವತಃ ಶ್ರೀಭಗವಂತನ ಸೇವೆಯಲ್ಲಿ ಇರತೊಡಗಿದನು. ಆಗಲೇ ಶರತ್‌ಪೂರ್ಣಿಮೆಯ ದಿನ ಬಂತು ಮತ್ತು ಶ್ರೀಧಾಮದಲ್ಲಿ ಅದರ ಸಿದ್ಧತೆ ನಡೆಯಿತು. ಆಗಲೇ ವೃಂದಾವನದಂತೆ ಸುರಮ್ಯ ರಾಸಮಂಡಲ ಅಣಿಗೊಂಡಿತು. ಹದಿನಾರು ಸಾವಿರ ಗೋಪಿಯರು ಮತ್ತು ಅಷ್ಟೇ ಭಗವಂತನ ಸ್ವರೂಪಗಳು ಪ್ರಕಟಗೊಂಡವು. ಆಗಲೇ ಭಕ್ತರಾಜನೂ ಕೂಡ ಗೋಪಿಯ ವೇಷದಲ್ಲಿ ಹಾಡತೊಡಗಿದನು. ಅವನು ಭಗವದ್

ಗುಣ-ಗಾನದಲ್ಲಿ ಒಮ್ಮೆಲೇ ತಲ್ಲೀನನಾದನು. ಅವನ ಈ ಭಾವನನ್ನು ನೋಡಿ ಗೋಪಾಲನು ಅತ್ಯಂತ ಪ್ರಸನ್ನನಾದನು ಮತ್ತು ಅವನು ಉಡುಗೊರೆಯಾಗಿ ಭಕ್ತರಾಜನಿಗೆ ತನ್ನ ಪೀತಾಂಬರವನ್ನು ಹೊದಿಸಿದನು. ಅನಂತರ ಭಗವಂತನು ಶಂಖಿಧ್ವನಿಗೈದಾಗ ಮಹಾರಾಸವು ಪ್ರಾರಂಭಗೊಂಡಿತು.

ಭಗವಂತನು ನರಸಿಂಹರಾಮನ ಕೈಯಲ್ಲಿ ದೀಪವನ್ನು ಕೊಟ್ಟು ರಾಸಮಂಡಲದ ಮಧ್ಯದಲ್ಲಿ ನಿಲ್ಲಿಸಿದನು. ಭಕ್ತರಾಜನು ರಾಸವನ್ನು ನೋಡುವುದರಲ್ಲಿ ತನ್ಮಯನಾದನು. ಅಕಸ್ಮಾತ್ ಉರಿಯುವ ದೀಪವು ಅವನ ಕೈಯ್ಯ ಬಟ್ಟೆಗೆ ತಗುಲಿ ಇಡೀ ಕೈ ದೀಪದಂತೆ ಉರಿಯತೊಡಗಿತು. ಕೈಯೇ ದಿವಟಿಗೆಯಂತಾಯಿತು, ಆದರೂ ಭಕ್ತರಾಜನಿಗೆ ಅದರ ಸ್ವಲ್ಪವೂ ಅರಿವಿರವಿರಲಿಲ್ಲ. ಅವನ ಮನಸ್ಸು ಪ್ರಭುವಿನೊಂದಿಗೆ ಒಂದಾಗಿತ್ತು, ಶರೀರದೊಂದಿಗೆ ಅವನ ಸಂಬಂಧವೇ ಇರಲಿಲ್ಲ. ಆದುದರಿಂದ ಅವನು ಒಂದೇ ಭಾವದಿಂದ ಕೊನೆಯವರೆಗೆ ರಾಸದರ್ಶನ ಮಾಡುತ್ತಿದ್ದನು ; ಅವನ ಚಿತ್ತವು ಒಂದು ಕ್ಷಣವೂ ವಿಚಲಿತವಾಗಲಿಲ್ಲ.

ಕೊನೆಯಲ್ಲಿ ರಾಸಲೀಲೆಯು ಸಮಾಪ್ತಗೊಂಡಾಗ ಸ್ವತಃ ಭಗವಂತನ ದೃಷ್ಟಿಯು ನರಸಿಂಹರಾಮನ ಉರಿಯುವ ಕೈಯ್ಯಕಡೆಗೆ ಬಿತ್ತು. ತತ್‌ಕ್ಷಣ ಅವನು ಮುಂದೆ ಬಂದು ಬೆಂಕಿಯನ್ನು ನಂದಿಸಿ, ಪ್ರೇಮದಿಂದ ಕೈ ಸವರಿ ಅವನ ಎಲ್ಲ ನೋವನ್ನು ನಿವಾರಿಸಿದನು. ನರಸಿಂಹರಾಮನ ಈ ತನ್ಮಯತೆಯನ್ನು ಕಂಡು ರುಕ್ಮಿಣಿಯೇ ಆದಿ ಮಹಾದೇವಿಯರಿಗೆ ಆಶ್ಚರ್ಯವಾಯಿತು. ತಾಯಿ ರುಕ್ಮಿಣಿಯಾದರೋ ಪ್ರಸನ್ನಳಾಗಿ ತನ್ನ ಹಾರವನ್ನು ತೆಗೆದು ಭಕ್ತರಾಜನಿಗೆ ತೊಡಿಸಿದಳು. ಭಗವಂತನೂ ಕೂಡ ಭಕ್ತರಾಜನ ಪ್ರಶಂಸೆ ಗೈದು 'ಭಕ್ತ ನರಸಿಂಹನನ್ನು ನನ್ನಂತೆಯೇ ತಿಳಿಯಿರಿ' ಎಂದು ಹೇಳಿ ಅವನನ್ನು ತುಂಬಾ ಸನ್ಮಾನಿಸಿದನು.

ಈ ಪ್ರಕಾರ ಆನಂದೋತ್ಸವ, ಭಗವದ್ದರ್ಶನ ಮತ್ತು ಭಗವತ್ಸೇವೆಯಲ್ಲಿ ನರಸಿಂಹರಾಮನಿಗೆ ಒಂದು ತಿಂಗಳು ಒಂದು ಕ್ಷಣದಂತೆ ಕಳೆಯಿತು. ಒಂದು ದಿನ ಅವನು ಕುಳಿತು ಭಗವಂತನ ಚರಣಸೇವೆ ಮಾಡುತ್ತಿದ್ದನು. ಇದ್ದಕ್ಕಿದ್ದಂತೆ ಅವನಿಗೆ ತನಗೆ ದೊರೆತ ಸೌಭಾಗ್ಯದ ಕಡೆಗೆ ಲಕ್ಷ್ಯಹೋಯಿತು- ಆಹಾ ! ಸಾಕ್ಷಾತ್ ಲಕ್ಷ್ಮೀಗೂ, ದೇವತೆಗಳಿಗೂ, ಮುನಿಗಳಿಗೂ ದುರ್ಲಭವಾದ ಭಗವಂತನ ಚರಣ ಸೇವೆಯ ಅವಕಾಶ ದೊರೆತಿದೆಯಲ್ಲಾ ! ನಾನೇ ಧನ್ಯನಾಗಿದ್ದೇನೆ ಎಂದು ಯೋಚಿಸುತ್ತಿದ್ದನು. ಆದರೆ ಇಂತಹ ಸೌಭಾಗ್ಯವು ನನಗೆ ನನ್ನ ಅತ್ತಿಗೆಯಿಂದಲೇ ದೊರಕಿದೆ ; ಆದುದರಿಂದ ಅವರಿಗೆ ಆಭಾರಿಯಾಗಿದ್ದೇನೆ.

ಭಕ್ತರಾಜನು ಹೀಗೆ ವಿಚಾರದಲ್ಲಿ ಮುಳುಗಿರುವಾಗ ಒಮ್ಮಿಂದೊಮ್ಮೆಗೆ ಭಗವಂತನ ವಾಣಿ ಕೇಳಿ ಬಂತು. ಭಗವಂತ ಹೇಳಿದ- ಮಗೂ! ನಿನ್ನ ಸೇವೆ ಮತ್ತು ಏಕಾಂತ ಭಕ್ತಿಯಿಂದ ನಾನು ಅತ್ಯಂತ ಪ್ರಸನ್ನನಾಗಿದ್ದೇನೆ. ನೀನೇನು ಬಯಸುತ್ತಿಯೇ ಹೇಳು !

ನರಸಿಂಹರಾಮನು ನಿವೇದಿಸಿಕೊಂಡನು-ಸ್ವಾಮಿ ! ದಾಸನ ಧೃಷ್ಟತೆಯನ್ನು ತಿಳಿಯುವುದಿಲ್ಲವಾದರೆ, ಮೊದಲು ನಾನೊಂದು ಪ್ರಶ್ನೆ ಕೇಳುತ್ತೇನೆ. ಒಂದು ವೇಳೆ ದರಿದ್ರ ಮನುಷ್ಯನಿಗೆ ಚಿಂತಾಮಣಿಯು ದೊರೆತ ಬಳಿಕವೂ ಸಾಮಾನ್ಯ ಧನಕ್ಕಾಗಿ ಆಸೆ ಪಟ್ಟರೆ ಅವನಿಗೆ ಏನು ಹೇಳಬೇಕು ?

ಭಗವಂತ ಹೇಳಿದ- ಅಸಂತೋಷಿ.....ಮೂರ್ಖ ಎಂದು.

ಸ್ವಾಮಿ ! ಹಾಗಾದರೆ ನೀನು ನನ್ನನ್ನು ಏಕೆ ಮೂರ್ಖನನ್ನಾಗಿಸುವೆ ? ಚಿಂತಾಮಣಿಗೆ ಸಮಾನವಾದ ನಿನ್ನ ಚರಣ ಕಮಲಗಳ ಪ್ರಾಪ್ತಿಯನ್ನು ಮಾಡಿಸಿ ಮತ್ತೆ ಇಂದು ನನ್ನಲ್ಲಿ ಬೇರೆ ಬೇಡುವಂತೆ ಹೇಳುವೆಯಲ್ಲ ! ನಾಥಾ! ನನ್ನನ್ನು ಮರೆವೆಯಲ್ಲಿ ಹಾಕಬೇಡ. ನಾನೇನೂ ಬೇಡುವುದಿಲ್ಲ. ನಾನು ಸದಾಕಾಲ ನಿನ್ನ ಚರಣ ಸೇವೆಯಲ್ಲಿಯೇ ಇರಲು ಬಯಸುತ್ತೇನೆ ಎಂದು ನಮ್ರನಾಗಿ ಹೇಳಿದನು.

ವತ್ಸಾ ! ನಿನ್ನ ನಿಷ್ಠೆಯು ಧನ್ಯವಾಗಿದೆ. ಆದರೆ ಜಗತ್ತಿನಲ್ಲಿ ಪ್ರತಿಯೊಂದು ಗೃಹಸ್ಥನ ಮೇಲೆ ಮೂರು ಪ್ರಕಾರದ ಋಣಗಳು ಇರುತ್ತವೆ. ಮೊದಲನೇ ಋಣವು ಪತ್ನೀ ಪುತ್ರರದು, ಎರಡನೇಯದು ಪಿತೃಗಳ, ಮತ್ತು ಮೂರನೇಯದು ದೇವತೆಗಳದ್ದು. ಮನುಷ್ಯನು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಈ ಋಣಗಳಿಂದ ಮುಕ್ತನಾಗುವುದಿಲ್ಲವೋ, ಅಲ್ಲಿಯವರೆಗೆ ಅವನು ಪುನಃ ಪುನಃ ಹುಟ್ಟಬೇಕಾಗುತ್ತದೆ. ಆದುದರಿಂದ ನನ್ನ ಆಜ್ಞೆಯಂತೆ ಮರ್ತ್ಯಲೋಕಕ್ಕೆ ಹೋಗಿ ನೀನು ಈ ಮೂರು ಋಣಗಳಿಂದ ಮುಕ್ತನಾಗು ಎಂದು ಭಗವಂತನು ನುಡಿದನು.

ನರಸಿಂಹರಾಮನಿಗೆ ಇದನ್ನು ಕೇಳಿ ತುಂಬಾ ದುಃಖವಾಯಿತು. ಭಗವಂತನಿಂದ ಅಗಲಿರುವುದು ಅವನಿಗೆ ಅಸಹನೀಯವಾಗಿತ್ತು. ಆದುದರಿಂದ ಕಣ್ಣುಗಳಲ್ಲಿ ನೀರು ತುಂಬಿ-ಸ್ವಾಮಿ ! ನಿನ್ನ ಚರಣಗಳ ಧೂಳು ದೊರೆತ ಮೇಲೆಯೂ ಯಾವುದಾದರೂ ಋಣವು ಉಳಿಯಬಲ್ಲುದೇ ? ನಾಥಾ ! ಇಂತಹ ಆಜ್ಞೆಯನ್ನು ಕೊಟ್ಟು ನೀನು ಪುನಃ ನನ್ನನ್ನು ಸಂಸಾರದಲ್ಲಿ ಸಿಲುಕಿಸಬೇಡ. ನಾನು ಸಂಸಾರದಲ್ಲಿ ಸೋತು ನಿನ್ನ ಚರಣಗಳೆಡೆಗೆ ಬಂದಿರುವೆನು. ನಿನ್ನ ಚರಣಗಳಿಂದ ವಿಮುಖನಾಗಿ ನಾನು ಪುನಃ ಸಂಸಾರದ ವ್ಯಾವಹಾರಿಕ ಕಾರ್ಯದಲ್ಲಿ ಸಿಲುಕಿರಲಾರೆನು.

ಭಗವಂತನೆಂದ - ಭಕ್ತರಾಜಾ ! ನನ್ನಲ್ಲಿ ಶರಣಾದ ಮೇಲೆ ಜೀವವು ಎಲ್ಲಾ ಋಣಾನುಬಂಧದಿಂದ ಮುಕ್ತನಾಗಿ ಹೋಗುತ್ತಾನೆ. ನೀನೂ ಕೂಡ ನನ್ನ ಮೇಲೆ ಋಣಗಳಿವೆ ಎಂದು ತಿಳಿಯಬೇಡ. ಆದರೆ ಲೋಕ ಸಂಗ್ರಹಕ್ಕಾಗಿ ಯಾದರೋ ಋಣಗಳಿಂದ ಮುಕ್ತನಾಗಲೇಬೇಕು. ನೀನು ಹೋಗು. ಎಲ್ಲ ಕೆಲಸವನ್ನು ನನ್ನ ಪೂಜೆಯೆಂದು ತಿಳಿದು ಮಾಡು. ಜೊತೆಗೆ ನನ್ನ ಶ್ರೀವಿಗ್ರಹದ ಪೂಜೆಯನ್ನು ಮಾಡು. ನಿನ್ನಂತಹ ಏಕಾಂತಿಕ ಭಕ್ತನಿಗೆ ಮೂರ್ತಿ-ಪೂಜೆ ಅನಿವಾರ್ಯವಿಲ್ಲದಿದ್ದರೂ, ನಾನು ನಿನಗೆ ಧ್ಯಾನ-ಪೂಜೆ ಮಾಡಲು ನನ್ನ ಪ್ರತಿಮೆಯನ್ನು ಕೊಡುತ್ತೇನೆ. ಈ ಪ್ರತಿಮೆಯ ಪೂಜೆ-ಅರ್ಚನೆ ಮಾಡುವುದರಿಂದ ಮತ್ತು ಧ್ಯಾನ ಮಾಡುವುದರಿಂದ ನಿನ್ನ ಭಕ್ತಿಯು ಇನ್ನೂ ದೃಢವಾಗುವುದು. ಜೊತೆಗೆ ಈ ಕರತಾಳವನ್ನೂ ನಾನು ಕೊಡುತ್ತೇನೆ. ಈ ಕರತಾಳದ ಮೂಲಕ ನೀನು ಭಜನೆ-ಕೀರ್ತನೆ ಮಾಡಿದಾಗ ನಾನು ನಿನ್ನ ಬಳಿಯಲ್ಲಿ ಉಪಸ್ಥಿತನಾಗುವೆ ಹಾಗೂ ನಿನ್ನ ಗೃಹಸ್ಥಾಶ್ರಮದ ಎಲ್ಲ ಕಾರ್ಯಗಳನ್ನು ಮಾಡಿಕೊಡುತ್ತೇನೆ. ನನ್ನ ಪ್ರತಿಜ್ಞೆಯೇ ಹೀಗಿದೆ –

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ (ಗೀತ ೯/೨೨)

ಅನನ್ಯ ಭಾವದಿಂದ ನನ್ನಲ್ಲಿ ಸ್ಥಿತರಾದ ಭಕ್ತರು ಪರಮೇಶ್ವರನಾದ ನನ್ನನ್ನು ನಿರಂತರ ಚಿಂತನೆ ಮಾಡುತ್ತಾ ನಿಷ್ಕಾಮಭಾವದಿಂದ ಭಜಿಸುತ್ತಾರೋ, ಆ ನಿತ್ಯ ಏಕೀ ಭಾವದಿಂದ ನನ್ನಲ್ಲಿ ಸ್ಥಿತರಾದ ಪುರುಷರ ಯೋಗಕ್ಷೇಮವನ್ನು ನಾನು ಸ್ವತಃ ಹೊತ್ತುಕೊಳ್ಳುತ್ತೇನೆ. ಯಾವ ಮನುಷ್ಯನು ನನ್ನ ಈ ಪ್ರತಿಜ್ಞೆಯನ್ನು ನೆನಪಿನಲ್ಲಿಟ್ಟುಕೊಂಡು ಅದಕ್ಕನುಕೂಲವಾಗಿ ಆಚರಣೆ ಮಾಡುತ್ತಾನೋ, ಅವನು ಗೃಹಸ್ಥಾಶ್ರಮಿಯಾಗಿದ್ದರೂ ಎಂದಿಗೂ ದುರ್ಗತಿಯನ್ನು ಪಡೆಯುವುದಿಲ್ಲ. ಆದುದರಿಂದ ನೀನು ಜೂನಾಗಡಕ್ಕೆ ಹೋಗಿ ಅನನ್ಯ ಭಾವದಿಂದ ನನ್ನ ಭಕ್ತಿಯನ್ನು ಮಾಡು.

ಭಗವಂತನು ಈ ಪ್ರಕಾರ ಆಶ್ವಾಸನೆಯನ್ನು ಕೊಟ್ಟಾಗ ನರಸಿಂಹರಾಮನು ಒಪ್ಪಿಕೊಂಡನು. ಭಗವಂತನು ಅವನಿಗೆ ತನ್ನ ಪ್ರತಿಮೆ ಮತ್ತು ಕರತಾಳಗಳನ್ನು ಒಪ್ಪಿಸಿ ಪೀತಾಂಬರ ಮತ್ತು ನವಿಲುಗರಿಯ ಮುಕುಟವನ್ನು ತೊಡಿಸಿದನು. ನರಸಿಂಹರಾಮನು ಭಗವಂತನ ಚರಣಗಳಲ್ಲಿ ಹೊರಳಾಡಿ, ಪದೇ-ಪದೇ ನಮಸ್ಕರಿಸುತ್ತಾ, ಭಗವತ್ ಪ್ರೇರಣೆಯಿಂದ ಆಗಲೇ ಜೂನಾಗಡಕ್ಕೆ ಬಂದು ತಲುಪಿದನು.

ಅನನ್ಯಾಶ್ರಯ

ಪ್ರಭಾತ ಸಮಯವಾಗಿತ್ತು, ಭಗವಾನ್ ಭುವನಭಾಸ್ಕರನು ತನ್ನ ಉಷಃ ಕಾಲದ ಪ್ರಕಾಶದಿಂದ ಹತ್ತೂ ದಿಕ್ಕುಗಳನ್ನು ಸುವರ್ಣಮಯವಾಗಿಸಿದ್ದನು. ಇದೇ ಸಮಯದಲ್ಲಿ ಭಕ್ತಪ್ರವರ ನರಸಿಂಹರಾಮನು ಜೂನಾಗಡದ ಸಮಿಪದಲ್ಲಿ ಗರುಡಾಸನದಿಂದ ಇಳಿದನು. ಅವನು ಸನಿಹದ ಒಂದು ಸರೋವರದಲ್ಲಿ ಸ್ನಾನಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಭಗವದ್ ಭಜನೆ ಮಾಡಿದನು. ಅನಂತರ ಯೋಚಿಸುತ್ತಾನೆ- ನಾನು ಎಲ್ಲಿಗೆ ಹೋಗಲಿ ? ಅಣ್ಣ-ಅತ್ತಿಗೆಯವರಾದರೋ ಅಂದೇ ಮನೆಯಿಂದ ಹೊರಗೆ ಹಾಕಿರುವರು. ಅವರೇಕೆ ನನ್ನನ್ನು ಸ್ವಾಗತಿಸುವರು ? ಆದರೆ ಅವರಲ್ಲದೆ ನನಗೆ ಬೇರೆ ಯಾರಿದ್ದಾರೆ ? ಮೊದಲಾದರೋ ಅವರ ಬಳಿಗೇ ಹೋಗುವುದು, ಬೇಕಾದರೆ ಅವರು ನನಗೆ ಅಪಮಾನವೇ ಮಾಡಲಿ !

ಅವನ ಬಳಿಯಲ್ಲಿ ಭಗವಂತನು ಕರುಣಿಸಿದ ಪ್ರತಿಮೆ, ಕರತಾಳ, ನವಿಲುಗರಿಯ ಮುಕುಟ ಮತ್ತು ಪೀತಾಂಬರವಲ್ಲದೇ ಬೇರೆ ಏನೂ ಇರಲೇ ಇಲ್ಲ. ಈ ವಸ್ತುಗಳೊಂದಿಗೆ ವೈಷ್ಣವ ವೇಷದಲ್ಲಿ ಅವನು ಮನೆಗೆ ಬಂದನು. ಅವನು ತುಂಬಾ ವಿನಯದಿಂದ ಅಣ್ಣ-ಅತ್ತಿಗೆಯವರಿಗೆ ನಮಸ್ಕರಿಸಿದನು. ಅವನ ಈ ವೇಷವನ್ನು ನೋಡಿ ವಂಶೀಧರನಿಗೆ ತುಂಬಾ ಆಶ್ಚರ್ಯ ಮತ್ತು ಸಿಟ್ಟೂ ಬಂತು. ಅವನು ಹೇಳಿದನು. ಏ ಮೂರ್ಖಾ ! ಇದೇನು ಮಾಡಿಕೊಂಡಿದ್ದೀಯೋ ? ಹಣೆಯಲ್ಲಿ ತಿಲಕ, ಕತ್ತಿನಲ್ಲಿ ತುಲಸೀಮಾಲೆ, ಕೈಯಲ್ಲಿ ಕರತಾಳ, ತಲೆಯಲ್ಲಿ ನವಿಲುಗರಿಯ ಕಿರೀಟ ಮತ್ತು ಸೊಂಟದಲ್ಲಿ ಪೀತಾಂಬರ, ಇದೆಲ್ಲ ನಿನಗೆ ಯಾರು ತೊಡಿಸಿದರು ? ಎಸೆದು ಬಿಡು ಈ ವೇಷವನ್ನು.

ನರಸಿಂಹರಾಮನು ತುಂಬಾ ವಿನಯದಿಂದ ಹೇಳಿದನು- ಅಣ್ಣಾ! ಇದೇನು ನೀನು ಹೇಳುತ್ತಿರುವೆ ? ಈ ವೇಷವು ಸ್ವತಃ ವೈಕುಂಠವಾಸೀ ಭಗವಾನ್ ಶ್ರೀಕೃಷ್ಣನೇ ಕೊಟ್ಟಿರುವನು. ನನಗೆ ಇದು ಅವನ ಪರಮ ಪವಿತ್ರ ಪ್ರಸಾದವಾಗಿದೆ. ಭಗವಂತನ ಪ್ರಸಾದದ ತಿರಸ್ಕಾರವು ಸ್ವತಃ ಭಗವಂತನ ತಿರಸ್ಕಾರವೇ ಆಗಿದೆ.

ವಂಶೀಧರನು ತಿರಸ್ಕಾರದ ಮಾತುಗಳಿಂದ ಹೇಳಿದನು- ಹೇ ಮೂರ್ಖಾ! ಏನು ಹುಚ್ಚುರಂತೆ ಮಾತನಾಡುವೆ. ಇದೆಲ್ಲ ಬಿಡು. ಈಗ ನೀನು ಹುಡುಗನಲ್ಲ, ಎರಡು ಮಕ್ಕಳ ತಂದೆಯಾಗಿರುವೆ. ಈ ಭಿಕ್ಷುಕರಂತಹ ವೇಷವನ್ನು ಬಿಸುಟು ಎರಡು ಕಾಸುಗಳಿಸುವ ಉಪಾಯವನ್ನು ಮಾಡು. ಜಾತಿ-ಸಂಬಂಧಿಗಳಲ್ಲಿ ನನ್ನ

ಅವಮಾನವನ್ನು ಏಕೆ ಮಾಡುತ್ತಿರುವೆ ? ಇದೆಲ್ಲ ಬಿಟ್ಟು ಸರಿದಾರಿಗೆ ಬಂದರೆ ಈಗಲೂ ರಾಜನ ಬಳಿ ಹೇಳಿ ನಿನಗೆ ಐದು-ಹತ್ತರ ಯಾವುದಾದರೂ ಕೆಲಸ ಕೊಡಿಸುತ್ತೇನೆ. ಈ ಹುಚ್ಚು ತನದಲ್ಲಿ ಏನಿಟ್ಟಿದೆ ? ಉಪವಾಸ ಸಾಯಬೇಕಾದೀತು ?

ಅಣ್ಣಾ ! ನೀನು ಅಣ್ಣನಾದುದರಿಂದ ನನಗೆ ತಂದೆಯಂತಿರುವೆ. ನಿನ್ನ ಮಾತುಗಳನ್ನು ಒಪ್ಪಿಕೊಳ್ಳುವುದೂ ನನ್ನ ಧರ್ಮವಾಗಿದೆ. ಆದರೆ ನಾನು ನಿರುಪಾಯನಾಗಿದ್ದೇನೆ. ಈ ವೇಷವು ನನ್ನ ಪ್ರಿಯತಮ ಪರಮಾತ್ಮನಿಂದ ಕೊಡಲ್ಪಟ್ಟಿದೆ. ಈ ಮೂರ್ತಿ, ಕರತಾಳ, ಮುಕುಟ, ಪೀತಾಂಬರ ಮೊದಲಾದ ಎಲ್ಲ ವಸ್ತುಗಳು ಅವನಿಂದಲೇ ಪ್ರಸಾದ ರೂಪದಿಂದ ದೊರೆತಿವೆ. ಆದ್ದರಿಂದ ಇವು ನನಗೆ ಪ್ರಾಣಗಳಿಗಿಂತ ಹೆಚ್ಚು ಪ್ರಿಯವಾಗಿವೆ. ಈ ವಸ್ತುಗಳನ್ನು ಮತ್ತು ಈ ವೇಷವನ್ನು ಜೀವವಿರುವ ತನಕ ನನ್ನಿಂದ ಬಿಡಲಾರದು. ಜಗತ್ತಿನ ದೃಷ್ಟಿಯಿಂದ ಇದು ನನ್ನ ಹುಚ್ಚು ತನವೆಂಬುದು ಅವಶ್ಯವಾಗಿದೆ. ಪ್ರಪಂಚದ ದೃಷ್ಟಿಯಿಂದ ನಮ್ಮಂತಹವರು ಹುಚ್ಚರಾಗಿ ಕಾಣುವುದು ಇತಿಹಾಸ ಪ್ರಸಿದ್ಧವೇ ಆಗಿದೆ. ಪ್ರಹ್ಲಾದನನ್ನು ಹಿರಣ್ಯಕಶಿಪು ಹುಚ್ಚನೆಂದು ಹೇಳಲಿಲ್ಲವೇ? ವಿಭೀಷಣನನ್ನು ರಾವಣನು ಹುಚ್ಚನೆಂದೇ ತಿಳಿಯುತ್ತಿದ್ದನು. ಆದುದರಿಂದ ಹೀಗಿದ್ದರೆ ಹುಚ್ಚನಾಗಿ ಇರುವುದೇ ಶ್ರೇಯಸ್ಕರವಾಗಿದೆ. ನನ್ನ ಈ ದುಡುಕುತನಕ್ಕೆ ಕ್ಷಮಿಸುವಿ ಎಂದು ಆಶಿಸುತ್ತೇನೆ ಎಂದು ನರಸಿಂಹನು ನಿರ್ಭಯನಾಗಿ ಉತ್ತರಿಸಿದನು.

ಮೂರ್ಖಾ ! ಏಕೆ ನನ್ನನ್ನು ಸಮಜಾಯಿಸಲು ಪ್ರಯತ್ನಿಸುವೆ ? ನೀನು ಬರುತ್ತೀ ಎಂದು ದೇವರು ನಿನ್ನ ದಾರಿಯನ್ನೇ ನೋಡುತ್ತಿದ್ದನೇ ? ನಿನ್ನಂತಹ ಬುದ್ಧಿಹೀನರಿಗೂ ಅವನು ದರ್ಶನ ಕೊಡಲು ಪ್ರಾರಂಭಿಸಿದರೆ ಜಗತ್ತು ಬರಿದಾಗುತಿತ್ತು ; ವೈಕುಂಠದಲ್ಲಿ ನುಗ್ಗಿಹೋಗಲು ಜಾಗಸಿಗುತ್ತಿರಲಿಲ್ಲ. ಅಯ್ಯಾ! ಯಾರೋ ಧೂರ್ತನು ಸಿಕ್ಕಿರಬೇಕು. ನಿನ್ನಂತಹ ಮೂರ್ಖನಿಗೆ ಧೂರ್ತನಲ್ಲದೆ ಬೇರೆಯಾರು ಸಿಗುತ್ತಾರೆ.

ನರಸಿಂಹಾ! ಈಗ ಈ ಮೂರ್ಖತೆಯನ್ನು ಬಿಡು, ಇಲ್ಲವಾದರೆ ಮುಂದೆ ಪಶ್ಚಾತ್ತಾಪ ಪಡಬೇಕಾದೀತು. ಜಾತಿ-ಸಂಬಂಧಿಗಳಲ್ಲಿ ಯಾರೂ ಸಹಾಯ ಮಾಡಲಾರರು. ಮಗಳ ಮದುವೆಯೇನೋ ಆಗಿಹೋಯಿತು. ಆದರೆ ಮಗನ ಮದುವೆ ಆಗುವುದಲ್ಲಿ ತೊಂದರೆಯೇ ಆದೀತು. ವಿವಾಹವಾಗದೇ ಇರುವುದರಿಂದ ನಮ್ಮ ಕುಲವು ಕೀಳಾಗಬಹುದು ; ಮುಂತಾಗಿ ವಂಶೀಧರನು ಪುನಃ ತುಂಬಾ ಸಮಜಾಯಿಸಲು ಪ್ರಯತ್ನ ಮಾಡಿದನು.

ಅಣ್ಣಾ ! ನನಗಾದರೋ ಮೂರ್ಖನಾಗಿ ಇರಲು ಬಿಟ್ಟು ಬಿಡಿ. ಒಂದು ವೇಳೆ ಪರಮಾತ್ಮನ ಭಕ್ತಿ ಮಾಡುವುದರಿಂದ ನಮ್ಮ ಕುಲವು ಕೀಳಾಗುವುದಾದರೆ ಅಂತಹ ಕುಲದ ಪರಿವೆ ನನಗಿಲ್ಲ. ನನಗಾದರೋ ಭಗವಂತನ...

ಇಷ್ಟರವರೆಗೆ ದುರಿತಗೌರಿಯು ಸುಮ್ಮನೆ ಇಬ್ಬರು ಸಹೋದರರ ಮಾತುಗಳನ್ನು ಕೇಳುತ್ತಿದ್ದಳು ; ಆದರೆ ಈಗ ನರಸಿಂಹರಾಮನ ಹಠವು ಅವಳಿಂದ ಸಹಿಸಲಾಗಲಿಲ್ಲ. ಅವಳು ಮಧ್ಯದಲ್ಲೇ ಅವನ ಮಾತನ್ನು ತಡೆದು ರೋಷಪೂರ್ಣ ಮಾತುಗಳಿಂದ ಹೇಳತೊಡಗಿದಳು-ನೋಡಿ ! ತಿಲಕ ಹಚ್ಚಿಕೊಂಡು ದೊಡ್ಡ ಭಕ್ತರಾಜ ಬಂದಿದ್ದಾನೆ. ಸಣ್ಣವರು-ದೊಡ್ಡವರು ಎಂಬುದು ಸ್ವಲ್ಪವೂ ಪರಿವೆ ಇಲ್ಲ; ಲಕ್ಷಬಾರಿ ಸಮಜಾಯಿಸಿದರೂ ತನ್ನ ಜ್ಞಾನಕಥೆ ಬಿಡಲಾರನು. ನಿನ್ನ ಜ್ಞಾನ ನಿನಗೇ ಇರಲಿ ; ನಿನ್ನನ್ನು ಜೊತೆಯಲ್ಲಿಟ್ಟುಕೊಂಡು ನಾವು ಸಂಬಂಧಿ - ಜಾತಿಬಾಂಧವರಲ್ಲಿ ಅವಮಾನಿತರಾಗುವುದಿಲ್ಲ. ಒಂದೋ ಈ ವೇಷ ತೆಗೆದು, ಸರಿಯಾದ ಮನುಷ್ಯರಂತೆ ಮನೆಯಲ್ಲಿ ಇರು, ಇಲ್ಲವಾದರೆ ನಮಗೆ ಮುಖತೋರಿಸಬೇಡ. ನಾನು ನಿಮ್ಮೆಲ್ಲರ ಸಾಲ ತಿಂದಿಲ್ಲ. ಒಂದು ವೇಳೆ ಏನಾದರು ಮರ್ಯಾದೆ ಇದ್ದರೆ ನಿನ್ನ ಕುಭಾರ್ಯೆಯನ್ನು ಜೊತೆಗೆ ಕರಕೊಂಡು ಮನೆ ಬಿಟ್ಟು ಹೋಗು ! ಇಷ್ಟು ದಿನ ಎಲ್ಲಿ ಹಸಿವೆಯಿಂದ ಸಾಯುತ್ತಿದ್ದನೋ ತಿಳಿಯದು, ಈಗ ಬಂದ ಪುನಃ ನನ್ನ ಪ್ರಾಣ ತಿನ್ನಲು.

ಅತ್ತಿಗೆ ! ಹೀಗೆ ಕಠೋರವಾಗಿ ಏಕೆ ಮಾತಾಡುತ್ತಿರುವಿರಿ? ಒಂದು ವೇಳೆ ನನ್ನ ಕುಟುಂಬವು ನಿಮಗೆ ಭಾರವಾಗಿ ಕಂಡು ಬಂದರೆ ನಾನು ನಾಳೆಯೇ ಬೇರೆ ಹೊರಟು ಹೋಗುತ್ತೇನೆ. ನೀವು ವ್ಯರ್ಥವಾಗಿ ಮನಸ್ಸಿನಲ್ಲಿ ದುಃಖಿಸಬೇಡಿ. ನಾನಾದರೋ ನಿಮ್ಮನ್ನು ತಾಯಿಯಂತೆ ತಿಳಿಯುತ್ತೇನೆ ಎಂದು ನರಸಿಂಹರಾಮನು ವಿನಮ್ರನಾಗಿ ಹೇಳಿದನು.

ದುರಿತಗೌರಿಯು ನೀನು ತುಂಬಾ ಉದ್ಧಟನಾಗಿರುವುದು ನನಗೆ ತಿಳಿದೇ ಇದೆ. ಒಂದು ವೇಳೆ ನಿನ್ನ ಮನಸ್ಸಿನಲ್ಲಿ ಹಾಗಿರುವುದಾದರೆ ನಾಳೆ ಏಕೆ ? ಇಂದೇ ಒಳ್ಳೆಯ ಮೂಹೂರ್ತವಿದೆ. ಅಲ್ಲದೆ ಈ ಅನ್ನ-ನೀರು ನೀನು ಗಳಿಸಿದ್ದಲ್ಲವಲ್ಲ. ನೀನು ಈಗಲೇ ಬೇರೆಯಾಗಿ ಹೋಗು. ನೀನಾದರೋ ದೊಡ್ಡ ಭಕ್ತನಾಗಿ ಬಂದಿರುವೆಯಲ್ಲ ! ನಿನಗೆ ಯಾವುದರ ಚಿಂತೆ ? ಎಂದು ಹೇಳಿದಳು.

ದುರಿತಗೌರಿಯು ಆದಷ್ಟು ಬೇಗನೇ ಬೇರೆಯಾಗಲು ಹವಣಿಸುತ್ತಿರುವಳು

ಎಂಬುದು ನರಸಿಂಹರಾಮನಿಗೆ ಸ್ಪಷ್ಟವಾಯಿತು. ಈಗ ನಾನು ಜೊತೆಯಾಗಿ ಇರಲು ಒತ್ತಾಯಿಸುವುದು ವ್ಯರ್ಥವಾಗಿದೆ ಎಂದು ತಿಳಿದನು. ಈಗಲಾದರೋ ಭಗವಂತನ ಭರವಸೆಯ ಮೇಲೆ ಈ ಮನೆಯಿಂದ ಬೇಗನೇ ಹೊರಟು ಹೋಗುವುದೇ ನನಗೆ ಉಚಿತವಾಗಿದೆ ಎಂದು ಯೋಚಿಸಿ, ಅವನು ತನ್ನ ಧರ್ಮಪತ್ನೀ, ಹದಿನಾರು ವರ್ಷದ ಮಗಳು ಹಾಗೂ ಮಗನೊಂದಿಗೆ ಬೇರೆಯಾಗಲು ಸಿದ್ಧನಾದನು. ನರಸಿಂಹರಾಮನು, ವಂಶೀಧರನಿಗೆ ಹೇಳಿದನು- ಅಣ್ಣಾ ! ನೀವು ಪೂಜ್ಯರಿದ್ದೀರಿ. ನಾನು ನನ್ನ ಧರ್ಮ-ಪಾಲನೆಯಲ್ಲಿ ಸಮರ್ಥನಾಗಿರುವಂತೆ ಆಶೀರ್ವದಿಸಿರಿ. ಹಾಗು ನೀವು ಮನಸ್ಸಿನಲ್ಲಿ ಯಾವುದೇ ಕೆಟ್ಟಭಾವನೆ ಇರಿಸಬಾರದು ಎಂದು ಪ್ರಾರ್ಥಿಸುತ್ತೇನೆ. ತಮ್ಮನೆಂದು ನನ್ನ ಮೇಲೆ ಸದಾಕಾಲ ಸ್ನೇಹವಿರಿಸಿದರೆ ನಾನು ಕೃತಾರ್ಥನಾಗುವೆನು ಎಂದು ಹೇಳಿ ಅಣ್ಣನಿಗೆ ನಮಸ್ಕರಿಸಿ ಬೀಳ್ಕೊಂಡನು.

ಅತ್ತ ಮಾಣಿಕಗೌರಿಯೂ ಕೂಡ ದುರಿತಗೌರಿಗೆ ನಮಸ್ಕರಿಸುತ್ತಾ ಅಕ್ಕಾ! ನಿಮಗೆ ವಂದಿಸಿಕೊಳ್ಳುತ್ತೇನೆ, ನಿಮ್ಮ ಶುಭಾಶೀರ್ವಾದ ಬೇಡುತ್ತೇನೆ. ವಂಶೀಧರನು ಸುಮ್ಮನಿದ್ದನು. ದುರಿತಗೌರಿಯು ಹೇಳಿದಳು- ಸಾಕು ! ಹೆಚ್ಚಿಗೆ ಬುದ್ಧಿವಂತಿಗೆ ತೋರಬೇಡ. ಇಂದು ನಾನು ಗಂಗಾಸ್ನಾನ ಮಾಡಿದೆ. ಇನ್ನು ನೀನು ಬೇಕಾದರೆ ಭಿಕ್ಷೆಬೇಡು ಇಲ್ಲವೆ ರಾಜ್ಯಸಿಂಹಾಸನದಲ್ಲಿ ಕುಳಿತಿರು, ನಮಗೆ ಅದರಿಂದ ಯಾವ ಸಂಬಂಧವೂ ಇಲ್ಲ. ನಿನ್ನ ಈ ಜ್ಞಾನವನ್ನು ಭಿಕ್ಷೆ ಬೇಡುವ ಲಂಗೋಟಿ ಯವರಿಗೆ ಕೊಡು. ನಮ್ಮಂತಹ ಸಂಸಾರಿ ಜನರಿಗೆ ಇದರ ಅವಶ್ಯಕತೆ ಏನೂ ಇಲ್ಲ.

ವಂಶೀಧರನು ಕೊನೆಯವರೆಗೂ ಮೌನವಾಗಿಯೇ ಇದ್ದನು. **''ಮೌನಂ ಸಮ್ಮತಿಲಕ್ಷಣಮ್''** ಈ ನ್ಯಾಯದಿಂದ ಅವನಿಗೂ ಬೇರೆ ಏನೂ ಹೇಳುವುದಿರಲಿಲ್ಲ. ನರಸಿಂಹರಾಮನು ತನ್ನ ಚಿಕ್ಕದಾದ ಪರಿವಾರದೊಂದಿಗೆ ಏನೂ ಮಾತನಾಡದೇ ಮನೆಯಿಂದ ಬೀಳ್ಕೊಂಡನು. ಅವನ ಮನಸ್ಸಿನಲ್ಲಿ ಹರ್ಷ-ಶೋಕದ ಯಾವುದೇ ನೆರಳೂ ಇರಲಿಲ್ಲ. ಭಗವದ್ಗೀತೆಯಲ್ಲಿ ಭಗವಂತನು ಹೇಳಿರುವನು - ಯಾರ ಮನಸ್ಸು ದುಃಖಗಳಿಂದ ಉದ್ವಿಗ್ನವಾಗುವುದಿಲ್ಲವೋ, ಸುಖದ ಬಗ್ಗೆ ಸ್ಪೃಹೆ ದೂರವಾಗಿದೆಯೋ, ರಾಗ-ಭಯ, ಕ್ರೋಧ ನಾಶವಾಗಿದೆಯೋ, ಆ ಮುನಿಯು ಸ್ಥಿರ ಬುದ್ಧಿಯವನೆಂದು ಹೇಳಲಾಗುತ್ತದೆ. ನಿಜ ಭಕ್ತನ ಸ್ಥಿತಿಯೂ ಇದೇ ಆಗಿದೆ. ನರಸಿಂಹರಾಮನು ಇಂತಹ ಭಕ್ತನೇ ಆಗಿದ್ದನು, ಅವನ ಬುದ್ಧಿಯು ಸ್ಥಿರವಾಗಿತ್ತು.

ಸ್ತ್ರೀಯರ ಹೃದಯವು ತುಂಬಾ ಕೋಮಲವಾಗಿರುತ್ತದೆ. ಸ್ವಲ್ಪವೇ ಕಷ್ಟ ಬಂದರೂ ಅವರ ಕಣ್ಣು ಹನಿಗೂಡುತ್ತವೆ. ಭಕ್ತರಾಜನ ಧರ್ಮಪತ್ನೀ ಮಾಣಿಕ ಗೌರಿಯು ಮನೆಯಿಂದ ಹೊರಡುತ್ತಲೇ ಅಳಹತ್ತಿದಳು. ಸ್ವಲ್ಪ ದೂರ ಹೋದಾಗ ಅವಳು ಕಾತರ ಸ್ವರದಲ್ಲಿ ಕೇಳಿದಳು -ಸ್ವಾಮಿ ! ಈಗ ನಾವು ಯಾರ ಆಧಾರದಲ್ಲಿ ಇರುವುದು ?

ಪ್ರಿಯೇ ! ಶೋಕಿಸುವ ಯಾವ ಕಾರಣವೂ ಇಲ್ಲ; ವಿಪತ್ತೇ ಮನುಷ್ಯನ ಒರೆಗಲ್ಲಾಗಿದೆ. ನಾವು ಈಗ ಊರ ಹೊರಗಿನ ಧರ್ಮ ಶಾಲೆಯಲ್ಲಿ ವಾಸ ಮಾಡುವಾ. ಪರಮಾತ್ಮನು ಒಂದು ಇರುವೆಯಿಂದ ಹಿಡಿದು ಆನೆಯ ತನಕ ಎಲ್ಲರ ಭರಣ-ಪೋಷಣೆ ಮಾಡುತ್ತಾನೆ; ಅವನು ನಮ್ಮನ್ನು ಹಸಿವೆಯಿಂದ ಕೊಲ್ಲುವನೇ? ನಮ್ಮನ್ನು ದುಃಖಿಯಾಗಿಡುವನೇ? ಆ ಧರ್ಮಶಾಲೆಯ ಹತ್ತಿರದಲ್ಲೇ ಒಂದು ಜಲಾಶಯ ಮತ್ತು ದೇವಸ್ಥಾನವೂ ಇದೆ. ಆದುದರಿಂದ ಅಲ್ಲಿ ಕನಿಷ್ಠ ಸ್ನಾನ-ಧ್ಯಾನದಲ್ಲಿ ಯಾವುದೇ ಅಡ್ಡಿ ಆಗಲಾರದು ಎಂದು ನರಸಿಂಹರಾಮನು ದೃಢತೆಯಿಂದ ಹೇಳಿದನು.

ನಾಥಾ ! ಧರ್ಮ ಶಾಲೆಯಲ್ಲಿ ಪ್ರವಾಸಿಗರು ಹಾಗೂ ಸಾಧು-ಸಂನ್ಯಾಸಿಗಳು ಇರುತ್ತಾರೆ ; ಗೃಹಸ್ಥರು ಧರ್ಮಶಾಲೆಯಲ್ಲಿ ಇರುವುದು ಒಳ್ಳೆಯದೆನಿಸುವುದಿಲ್ಲ. ಅದರಲ್ಲಿಯೂ ನಮ್ಮ ನಾಗರಜಾತಿಯು ಅತ್ಯಂತ ದ್ವೇಷಮಾಡುವಂತಹುದು, ಇದನ್ನೂ ಕೂಡ ಯೋಚಿಸಬೇಕಲ್ಲ ! ಎಂದು ಮಾಣಿಕಗೌರಿಯು ಲೌಕಿಕ ವ್ಯವಹಾರವನ್ನು ಜ್ಞಾಪಿಸಿದಳು.

ಗೌರಿ ! ಈ ಪ್ರಪಂಚವೂ ಕೂಡ ಒಂದು ಪ್ರಕಾರದ ಧರ್ಮಶಾಲೆಯೇ ಆಗಿದೆ. ಹೇಗೆ ಈ ಸಣ್ಣ ಧರ್ಮಶಾಲೆಯಲ್ಲಿ ಪ್ರವಾಸಿಗಳು ಬಂದು ಹೋಗುವುದು ಯಾವಾಗಲೂ ಇರುತ್ತದೋ, ಹಾಗೆಯೇ ಪ್ರಪಂಚರೂಪೀ ವಿಶಾಲಧರ್ಮ ಶಾಲೆಯಲ್ಲಿಯೂ ಪ್ರವಾಸಿಗಳ ರೂಪದಲ್ಲಿ ಅನೇಕ ಜೀವರು ಬಂದು ಹೋಗುತ್ತಿರುತ್ತಾರೆ. ಅರಸನಿಂದ ಹಿಡಿದು ಆಳಿನತನಕವು ಎಲ್ಲ ಮನುಷ್ಯರ ಇದೇ ಸ್ಥಿತಿಯಾಗಿದೆ. ಇದರಲ್ಲಿ ಯೋಚಿಸಬೇಕಾದುದು ಏನೂ ಇಲ್ಲ ಎಂದು ನರಸಿಂಹರಾಮನು ತಾತ್ತ್ವಿಕ ರೀತಿಯಿಂದ ಸಮಾಜಾಯಿಸಿದನು. ಸರಿ ನಿಮ್ಮ ಇಚ್ಛೆ ಎಂದು ಮಾಣಿಕಗೌರಿಯು ಸುಮ್ಮನಾದಳು.

ಭಕ್ತರಾಜನ ಕುಟುಂಬವು ಊರ ಹೊರಗಿನ ಧರ್ಮಶಾಲೆಯಲ್ಲಿ ಬಂದು ತಂಗಿದರು. ಅವರ ಪರಿವಾರದ ಏಕಮಾತ್ರ ಸಂಪತ್ತಿಯು-ಭಗವಂತನು ಕರುಣಿಸಿದ

ಪ್ರತಿಮೆ, ಕರತಾಳ ಮತ್ತು ನವಿಲುಗರಿಯ ಕಿರೀಟ ಮಾತ್ರವಿತ್ತು. ಸಂಜೆಯಾಗುತ್ತಲೇ ಭಕ್ತರಾಜನು ದೇವರ ಮೂರ್ತಿಯ ಮುಂದೆ ಕುಳಿತು ಪ್ರೇಮಪೂರ್ವಕ ಭಜನೆ ಮಾಡತೊಡಗಿದನು. ಭಜನೆಯಲ್ಲಿ ಮೈಮರೆತನು, ಕಣ್ಣುಗಳಿಂದ ಪ್ರೇಮಾಶ್ರುಗಳು ಹರಿಯುತ್ತಿದ್ದುವು.

ಸಾಧಾರಣ ಮಧ್ಯರಾತ್ರಿಯವರೆಗೆ ಭಜನೆ ನಿರಂತರ ನಡೆಯುತಿತ್ತು. ಅನಂತರ ಭಜನೆ ನಿಲ್ಲಿಸಿ, ನರಸಿಂಹರಾಮ ಮಲಗುವ ಸಿದ್ಧತೆಯಲ್ಲಿದ್ದನು. ಅದೇ ಸಮಯಕ್ಕೆ ಸರಿಯಾಗಿ ಓರ್ವ ಧನಾಢ್ಯನಾದ ಸೇಠಜಿಯು ನರಸಿಂಹರಾಮನ ಬಳಿಗೆ ಬಂದು ವಂದಿಸಿ ಅಲ್ಲೇ ಕುಳಿತುಕೊಂಡನು.

ನರಸಿಂಹರಾಮನು ಎಲ್ಲ ಮನುಷ್ಯರನ್ನು ಹರಿಭಕ್ತರೆಂದೇ ತಿಳಿಯುತ್ತಿದ್ದನು ಹಾಗೂ ಎಲ್ಲರನ್ನು ಹಾಗೆಯೇ ಸಂಬೋಧಿಸುತ್ತಿದ್ದನು. ಅವರು ಕೇಳಿದನು. ಭಕ್ತಮಹಾಶಯರೇ ! ನೀವು ಎಲ್ಲಿರುತ್ತೀರಿ ?

ಭಕ್ತರಾಜರೇ ! ನಾನು ಓರ್ವ ಪರದೇಶಿ ಸಾಹುಕಾರನಾಗಿದ್ದೇನೆ. ಇತ್ತೀಚೆಗೆ ಯಾತ್ರೆ ಮಾಡುತ್ತಿದ್ದೇನೆ. ಎಂದು ಸೇಠಜೀಯವರು ಸ್ವಲ್ಪದರಲ್ಲಿ ತನ್ನ ಪರಿಚಯ ವನ್ನಿತ್ತು ಪ್ರಶ್ನಿಸಿದರು- 'ದಯವಿಟ್ಟು ನಿಮ್ಮ ಸ್ಥಿತಿಯನ್ನು ತಿಳಿಸಿರಿ'.

ನರಸಿಂಹರಾಮನು ಮೊದಲಿಂದ ಇಲ್ಲಿಯವರೆಗೆ ನಡೆದುದನ್ನು ತಿಳಿಸಿದನು. ಸಾಧು ಸತ್ಪುರುಷರ ಹೃದಯಲ್ಲಿ ಯಾರಿಂದಲೂ ಏನೂ ಅಡಗಿರುವುದಿಲ್ಲ. ಸೇಠಜೀಯವರು ಅವರ ಪರಿಸ್ಥಿತಿಯ ಬಗ್ಗೆ ಅನುಕಂಪವನ್ನು ತೋರಿಸುತ್ತಾ ಹೇಳಿದರು - ಭಕ್ತ ರಾಜರೇ ! ನಿಮ್ಮ ಸ್ಥಿತಿಯನ್ನು ಕೇಳಿ ನನಗೆ ತುಂಬಾ ದುಃಖವಾಗುತ್ತಿದೆ. ನೀವು ಅನ್ಯಥಾ ಭಾವಿಸುವುದಿಲ್ಲವಾದರೆ ನಾನು ಏನಾದರು ನಿಮ್ಮ ಸೇವೆಮಾಡಲು ಬಯಸುತ್ತೇನೆ.

ಸೇಠಜೀಯವರೇ ! ನಿಮ್ಮ ಉದಾರತೆ ಧನ್ಯವಾಗಿದೆ ! ನಾನು ನಿಮಗೆ ಆಭಾರಿಯಾಗಿದ್ದೇನೆ. ಆದರೆ ಎಲ್ಲಕ್ಕಿಂತ ಮೊದಲು ನಾನು ನಿಮ್ಮ ಪೂರ್ಣ ಪರಿಚಯವನ್ನು ತಿಳಿಯಲು ಬಯಸುತ್ತೇನೆ ಎಂದು ಆಗ್ರಹ ಪಡಿಸಿದನು.

ಭಕ್ತ ಶಿರೋಮಣಿಯವರೇ ! ಒಂದು ವೇಳೆ ಇದೇ ಇಚ್ಛೆ ಇದ್ದರೆ ನಾನು ಮೊದಲಿಗೆ ನನ್ನ ಪೂರ್ಣ ಪರಿಚಯವನ್ನು ಕೊಡುತ್ತೇನೆ. ನಿಮ್ಮಲ್ಲಿ ಅಡಗಿಸು ವಂತಹುದು ಏನೂ ಇಲ್ಲ. ನಾನು ಅಕ್ರೂರನಾಗಿದ್ದೇನೆ. ಭಗವಾನ್ ಶ್ರೀಕೃಷ್ಣನಿಗೆ ನಿಮ್ಮ ನಿರ್ವಾಹದ ಕುರಿತು ಅತ್ಯಂತ ಚಿಂತೆ ಇದೆ. ಅದಕ್ಕಾಗಿ ಭಗವಂತನ ಆಜ್ಞೆಯಿಂದ ನಾನು ನಿಮ್ಮ ಬಳಿಗೆ ಬಂದಿದ್ದೇನೆ. ನೀವು ಏನು ಬಯಸುವಿರೋ

ಅದನ್ನು ನಿಃಸಂಕೋಚ ಭಾವದಿಂದ ನನಗೆ ಸೂಚಿಸಿರಿ ಎಂದು ಹೇಳಿದರು.

ಭಗವಂತನ ಅಹೈತುಕವಾದ ಕೃಪೆಯನ್ನು ತಿಳಿದುಕೊಂಡ ಭಕ್ತರಾಜನು ಗದ್ಗದಿತನಾದನು. ಭಗವಂತನ **'ಯೋಗ ಕ್ಷೇಮಂ ವಹಾಮ್ಯಹಮ್'** ಈ ವಚನವು ಸರ್ವಥಾ ಸತ್ಯವಾಗಿದೆ ಎಂದು ಅವನ ಮನಸ್ಸಿನಲ್ಲಿ ನಿಶ್ಚಯವಾಯಿತು. ಕೆಲಹೊತ್ತು ಕೃತಜ್ಞತಾಪೂರ್ಣ ಹೃದಯದಿಂದ ಭಗವಂತನ ಸ್ಮರಣೆಗೈದು ಭಗವಂತನ ಪ್ರೇರಣೆಯಿಂದಲೇ ನರಸಿಂಹರಾಮನು ಹೇಳಿದನು- ಮಹಾನುಭಾವಾ! ವಾಸಿಸಲು ಒಂದು ಮನೆ, ದೇವರ ಪೂಜೆಗೆ ಒಂದು ಮಂದಿರ, ಜೀವನ ರಕ್ಷಣೆಗಾಗಿ ಸ್ವಲ್ಪ ಅನ್ನ-ಆಹಾರ ಹಾಗೂ ಸಾಧುಗಳ ಸೇವೆಗಾಗಿ ಅವಶ್ಯಕ ಸಾಮಗ್ರಿ ಇಷ್ಟಲ್ಲದೆ ನನಗೆ ಬೇರೆ ಏನು ಬೇಕಾಗಿದೆ?

ಒಳ್ಳೆಯದು ಬೆಳಗಾಗುತ್ತಲೇ ನಿಮ್ಮ ಆಜ್ಞಾನುಸಾರ ಎಲ್ಲ ವ್ಯವಸ್ಥೆ ಆಗುವುದು. ಇನ್ನಾದರೋ ಯಾವ ಚಿಂತೆಯೂ ಇರಲಕ್ಕಿಲ್ಲವಲ್ಲ ? ಎಂದು ಅಕ್ರೂರರು ನುಡಿದರು.

ಈಗಲಾದರೋ ಯಾವ ಚಿಂತೆಯು ಉಳಿಯಲಾರದು. ಆದರೆ ನಾಳೆ ಈಶ್ವರೇಚ್ಛೆಯಿಂದ ಯಾವುದಾದರೂ ಹೊಸ ಚಿಂತೆ ಉಂಟಾದರೆ ಭಗವಂತನೇ ಬಲ್ಲ ಮತ್ತು ನೀವು ಬಲ್ಲಿರಿ. ಭಕ್ತರಾಜನು ತನ್ನ ಕಡೆಯಿಂದ ನಿಶ್ಚಂತತೆಯನ್ನು ಪ್ರಕಟಿಸಿದನು.

ಭಕ್ತರಾಜನ ನಿಶ್ಚಿಂತತೆ ಹಾಗೂ **'ಜಲಪದ್ಮವತ್'** ಸಂಸಾರದಿಂದ ನಿರ್ಲಿಪ್ತತೆಯನ್ನು ಕಂಡು ಅಕ್ರೂರರು ಅವಾಕ್ಕಾದರು. ಅವರ ದ್ವ್ಯರ್ಥಿ ಮಾತನ್ನು ಕೇಳಿ ನಗುತ್ತ ಅವರ ವಾಕ್ಚಾತುರ್ಯವನ್ನು ಪ್ರಶಂಸಿಸಿದರು.

ಮರುದಿನ ಪಾತ್ರಃಕಾಲದಲ್ಲೇ ನರಸಿಂಹರಾಮನು ಸ್ನಾನಾದಿ ನಿತ್ಯಕರ್ಮಗಳನ್ನು ಪೂರೈಸಿ ಭಜನೆ - ಪೂಜೆಯಲ್ಲಿ ಪ್ರವೃತ್ತನಾದನು. ಅಕ್ರೂರರು ಶೇಠಜೀ ವೇಷದಲ್ಲೇ ನಗರಕ್ಕೆ ಹೋಗಿ ಎಲ್ಲ ವ್ಯವಸ್ಥೆಯಲ್ಲಿ ತೊಡಗಿದರು. ಅವರು ಒಂದು ಅತಿ ಸುಂದರವಾದ ಮನೆಯನ್ನು ಅವರಿಗೆ ವಾಸಿಸಲು ಖರೀದಿಸಿದರು. ಅನ್ನ - ವಸ್ತ್ರ ಹಾಗೂ ಬೇರೆ - ಬೇರೆ ಮನೆಗೆ ಬೇಕಾದ ಎಲ್ಲ ವಸ್ತುಗಳನ್ನೂ ಕೊಂಡುತಂದು ಮನೆಯಲ್ಲಿ ತುಂಬಿದರು. ಎಲ್ಲ ವ್ಯವಸ್ಥೆ ಆದಬಳಿಕ ಅಕ್ರೂರರು ಭಕ್ತರಾಜರ ಬಳಿಗೆ ಬಂದು - ಭಗವದ್ಭಕ್ತರೇ ! ನಿಮ್ಮ ಆಜ್ಞೆಯಂತೆ ಎಲ್ಲ ವಸ್ತುಗಳು ಹಾಗೂ ದೇವಮಂದಿರ ಸಿದ್ಧವಾಗಿದೆ, ನೀವು ಬಂದು ನೋಡಿ ನಿಮ್ಮ ಅಭಿಪ್ರಾಯ ತಿಳಿಸಿರಿ.

ನನ್ನ ಅಭಿಪ್ರಾಯ ಏನಿದೆ ? ನಿಮಗೆ ಹೇಗೆ ಸರಿಯೆಂದು ಕಾಣುತ್ತದೋ ಹಾಗೆಯೇ ಮಾಡಿರಿ. ನಿಮ್ಮ ಮತವೇ ನನ್ನ ಮತವಾಗಿದೆ. ಕೇವಲ ಐದುನೂರು ಸಾವಿರ ಸಾಧುಗಳ ಪಂಕ್ತಿ ಊಟ ನಡೆಯುವಂತೆ ಹಾಗೂ ಭಗವಂತನ ಸೇವೆ-ಅರ್ಚನೆ ಆಗುವಷ್ಟು ವ್ಯವಸ್ಥೆ ಆ ಮನೆಯಲ್ಲಿದ್ದರೆ ಸಾಕು ಎಂದು ನರಸಿಂಹರಾಮನು ನುಡಿದನು.

ಅಕ್ರೂರರು ಹೇಳಿದರು - ನೀವು ನಡೆಯಿರಲ್ಲ. ಎಲ್ಲ ಪ್ರಕಾರದ ವ್ಯವಸ್ಥೆ ಆಗಿದೆ. ಭಕ್ತರಾಜರು ಪರಿವಾರ ಸಹಿತ ಆ ಮನೆಗೆ ಹೋದನು. ಅವರು ನೋಡುತ್ತಾರೆ- ಮನೆಯೊಳಗೆ ಸುಂದರವಾದ ಶ್ರೀಕೃಷ್ಣಮಂದಿರ, ಕೀರ್ತನ ಶಾಲೆ, ಪಾಕಶಾಲೆ, ಅತಿಥಿ ಶಾಲೆ, ತುಂಬಿದ ಭಂಡಾರ, ಕುಳಿತುಕೊಳ್ಳಲು ಹಜಾರ ಇತ್ಯಾದಿ ಎಲ್ಲ ವಿಷಯಗಳ ಪೂರ್ಣ ವ್ಯವಸ್ಥೆ ಮಾಡಲಾಗಿದೆ. ಮೂರು ವರ್ಷಕ್ಕೆ ಸಾಕಾಗುವಷ್ಟು ದವಸ - ಧಾನ್ಯ ಭಂಡಾರದಲ್ಲಿ ತುಂಬಿತ್ತು. ಯಾವುದೇ ವಸ್ತುವಿನ ಕೊರತೆ ಇರಲಿಲ್ಲ.

ಅಕ್ರೂರರು ಹೇಳಿದರು-ಭಕ್ತರಾಜರೇ ! ಭಗವಾನ್ ಶ್ರೀಕೃಷ್ಣನ ಆಜ್ಞೆಯಂತೆ ನಾನು ಎಲ್ಲ ವ್ಯವಸ್ಥೆ ಮಾಡಿದ್ದೇನೆ. ಇದು ಐದು ಸಾವಿರ ಸ್ವರ್ಣ ಮುದ್ರೆಗಳು ನಿಮ್ಮ ಖರ್ಚಿಗೆ ಇಟ್ಟುಕೊಳ್ಳಿ. ಇನ್ನು ನನಗೆ ಹೋಗಲು ಅಪ್ಪಣೆ ಕೊಡಿರಿ.

ಭಗವಂತನ ಭಕ್ತರು ಭಗವತ್ಸ್ವರೂಪಿಗಳೇ ಆಗಿರುತ್ತಾರೆ. ಪರಮಭಾಗವತ ನರಸಿಂಹರಾಮನು ಸುಲಭವಾಗಿ ಹೇಗೆ ಅಕ್ರೂರರನ್ನು ಬೀಳ್ಕೊಡುತ್ತಾನೆ ? ಅವನ ಕಣ್ಣುಗಳು ಪ್ರೇಮಾಶ್ರುಗಳಿಂದ ತುಂಬಿ ಬಂದವು, ಕಂಠ ಉಮ್ಮಳಿಸಿತು, ಮಾತು ಹೊರಡದಾಯಿತು. ಕೊನೆಗೆ ತುಂಬಾ ಕಷ್ಟದಿಂದ ನಿಮ್ಮ ಇಚ್ಛೆ ಎಂದು ಹೇಳಿ ಅವರನ್ನು ವಂದಿಸುತ್ತ ಬೀಳ್ಕೊಟ್ಟನು.

ಅಕ್ರೂರರು ಹೊರಟುಹೋದರು. ಮಾಣಿಕಗೌರಿಯು ಅಡಿಗೆ ಮಾಡಿದಳು. ಭಕ್ತ ಪರಿವಾರವು ಭಗವಂತನಿಗೆ ನೈವೇದ್ಯ ಮಾಡಿ ಅಮೃತಸ್ವರೂಪೀ ಪ್ರಸಾದವನ್ನು ಸ್ವೀಕರಿಸಿದರು. ಮಾಣಿಕಗೌರಿಯು ತುಂಬಾ ಸಂತೋಷ ಮತ್ತು ಆನಂದದಿಂದ ಹೇಳಿದಳು-ಸ್ವಾಮಿ! ನಿಮ್ಮ ಮಾತು ಅಕ್ಷರಶಃ ಸತ್ಯವಾಯಿತು. ನಿಮ್ಮ ಭಕ್ತಿಯ ಪ್ರಭಾವದಿಂದ ತನ್ನಿಂದ-ತಾನೇ ಎಲ್ಲ ವ್ಯವಸ್ಥೆವಾಯಿತು.

ನರಸಿಂಹರಾಮರು ಹೇಳಿದರು - ಪ್ರಿಯೇ ! ಇದರಲ್ಲಿ ಆಶ್ಚರ್ಯದ ಯಾವ ಮಾತೂ ಇಲ್ಲ. ಮನುಷ್ಯನ ರಕ್ಷಣೆ ಮನುಷ್ಯನಿಂದ ಎಂದಿಗೂ ಆಗಲಾರದು, ಜಗತ್ತೆಲ್ಲದರ ಪೋಷಕನು ಸ್ವತಃ ಪರಮಪಿತಾ ಪರಮೇಶ್ವರನೇ ಆಗಿದ್ದಾನೆ.

ಯಾವ ಮನುಷ್ಯನು ಅವನ ಅನನ್ಯ ಆಶ್ರಯವನ್ನು ಪಡೆಯುವನೋ, ಶೋಕ-ಚಿಂತೆಗಳು ಅವನ ಬಳಿಗೆ ಸುಳಿಯುವುದಿಲ್ಲ. ಅದರಲ್ಲೂ ನನಗಾದರೋ ಭಗವಾನ್ ಶ್ರೀಕೃಷ್ಣನು - 'ಅನನ್ಯ ಭಾವದಿಂದ ನನ್ನ ಚಿಂತನೆ ಮಾಡುತ್ತಾ ನನ್ನ ಉಪಾಸನೆ ಮಾಡುತ್ತಾನೋ ಆ ನಿತ್ಯಯುಕ್ತ ಮನುಷ್ಯನ ಯೋಗ ಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ' ಎಂದು ವಚನವನ್ನು ಕೊಟ್ಟಿರುವನು. ಪ್ರಿಯೇ ! ನಾವು ಅನನ್ಯಾಶ್ರಯರಾಗಿ ಅವನ ಭಜನೆ ಪೂಜೆ ಮಾಡುತ್ತಾ ಇರುವುದೇ ನಮ್ಮ ಕರ್ತವ್ಯವಾಗಿದೆ.

ಕು೦ವರ ಬಾಯಿಯನ್ನು ಗಂಡನ ಮನೆಗೆ ಕಳಿಸಿ ಕೊಡುವುದು

ಭಕ್ತರಾಜ ನರಸಿಂಹರಾಮನ ಜೀವನ ಏಕಾಂತ ಭಜನೆಯಲ್ಲಿ ಸಾಗುತ್ತಿತ್ತು. ಸಾಧು-ಸಂತರೊಡನೆ ಸತ್ಸಂಗ ಗೈಯ್ಯುವುದು, ಭಜನೆ ಹಾಡುವುದು, ಭಗವಂತನ ಪೂಜೆ-ಸೇವೆ ಮಾಡುವುದೇ ಅವರ ನಿತ್ಯ ಕ್ರಮವಾಯಿತು. ಯಾರಾದರೂ ಭಗವದ್ಭಕ್ತರು ಅವರನ್ನು ತಮ್ಮ ಮನೆಗೆ ಭಜನೆಗಾಗಿ ಆಮಂತ್ರಿಸಿದರೆ, ಅವರು ತುಂಬಾ ಉತ್ಸಾಹದಿಂದ ಅವರ ಮನೆಗೆ ಹೋಗಿ ರಾತ್ರಿಯಿಡೀ ಭಜನೆ ಮಾಡುತ್ತಿದ್ದರು. ಇದಲ್ಲದೆ ಅವರ ಮನೆಯಲ್ಲಿ ಸದಾಕಾಲ ಸಾಧು - ಸಂತರ ಸಂತೆಯೇ ನೆರೆಯುತ್ತಿತ್ತು ಹಾಗೂ ಅವರು ಮುಕ್ತಹಸ್ತದಿಂದ ಅವರ ಎಲ್ಲ ವಿಧದಿಂದ ಸೇವೆ ಮಾಡುತ್ತಿದ್ದರು. ಭಗವದ್ಭಜನೆ ಮತ್ತು ಸಾಧುಗಳ ಸೇವೆ ಬಿಟ್ಟು ಬೇರಾವ ಹೊಣೆಯು ಅವರಿಗಿರಲಿಲ್ಲ.

ಹೊರಗಿನಿಂದ ಯಾವುದೇ ಸಂಪಾದನೆ ಇಲ್ಲದೆ, ಮುಕ್ತ ಹಸ್ತದಿಂದ ಖರ್ಚುಮಾಡಿದರೆ ಬೇರೆಯವರ ಮಾತು ಬಿಡಿ, ಕುಬೇರನ ಭಂಡಾರವೂ ಬರಿದಾಗುವುದರಲ್ಲಿ ಹೊತ್ತು ಬೇಕಾಗುವುದಿಲ್ಲ. ಇದೇ ಕಾರಣದಿಂದ ಭಕ್ತನರಸಿಂಹರಾಮರಿಗೆ ಅಕ್ರೂರರು ಕೊಟ್ಟ ಆಹಾರಧಾನ್ಯ-ಧನ ಮೂರುವರ್ಷಕ್ಕೆ ಸಾಕಾಗುವಷ್ಟಿದ್ದರೂ ಆರೇ ತಿಂಗಳಲ್ಲಿ ಬರಿದಾಯಿತು. ಈಗ ಮನೆಯ ಒಂದೊಂದು ವಸ್ತುಗಳನ್ನು ಮಾರಿ ಭಗವಂತನಿಗೆ ನೈವೇದ್ಯ ಮಾಡುವುದು ಮತ್ತು ಸಾಧು-ಸಂತರಿಗೆ ಸಂತುಷ್ಟಪಡಿಸುವವರೆಗೆ ಪರಿಸ್ಥಿತಿ ಉಂಟಾಯಿತು. ಆದರೆ ಇದೂ ಎಷ್ಟುದಿನ ನಡೆಯಬಲ್ಲದು ! ಕೆಲವೇ ದಿನಗಳಲ್ಲಿ ಒಂದು ಪರಿವಾರಕ್ಕೆ ಸಾಕಾಗುವಷ್ಟು ಇದ್ದ ವಸ್ತುಗಳೂ ಕೂಡ ಕರಗುತ್ತ ಬಂತು. ಈಗ ಪರಿವಾರದ ದಿನಗಳು ಅನೇಕ ಕೊರತೆಗಳಿಂದಲೇ ಸಾಗುತ್ತಿದ್ದುವು. ಆದರೆ ಇಷ್ಟಾದರೂ ಭಕ್ತರಾಜರು ಸಂಪೂರ್ಣ ನಿಃಶ್ಚಿಂತರಾಗಿದ್ದರು. ಅವರ ಶಾಂತ ಮನಸ್ಸಿನಲ್ಲಿ ನಾಳೆ ಹೇಗಾಬಹುದೆಂಬ ಚಿಂತೆಯು ಸ್ವಪ್ನದಲ್ಲಿಯೂ ಸ್ಪರ್ಶಿಸಲಿಲ್ಲ. ಹೇಗೆ ಇದಿರಾಗುತ್ತದೋ ಹಾಗೇ ನಡೆಯುತ್ತಿತ್ತು. ಅವರ ಮನಸ್ಸಾದರೋ ಸದಾಕಾಲ ಭಜನೆ ಕೀರ್ತನೆಯಲ್ಲೇ ತಲ್ಲೀನವಾಗಿರುತ್ತಿತ್ತು.

ಆ ದಿನಗಳಲ್ಲೇ ಹೊಸದೊಂದು ಸಮಸ್ಯೆ ಅವರಿಗೆ ಇದಿರಾಯಿತು. ಊನಾದಿಂದ ಶ್ರೀರಂಗಧರ ಮೆಹತಾನ ಕುಲಪುರೋಹಿತರು ಕು೦ವರಬಾಯಿ

ಯನ್ನು ಗಂಡನ ಮನೆಗೆ ಕರೆದುಕೊಂಡು ಹೋಗಲು ಬಂದಿಳಿದರು.. ಆ ದಿನ ಬೆಳಿಗ್ಗೆಯೇ ಭಕ್ತರಾಜರು ಎಲ್ಲೋ ಭಜನೆ ಮಾಡಲು ಹೊರಗೆ ಹೋಗಿದ್ದರು.

ಪುರೋಹಿತರು ಬಂದು ಕೇಳಿದರು-ನರಸಿಂಹ ಮೆಹತಾರವರು ಎಲ್ಲಿಗೆ ಹೋಗಿರುವರು? ಮಾಣಿಕಗೌರಿಯು ಅಡಿಗೆ ಮಾಡುತ್ತಾ ಹೇಳಿದಳು- ಇಲ್ಲೇ ಎಲ್ಲೊ ಹೊರಗೆ ಹೋಗಿರುವರು. ಬನ್ನಿ ಬನ್ನಿ !

ಪುರೋಹಿತರು ಒಳಗೆ ಬಂದು ತಮ್ಮ ಹೆಸರು-ಪರಿಚಯವನ್ನು ಹೇಳಿ, ಬಂದಿರುವ ಕಾರಣವನ್ನು ವಿಸ್ತಾರವಾಗಿ ತಿಳಿಸಿದರು. ಮಾಣಿಕ ಗೌರಿಯು ಆಸನವಿತ್ತು ಯಥೋಚಿತ ಸತ್ಕಾರ ಮಾಡಿದಳು.

ಮಾಣಿಕಗೌರಿಯು ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವುದನ್ನು ಕೇಳಿ ಮನಸ್ಸಿನಲ್ಲೇ ಯೋಚಿಸಿದಳು - ಭಕ್ತರಾದ ಪತಿಯವರಾದರೋ ಹಗಲು-ರಾತ್ರಿ ಭಕ್ತಿಯಲ್ಲೇ ಲೀನರಾಗಿರುತ್ತಾರೆ, ಯಾವುದೇ ಕೆಲಸ-ಕಾರ್ಯ ಮಾಡುವುದಿಲ್ಲ, ದಿನ ನಿತ್ಯದ ಊಟದ ಚಿಂತೆಯೇ ಇರುವಾಗ ಕು೦ವರಬಾಯಿಯ ವರದಕ್ಷಿಣೆ ಬಳುವಳಿಯ ವ್ಯವಸ್ಥೆ ಹೇಗಾಗಬಹುದು ? ವರದಕ್ಷಿಣೆ - ಬಳುವಳಿ ಇಲ್ಲದೆ ಮಗಳನ್ನು ಗಂಡನ ಮನೆಗೆ ಕಳಿಸಿದರೆ ಜಾತಿ - ಸಮಾಜದಲ್ಲಿ ನಿಂದೆಗೆ ಗುರಿಯಾಗಬೇಕಾದೀತು. ಇಗೇನು ಮಾಡುವುದು ?

ಸ್ವಲ್ಪ ಹೊತ್ತಿನಲ್ಲೇ ಮೆಹತಾರವರು ಮನೆಗೆ ಆಗಮಿಸಿದರು. ಆಗಲೇ ಅಡಿಗೆಯು ಸಿದ್ಧವಾಗಿತ್ತು. ಕೇವಲ ಅವರ ಬರುವಿಕೆಗಾಗಿಯೇ ಕಾದಿದ್ದರು. ಬರುತ್ತಲೇ-ಗೌರೀ! ನೈವೇದ್ಯಕ್ಕೆ ತಡವೇನಿದೆ?

ತಡವೇನೂ ಇಲ್ಲ, ತರುತ್ತಿದ್ದೇನೆ. ಎಂದು ಹೇಳುತ್ತ ಮಾಣಿಕ ಗೌರಿಯು ನೈವೇದ್ಯದ ಎಲ್ಲ ಪದಾರ್ಥಗಳನ್ನು ಒಂದು ತಟ್ಟೆಯಲ್ಲಿ ತಂದಿಟ್ಟಳು. ಭಕ್ತರಾಜರು ಭಕ್ತಿಯಿಂದ ಭಗವಂತನಿಗೆ ನೈವೇದ್ಯವನ್ನು ಸಮರ್ಪಿಸಿದರು. ಅನಂತರ ಸ್ವತಃ ಭೋಜನದ ಸಿದ್ಧತೆ ಮಾಡುತ್ತ ಕೇಳಿದರು ಇಂದು ಯಾರಾದರು ಸಾಧು-ಸಂತರು ಬಂದಿದ್ದಾರೋ ಇಲ್ಲವೋ ? ಮಾಣಿಕಗೌರಿಯು ಹೇಳಿದಳು- ಇಂದು ಯಾರೇ ಸಾಧು-ಸಂತರು ಬರಲಿಲ್ಲ, ಆದರೆ ಓರ್ವ ಅತಿಥಿಗಳು ಬಂದಿದ್ದಾರೆ.

ಅಕ್ರೂರರು ಬಂದಿಲ್ಲವಲ್ಲ ? ಎಂದು ನರಸೀಮೆಹತಾನಗುತ್ತ ಹೇಳಿದರು. ಇಲ್ಲ ಕು೦ವರಬಾಯಿಯನ್ನು ಕರಕೊಂಡು ಹೋಗಲು ಶ್ರೀರಂಗಧರ ಮೆಹತಾರವರ ಪುರೋಹಿತರು ಬಂದಿರುವರು. ಮಗಳನ್ನು ಕಳಿಸಿಕೊಡಲು ಹಾಗೂ ವರದಕ್ಷಿಣೆ ಬಳುವಳಿಗಾಗಿ ಕನಿಷ್ಠ ನೂರು ರೂಪಾಯಿಗಳು ಬೇಕು. ಆದರೆ ಎಲ್ಲಿ ಒಂದು

ರೂಪಾಯಿಯೂ ಇಲ್ಲವೋ ಅಲ್ಲಿ ನೂರರ ಮಾತು ಹೇಗೆ ಆಡಬಹುದು ? ಎಂದು ಹೇಳುತ್ತ ದೀರ್ಘವಾದ ನಿಟ್ಟುಸಿರು ಬಿಟ್ಟಳು.

ಭಕ್ತರಾಜರು ಚಿಂತಾಕುಲ ಪತ್ನಿಯನ್ನು ನೋಡಿ ತುಂಬಾ ಶಾಂತಿಯಿಂದ ಸಮಜಾಯಿಸಿದರು- ಸಾಧ್ವೀ ! ನನ್ನದು-ನನ್ನದು ಎಂದು ಹೇಳುತ್ತ ನೀನು ಇಷ್ಟು ಚಿಂತೆ ಏಕೆ ಮಾಡುತ್ತಿರುವೆ ? ಈ ಪುತ್ರ-ಪುತ್ರಿಯ ತಂದೆ-ತಾಯಿಯರು ನಾವು ಹೆಸರಿಗಷ್ಟೇ ಆಗಿದ್ದೇವೆ. ವಾಸ್ತವವಾಗಿ ನಮ್ಮೆಲ್ಲರ ತಂದೆಯಾದರೋ ಆ ಭಗವಾನ್ ಶ್ರೀಪತಿಯೇ ಆಗಿದ್ದಾನೆ ಮತ್ತು ಅವನು ಎಲ್ಲ ರೀತಿಯಿಂದ ಸಮರ್ಥನಾಗಿದ್ದಾನೆ. ಹಾಗಿರುವಾಗ ನಾವು ವ್ಯರ್ಥವಾಗಿ ಏಕೆ ಚಿಂತಿಸಬೇಕು? ಸ್ವತಃ ಅವನಿಗಾದರೋ ಚಿಂತೆ ಇದ್ದೀತು. ಹೇಗಾಗಬೇಕೋ ಹಾಗೆಯೇ ಸರಿಯಾದ ಸಮಯದಲ್ಲಿ ಅವನೇ ವ್ಯವಸ್ಥೆಮಾಡುವನು.

ಸ್ವಾಮಿ ! ನಾಳೆಯಾದರೋ ಮಗಳನ್ನು ಕಳಿಸಿಕೊಡಬೇಕು ಹಾಗೂ ಇಂದಿನವರೆಗೆ ಅವಳಿಗೆ ಕೊಡಲು ಒಂದು ವಸ್ತುವೂ ಗತಿಯಿಲ್ಲ. ಪರಮಾತ್ಮನು ಎಲ್ಲಿರುತ್ತಾನೆ ! ಸರಿಯಾದ ಸಮಯದಲ್ಲಿ ಬಂದು ಅವಳಿಗೆ ಎಲ್ಲ ವಸ್ತುಗಳನ್ನು ಕೊಟ್ಟು ಹೋಗುವನೇ! ಯಾರ ನೆಲೆ-ಠಾವಿಲ್ಲವೋ ಅವನ ಭರವಸೆಯಾದರೂ ಏನು? ದುಃಖದಿಂದ ಮಾಣಿಕಗೌರಿಯ ಕಣ್ಣುಗಳಿಂದ ಕಣ್ಣೀರಧಾರೆ ಹರಿಯಿತು.

ಪ್ರಿಯೆ ! 'ನಾನು' ಮತ್ತು 'ನನ್ನದು' ಈ ಎರಡು ಶಬ್ದಗಳು ಮಾಯೆಯು ರಚಿಸಿದ ಬಲೆಯಾಗಿದೆ, ದುಃಖಕ್ಕೆ ಕಾರಣವಾಗಿವೆ. ಸಂತರು-ಬೈರಾಗಿಗಳು, ಯೋಗೀ-ಯತೀ, ಸತೀ-ಪತೀ ಮತ್ತು ಅರಸರಿಂದ ಹಿಡಿದು ಆಳಿನವರೆಗೆ ಪ್ರಾಯಶಃ ಪ್ರಪಂಚದ ಎಲ್ಲ ಪ್ರಾಣಿಗಳು ಇದೇ ಜಾಲದಲ್ಲಿ ಬಂಧಿತರಾಗಿ ಎಂಭತ್ತನಾಲ್ಕುಲಕ್ಷಯೋನಿಗಳಲ್ಲಿ ಸುತ್ತುತ್ತಿವೆ. ಆದುದರಿಂದ ಅಹಂತೆ ಮಮತೆಯ ತ್ಯಾಗವೇ ಜಗತ್ತಿನಲ್ಲಿ ನಿಜವಾದ ತ್ಯಾಗವಾಗಿದೆ.

ಹೇಮನಸ್ಸೇ ! ಮಮತೆಯನ್ನು ದೂರಸರಿಸಿ ಪರಮಾತ್ಮನ ಭಜನೆಮಾಡು ; ಈ ಪ್ರಪಂಚದಲ್ಲಿ ನಿನ್ನದಾದ ಯಾವ ವಸ್ತುವಿದೆ ? ಇದರ ಕುರಿತು ವಿಚಾರಮಾಡು. ಅಯ್ಯಾ ಮೂರ್ಖ ! ನೀನು ಯಾರಾಗಿರುವೆ ? ಎಲ್ಲಿಂದ ಬಂದಿರುವೆ ? ಯಾರೊಂದಿಗೆ ನಿನ್ನ ಯಾವ ಸಂಬಂಧವಿದೆ ? ನೀನು ತಿಳಿಯದೆ 'ನನ್ನದು-ನನ್ನದು' ಎಂದು ಏಕೆ ಹಲುಬುತ್ತಿರುವೆ ?

ದೇಹವನ್ನು ನೀನು ಅನೇಕ ಯುಕ್ತಿಗಳಿಂದ ಕಾಪಾಡುತ್ತಿದ್ದರೂ. ಅದು ಎಂದಿಗೂ ಸ್ಥಿರವಾಗಿರುವಂತಹುದಲ್ಲ. ನೀನು ಹಗಲು-ರಾತ್ರಿ ಧನದ ಧ್ಯಾನ ಮಾಡುತ್ತಿದ್ದರೆ ಅದು ನಿನ್ನ ಅಂತಃಕರಣದಲ್ಲಿ ಬಾಧಕವಾದೀತು.

ಅತಿ ಸಮೀಪದ ಪತಿ (ಪರಮಾತ್ಮ)ಯನ್ನು ಬಂಧುವನ್ನು ನೀನು ಏಕೆ ಮರೆತೆ? ದೂರದ ಬಂಧುಗಳನ್ನು ನನ್ನವರೆಂದು ಹೇಳುತ್ತಿರುವೆ. ಅಹಂಕಾರದ ಅಮಲಿನಲ್ಲಿ ಮತ್ತನಾಗಿ ನೀನು ಮೋಹನಿದ್ರೆಯಲ್ಲಿ ಮಲಗಿರುವೆ. ಆದ್ದರಿಂದ ಹೇ ಮನಸ್ಸೇ! ನೀನು ಎಚ್ಚರವಾಗು. ನರಸಿಂಹರಾಮನಿಗೆ ನೀನು ಒಳ್ಳೆಯ ಭಕ್ತಿಯನ್ನು ಮಾಡುವೆ ಎಂದು ನಿನ್ನ ಮೇಲೆ ತುಂಬಾ ಭರವಸೆ ಇದೆ.

ಭಕ್ತರಾಜನು ಕೂಡಲೇ ಮೇಲಿನ ಅರ್ಥಬರುವ ಗುಜರಾತಿ ಹಾಡನ್ನು ರಚಿಸಿ ಹಾಡಿದನು. ಮಾಣಿಕ ಗೌರಿಯ ಚಿಂತೆಯು ಒಮ್ಮೆಲೇ ದೂರವಾಯಿತು ಹಾಗೂ ಭಗವಂತನ ಮೇಲೆ ಶ್ರದ್ಧೆಯು ಹೆಚ್ಚಾದುದರಿಂದ ಅವಳ ಮನಸ್ಸು ಪ್ರಸನ್ನವಾಯಿತು. ಬಳಿಕ ಅವಳು ಅತಿಥಿಗೆ ಮತ್ತು ಪತಿಗೆ ಊಟಬಡಿಸಿದಳು. ಮೆಹತಾರವರು ಪುರೋಹಿತರೊಂದಿಗೆ ಕುಳಿತು ಊಟ ಮಾಡಿದರು.

ಊಟ ಮಾಡುತ್ತಾ-ಮಾಡುತ್ತಾ ಪುರೋಹಿತರು ಮಾತು ತೆಗೆದರು- ಮೆಹತಾರವರೇ ! ಶ್ರೀರಂಗಧರ ಮೆಹತಾರವರು ನನ್ನನ್ನು ಕು೦ವರಬಾಯಿಯನ್ನು ಕರಕೊಂಡು ಬರಲು ಕಳಿಸಿರುವರು, ನಾನು ಅವರ ಕುಲಪುರೋಹಿತನಾಗಿದ್ದೇನೆ. ನಾನು ನಾಳೆಯೇ ಇಲ್ಲಿಂದ ಹೊರಡಬೇಕು. ನೀವು ಕೃಪೆಮಾಡಿ ಕಳಿಸಿ ಕೊಡಿರಿ.

ಗುರುಗಳೇ ! ಇಷ್ಟು ಅವಸರ ಪಡಿಸಿದರೆ ಕೆಲಸ ಹೇಗಾಗಬೇಕು ? ಇಲ್ಲಿಯವರೆಗೆ ಮಗಳಿಗಾಗಿ ಒಂದು ಹೊಸ ಬಟ್ಟೆಯನ್ನೂ ಸಿದ್ಧಗೊಳಿಸಲಿಲ್ಲ. ನೀವು ಎರಡು-ಮೂರು ದಿನ ಉಳಿಯಬೇಕಾದೀತು ಎಂದು ಮಾಣಿಕಗೌರಿಯು ಸಟ್ಟನೆ ಉತ್ತರಿಸಿದಳು.

ಪುರೋಹಿತರು ಆಗ್ರಹ ಪಡಿಸುತ್ತ ನೀವು ಏನೇನು ವಸ್ತುಗಳನ್ನು ಸಿದ್ಧಗೊಳಿಸ ಬೇಕೋ ಅದನ್ನು ಇಂದೇ ಮಾಡಿಕೊಳ್ಳಿ. ನಾಳೆಯಾದರೋ ದಯಮಾಡಿ ನನ್ನನ್ನು ಕಳಿಸಿಕೊಡಿರಿ ಎಂದು ಹೇಳಿದರು.

ಸ್ವಾಮಿ ! ಯಾವ ವಸ್ತುವನ್ನೂ ಸಿದ್ಧಗೊಳಿಸುವ ಚಿಂತೆಯೇ ನಮಗಿಲ್ಲ. ಏನು ಮಾಡಬೇಕೋ ಅದನ್ನು ನನ್ನ ಭಗವಂತನೇ ಮಾಡುವನು. ಆದರೆ ನಮ್ಮ ಕುಲ ಮರ್ಯಾದೆಗನುಸಾರವಾಗಿ ವರದಕ್ಷಿಣೆ- ಬಳುವಳಿಯ ವ್ಯವಸ್ಥೆ ಪರಮಾತ್ಮನಿಂದ ಆಗುವ ತನಕ ನೀವು ನಿಲ್ಲಬೇಕಾಗಬಹುದು ಎಂದು ನಗುತ್ತ ಹೇಳಿದರು.

ಭಕ್ತರಾಜರ ಈ ಮಾತು ಪುರೋಹಿತರಿಗೆ ಏನೂ ತಿಳಿಯಲಿಲ್ಲ. ಅವರು ಆಶ್ಚರ್ಯದಿಂದ- ಮೆಹತಾರವರೆ! ನೀವು ಏನು ಹೇಳಿದಿರೋ ನನಗೆ ಏನೂ ತಿಳಿಯಲಿಲ್ಲ. ನಿಮ್ಮ ಪರಮಾತ್ಮನು ಎಂದಿಗೆ ಬಂದು ನಿಮ್ಮ ಮಗಳ ವರದಕ್ಷಿಣೆಗಾಗಿ

ಸಾಮಗ್ರಿ ತಲುಪಿಸುವನೋ? ಇಂತಹ ಮಾತಾದರೋ ನಾನು ಕೇಳಲಿಲ್ಲ , ನೋಡಲಿಲ್ಲ. ಇಂತಹ ಆಗದೇ ಇರುವ ಮಾತನ್ನು ನೀವು ಹೇಗೆ ಆಡಿದಿರಿ ಎಂದು ತಿಳಿಯುತ್ತಿಲ್ಲ ಎಂದು ಹೇಳಿದರು.

ಪುರೋಹಿತರೇ ! ಗಾಬರಿಪಡಬೇಡಿ. ಭಗವಂತನ ಮಾಯೆಯಾದರೋ **'ಅಘಟನ ಘಟನಾ ಪಟೀಯಸೀ'** ಎಂದು ಹೇಳಲ್ಪಡುತ್ತದೆ. ಆದರಿಂದ ಯಾವುದೇ ಆಗದಿರುವಂತಹುದಿಲ್ಲ. ಶ್ರದ್ಧೆ ಇಡಿರೀ, ದ್ವಾರಕಾಧೀಶ ಶ್ರೀಕೃಷ್ಣನು ತುಂಬಾ ಭಕ್ತವತ್ಸಲ ಮತ್ತು ದಯಾಳು ಆಗಿದ್ದಾನೆ. ಏನೆಲ್ಲ ಮಾಡುವನೋ ಒಳ್ಳೆಯದನ್ನೇ ಮಾಡುವನು. ನರಸಿಂಹರಾಮನು ವಿಶ್ವಾಸಪೂರ್ಣ ಸ್ವರದಲ್ಲಿ ಹೇಳಿದನು.

ಭಕ್ತರಾಜನ ಇಂತಹ ವಿಚಿತ್ರ ಮಾತು ಪುರೋಹಿತನ ತಿಳಿವಳಿಕೆಗೆ ಹೇಗೆ ಬಂದೀತು ? ಆದರೆ ಅವನು ಏನು ಮಾಡಬಲ್ಲನು. ಕೊನೆಗೆ ನರಸಿಂಹರಾಮರು ಅವನ ಪ್ರಿಯ ಯಜಮಾನ ಶ್ರೀರಂಗಧರ ಮೇಹತಾರವರ ಸಂಬಂಧಿಯಾಗಿದ್ದರು. ಅವರ ವಿರುದ್ಧ ಒರಟಾದ ವ್ಯವಹಾರ ಹೇಗೆ ಮಾಡಬಲ್ಲನು. ಅವನು ಸುಮ್ಮನಿರುವುದೇ ಉಚಿತವೆಂದು ತಿಳಿದನು.

ಎರಡು-ಮೂರು ದಿನ ಪುರೋಹಿತರು ಸುಮ್ಮನೆ ಇದ್ದರು. ಆದರೆ ಅವರು ಯಾವುದೇ ವಿಶೇಷ ತಯಾರಿಯನ್ನು ನೋಡಲಿಲ್ಲ. ಭಕ್ತರಾಜರು ತಮ್ಮ ಭಜನೆ-ಪೂಜೆಯಲ್ಲಿ ನಿಶ್ಚಿಂತರಾಗಿತೊಡಗಿದ್ದರು. ಬೇರೆ ಯಾವುದೇ ಕೆಲಸವು ತನ್ನ ಮುಂದಿದೆ ಎಂದೇ ಅವರಿಗೆ ಅರಿವಿರಲಿಲ್ಲ. ಕೊನೆಗೆ ಪುರೋಹಿತರು ಬೇಸರಪಟ್ಟು ಹೇಳಿದರು - ಮೆಹತಾರವರೇ ! ನಾನು ನಿಮ್ಮನೆಯಲ್ಲಿದ್ದು ಇಂದಿಗೆ ಮೂರು-ನಾಲ್ಕು ದಿನಗಳಾದುವು. ಆದರೆ ನೀವು ನಿಶ್ಚಿಂತರಾಗಿ ಭಜನೆ-ಪೂಜೆಯಲ್ಲೇ ತೊಡಗಿರುವಿರಿ. ಇನ್ನು ನಾನು ಹೆಚ್ಚು ದಿನ ಉಳಿಯಲಾರೆ. ವರದಕ್ಷಿಣೆಯ ವ್ಯವಸ್ಥೆ ಆಗಲೀ, ಆಗದಿರಲಿ; ನಾಳೆ ನಾನು ಕುಂವರಬಾಯಿಯನ್ನು ಕರಕೊಂಡು ಅವಶ್ಯವಾಗಿ ಹೊರಡುತ್ತೇನೆ.

ಪುರೋಹಿತರು ಸರಿಯಾಗಿಯೇ ಹೇಳುತ್ತಿದ್ದಾರೆ. ಮಗಳಿಗಾಗಿ ಇಂದೇ ವಸ್ತ್ರಾದಿ ವರದಕ್ಷಿಣೆಯ ಎಲ್ಲ ಸಿದ್ಧತೆ ಮಾಡಿರಿ, ಮತ್ತೆ ನೀವು ಸುಖವಾಗಿ ಭಜನೆ ಮಾಡಿರಿ ಎಂದು ಮಾಣಿಕಗೌರಿಯು ಹೇಳಿದಳು.

ಒಳ್ಳೆಯದು! ನಿನ್ನ ಇಚ್ಛೆಯೂ ಹಾಗೇ ಇದ್ದರೆ ಇಂದೇ ನನ್ನ ಸ್ವಾಮಿಯ ಅವಾಹನೆ ಮಾಡುವೆನು. ನೋಡು, ಅವನ ಕೃಪೆಯು ಹೇಗಾಗುತ್ತದೆ ಎಂದು. ನರಸಿಂಹರಾಮನು ಸಹಜಭಾವದಿಂದ ನುಡಿದನು.

ಸಾಯಂಕಾಲ ಭಕ್ತರಾಜರು ಶ್ರೀಕೃಷ್ಣಮಂದಿರವನ್ನು ಸೇರಿದರು. ಕೈಯಲ್ಲಿ ಕರತಾಳ ಎತ್ತಿಕೊಂಡು ಭಗವಂತನ ಭಜನೆಯಲ್ಲಿ ದತ್ತಚಿತ್ತರಾದರು. ಮಾಣಿಕಗೌರಿ ಮತ್ತು ಶ್ಯಾಮಲದಾಸನೂ ಬಂದು ಸೇರಿದರು. ಶ್ಯಾಮಲದಾಸನು ಮೃದಂಗ ನುಡಿಸುತ್ತಿದ್ದ. ಪುರೋಹಿತರು ಒಂದೆಡೆ ಕುಳಿತುಕೊಂಡು ಯೋಚಿಸುತ್ತಾರೆ. ಇದೇನು ಹುಚ್ಚಾಟ ಮಾಡುತ್ತಿದ್ದಾರೆ ? ಹೀಗೆ ಹಾರಿ ಹಾರಿ ಕುಣಿಯುತ್ತ ಬೊಬ್ಬೆ ಹಾಕುವುದರಿಂದ ಭಗವಂತನು ಬಂದು ಬಿಡುವನೇ ? ಒಂದು ವೇಳೆ ಈ ಪ್ರಕಾರ ಭಗವಂತನ ಸಾಕ್ಷಾತ್ಕಾರವಾಗುವುದಾದರೆ ಜಗತ್ತೆಲ್ಲವೂ ಭಗವಂತನನ್ನು ತನ್ನ ವಶಮಾಡಿಕೊಂಡೀತು. ಇರಲಿ, ಇದರಿಂದ ನನಗೇನಾಗಬೇಕು ? ನಾನಾದರೋ ನಾಳೆ ಅವಶ್ಯವಾಗಿ ಹೋಗುವೆನು. ಭಗವಂತನು ಪ್ರಗಟನಾಗಿ ವರದಕ್ಷಿಣೆಯನ್ನು ತಂದುಕೊಡಲಿ, ಕೊಡದಿರಲಿ.

ಪುರೋಹಿತರು ಇದೇ ವಿಚಾರದಲ್ಲಿ ಮುಳುಗಿದ್ದರು, ಅಕಸ್ಮಾತ್ ಅವರ ಕಿವಿಗೆ 'ಬೋಲೋ ಭಗವಾನ್ ಶ್ರೀಕೃಷ್ಣ ಚಂದ್ರಕೀ ಜೈ' ಎಂಬ ಧ್ವನಿ ಬಿತ್ತು. ಅವರು ಒಮ್ಮೆಲೇ ಎದ್ದು ನಿಂತು, ಗುಂಡಿ ಒತ್ತಿದಾಗ ಯಂತ್ರವು ಚಲಿಸುವಂತೆ ಒಮ್ಮಿಂದೊಮ್ಮೆಗೆ ಮಂದಿರದ ಕಡೆಗೆ ಓಡಿದರು. ಅಲ್ಲಿ ಹೋಗಿ ನೋಡುತ್ತಾರೆ– ಸಾಕ್ಷಾತ್ ಭಗವಾನ್ ಶ್ರೀಕೃಷ್ಣಚಂದ್ರನು ಹಾರ, ಕಂಕಣ, ಒಡವೆಗಳು, ಸೀರೆಗಳು ಮುಂತಾದ ವರದಕ್ಷಿಣೆಯ ಬಳುವಳಿಯ ಅನೇಕ ವಸ್ತುಗಳನ್ನು ಕೊಡುತ್ತಿದ್ದಾನೆ. ಶ್ರೀಲಕ್ಷ್ಮಿಯು ಸ್ವತಃ ಎಲ್ಲ ಒಡವೆಗಳನ್ನು ತನ್ನ ಕೈಯಾರೆ ಕುಂವರಬಾಯಿಗೆ ತೊಡಿಸುತ್ತಿದ್ದಾಳೆ. ಭಕ್ತರಾಜರು ಮತ್ತು ಮಾಣಿಕ ಗೌರಿಯು ಇಬ್ಬರೂ ಕೈ ಜೋಡಿಸಿಕೊಂಡು ನಿಂತಿದ್ದಾರೆ ಹಾಗೂ ಶ್ಯಾಮಲದಾಸನು ಭಗವಂತನ ಚರಣ ಗಳಲ್ಲಿ ಸಾಷ್ಟಾಂಗ ವಂದಿಸಿಕೊಂಡಿದ್ದಾನೆ. ಪುರೋಹಿತರು ಕೊನೆಯವರೆಗೆ ಈ ದೃಶ್ಯವನ್ನು ಚಿತ್ರದಂತೆ ನೋಡತ್ತಲೇ ಇದ್ದರು.

ನರಸಿಂಹರಾಮನ ಸಕುಟುಂಬವನ್ನು ನಿಶ್ಚಿಂತ ಮತ್ತು ಸಂತೋಷಗೊಳಿಸಿ, ಕುಂವರಬಾಯಿಗೆ ವಸ್ತ್ರಾಭೂಷಣಾದಿ ಬಳುವಳಿಯ ವಸ್ತುಗಳಿಂದ ಸಂತುಷ್ಟ ಗೊಳಿಸಿ ಭಗವಂತನು ಲಕ್ಷ್ಮೀಯೊಂದಿಗೆ ಅಂತರ್ಧಾನನಾದನು. ಮರುದಿನ ಕುಂವರಾಬಾಯಿಯು ಪುರೋಹಿತರೊಂದಿಗೆ ಸಂತೋಷವಾಗಿ ಗಂಡನ ಮನೆಗೆ ತೆರಳಿದಳು. ಪುರೋಹಿತರೂ ಭಕ್ತನ ಸಂಗದಿಂದ ಕೃತಾರ್ಥರಾದರು.

ಮಗನ ನೆಂಟತನ

ಭಕ್ತಭಾವನ ಭಗವಾನ್ ಶ್ರೀಕೃಷ್ಣಚಂದ್ರನ ಕೃಪೆಯಿಂದ ಭಕ್ತರಾಜರು ಕುಂವರಬಾಯಿಯನ್ನು ಗಂಡನ ಮನೆಗೆ ಕಳಿಸುವ ಚಿಂತೆಯಿಂದ ಮುಕ್ತರಾದರು. ಈಗ ನಿಶ್ಚಿಂತರಾಗಿ ಹಿಂದಿನಂತೆ ತನ್ನ ಜೀವನವನ್ನು ಕೇವಲ ಭಜನೆ-ಪೂಜೆಯಲ್ಲಿ ಕಳೆಯ ತೊಡಗಿದರು. ಅವರ ಭಜನೆ-ಪೂಜೆ-ಸಾಧುಗಳ ಸೇವೆಯ ಸುದ್ದಿಯು ನಗರದಲ್ಲೆಲ್ಲ ಹರಡಿತ್ತು. ಅದರಿಂದ ಅವರ ಜಾತಿಯ ಜನರು ಈಗ ಅವರೊಂದಿಗೆ ಅಸಂತುಷ್ಟರಾಗಿದ್ದರು. ಜಾತಿಯ ಗಣ್ಯ-ಮಾನ್ಯಜನರಾದರೋ ತಿರಸ್ಕಾರ ಮಾಡುತ್ತಾ ಅವರೊಂದಿಗೆ ಭೇಟಿಯಾಗುವುದೂ ಕೂಡ ತಮ್ಮ ಗೌರವಕ್ಕೆ ವಿರುದ್ಧವೆಂದು ತಿಳಿಯುತ್ತಿದ್ದರು. ಆದರೆ ಪರಮಭಾಗವತ ನರಸಿಂಹರಾಮರಿಗೆ ಇದರ ಸ್ವಲ್ಪವೂ ಪರಿವೆ ಇರಲಿಲ್ಲ. ಜಗತ್ತು ಅವರ ವಿಷಯದಲ್ಲಿ ಏನು ಹೇಳುತ್ತಿದೆ - ಕೇಳುತ್ತಿದೆ ಅಥವಾ ತಿಳಿದುಕೊಳ್ಳುತ್ತದೆ ಇದರ ಕಡೆಗೆ ನಿಜವಾದ ಭಕ್ತರು ಲಕ್ಷ್ಯವೇ ಕೊಡುವುದಿಲ್ಲ. ಅವರು ತಮ್ಮ ಪ್ರಿಯತಮ ಭಗವಂತನು ಯಾವುದರಿಂದ ಪ್ರಸನ್ನನಾಗುತ್ತಾನೆ ಎಂಬ ಒಂದೇ ವಿಚಾರದಲ್ಲಿ ಮಗ್ನರಾಗಿರುತ್ತಾರೆ. ಪ್ರಪಂಚದ ಮಾತುಗಳನ್ನು ಕೇಳುವುದಕ್ಕೆ ಅವರಿಗೆ ಸ್ವಪ್ನದಲ್ಲಿಯೂ ಸಮಯ ಸಿಗುವುದಿಲ್ಲ. ಅಥವಾ ಭಗವಂತನನ್ನು ಬಿಟ್ಟು ಯಾವುದೇ ಬೇರೆ ವಸ್ತುವಿನ ಅಸ್ತಿತ್ವವೇ ಅವರ ದೃಷ್ಟಿಯಲ್ಲಿರುವುದಿಲ್ಲ. ಹಾಗಿರುವಾಗ ಬೇರೆಕಡೆ ಲಕ್ಷ್ಯವಾದರೂ ಹೇಗೆ ಹೋಗಬಲ್ಲದು ?

ನರಸಿಂಹರಾಮನ ಮಗ ಶ್ಯಾಮಲದಾಸನ ವಯಸ್ಸು ಹನ್ನೆರಡು ಆಗುತ್ತಾ ಬಂತು. ಮಾಣಿಕಗೌರಿಯು ಈಗ ಮಗನೂ ಕೂಡ ವಿವಾಹ ಯೋಗ್ಯನಾಗಿದ್ದಾನೆ, ಆದರೆ ನಮ್ಮ ಮನೆಯಲ್ಲಿ ತಿನ್ನುಣ್ಣಲೂ ಕೂಡ ಗತಿಯಿಲ್ಲ. ಬಡವರ ಮನೆಗೆ ತಮ್ಮ ಮಗಳನ್ನು ಯಾರು ಕೊಡಬಲ್ಲರು? ಈ ಕಾರ್ಯದಲ್ಲಿ ಸಹಾಯ ಮಾಡಲು ಕುಲ-ಪರಿವಾರದ ಜನರೂ ಕೂಡ ಪ್ರಸನ್ನರಾಗಿಲ್ಲ, ಅವರಾದರೋ ಇದೇ ಕಾರಣದಿಂದ ವಿರೋಧವಾಗಿ ತೊಂದರೆಯೇ ಒಡ್ಡಬಲ್ಲರು. ಇಂತಹ ಪರಿಸ್ಥಿತಿಯಲ್ಲಿ ಮಗನ ಮದುವೆಯಾಗುವುದು ಕಷ್ಟವೆಂದೇ ತೋರುತ್ತದೆ. ಒಂದು ದಿನ ಅವಳು ತನ್ನ ಚಿಂತೆಯನ್ನು ಪತಿಯ ಮುಂದೆ ಪ್ರಕಟಪಡಿಸಿದಳು. ಪತಿಯು ಹೇಳಿದರು-ಪ್ರಿಯೇ ! ನೀನು ವ್ಯರ್ಥವಾಗಿ ಏಕೆ ಚಿಂತಿಸುತ್ತಿರುವೆ? ಚಿಂತೆ ಬಿಟ್ಟು ಕೇವಲ ಶ್ರೀಕೃಷ್ಣನ ಧ್ಯಾನ ಮಾಡು, ಸದಾ ಮನಸ್ಸಿನಲ್ಲಿ ಅವನೇ

ಇರಲಿ. ದಯಾಳುವಾದ ಆ ಸ್ವಾಮಿಯು ತನ್ನಿಂದ-ತಾನೇ ನಮ್ಮ ಎಲ್ಲ ಕಾರ್ಯಗಳನ್ನು ಸರಿಯಾದ ಸಮಯಕ್ಕೆ ಮಾಡುತ್ತಾ ಇರುತ್ತಾನೆ; ನಮಗಾಗಿ ಅವನು ಸ್ವತಃ ನಮಗಿಂತ ಹೆಚ್ಚು ಚಿಂತಿತನಾದಾನು.

ಅದೇ ಸಮಯ ಗುಜರಾತದ ಬಡನಗರ ಎಂಬ ಪಟ್ಟಣದಲ್ಲಿ ವಾಸಿಸುವ ಮದನ ಮೆಹತಾನ ಮಗಳಿಗಾಗಿ ಓರ್ವ ಸುಯೋಗ್ಯವರನ ಅನ್ವೇಷಣೆ ನಡೆಯುತ್ತಿತ್ತು. ಮದನ ಮೆಹತಾರವರು ಓರ್ವ ಪ್ರತಿಷ್ಠಿತ ನಾಗರ ಗೃಹಸ್ಥರಾಗಿದ್ದರು. ಅವರು ಸ್ವತಃ ಒಂದು ರಾಜ್ಯದ ದಿವಾನರಾಗಿದ್ದರು. ಎಂಟು ಹತ್ತು ಲಕ್ಷದ ಸಂಪತ್ತಿಯೂ ಅವರ ಬಳಿ ಇತ್ತು. ಅವರ ರೂಪ-ಶೀಲಯುಕ್ತ ಪುತ್ರಿ ಜೂಠೀ ಬಾಯಿಯು ವಿವಾಹಯೋಗ್ಯಳಾಗಿದ್ದಳು. ಅವರು ಅನೇಕ ಕಡೆಗಳಲ್ಲಿ ಸುಯೋಗ್ಯ ವರನ ಅನ್ವೇಷಣೆ ಮಾಡಿದರೂ ಎಲ್ಲಿಯೂ ಅವರ ಮನಸ್ಸಿಗೆ ಬರಲಿಲ್ಲ. ಕೊನೆಗೆ ಕುಲ-ಪರಿವಾರದ ಜನರನ್ನು ಒಟ್ಟುಗೂಡಿಸಿ ಮಗಳ ಮದುವೆಯನ್ನು ಎಲ್ಲಿ ಮಾಡಬೇಕು ಎಂದು ಕೇಳಿದರು. ಎಲ್ಲರೂ-ಸುತ್ತಮುತ್ತಲಾದರೋ ನಿಮಗೆ ಯೋಗ್ಯರಾದ ಯಾವ ಗೃಹಸ್ಥರೂ ಕಂಡು ಬರುವುದಿಲ್ಲ. ಜೂನಾಗಡದಲ್ಲಿ ನಮ್ಮ ಜಾತಿಯ ಏಳುನೂರು ಮನೆಗಳು ನೆಲಸಿವೆ. ಆದ್ದರಿಂದ ಅಲ್ಲಿ ಯಾವುದಾದರೂ ಯೋಗ್ಯ ವರ ಸಿಗಬಹುದು ಎಂದು ಸಲಹೆ ನೀಡಿದರು.

ಆತ್ಮೀಯ ಸಂಬಂಧಿಗಳ ಸಲಹೆಯಂತೆ ಮದನ ಮೆಹತಾರವರು ತಮ್ಮ ಕುಲ ಪುರೋಹಿತರನ್ನು ಓರ್ವ ಸುಂದರ, ಸುಶೀಲ, ಕುಲೀನ ಮತ್ತು ಸದ್ಗುಣವಂತ ವರನನ್ನು ಹುಡುಕಲು ವಾಹನ ಹಾಗೂ ದ್ರವ್ಯಾದಿಗಳನ್ನು ಕೊಟ್ಟು ಜೂನಾಗಡಕ್ಕೆ ಕಳಿಸಿದರು. ಮದನ ಮೆಹತಾರವರ ಓರ್ವ ಸಹಪಾಠಿ ಮಿತ್ರ ಸಾರಂಗಧರನು ಜೂನಾಗಡದಲ್ಲಿ ಇರುತ್ತಿದ್ದರು. ಆದ್ದರಿಂದ ಅವನ ಹೆಸರಿಗೆ ಒಂದು ಪತ್ರವನ್ನೂ ಪುರೋಹಿತರ ಬಳಿ ಕೊಟ್ಟರು. ಪುರೋಹಿತರನ್ನು ಎಲ್ಲ ಜನರು ದೀಕ್ಷಿತನೆಂದು ಕರೆಯುತ್ತಿದ್ದರು.

ಜೂನಾಗಡದಲ್ಲಿ ಯಾವ ಮೊಹಲ್ಲಾದಲ್ಲಿ ನಾಗರ ಜನರ ವಸತಿಯು ದಟ್ಟವಾಗಿತ್ತೋ ಅಲ್ಲಿ ಮಧ್ಯದಲ್ಲಿ ಒಂದು ಕಟ್ಟೆ ಕಟ್ಟಿಟ್ಟಿದ್ದರು. ಸಂಜೆ ಅದರಲ್ಲಿ ಕುಳಿತು ಅನೇಕ ಜನರು ಹರಟೆಹೊಡೆಯುತ್ತಿದ್ದರು. ಆ ದಿನವೂ ಕೆಲವು ಜನರು ಕುಳಿತು ಮಾತುಕತೆ ನಡೆಸುತ್ತಿದ್ದರು. ಆಗಲೇ ದೀಕ್ಷಿತರ ರಥ ಅಲ್ಲಿಗೆ ಬಂದು ತಲುಪಿತು. ಎಲ್ಲ ಜನರ ಲಕ್ಷ್ಯ ಅವರತ್ತ ಆಕರ್ಷಿತವಾಯಿತು. ದೀಕ್ಷಿತರು ಕೇಳಿದರು - ಮಹನೀಯರೇ ! ಸಾರಂಗಧರ ಮೆಹತಾರವರ ಮನೆ ಎಲ್ಲಿದೆ?

ಸಾರಂಗಧರ ಮೆಹತಾರವರು ನಾಗರ ಜಾತಿಯ ಓರ್ವ ಪ್ರತಿಷ್ಠಿತ ಗೃಹಸ್ಥರಾಗಿದ್ದರು. ಆ ಸಮಯ ಅವರೂ ಅಲ್ಲಿಯೇ ಇದ್ದರು. ಅವರು ಹೇಳಿದರು - ಮಹನೀಯರೇ ! ತಾವು ಎಲ್ಲಿಂದ ಆಗಮಿಸಿರುವಿರಿ, ಏನು ಕಾರ್ಯವಿದೆ ? ಹೇಳಿರಿ. ಜನರು ನನ್ನನ್ನೇ ಸಾರಂಗಧರ ಎಂದು ಹೇಳುತ್ತಾರೆ.

ದೀಕ್ಷಿತರು ರಥದಿಂದ ಇಳಿದು ಯಜಮಾನರು ಕೊಟ್ಟ ಪತ್ರವನ್ನು ಅವರ ಕೈಯಲ್ಲಿತ್ತರು. ಪತ್ರವನ್ನು ತೆರೆದು ಓದ ತೊಡಗಿದರು-

ಪ್ರಿಯ ಮಿತ್ರಶ್ರೀ ಸಾರಂಗಧರರವರೇ ! ಸಪ್ರೇಮ ವಂದನೆಗಳು.

ನಮ್ಮ ಕುಲಪುರೋಹಿತರಾದ ಶ್ರೀದೀಕ್ಷಿತರನ್ನು ನಿಮ್ಮ ಬಳಿಗೆ ಕಳಿಸುತ್ತಿದ್ದೇನೆ. ನನ್ನ ಮಗಳು ಜೂಠೀಬಾಯಿಯ ವಯಸ್ಸು ಈಗ ವಿವಾಹಯೋಗ್ಯವಾಗಿದೆ. ದಯಮಾಡಿ ತಮ್ಮಲ್ಲಿ ಯಾವುದಾದರು ಕುಲೀನ ಮನೆತನದಲ್ಲಿ ಓರ್ವ ರೂಪ-ಶೀಲಯುಕ್ತ ಸುಯೋಗ್ಯ ವರನ ಸಂಬಂಧವನ್ನು ತೋರಿಸಿರಿ. ನಿಮ್ಮನ್ನು ನನ್ನ ಆಪ್ತಮಿತ್ರನೆಂದು ತಿಳಿದು ತೊಂದರೆ ಕೊಡುತ್ತಿದ್ದೇನೆ.

ನಿಮ್ಮವ- ಮದನ ಮೆಹತಾ.

ಸಾರಂಗಧರನು ಪತ್ರವನ್ನು ಓದಿ ಎದ್ದು ನಿಂತು ದೀಕ್ಷಿತರನ್ನು ತಮ್ಮ ಮನೆಗೆ ಕರಕೊಂಡು ಹೋದನು. ದೀಕ್ಷಿತರ ಉಚಿತ ಸತ್ಕಾರವಾದ ಬಳಿಕ ತನ್ನ ಮಿತ್ರ ಮದನ ಮೆಹತಾನ ಯೋಗ-ಕ್ಷೇಮವನ್ನು ಕೇಳಿದನು.

ಬಡನಗರದಿಂದ ಓರ್ವ ಪುರೋಹಿತರು ವರಾನ್ವೇಷಣೆಗೆ ಬಂದಿರುವರೆಂಬ ಸುದ್ದಿ ಮಾತು-ಮಾತುಗಳಲ್ಲಿ ನಗರದಲ್ಲೆಲ್ಲ ಹರಡಿತು. ನಾಲ್ಕೂ ಕಡೆಗಳಿಂದ ಒಂದಲ್ಲ-ಒಂದು ನೆಪಮಾಡಿ ಜನರು ಸಾರಂಗಧರನ ಮನೆಯಲ್ಲಿ ಸೇರಿದರು. ಯಾರು ಬರುತ್ತಾರೋ ಅವರು ತಿಳಿಯದವರಂತೆ ದೀಕ್ಷಿತರನ್ನು ಕುರಿತು ಪ್ರಶ್ನಿಸುತ್ತಾರೆ - ಸಾರಂಗಧರರೇ ಇವರು ಯಾರು ? ಸಾರಂಗಧರರು ಎಲ್ಲರಲ್ಲಿ ಇವರು ಬಡನಗರದ ನನ್ನ ಮಿತ್ರರಾದ ಮದನ ಮೆಹತಾರವರ ಪುರೋಹಿತರಾಗಿದ್ದಾರೆ. ನನ್ನ ಮಿತ್ರನ ಮಗಳಿಗಾಗಿ ಓರ್ವ ಸುಯೋಗ್ಯವರನ ಅನ್ವೇಷಣೆಗಾಗಿ ಬಂದಿರುವರು.

ವರನನ್ನು ಹುಡುಕಿ ಬಂದಿರುವ ಮನುಷ್ಯನನ್ನು ನೋಡಿ ಪ್ರಾಯಶಃ ಗೃಹಸ್ಥರು ಚಂಚಲರಾಗುತ್ತಾರೆ. ವಿಶೇಷವಾಗಿ ಸ್ವಾರ್ಥಿಯಾದವರ ಬಗ್ಗೆ ಹೇಳುವುದೇನಿದೆ? ಅವರಾದರೋ ಯೇನ ಕೇನ ಪ್ರಕಾರದಿಂದ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳಲು ಉದ್ವಿಗ್ನರಾಗಿರುತ್ತಾರೆ. ಅಲ್ಲಿ ಕುಳಿತಿರುವ ಇಂತಹ ಜನರು

ತಮ್ಮನ್ನು ನಿಯಂತ್ರಿಸದಾದರು. ಅವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಲು ಪ್ರಾರಂಭಿಸಿದರು. ಯಾರೋ ಪ್ರಕಾರಾಂತರದಿಂದ ತನ್ನ ಪುತ್ರನ ಗುಣಗಾನ ಮಾಡಿದರೆ, ಯಾರೋ ತನ್ನ ಮಿತ್ರನ ಕುಲೀನತೆಯನ್ನು ಹೊಗಳಿದರು. ಯಾರೋ ತಮ್ಮ ಸಂಬಂಧದ ಉನ್ನತಿಯನ್ನು ರೋಚಕವಾಗಿ ವರ್ಣಿಸಿದರು. ಯಾರೋ ವ್ಯಾಪಾರ ಚತುರ ವರನ, ಯಾರೋ ಉಚ್ಚ ಪದದಲ್ಲಿರುವ ವರನ, ಯಾರೋ ಸುಂದರ-ಸುಶೀಲ ವರನ ಮತ್ತು ಯಾರೋ ವಿದ್ಯಾವ್ಯಸನೀ ವರನ ಸುಳಿವು ನೀಡಿದರು. ದೀಕ್ಷಿತರು ಸುಮ್ಮನೆ ಎಲ್ಲ ಮಾತುಗಳನ್ನು ಕೇಳುತ್ತಿದ್ದರು.

ಮರುದಿನ ಸಾರಂಗಧರರು ದೀಕ್ಷಿತರನ್ನು ಕರಕೊಂಡು ವರ-ಸ್ಥಳವನ್ನು ತೋರಿಸಲು ಹೊರಟರು. ಅವರು ತಮ್ಮ ಮಿತ್ರ ಕೃಷ್ಣರಾಯರ ಪ್ರಶಂಸೆಯನ್ನು ದಾರಿಯಲ್ಲಿ ತುಂಬಾ ಮಾಡುತ್ತಾ ಅವರ ಬಾಗಿಲಿಗೆ ಬಂದರು. ಕೃಷ್ಣರಾಯರು ದೀಕ್ಷಿತರನ್ನು ತುಂಬಾ ಆದರ ಸತ್ಕಾರ ಮಾಡಿದರು; ಪ್ರಕಾರಾಂತರದಿಂದ ತನ್ನ ಮನೆತನ, ಗೌರವ ಪ್ರತಿಷ್ಠೆಯ ಉಲ್ಲೇಖವನ್ನು ಮಾಡಿದರು. ತನ್ನ ಮಗನಿಗೆ ಒಳ್ಳೆ ಬಟ್ಟೆಗಳಿಂದ ಅಲಂಕರಿಸಿ ಎದುರಿಗೆ ತಂದು ಕುಳ್ಳಿರಿಸಿದರು. ದೀಕ್ಷಿತರು ಕೇಳಿದರು- ನಿನ್ನ ಹೆಸರೇನಪ್ಪ ? ಆದರೆ ಅವನು ಸುಮ್ಮನಿದ್ದನು. ದೀಕ್ಷಿತರು ಅದನ್ನೆ ಪುನಃ ಕೇಳಿದರು. ಹುಡುಗನು ಸ್ವಲ್ಪ ಗಾಬರಿಗೊಂಡವನಂತೆ ಕೇಳಿದನು - ಏನು ಹೇಳಿದಿರಿ ? ಸರಿ ! ದೀಕ್ಷಿತರು ಹುಡುಗನು ಕಿವುಡನಾಗಿದ್ದಾನೆಂದು ತಿಳಿದರು. ಅವರು ಸಾರಂಗಧರನಿಗೆ ಹೊರಡಲು ಸಂಕೇತ ಮಾಡಿದರು.

ಅಲ್ಲಿಂದ ಎದ್ದು ಸಾರಂಗಧರರು ಮುಂದಕ್ಕೆ ನಡೆದರು. ಅವರು ಕೃಷ್ಣರಾಯನ ಪುತ್ರನನ್ನು ತೋರಿಸಿದ ಯಥಾರ್ಥತೆಯನ್ನು ತಿಳಿಸಲು ಪ್ರಯತ್ನಿಸಿದರು ಮತ್ತು ಇನ್ನೊಬ್ಬಮಿತ್ರ ಅತಿ ಸುಖಿರಾಯರನ್ನು ಇನ್ನೂ ಹೊಗಳಿದರು. ಅತಿಸುಖಿರಾಯನೂ ದೀಕ್ಷಿತರನ್ನು ಆಕರ್ಷಿಸಲು ಸಾಕಷ್ಟು ಪ್ರಯತ್ನ ಮಾಡಿದನು. ಬಾಗಿಲಲ್ಲಿ ಕುಳಿತ ಕೆಲವು ಊರಿನ ಜನರೂ ಕೂಡ ಪ್ರಶಂಸೆಯ ಹಂದರವೇ ನೆಯ್ದರು. ಅತಿಸುಖಿರಾಯರ ಪುತ್ರ ಬಟ್ಟೆ-ಒಡವೆಗಳಿಂದ ಅಂಕರಿಸಿಕೊಂಡು ಎದುರಿಗೆ ಬಂದಾಗ ದೀಕ್ಷಿತರು ಅವನನ್ನೂ ಪ್ರಶ್ನಿಸಿದರು. 'ನಿನ್ನ ಹೆಸರೇನಪ್ಪ ? ಹುಡುಗನು ತೊದಲುತ್ತಾ ವಿ.....ವಿ.....ವಿ....ದ್ಯಾಧರ.....ರ.... ರ.... ರಾಯ ಎಂದು ಉತ್ತರಿಸಿದನು. ದೀಕ್ಷಿತರು ಮುಂದೆ ಏನೂ ಕೇಳದೆ ಸಾರಂಗಧರರಿಗೆ ಮುಂದರಿಯಲು ಹೇಳಿದರು.

ಈ ಪ್ರಕಾರ ಅನೇಕ ದಿನಗಳವರೆಗೆ ಸುತ್ತಾಡಿ ತನ್ನ ಹಿತ-ಮಿತ್ರರ ಮತ್ತು

ಜಾತಿಯ ನೂರಾರು ಹುಡುಗರನ್ನು ಸಾರಂಗಧರರು ದೀಕ್ಷಿತರಿಗೆ ತೋರಿಸಿದರು. ಆದರೆ ದೀಕ್ಷಿತರ ದೃಷ್ಟಿಯಲ್ಲಿ ಒಬ್ಬನೂ ಸರಿಕಂಡಿಲ್ಲ. ಯಾರನ್ನೊ ಕಿವುಡ, ಯಾರನ್ನೊ ತೊದಲು, ಯಾರನ್ನೊ ಮೂರ್ಖ, ಯಾರನ್ನೊ ಕೂರೂಪೀ ಇತ್ಯಾದಿ ಒಂದಲ್ಲ-ಒಂದು ಕಾರಣದಿಂದ ಎಲ್ಲರನ್ನೂ ತಿರಸ್ಕರಿಸಿದರು. ಸ್ವತಃ ದೀಕ್ಷಿತರೂ ಕೂಡ ಅಯೋಗ್ಯ ಹುಡುಗರನ್ನು ನೋಡಿ-ನೋಡಿ ಬೇಸರಗೊಂಡರು, ಬಹುಶಃ ಸಾರಂಗಧರರು ಯೋಗ್ಯ ವರರ ಬದಲಿಗೆ ತನ್ನ ನೆಂಟರಿಷ್ಟರ ಹುಡುಗರನ್ನು ತೋರಿಸುವುದರಲ್ಲೇ ಹೆಚ್ಚು ಒತ್ತು ಕೊಡುವಂತೆ ದೀಕ್ಷಿತರಿಗೆ ಸಂದೇಹ ಉಂಟಾಯಿತು. ಈಗ ಸಾರಂಧರರ ಮೇಲೆ ವಿಶ್ವಾಸವಿಡಲು ಮನಸ್ಸು ಒಪ್ಪುತ್ತಿರಲಿಲ್ಲ. ಆದರೆ ಮದನ ಮೆಹತಾರವರು ಸಾರಂಗಧರರನ್ನು ತನ್ನ ಮಿತ್ರನೆಂದು ತಿಳಿದು ಕೊಂಡು ಅವರ ಬಳಿಗೆ ಕಳಿಸಿ ಕೊಟ್ಟಿದ್ದರು. ಈಗ ಅವರ ವಿರುದ್ಧ ಹೇಗೆ ನಡೆಯಬಲ್ಲರು! ಆದರೂ ಅವರು ಸಾರಂಗಧರರಲ್ಲಿ ಹೇಳಿದರು-ಮೆಹತಾರವರೇ! ಕೇವಲ ಕುಲೀನ ಅಥವಾ ಸುಂದರ ಹುಡುಗನು ನನಗೆ ಬೇಕಾಗಿಲ್ಲ, ಹುಡುಗನು ಗುಣವಂತನೂ ಆಗಿರಬೇಕು. ನೀವು ತುಂಬಾ ಹುಡುಗರನ್ನು ತೋರಿಸಿದಿರಿ. ಆದರೆ ಸುಯೋಗ್ಯ ಒಂದು ವರನೂ ಕಂಡುಬಂದಿಲ್ಲ.

ಸಾರಂಗಧರರೂ ಕೂಡ ದೀಕ್ಷಿತರ ನಡತೆಯಿಂದ ಬೇಸರಗೊಂಡಿದ್ದರು. ಇವನು ತುಂಬಾ ವಿಲಕ್ಷಣ ಮನುಷ್ಯನಾಗಿದ್ದಾನೆ ಎಂದು ಯೋಚಿಸಿದರು. ಇವರಿಗೆ ಯಾವ ಹುಡುಗನೂ ಮೆಚ್ಚಿಗೆ ಆಗಲಿಲ್ಲ. ಇವನು ತನ್ನನ್ನು ತುಂಬಾ ಬುದ್ಧಿವಂತನೆಂದು ತಿಳಿಯುತ್ತಿದ್ದಾನೆ. ಇವನು ನೆನಪಿನಲ್ಲಿಡುವಂತಹ ಒಂದು ಮನೆಯನ್ನು ಈಗ ನಾನು ತೋರಿಸುತ್ತೇನೆ. ಮುಗುಳ್ನಗುತ್ತ ದೀಕ್ಷಿತರಲ್ಲಿ ಹೇಳಿದನು-ದೀಕ್ಷಿತರೇ ! ನೀವು ನಮ್ಮ ಜಾತಿಯ ನೂರಾರು ಹುಡುಗರನ್ನು ನೋಡಿಯಾಯಿತು. ಈಗ ನಾನು ನಮ್ಮ ಜಾತಿಯ ಮುಖ್ಯಸ್ಥನ ಓರ್ವ ಹುಡುಗನನ್ನು ತೋರಿಸುತ್ತೇನೆ. ಆ ಹುಡುಗ ನಿಮಗೆ ಅವಶ್ಯವಾಗಿ ಮೆಚ್ಚಿಗೆ ಯಾಗಬಹುದೆಂದು ಆಶಿಸುತ್ತೇನೆ. ಅನೇಕ ರೀತಿಯ ವಸ್ತುಗಳನ್ನು ನೋಡಿದ ಬಳಿಕ ಒಳ್ಳೆಯ ವಸ್ತುವಿನ ನಿಜವಾದ ಮೌಲ್ಯ ತಿಳಿದು ಬರುತ್ತದೆ.

ದೀಕ್ಷಿತರು ಹೇಳಿದರು- ಸರಿ ! ಕೊನೆಗೆ ತೋರಿಸಿರಿ. ಆದರೆ ಸುಯೋಗ್ಯವರನನ್ನೇ ತೋರಿಸಿರಿ. ಈಗ ಹೆಚ್ಚು ನೋಡುವ ಇಚ್ಛೆ ನನಗಿಲ್ಲ. ಈಗಲಾದರೋ ನಾನು ಕೆಲಸ ಮುಗಿಸಿ ಬೇಗನೆ ಹಿಂದಕ್ಕೆ ಹೋಗ ಬಯಸುತ್ತೇನೆ.

ಸಾರಂಗಧರರು ಮನಸ್ಸಿನಲ್ಲಿ ವಿನೋದದ ಭಾವವನ್ನಿಸಿಕೊಂಡು ದೂರ

ದಿಂದಲೇ ಸಂಕೇತಗೈದು ಹೇಳಿದರು – ಅದು ನೋಡಿ ಸ್ವರ್ಣ ಕಲಶಗಳುಳ್ಳ ಮಂದಿರ ಕಾಣುತ್ತದಲ್ಲ, ಅದು ನರಸಿಂಹರಾಮ ಮೆಹತಾರವರ ಮನೆಯಾಗಿದೆ. ಅವರು ದೊಡ್ಡ ಕುಲೀನ, ಭಗವದ್ಭಕ್ತ ಗೃಹಸ್ಥರಾಗಿದ್ದಾರೆ. ಅವರ ವ್ಯವಹಾರವು ತುಂಬಾ ಸತ್ಯವಾಗಿದೆ ಮತ್ತು ಧನವೂ ತುಂಬಾ ಕೂಡಿಟ್ಟಿದ್ದಾರೆ. ಅವರ ಪುತ್ರನೂ ಎಲ್ಲ ರೀತಿಯಿಂದ ಯೋಗ್ಯನಾಗಿದ್ದಾನೆ. ಅಲ್ಲಿ ನಿಮಗೆ ಪೂರ್ಣ ಸಂತೋಷ ವಾಗಬಹುದು. ಅಲ್ಲಿಗೆ ನಾನು ಬರುವ ವಿಶೇಷ ಆವಶ್ಯಕತೆ ಇಲ್ಲ.

ಒಳ್ಳೆಯದು ಸ್ವಾಮಿ ! ನಮಸ್ಕಾರ. ನಾನು ಈಗಲೇ ಅಲ್ಲಿಗೆ ಹೋಗುತ್ತೇನೆ. ಒಂದು ವೇಳೆ ಎಲ್ಲ ಪ್ರಕಾರದಿಂದ ಸಂತೋಷವಾದರೆ ನಾನು ಅವಶ್ಯವಾಗಿ ಸಂಬಂಧ ನಿಶ್ಚಯಿಸುತ್ತೇನೆ. ಇಲ್ಲವಾದರೆ ಬೇರೆ ಯಾವುದಾದರೂ ಸ್ಥಳದ ಬಗ್ಗೆ ನೋಡುತ್ತೇನೆ. ಸರಿ, ನಮಸ್ಕಾರ, ಅಪ್ಪಣೆಯೇ ? ಎಂದು ಹೇಳುತ್ತ ದೀಕ್ಷಿತರು ಬೀಳ್ಕೊಂಡರು.

ದೀಕ್ಷಿತರು ತತ್‌ಕ್ಷಣ ನರಸಿಂಹರಾಮನ ಮನೆಗೆ ತಲುಪಿದರು. ಆ ದಿನ ಏನೋ ವ್ರತವೋ – ಉತ್ಸವವೋ ಇತ್ತು. ಭಕ್ತರಾಜರು ಹರಿಕೀರ್ತನೆಯಲ್ಲಿ ಸಂಲಗ್ನರಾಗಿದ್ದರು. ಅವರ ಏಕಾಗ್ರತೆ-ತನ್ಮಯತೆ ನೋಡಿ ದೀಕ್ಷಿತರು ಅವಕ್ಕಾದರು. ಭಗವಂತನ ಲೀಲೆ ವಿಚಿತ್ರವಾಗಿದೆ ಎಂದು ಮನಸ್ಸಿನಲ್ಲೇ ಯೋಚಿಸಿದರು. ಇಡೀ ಜೂನಾಗಢದಲ್ಲಿ ಇಲ್ಲಿಗೆ ಬರುತ್ತಲೇ ಮನಸ್ಸಿಗೆ ನೆಮ್ಮದಿ ಸಿಗುವಂತಹ ಮನೆ ಇದೊಂದೇ ಆಗಿದೆ. ಈ ಮನೆಯು ಪವಿತ್ರವಿರುವಂತೆ ವರನೂ ಸದ್ಗುಣಿ ಸುಂದರವಾಗಿ ದೊರೆತರೆ ಮದನ ಮೆಹತಾನ ಮಗಳ ಭಾಗ್ಯ ಫಲಿಸೀತು.

ದೀಕ್ಷಿತರನ್ನು ಯಥೋಚಿತ ಸತ್ಕಾರ ಗೈದು ಕುಳ್ಳಿರಿಸಿದರು. ಮಧ್ಯಾಹ್ನದ ಸಮಯ ಹರಿಕೀರ್ತನೆ ಸಮಾಪ್ತವಾಯಿತು. ದೀಕ್ಷಿತರು ಭಕ್ತರಾಜರ ಬಳಿಗೆ ಹೋಗಿ ಅಭಿವಾದನ ಗೈದರು. ಅವರು ಭಗವಂತನ ಪ್ರಸಾದವಿತ್ತು ಪ್ರಶ್ನಿಸಿದರು ನಿಮ್ಮ ನಿವಾಸವೆಲ್ಲಿ ?

ಭಕ್ತರಾಜರೇ ! ನಾನು ಬಡನಗರದ ದಿವಾನ್ ಮದನರಾಯರ ಮಗಳಿಗೆ ವರಾನ್ವೇಷಣೆಗಾಗಿ ಇಲ್ಲಿ ಕೆಲವುದಿನಗಳಿಂದ ಬಂದಿರುವೆನು. ಭಾಗ್ಯವಶ ಇಂದು ನಿಮ್ಮ ದರ್ಶನ ಮಾಡುವ ಸದವಕಾಶ ಪ್ರಾಪ್ತವಾಯಿತು. ನಿಮಗೂ ಓರ್ವ ಮದುವೆಗೆ ಯೋಗ್ಯ ಮಗನಿದ್ದಾನೆಂದು ಕೇಳಿದೆ. ದಯವಿಟ್ಟು ಅವನನ್ನು ನನಗೆ ತೋರಿಸಿರಿ ಎಂದು ವಿನಮ್ರನಾಗಿ ಕೇಳಿಕೊಂಡನು.

ಮಹಾಶಯರೇ ! ಈ ಊರಿನಲ್ಲಿ ಏಳುನೂರು ನಾಗರ ಗೃಹಸ್ಥರ ಮನೆಗಳಿವೆ

ಮತ್ತು ಪ್ರಾಯಶಃ ಎಲ್ಲರೂ ಧನಾಢ್ಯರೂ, ಕುಲೀನರೂ ಆಗಿದ್ದಾರೆ. ನೀವು ತಿಳಿದೇ ಇರುವಿರಿ–

ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ ಸ ಪಂಡಿತಃ ಸ ಶ್ರುತಿಮಾನ್ ಗುಣಜ್ಞಃ ।
ಸ ಏವ ವಕ್ತಾ ಸ ಚ ದರ್ಶನೀಯಃ ಸರ್ವೇ ಗುಣಾಃ ಕಾಂಚನ ಮಾಶ್ರಯಂತೇ ॥

ಯಾರ ಬಳಿಯಲ್ಲಿ ಧನವಿದೆಯೋ ಆ ಮನುಷ್ಯನೇ ಕುಲೀನನೂ, ಪಂಡಿತನೂ, ವೇದವಿದನೂ, ಗುಣವಂತನೂ, ವಕ್ತಾನೂ ಮತ್ತು ದರ್ಶನೀಯನೂ ಆಗಿರುತ್ತಾನೆ. ಎಲ್ಲ ಗುಣಗಳು ಕಾಂಚನವನ್ನೇ ಆಶ್ರಯಿಸುತ್ತವೆ. ಈ ನೀತಿಗನುಸಾರವಾಗಿ ನಾನಾದರೋ ಕುಲೀನನಲ್ಲ, ಗುಣವಂತನಲ್ಲ, ಪಂಡಿತನೂ ಅಲ್ಲ, ನಾನಾದರೋ ರಾಧೇಶ್ಯಾಮನ ನಾಮವನ್ನು ಮಾತ್ರ ತಿಳಿದಿದ್ದೇನೆ ಎಂದು ನರಸಿಂಹರಾಮರು ಸ್ಪಷ್ಟವಾಗಿ ತನ್ನ ಪರಿಸ್ಥಿತಿಯನ್ನು ವರ್ಣಿಸಿದನು.

ಭಗವದ್ ಭಕ್ತರೇ ! ಲಕ್ಷ್ಮಿಯಾದರೋ ಚಂಚಲಳಾಗಿದ್ದಾಳೆ. ಅವಳು ಎಂದಾದರು ಬರುತ್ತಾಳೆ, ಎಂದಾದರು ಹೊರಟು ಹೋಗುತ್ತಾಳೆ. ಇಂದು ಧನಾಢ್ಯನಾದವನು ನಾಳೆ ಭಿಕ್ಷೆ ಬೇಡುವುದನ್ನು ನಾವು ನೋಡುತ್ತೇವೆ. ಅದಕ್ಕಾಗಿ ಮಹಾತ್ಮರು ದ್ರವ್ಯವುಳ್ಳವನನ್ನು ನಿಜವಾದ ಧನಾಢ್ಯನೆಂದು ತಿಳಿಯುವುದಿಲ್ಲ. ಕಬೀರ ದಾಸರು ಹೇಳುತ್ತಾರೆ –

ಕಬೀರಾ ಸಬ ಜಗ ನಿರ್ಧನಾ, ಧನವಂತಾ ನಹಿಂ ಕೋಇ ।
ಧನವಂತಾ ಸೋಇ ಜಾನಿಯೇ, ರಾಮಧನೀ ಜೋ ಹೋಇ ॥

ಈ ಪ್ರಪಂಚದಲ್ಲಿ ಎಲ್ಲರೂ ನಿರ್ಧನರೇ ಆಗಿದ್ದಾರೆ, ಯಾರೂ ಧನಿಕರು ಇಲ್ಲ, ಯಾರ ಬಳಿ ರಾಮಧನವಿದೆಯೋ ಅವನನ್ನು ಧನವಂತನೆಂದು ತಿಳಿಯಬೇಕು. ಸ್ವಾಮಿ ! ಕೇವಲ ನಿಮ್ಮ ಬಳಿಯಲ್ಲಿ ನಿಜವಾದ ರಾಮಧನವಿದೆ, ಇದನ್ನು ನಾನು ಪ್ರತ್ಯಕ್ಷವಾಗಿ ನೋಡುತ್ತಿದ್ದೇನೆ. ಆದ್ದರಿಂದ ನೀವು ನನ್ನನ್ನು ಭ್ರಮೆಯಲ್ಲಿ ಕೆಡಹಬೇಡಿ, ನಿಮ್ಮ ಮಗನನ್ನು ಕರೆಯಿರಿ ಎಂದು ದೀಕ್ಷಿತರು ನಿಜಧನದ ವ್ಯಾಖ್ಯೆಯನ್ನು ಮಾಡುತ್ತಾ ಹೇಳಿದರು.

ನರಸಿಂಹಮೆಹತಾರವರು ಶ್ಯಾಮಲದಾಸನನ್ನು ಕರೆದರು. ಪರಮಾತ್ಮನ ಕೃಪೆಯಿಂದ ಶ್ಯಾಮಲದಾಸನ ಮುಖ ಮಂಡಲವು ಚಂದ್ರನಂತೆ ಕಾಂತಿಯುಕ್ತವಾಗಿ ಕಂಡು ಬಂತು. ಅವನ ಅಲೌಕಿಕ ತೇಜಸ್ವೀಮೂರ್ತಿಯನ್ನು ನೋಡಿ ಅವರು ಅತ್ಯಂತ ಸಂತೋಷಗೊಂಡರು. ಅವರು ಸಾಮುದ್ರಿಕವಿದ್ಯೆಗನುಸಾರ ಶ್ಯಾಮಲ ದಾಸನಲ್ಲಿ ಅನೇಕ ಶುಭ ಲಕ್ಷಣಗಳನ್ನು ನೋಡಿದರು. ಕೂಡಲೇ ಅವರು

ಶ್ಯಾಮಲದಾಸನ ಕೈಯಲ್ಲಿ ಶ್ರೀಫಲವನ್ನಿತ್ತು, ಸ್ವರ್ಣಮುದ್ರಿಕೆಯನ್ನು ತೊಡಿಸಿ, ಹಣೆಗೆ ತಿಲಕವಿಟ್ಟರು. ಮತ್ತೆ ಸಂತಸಗೊಂಡು ಭಗವದ್ಭಕ್ತರೇ! ಮದನರಾಯರ ಪುತ್ರಿ ಜೂಠೀಬಾಯಿಯ ಜೊತೆ ಶ್ಯಾಮಲದಾಸನ ಸಂಬಂಧ ಇಂದು ನಿಶ್ಚಯಿಸುತ್ತೇನೆ ಎಂದು ಹೇಳಿದರು.

ಭಗವದಿಚ್ಛೆ ಎಂದು ಹೇಳುತ್ತ ಭಕ್ತರಾಜರು ತಮ್ಮ ನಿರ್ಲಿಪ್ತತೆಯನ್ನು ಪ್ರಕಟಿಸಿದರು. ಅಷ್ಟರಲ್ಲಿ ಮಾಣಿಕಗೌರಿಯೂ ಅಲ್ಲಿಗೆ ಬಂದು ತಲುಪಿದಳು. ಮಗನ ಸಂಬಂಧ ನಿಶ್ಚಿತವಾದುದನ್ನು ತಿಳಿದು ತಾಯಿಯ ಹೃದಯ ಎಷ್ಟು ಪುಲಕಿತವಾಯಿತೆಂಬುದನ್ನು ಯಾರು ಹೇಳಬಲ್ಲರು? ಈ ನಿರ್ಧನತೆಯಲ್ಲಿಯೂ ತನ್ನ ಈ ಸೌಭಾಗ್ಯದ ವಿಷಯವನ್ನು ನೆನೆದು ಅವಳ ಕಣ್ಣುಗಳಿಂದ ಆನಂದಾಶ್ರುಗಳು ಉದುರಿದವು.

ಮರುದಿನ ದೀಕ್ಷಿತರು ಬಡನಗರಕ್ಕೆ ಬೀಳ್ಕೊಂಡರು. ಅವರು ಬಡನಗರಕ್ಕೆ ತಲುಪಿ ತಮ್ಮ ಯಜಮಾನರಲ್ಲಿ ನರಸಿಂಹರಾಮರ ಅಪೂರ್ವವಾದ ಭಕ್ತಿ , ಸಜ್ಜನತೆ, ಸತ್ಯಸಂಧತೆ ಮೊದಲಾದುವನ್ನು ತುಂಬಾ ಹೊಗಳಿದರು. ಶ್ಯಾಮಲದಾಸನ ರೂಪ, ಶೀಲ ಮತ್ತು ಸುಲಕ್ಷಣತೆಯ ವರ್ಣನೆಗೈಯ್ದು ಜೂಠೀಬಾಯಿಯ ಸೌಭಾಗ್ಯದ ಕುರಿತು ಅವಳಿಗೆ ಶುಭಾಶಯವನ್ನಿತ್ತರು. ಮದನರಾಯನ ಪರಿವಾರವೆಲ್ಲ ಅವರ ವರ್ಣನೆಯನ್ನು ಕೇಳಿ ತುಂಬಾ ಸಂತಸಗೊಂಡಿತು. ನರಸಿಂಹರಾಮನ ನಿರ್ಧನತೆಯ ಕುರಿತು ಮದನರಾಯರು ತುಂಬಾ ಉತ್ಸಾಹಿತರಾಗಿ ಹೇಳಿದರು ಯಾವಾಗ ಕುಲಶೀಲಾದಿಗಳಲ್ಲಿ ಅವರು ಎಲ್ಲ ರೀತಿಯಿಂದ ಯೋಗ್ಯರಾಗಿದ್ದರೆ ಮತ್ತೆ ಧನದಚಿಂತೆ ಇಲ್ಲ. ಭಗವಂತನು ಸಾಕಷ್ಟು ಕೊಟ್ಟಿದ್ದಾನೆ; ಏಳೆಂಟು ಲಕ್ಷದ ಸಂಪತ್ತಿನಲ್ಲಿಯ ಒಂದೆರಡು ಲಕ್ಷ ಅವರಿಗೆ ಕೊಡುವುದರಿಂದ ಅವರ ಕಷ್ಟ ದೂರವಾಗುವುದು.

ಶ್ಯಾಮಲ ದಾಸನ ಮದುವೆ

ಬಡನಗರದ ಮದನ ಮೆಹತಾರವರ ಪುತ್ರಿಯ ಜೊತೆ ನರಸಿಂಹರಾಮನ ಪುತ್ರನ ಮದುವೆ ನಿಶ್ಚಯವಾದ ಸುದ್ದಿಯು ಜೂನಾಗಡದಲ್ಲಿ ವಾಯುವೇಗದಲ್ಲಿ ಹರಡಿತು. ಈ ಮಾತನ್ನು ಕೇಳಿ ನರಸಿಂಹರಾಮರನ್ನು ದ್ವೇಷಿಸುವ ಎಷ್ಟೋ ನಾಗರ ಬ್ರಾಹ್ಮಣರಿಗೆ ಚಳಿಜ್ವರಬಂದತಾಯಿತು. ದುಷ್ಟ ಜನರು ತಮ್ಮ ಮೂಗನ್ನೇ ಕತ್ತರಿಸಿಕೊಂಡು ಬೇರೆಯವರಿಗೆ ಅಪಶಕುನರಾಗುತ್ತಾರೆ ಎಂದು ಹೇಳುತ್ತಾರೆ. ಜೂನಾಗಡದ ಕೆಲವು ಬ್ರಾಹ್ಮಣರೂ ಇದೇ ನೀತಿಯಂತೆ ನರಸಿಂಹರಾಮರ ಪುತ್ರನ ವಿವಾಹದಲ್ಲಿ ವಿಘ್ನವನ್ನೊಡ್ಡಲು ನಿಶ್ಚಯಿಸಿದರು. ಅವರು ಸಾರಂಗಧರನನ್ನು ತಮ್ಮ ಮುಖಂಡನಾಗಿಸಿಕೊಂಡು ಒಂದು ಪತ್ರವನ್ನು ಮದನ ಮೆಹತಾರವರ ಹೆಸರಿಗೆ ಬರೆದು ಬ್ರಾಹ್ಮಣನ ಕೈಯಲ್ಲಿ ಕಳಿಸಿದರು.

ದೀಕ್ಷಿತರು ಬಡನಗರಕ್ಕೆ ಮರಳಿದಂದಿನಿಂದ ಮದನ ಮೆಹತಾರವರು ವಿವಾಹದ ಸಿದ್ಧತೆಯನ್ನು ಪ್ರಾರಂಭಿಸಿದರು. ಮನೆ ಅಲಂಕರಿಸಲಾಗುತ್ತಿತ್ತು, ದಿಬ್ಬಣವನ್ನು ಉಳಿಸಿ ಕೊಳ್ಳಲು ಸ್ಥಳವನ್ನು ಸಿದ್ಧಮಾಡಲಾಗುತ್ತಿತ್ತು; ದಿಬ್ಬಣಿಗರಿಗೆ ಭೋಜನಾದಿ ವ್ಯವಸ್ಥೆ ಮಾಡಲಾಗುತ್ತಿತ್ತು, ಬಾಜಾ-ಬಜಂತ್ರಿಗಳನ್ನು ಗೊತ್ತುಪಡಿಸ ಲಾಯಿತು. ರಾಜ್ಯದ ದೊಡ್ಡ-ದೊಡ್ಡ ಶ್ರೀಮಂತರಿಗೆ, ಗಣ್ಯರಿಗೆ ಹಾಗೂ ನೆಂಟರಿಷ್ಟರಿಗೆ ಆಹ್ವಾನ ಕೊಡಲಾಗಿತ್ತು. ಏಕೈಕ ಪುತ್ರಿಯ ವಿವಾಹವನ್ನು ತುಂಬಾ ವಿಜೃಂಭಣೆಯಿಂದ ಮಾಡುವ ವಿಚಾರದಿಂದ ಎಲ್ಲ ವ್ಯವಸ್ಥೆಗಳನ್ನೂ ಎಚ್ಚರಿಕೆಯಿಂದ ಮಾಡಲಾಗುತ್ತಿತ್ತು. ಇದೇ ಸಮಯಕ್ಕೆ ಜೂನಾಗಡದ ಬ್ರಾಹ್ಮಣ ಬಡನಗರಕ್ಕೆ ತಲುಪಿ ಮದನ ಮೆಹತಾರವರಿಗೆ ಪತ್ರವನಿತ್ತನು. ಪತ್ರದಲ್ಲಿ ಹೀಗೆ ಬರೆದಿತ್ತು-

ಶ್ರೀಯುತ ಮದನರಾಯರೇ !

ನಿಮ್ಮ ಏಕೈಕ ಪುತ್ರಿಯ ಸಂಬಂಧವನ್ನು ಕುದುರಿಸಲು ನಿಮ್ಮ ಪುರೋಹಿತರಾದ ದೀಕ್ಷಿತರು ಜೂನಾಗಡಕ್ಕೆ ಬಂದಿದ್ದರು. ಜೂನಾಗಡದಲ್ಲಿ ಏಳೂನೂರು ನಮ್ಮ ಮನೆಗಳಿವೆ ಎಂಬುದು ನಿಮಗೆ ತಿಳಿದೇ ಇದೆ. ಆದರೆ ಅವರು ಯಾವುದೇ ಯೋಗ್ಯ ಮನೆತನದಲ್ಲಿ ಸಂಬಂಧವನ್ನು ಮಾಡದೆ ಅತ್ಯಂತ ನಿರ್ಧನ ಮತ್ತು ಜಾತಿಚ್ಯುತ ನರಸಿಂಹರಾಮನ ಪುತ್ರನೊಂದಿಗೆ ಸಂಬಂಧವನ್ನು ನಿಶ್ಚಯಿಸಿದರು. ಈ ಸ್ಥಳವು ಖಂಡಿತವಾಗಿ ನಿಮಗೆ ಯೋಗ್ಯವಾದುದಲ್ಲ ಎಂಬುದನ್ನು ವಿನಮ್ರರಾಗಿ ನಿಮಗೆ ತಿಳಿಸುತ್ತಿದ್ದೇವೆ. ಮನೆ-ಮನೆ ಭಿಕ್ಷೆ ಬೇಡುವ ಮತ್ತು ಸಾಧು-ಬೈರಾಗಿಗಳ ಸಂಗದಲ್ಲಿರುವ ಮನುಷ್ಯನು ಬಡನಗರದ ದಿವಾನರ ಸಂಬಂಧಿ ಹೇಗಾಗ

ಬಲ್ಲನು ? ಆದ್ದರಿಂದ ನೀವು ಆ ಸಂಬಂಧವನ್ನು ಕಡಿದು ಬೇರೆ ಸುಯೋಗ್ಯ ವರನನ್ನು ಹುಡುಕಿರಿ, ಇದರಿಂದ ನಿಮ್ಮ ಮರ್ಯಾದೆಗೆ ಕಲಂಕತಾಗದಿರಲಿ ''**ವಿಜ್ಞೇಷು ಕಿಂ ಬಹುನಾ**''

ನಿಮ್ಮವನೇ ಆದ
ಸಾರಂಗಧರ

ಜೂನಾಗಡ ಜಾತಿಮಂಡಲದ ಪರವಾಗಿ-

ಪತ್ರವನ್ನೋದಿ ಮದನ ಮೆಹತಾ ತುಂಬಾ ಚಿಂತೆಯಲ್ಲಿ ಮುಳುಗಿದರು. ಸಂಬಂಧ ನಿಶ್ಚಿತವಾಗಿದೆ, ವಿವಾಹದ ದಿನ ಗೊತ್ತುಪಡಿಸಲಾಗಿದೆ, ವಿವಾಹದ ಎಲ್ಲ ಸಿದ್ಧತೆಯು ಆಗಿ ಹೋಗಿವೆ; ಎಲ್ಲರಿಗೆ ಆಮಂತ್ರಣ ಕಳಿಸಲಾಗಿದೆ ಈಗೇನು ಮಾಡುವುದು ಎಂದು ಯೋಚಿಸುತ್ತಿದ್ದರು. ಅಕಸ್ಮಾತ್ತಾಗಿ ಅವರಿಗೆ ಒಂದು ಯುಕ್ತಿ ಹೊಳೆಯಿತು. ಒಂದು ಪತ್ರವನ್ನು ಜೂನಾಗಡಕ್ಕೆ ಕಳಿಸುವುದು, ಅದಕ್ಕನುಕೂಲವಾಗಿ ಒಂದು ವೇಳೆ ನರಸಿಂಹರಾಮರು ಬಂದರೆ ಆಗ ವಿವಾಹ ಮಾಡಿಕೊಡುವುದರಲ್ಲಿ ಯಾವ ಅಡ್ಡಿಯೂ ಇಲ್ಲ. ಅಲ್ಲದೆ ಹಾಗೆ ವ್ಯವಸ್ಥೆ ಮಾಡಲಾಗದಿದ್ದರೆ ತಾವೇ ಬರಲಾರರು. ಎರಡೂ ಕಡೆಯಿಂದ ನನ್ನ ಗೌರವ ಉಳಿದೀತು. ಎಂದು ಯೋಚಿಸಿ ಕೂಡಲೇ ಪತ್ರ ಬರೆದು ಓರ್ವ ಬ್ರಾಹ್ಮಣನ ಕೈಯಲ್ಲಿ ನರಸಿಂಹರಾಮರ ಬಳಿಗೆ ಕಳಿಸಿ ಕೊಟ್ಟರು. ಪತ್ರದಲ್ಲಿ ಹೀಗೆ ಬರೆದಿತ್ತು-

ಸಿದ್ಧಿಶ್ರೀ ಅನೇಕ ಶುಭೋಪಮಾಯೋಗ್ಯ ಶ್ರೀಯುತ ನರಸಿಂಹರಾಮ ಮೆಹತಾರವರಿಗೆ ಬಡನಗರದಿಂದ ಮದನ ಮೆಹತಾನ ಅನಂತ ನಮಸ್ಕಾರಗಳು.

ತರುವಾಯ-ನಿಮ್ಮ ಸುಪುತ್ರ ಚಿ॥ ಶ್ಯಾಮಲದಾಸದೊಂದಿಗೆ ನನ್ನ ಪುತ್ರಿ ಚಿ॥ ಸೌ॥ ಜೂಠೀಬಾಯಿಯ ಶುಭ ವಿವಾಹವು ಶುಭ ತಿಥಿಯಾದ ಮಾಘ ಶುಕ್ಲ ಪಂಚಮಿಗೆ ಆಗುವುದೆಂದು ನಿಶ್ಚಯಿಸಲಾಗಿದೆ, ಆದುದರಿಂದ ನೀವು ಮೇಲೆ ಹೇಳಿದ ದಿನದಂದು ಆನೆ, ಕುದುರೆ, ರಥ ಮತ್ತು ಕಾಲಾಳು ಸಹಿತ ಒಂದು ಚತುರಂಗ ಬೃಹತ್ ದಿಬ್ಬಣದೊಂದಿಗೆ ಆಗಮಿಸಿರಿ ಮತ್ತು ನನ್ನ ಗೌರವ-ಮರ್ಯಾದೆಗನುಸಾರವಾದ ವಸ್ತ್ರಾಭೂಷಣಗಳನ್ನು ತೆಗೆದುಕೊಂಡು ಬನ್ನಿ. ಒಂದೊಮ್ಮೆ ದಿಬ್ಬಣ ಮತ್ತು ವಸ್ತ್ರಾಭೂಷಣಗಳನ್ನು ನನ್ನ ಅಂತಸ್ತಿಗೆ ಅನುಕೂಲ ತರಲಾಗದಿದ್ದರೆ ನಾನು ನನ್ನ ಪುತ್ರಿಯ ವಿವಾಹವನ್ನು ಬೇರೆಕಡೆ ಮಾಡಲು ಬಾಧ್ಯನಾಗಬೇಕಾಗುತ್ತದೆ.

ನಿಮ್ಮವ
ಮದನರಾಯ

ಬಡನಗರದಿಂದ ಬ್ರಾಹ್ಮಣನು ಪತ್ರವನ್ನು ತಂದು ನರಸಿಂಹರಾಮನ ಕೈಗೆ ಕೊಟ್ಟನು. ಪತ್ರವನ್ನು ಓದಿ ಅವರು ಶ್ರೀಕೃಷ್ಣನ ಮಂದಿರಕ್ಕೆ ಹೋಗಿ ಕರತಾಳ ವನ್ನೆತ್ತಿಕೊಂಡು ಭಗವತ್ ಕೀರ್ತನೆ ಮಾಡತೊಡಗಿದರು. ಭಕ್ತನ ಕರೆಯನ್ನು ಕೇಳಿ ಭಗವಂತನು ಪ್ರಕಟನಾದನು. ಅವನು ಅಮೃತಮಯ ವಾಣಿಯಿಂದ ಕೇಳಿದನು-ಭಕ್ತಾ ! ನೀನು ನನ್ನನ್ನು ಏಕೆ ಆವಾಹಿಸಿದೆ ?

ಭಕ್ತರಾಜನು ಗದ್ಗದಿತನಾಗಿ ಒಡೆಯನ ಚರಣಗಳಲ್ಲಿ ಹೊರಳಾಡಿದನು. ಬಳಿಕ ಎದ್ದು ಅವರು ಪತ್ರವನ್ನು ಪ್ರಭುವಿನ ಕೈಗೆ ಕೊಟ್ಟರು. ಪತ್ರವನ್ನು ಓದಿ ಭಗವಂತನು-ಮಗೂ ! ಯಾವುದೇ ಚಿಂತೆ ಮಾಡಬೇಡ. ಇದೆಲ್ಲ ಜೂನಾಗಡದ ಬ್ರಾಹ್ಮಣರ ಹಂಚಿಕೆಯಾಗಿದೆ. ನಾನು ಸ್ವತಃ ನನ್ನ ಕುಲ-ಪರಿವಾರ ಸಹಿತ ನಾಗರರ ವೇಷ ಧರಿಸಿ ಎಲ್ಲ ವಸ್ತುಗಳೊಡನೆ ದಿಬ್ಬಣದಲ್ಲಿ ಹಾಜರಿದ್ದು ನಿನ್ನ ಕಾರ್ಯವನ್ನು ಪಾರುಗೊಳಿಸುವೆನು ಎಂದು ಹೇಳಿ ಅಂತರ್ಧಾನನಾದನು. ಭಗವಂತನ ಭಕ್ತವತ್ಸಲತೆ ಧನ್ಯವಾಗಿದೆ !

ನರಸಿಂಹರಾಮರು ಬಡನಗರದ ಬ್ರಾಹ್ಮಣನ ಉಚಿತ ಸತ್ಕಾರಗೈದು, ಕಳಿಸಿಕೊಟ್ಟು ತಾನು ನಿಶ್ಚಿಂತರಾಗಿ ಭಜನೆ-ಪೂಜೆಯಲ್ಲಿ ತೊಡಗಿದರು. ಮಾಘಶುಕ್ಲ ಪಾಡ್ಯದ ದಿನ ಅವರು ಹಣೆಗೆ ತಿಲಕವಿಟ್ಟು, ಕೈಯಲ್ಲಿ ಕರತಾಳವನ್ನೆತ್ತಿಕೊಂಡು, ಐದು ಹತ್ತು ಸಾಧುಗಳೊಂದಿಗೆ ಮಗನ ವಿವಾಹಕ್ಕಾಗಿ ಜೂನಾಗಡದಿಂದ ಹೊರಟರು. ಮಾಣಿಕಗೌರಿಯು ಪತಿಯಲ್ಲಿ ಹೇಳುತ್ತಾಳೆ-ಸ್ವಾಮಿ ! ಇದೇ ಸಾಮಗ್ರಿಯನ್ನು ಎತ್ತಿಕೊಂಡು ನೀವು ಓರ್ವ ದಿವಾನನ ಮನೆಗೆ ಹೋಗಿರುವಿರಾ? ಎಲ್ಲಾದರು ಅಪಮಾನಿತರಾಗಿ ಬಡನಗರದಿಂದ ಮಗನ ಮದುವೆ ಮಾಡುವ ಬದಲು ಹೇಗೆ ಹೋದೆವೋ ಹಾಗೆ ಹಿಂದಕ್ಕೆ ಬರಲಾರೆವಲ್ಲ! ನರಸೀಮೆಹತಾರವರು ಸರಳವಾಗಿ- ಪ್ರಿಯೆ! ನೀನು ತುಂಬಾ ಅಧೀರಳಾಗುತ್ತಿಯೇ! ನನ್ನ ಮಗನೇ ಅಲ್ಲ ಎಂದು ನಾನು ತಿಳಿದುಕೊಂಡ ಮೇಲೆ ನನಗೆ ಅಪಮಾನವೆಲ್ಲಿ ? ಇದರ ಚಿಂತೆ ಏಕೆ? ಎಂದು ಉತ್ತರಿಸಿ ಯಾರ ಮಗನಾಗಿದ್ದಾನೋ ಅವನೇ ಎಲ್ಲ ವ್ಯವಸ್ಥೆ ಮಾಡಿಯಾನು ಮತ್ತು ಅಪಮಾನದಿಂದ ಬದುಕುಳಿಯುವ ಚಿಂತೆ ಮಾಡುವನು.

ಜೂನಾಗಡದ ನಾಗರ ಬ್ರಾಹ್ಮಣರಿಗೆ ಈ ವಿಚಿತ್ರ ದಿಬ್ಬಣವನ್ನು ಕಂಡು ಹಿಡಿಸಲಾರದಷ್ಟು ಆನಂದವಾಯಿತು. ಈಗ ನಮ್ಮ ಕಾರ್ಯ ಯಶಸ್ವೀಯಾಯಿತು ಎಂದು ಯೋಚಿಸಿದರು. ನರಸಿಂಹರಾಮ ಮತ್ತು ಅವರ ಜೊತೆ ದೀಕ್ಷಿತರ

ಎಲ್ಲ ಉದ್ದಂಡತೆ ಸಹಜವಾಗಿ ದೂರವಾಗಬಹುದು. ಈ ಭಿಕಾರಿಯ ಧೈರ್ಯ ನೋಡಿರಲ್ಲ! ಇಂತಹ ಕಾವಿಬಟ್ಟೆಯ ಭಿಕ್ಷುಕರ ತಂಡದೊಂದಿಗೆ ಹೊರಟಿದ್ದಾನೆ ದೀವಾನರ ಪುತ್ರಿಯ ಮದುವೆ ಮಾಡಿಕೊಳ್ಳಲು! ಈ ಬಾರಿ ಇವನ ಪೊಳ್ಳುತನ ಬಯಲಾಗುವುದು. ಬಡನಗರದಲ್ಲಿ ಜನರು ಲಂಗೋಟಿ ಮತ್ತು ಕರತಾಳವನ್ನು ಕಿತ್ತುಕೊಂಡು ಇವನ ಪೂಜೆ ಮಾಡಿದಾಗ ಇವನು ಎಂದೆಂದಿಗೂ ಕೀರ್ತನೆ ಮರೆತುಬಿಡುವನು ಮತ್ತು ನಾವು ಸುಖವಾಗಿ ನಿದ್ದೆ ಮಾಡಬಹುದು ಎಂದು ತಮ್ಮ ಮನಸ್ಸಿಗೆ ತೋಚಿದಂತೆ ಆಡಿಕೊಳ್ಳತ್ತಿದ್ದರು.

ಆದರೆ ಭಕ್ತರಾಜರಿಗೆ ಯಾವ ಚಿಂತೆ ಇದೆ! ಅವರಾದರೋ ಕೀರ್ತನೆ ಮಾಡುತ್ತಾ ಹೋಗುತ್ತಾ ಇದ್ದರು. ಸ್ವಲ್ಪ ದೂರ ಹೋದಾಗ ಅವರು ನೋಡಿದರು- ಒಂದು ಭಾರೀ ದೊಡ್ಡ ದಿಬ್ಬಣ ಡೇರೆ ಹಾಕಿ ತಂಗಿತ್ತು. ಹತ್ತಿರ ಹೋಗಿ ಅವರು ಸ್ವತಃ ಭಗವಂತನನ್ನು ಗೃಹಸ್ಥನ ರೂಪದಲ್ಲಿ ನೋಡಿದರು ಮತ್ತು ಭಕ್ತಿಯಿಂದ ವಂದಿಸಿಕೊಂಡರು. ಮತ್ತೆ ಭಕ್ತರಾಜನು- ಭಗವಂತಾ! ನೀನು ನನಗಾಗಿ ಇಷ್ಟು ಬೃಹತ್ ರೂಪ ಧರಿಸಿ ನನ್ನ ಕಾರ್ಯವನ್ನು ಪಾರುಗಾಣಿಸುವಿರಿ ಎಂಬುದರ ಕಲ್ಪನೆಯೂ ನಾನು ಮಾಡುತ್ತಿರಲಿಲ್ಲ .

ಮಗೂ! ಇದರಲ್ಲಿ ಆಶ್ಚರ್ಯದ ಮಾತಾದರೂ ಏನಿದೆ ? ನಾನಾದರೊ ಸದಾಕಾಲ ಭಕ್ತರ ಅಧೀನನಾಗಿರುತ್ತೇನೆ. ಭಕ್ತರು ಯಾವ ಭಾವದಿಂದ ನನ್ನನ್ನು ಭಜಿಸುತ್ತಾರೋ ನಾನು ಅದಕ್ಕನುಸಾರವಾಗಿ ರೂಪವನ್ನು ಧರಿಸಬೇಕಾಗುತ್ತದೆ. ನಾನು ಗೋಪಿಯರ ಭಾವನೆಗನುಸಾರ ಸ್ವರೂಪವನ್ನು ಧರಿಸಿ ಅವರ ಇಚ್ಛೆಯನ್ನು ಪೂರ್ತಿ ಮಾಡಿಲ್ಲವೇ ? ಬಾಲಕ ಭಕ್ತ ಪ್ರಹ್ಲಾದನಿಗೆ ವಿಷವುಣಿಸುವಾಗ ನಾನು ವಿಷಸ್ವರೂಪವನ್ನಾಂತು ಅವನನ್ನು ರಕ್ಷಿಸಲಿಲ್ಲವೆ ? ಭಕ್ತಾ ! ನನ್ನ ಭಕ್ತರಿಗಾಗಿಯೂ ಕೆಲಸ ಮಾಡುವುದಕ್ಕೆ ನನಗೆ ದುಷ್ಕರವಲ್ಲ ಎಂದು ಭಗವಂತನು ನರಸಿಂಹರಾಮರನ್ನು ಸಮಾಧಾನ ಪಡಿಸಿದನು.

ಅಲ್ಲಿಂದ ದಿಬ್ಬಣವು ಅಲಂಕೃತವಾಗಿ ಹೊಟಿತು. ಅದು ಆನೆ, ಕುದುರೆ, ರಥ ಮತ್ತು ಕಾಲಾಳು ಹೀಗೆ ಚತುರಂಗ ದಿಬ್ಬಣವಾಗಿತ್ತು. ಅನೇಕ ವಾದ್ಯ-ವಾದನಗಳು ಮೊಳಗುತ್ತಿದ್ದುವು. ಎಷ್ಟೋ ಬಂಡಿಗಳ ಮೇಲೆ ಡೇರೆಗಳು- ಅಲಂಕರಣ ಸಾಮಗ್ರಿ ಹೇರಿತ್ತು. ಸ್ವಯಂ ದ್ವಾರಕಾಧೀಶ ಭಗವಂತನ ದಿಬ್ಬಣದಲ್ಲಿ ಯಾವ ವಸ್ತುಗಳ ಕೊರತೆ ಇರಬಲ್ಲದು ? ದಿಬ್ಬಣವು ನಿಶ್ಚಿತ ಸಮಯಕ್ಕೆ ಬಡನಗರಕ್ಕೆ ತಲುಪಿ. ಒಂದು ಸ್ಥಾನದಲ್ಲಿ ಬೀಡುಬಿಟ್ಟಿತು. ದಿಬ್ಬಣದ ವೈಭವವನ್ನು

ಕಂಡು ಯಾರೋ ಚಕ್ರವರ್ತಿ ಮಹಾರಾಜರು ತಮ್ಮ ಪುತ್ರನ ವಿವಾಹವನ್ನು ಮಾಡಲು ಬಂದಂತಿದೆ ಎಂದು ಎಲ್ಲರೂ ಆಡಿಕೊಳ್ಳುತ್ತಿದ್ದರು.

ಇತ್ತ ಮದನ ಮಹತಾರವರೂ ತಮ್ಮ ಘನಸ್ತಿಕೆಗನುಸಾರ ವಿವಾಹದ ಎಲ್ಲ ಸಿದ್ಧತೆಗಳನ್ನು ಮಾಡಿದ್ದರು. ದೂರ-ದೂರದ ಬಂಧು-ಬಾಂಧವರು ಮತ್ತು ಶ್ರೀಮಂತ ಮಿತ್ರರೂ ವಿವಾಹದಲ್ಲಿ ಪಾಲ್ಗೊಳ್ಳಲು ಬಂದು ನೆರೆದಿದ್ದರು. ದಿಬ್ಬಣದ ಬರುವಿಕೆಯನ್ನು ಕೇಳಿ ಅವರು ಎಲ್ಲರೊಂದಿಗೆ ಸ್ವಾಗತಿಸಲು ದಿಬ್ಬಣ ಬೀಡು ಬಿಟ್ಟಿದ್ದ ಸ್ಥಳಕ್ಕೆ ಬಂದರು. ನಾರಾಯಣೇ ದಿಬ್ಬಣದ ಅಪೂರ್ವ ಶೋಭೆಯನ್ನು ನೋಡಿ ಅವರು ಆಶ್ಚರ್ಯಚಕಿತರಾದರು. ಇಂತಹ ದಿಬ್ಬಣವನ್ನು ರಾಜ- ಮಹಾರಾಜರೂ ತರಲು ಸಾಧ್ಯವಿಲ್ಲವೆಂದು ಯೋಚಿಸಿದರು. ನನ್ನಲ್ಲಿಗೆ ವಿವಾಹ ಮಾಡಲು ಬಂದಿರುವ ಮನುಷ್ಯನು ಸಾಧಾರಣನಾಗಲಾರನು. ನಾನು ಅಭಿಮಾನ ಪೂರ್ವಕ ಪತ್ರ ಬರೆದು ಕಳಿಸಿ ದೊಡ್ಡ ತಪ್ಪುಮಾಡಿದೆ. ಈ ದಿಬ್ಬಣಕ್ಕೆ ಭೋಜನಾದಿಗಳ ಮೂಲಕ ಸತ್ಕಾರ ಮಾಡುವುದಿರಲಿ, ಬೇಕಾದಷ್ಟು ನೀರೂ ಕೂಡ ಕೊಡಲಾರೆನು. ಈ ಪ್ರಕಾರ ಯೋಚಿಸುತ್ತ ಅವರು ಅವಸರ-ಅವಸರವಾಗಿ ನರಸಿಂಹ ಮೆಹತಾರವರ ಭೇಟಿಗೆ ಮುಂದರಿದರು. ಭಗವಾನ್ ಶ್ರೀಕೃಷ್ಣನೇ ಬಿಡದಿಯ ಮುಂದೆ ಬಂದಾಗ ಇದೇ ಬೀಗರ ಬಿಡದಿಯಾಗಿರಬೇಕೆಂದು ಅನುಮಾನಪಟ್ಟರು. ಮದನರಾಯರು ಭೇಟಿಗೆ ಬಂದಿರುವ ವಾರ್ತೆಯನ್ನು ಕಾಪಿನ ಭಟರಲ್ಲಿ ಹೇಳಿ ಕಳಿಸಿದರು. ಆಜ್ಞೆಯನ್ನು ಪಡೆದು ಕಾವಲುಗಾರನು ಅವರನ್ನು ಒಳಗೆ ಕರಕೊಂಡು ಹೋದನು. ಅವರು ಭಗವಂತನನ್ನು ಕಂಡು ನರಸಿಂಹರಾಯರೆ ! ನಾನು ನಮಸ್ಕರಿಸುತ್ತಿದ್ದೇನೆ ಎಂದು ವಿನಂತಿಸಿಕೊಂಡರು.

ಭಗವಂತನು ಕೊಂಚ ವಿನೋದಭಾವವನ್ನು ತಂದುಕೊಂಡು ಹೇಳಿದನು -ಮದನರಾಯರೇ ! ನಾನಾದರೋ ಅವರ ಓರ್ವ ಕನಿಷ್ಠ ಸೇವಕನಾಗಿದ್ದೇನೆ. ನಡಿರೀ ನಾನು ನಿಮ್ಮನ್ನು ಅವರ ಬಳಿಗೆ ಕರಕೊಂಡು ಹೋಗುತ್ತೇನೆ.

ಭಗವಂತನು ಅವರನ್ನು ಕರಕೊಂಡು ಭಕ್ತರಾಜರ ಬಳಿಗೆ ಬಂದನು. ಭಕ್ತರಾಜರು ಅತ್ಯಂತ ಸಾಧಾರಣ ವೇಷದಲ್ಲಿ ಕೆಲವು ಭಕ್ತರೊಂದಿಗೆ ಹರಿಕೀರ್ತನೆಯನ್ನು ಮಾಡುತ್ತಿದ್ದರು. ಅವರು ಭಜನೆಯಲ್ಲಿ ಹೊರ ಜಗತ್ತಿನ ಯಾವುದೇ ಎಚ್ಚರವಿಲ್ಲದಷ್ಟು ತನ್ಮಯರಾಗಿದ್ದರು. ಇವರ ಈ ಸ್ಥಿತಿ ಮತ್ತು ಅತುಲ ಐಶ್ವರ್ಯದ ನಡುವೆಯೂ ಈ ಸಾದಾತನವನ್ನು ಕಂಡು ಮದನ ಮೆಹತಾರವರ ಅಭಿಮಾನವೆಲ್ಲ

ಚೂರಾಯಿತು. ಅವರು ಇಂತಹ ಸತ್ಪುರುಷರನ್ನು ಸಂಬಂಧಿಯಾಗಿ ಪಡೆದ ಬಗ್ಗೆ ತಮ್ಮ ಭಾಗ್ಯವನ್ನು ಹೊಗಳಿಕೊಂಡರು.

ಭಗವಂತನು ಭಕ್ತರಾಜರ ಧ್ಯಾನವನ್ನು ಭಂಗಗೈದು ಮದನರಾಯರ ಪರಿಚಯ ಮಾಡಿಸಿದರು. ಇಬ್ಬರೂ ಬೀಗರು ಪರಸ್ಪರ ನಮಸ್ಕಾರಗೈದು ಪ್ರೇಮ ಪೂರ್ವಕ ಆಲಿಂಗಿಸಿಕೊಂಡರು. ಕುಶಲ ಸಮಾಚಾರವಾದ ಬಳಿಕ ಮದನ ಮೆಹತಾರವರು ತಮ್ಮ ದುಡುಕಿನ ಬಗ್ಗೆ ಕ್ಷಮೆಯಾಚಿಸಿದರು. ಭಕ್ತರಾಜರೇ ! ನಿಮ್ಮೊಂದಿಗೆ ಸಂಬಂಧ ಬೆಳೆದ ಕಾರಣ ನಾನು ಇಂದು ಧನ್ಯನಾದೆನು ಎಂದು ವಿನಂತಿಸಿಕೊಂಡರು.

ಮೆಹತಾರವರೇ ! ಇದೆಲ್ಲ ಪ್ರಭುವಿನ ಕೃಪೆಯ ಪರಿಣಾಮವಾಗಿದೆ ಎಂದು ಭಕ್ತರಾಜರು ಉತ್ತರಿಸಿದರು.

ಮದನ ಮೆಹತಾರವರು ಭಗವಂತನೊಂದಿಗೆ ನರಸಿಂಹರಾಮರ ಯಥಾಶಕ್ತಿ ಸತ್ಕಾರಗೈದರು. ವಿಧಿಪೂರ್ವಕ ವರಪೂಜೆ ಮಾಡಿ ತನ್ನ ಕನ್ಯೆಯನ್ನು ದಾನ ಮಾಡಿದನು. ತುಂಬಾ ವೈಭವದೊಂದಿಗೆ ವಿವಾಹಕಾರ್ಯವೂ ಸಾಂಗವಾಗಿ ನಡೆಯಿತು. ಮದನ ಮೆಹತಾರವರು ವಸ್ತ್ರ ಆಲಂಕಾರ, ರತ್ನಾದಿ ಬಹುಮೂಲ್ಯ ವಸ್ತುಗಳನ್ನು ಬಳುವಳಿಯಾಗಿ ಕೊಟ್ಟು ಮಗಳನ್ನು ಕಳಿಸಿಕೊಟ್ಟರು.

ಈ ಪ್ರಕಾರ ಪ್ರಣತಪಾಲ ಭಗವಂತನು ಭಕ್ತನ ಪುತ್ರ ಶ್ಯಾಮಲದಾಸನ ವಿವಾಹವನ್ನು ಯಶಸ್ವಿಯಾಗಿಸಿ ಸಕುಟುಂಬ ಸಹಿತ ಅಂತರ್ಹಿತನಾದನು.

ಪುತ್ರನ ಮೃತ್ಯು

ಇಂದು ಧನವಂತನಾದ ಮನುಷ್ಯನು ನಾಳೆ ಬಡವನಾಗುತ್ತಾನೆ ; ಇಂದು ಹೃಷ್ಟ-ಪುಷ್ಟ ನಿರೋಗಿಯಾದವನು ನಾಳೆ ಅನೇಕ ರೋಗಗಳಿಗೆ ತುತ್ತಾಗುತ್ತಾನೆ. ಅಚಾನಕವಾಗಿ ಈ ಜೀವನವನ್ನು ಕಳೆದುಕೊಳ್ಳುತ್ತಾನೆ. ಅದಕ್ಕಾಗಿ ನಮ್ಮ ಪೂರ್ವಜ ಗುರುಗಳು, ಮಹಾತ್ಮರು ಈ ಪ್ರಪಂಚದ ನಶ್ವರತೆಯನ್ನು ತೋರಿಸಲು 'ಅಭ್ರಚ್ಛಾಯೆ' ಯ ಉಪಮೆ ಕೊಟ್ಟಿರುವರು. ಈ ಜಗತ್ತು ಒಂದು ಕ್ಷಣವೂ ಕೂಡ ಒಂದೇ ಸ್ಥಿತಿಯಲ್ಲಿ ಇರುವುದಿಲ್ಲ - ಸದಾಕಾಲ ಬದಲಾಗುತ್ತಿರುತ್ತದೆ. ಪ್ರಪಂಚದ ಸ್ಥಿತಿಯು ಹೀಗಿರುವಾಗ ಜಗತ್ತಿನಲ್ಲಿ ಉಂಟಾದ ಬೇರೆ ವಸ್ತುಗಳ ಹಾಗೂ ಜೀವಿಗಳ ಅವಸ್ಥೆಯ ಬಗ್ಗೆ ಏನು ಹೇಳಬಹುದು ?

ಭಕ್ತರಾಜ ನರಸೀಮೆಹತಾರವರ ಮೇಲೆಯೂ ಈ ಸಂಸಾರಚಕ್ರವು ಎರಗಿತು. ಒಂದು ದಿನ ಶ್ಯಾಮಲದಾಸನು ವಿವಾಹವಾಗಿ ಕೆಲವೇ ಸಮಯದಲ್ಲಿ ಅಕಸ್ಮಾತ್ತಾಗಿ ಈ ಲೋಕದಿಂದ ಎಂದೆಂದಿಗೂ ಅಗಲಿದನು.

ಆದರೆ ಪ್ರಪಂಚದಲ್ಲಿದ್ದರೂ ಕೂಡ ಸಂಸಾರ-ಸಾಗರ ಉತ್ತಾಲ-ತರಂಗಗಳ ದ್ವಾರಾ ಅಲ್ಲೋಲ ಕಲ್ಲೋಲವಾದರೂ ಭಗವಂತನ ನಿಜಭಕ್ತರು ಅದರ ಹೊಡೆತದಿಂದ ದೂರವಿರುತ್ತಾರೆ. ಅಲ್ಲದೆ ಸಾಂಸಾರಿಕ ದುಃಖಗಳನ್ನು ಅವರು ಭಗವತ್ ಕೃಪೆಯೆಂದು ತಿಳಿದುಕೊಂಡು ತುಂಬಾ ಉಲ್ಲಾಸದಿಂದ ಅದನ್ನು ತಮ್ಮದಾಗಿಸಿ ಕೊಳ್ಳುತ್ತಾರೆ. ಏಕೆಂದರೆ ಅವರ ದೃಷ್ಟಿಯಲ್ಲಿ ದುಃಖವು ಭಗವತ್ ಪ್ರೇಮವನ್ನು ಇನ್ನೂ ಹೆಚ್ಚು ಪ್ರಗಾಢವಾಗಿಸುತ್ತದೆ. ಇದೇ ಕಾರಣದಿಂದ ಕುಂತಿಯು ಭಗವಂತನಲ್ಲಿ 'ನೀನು ನನ್ನ ಮೇಲೆ ಪ್ರಸನ್ನನಾಗಿದ್ದರೆ ನನಗೆ ಸದಾಕಾಲ ದುಃಖಗಳನ್ನೇ ಕೊಡು' ಎಂಬ ವರವನ್ನು ಬೇಡಿದ್ದಳು. ಹಾಗಿರುವಾಗ ನರಸೀಮೆಹತಾರವರಿಗೆ ದುಃಖವೇಕೆ ಆಗುತ್ತದೆ ? ಅವರಾದರೋ ಮೊದಲೇ ಎಲ್ಲವೂ ಭಗವಂತನದೆಂದು ತಿಳಿದುಕೊಂಡಿದ್ದರು ಮತ್ತು ಕೇವಲ ಭಗವಂತನನ್ನೇ ತನ್ನದಾಗಿಸಿ ಕೊಂಡಿದ್ದರು. ಭಗವಾನ್ ಶ್ರೀಕೃಷ್ಣನ ಭಜನೆಯನ್ನು ನಿರಂತರ ಮಾಡುತ್ತಾ-ಮಾಡುತ್ತಾ ಅವರ ಹೃದಯ ಭಗವನ್ಮಯವಾಗಿ ಹೋಗಿತ್ತು. ಅವರು ಭಗವದ್ಭಕ್ತಿರೂಪೀ ನೌಕೆಯ ಮೂಲಕ ದುಸ್ತರ ಶೋಕಸಾಗರವನ್ನು ಪಾರಾಗಿಹೋಗಿದ್ದರೋ ಎಂಬತಿಂದ್ದರು. ಏಕೈಕ ಪುತ್ರನ ಮೃತ್ಯು ಹಾಗೂ ನವವಿವಾಹಿತಾ ಸೊಸೆಯ ವೈಧವ್ಯದಂತಹ ಮಹಾನ್ ಸಾಂಸಾರಿಕ ದುಃಖಗಳಿಂದ

ಅವರು ಲೇಶಮಾತ್ರವೂ ವ್ಯಥಿತರಾಗಲಿಲ್ಲ. ಅಲ್ಲದೆ ಪುತ್ರ ಶೋಕಾಕುಲ ಮಾಣಿಕಗೌರಿಗೆ ಸಾಂತ್ವನ ನೀಡುತ್ತಾ ಈ ಪದವನ್ನು ಹಾಡಿದರು.

ಭಲು' ಥಯು' ಭಾಂಗಿ ಜಂಜಾಲ । ಸುಖೆ ಭಜೀಶುಂ ಶ್ರೀಗೋಪಾಲ ॥

(ಜಂಜಡ ಕಳೆಯಿತು ಒಳ್ಳೆದಾಯಿತು. ಇನ್ನು ಸುಖವಾಗಿ ಗೋಪಾಲನನ್ನು ಭಜಿಸಬಹುದು).

ಪತಿಯ ಇಂತಹ ದೃಢತೆಯನ್ನು ಕಂಡು ಮತ್ತು ಅವರ ಉಪದೇಶದಿಂದ ಪ್ರಭಾವಿತಳಾಗಿ ಮಾಣಿಕಗೌರಿಯ ಶೋಕವೂ ದೂರವಾಯಿತು. ಪತಿ-ಪತ್ನಿಯರಿಬ್ಬರೂ ಭಗವಾನ್ ಶ್ರೀಕೃಷ್ಣನ ಕೃಪೆಯಿಂದ ಈ ಘಟನೆಯನ್ನು ಪೂರ್ಣವಾಗಿ ಮರೆತು ಆನಂದಪೂರ್ವಕ ಭಗವದ್ಭಜನೆಯಲ್ಲಿ ಮತ್ತು ಸಾಧುಸಂಗದಲ್ಲಿ ಹಿಂದಿನಂತೆ ಜೀವನ ಕಳೆಯಲು ಪ್ರಾರಂಭಿಸಿದರು.

ಪಿತೃ ಶ್ರಾದ್ಧ

ಪುತ್ರವಿಯೋಗದ ಬಳಿಕ ಅಂದಾಜು ಆರು ತಿಂಗಳಲ್ಲಿ ಪಿತೃ ಪಕ್ಷ ಬಂತು. ಗುಜರಾತ-ಕಾಠಿಯಾವಾಡಗಳಲ್ಲಿ ಪ್ರಾಯಶಃ ಎಲ್ಲ ಜನರು ಪಿತೃಗಳ ಉದ್ದೇಶದಿಂದ ಮಹಾಲಯ ಶ್ರಾದ್ಧವನ್ನು ವಿಧಿಪೂರ್ವಕ ಮಾಡಿ, ಪಿಂಡದಾನ ಗೈದು, ಬ್ರಾಹ್ಮಣ ಭೋಜನ ಮಾಡಿಸುತ್ತಾರೆ. ನರಸಿಂಹರಾಮರ ತಂದೆಯ ಶ್ರಾದ್ಧತಿಥಿ ಸಪ್ತಮಿ ಯಾಗಿತ್ತು. ಅಣ್ಣ ವಂಶೀಧರನು ಆ ದಿನ ಶ್ರಾದ್ಧ ಮಾಡಲು ನಿಶ್ಚಯಿಸಿ, ಒಂದು ದಿನ ಮೊದಲೇ ತಮ್ಮ ಜಾತಿ-ಸಮುದಾಯಕ್ಕೆ ಭೋಜನಕ್ಕಾಗಿ ನಿಮಂತ್ರಣ ಕೊಟ್ಟನು. ಅವನು ಕುಲಪದ್ಧತಿಯಂತೆ ನರಸಿಂಹರಾಮನ ಮನೆಗೂ ನಿಮಂತ್ರಣ ಕೊಡಲು ಬಂದನು. ನರಸಿಂಹ ! ನಾಳೆ ತಂದೆಯವರ ಶ್ರಾದ್ಧತಿಥಿಯಾಗಿದೆ; ಆದ್ದರಿಂದ ನಾನು ನಿಮಗೆ ಸಕುಟುಂಬ ಭೋಜನಕ್ಕಾಗಿ ನಿಮಂತ್ರಣ ಕೊಡುತ್ತಿದ್ದೇನೆ. ನಿನ್ನ ಪತ್ನಿಯನ್ನು ಇಂದೇ ಕಳಿಸು ; ಏಕೆಂದರೆ ಅಲ್ಲಿ ಅನೇಕ ಕೆಲಸ-ಕಾರ್ಯ ವಿರಬಹುದು. ನೀನೂ ಕೂಡ ಬೆಳಿಗ್ಗೆಯೇ ಏಳು ಗಂಟೆಗೆ ಬಂದು ಬಿಡು. ಬೈರಾಗಿಗಳ ಗುಂಪಿನಲ್ಲಿ ಒಂದು ದಿನ ಹೋಗಬೇಡ.

ನರಸೀಮೆಹತಾರವರು ತುಂಬಾ ಶಾಂತ ಚಿತ್ತರಾಗಿ ಉತ್ತರಿಸಿದರು - ಅಣ್ಣಾ ! ಸಾಧು ಸಂತರಾದರೋ ನನಗೆ ಪ್ರಾಣಗಳಿಂದಲೂ ಪ್ರಿಯರಾಗಿದ್ದಾರೆ. ಆದ್ದರಿಂದ ನಾನಾದರೋ ಸಾಧುಗಳ ಸೇವೆ ಮಾಡಿಯೇ ಬರುತ್ತೇನೆ. ನನ್ನ ಪತ್ನಿಯೂ ಕೂಡ ಭಗವಂತನಿಗೆ ನೈವೇದ್ಯ ಸಿದ್ಧಗೊಳಿಸಿ ನಂತರ ನಾಳೆಯೇ ಬರುತ್ತಾಳೆ.

ಆಹಾ ! ಭಿಕ್ಷೆಬೇಡಿ ಸಾಧುಸೇವೆ ಮಾಡುವ ದಂಭವಿರಿಸಿಕೊಂಡವನಿಗೆ ಇಷ್ಟೊಂದು ಗರ್ವವೇ ! ಒಂದು ವೇಳೆ ನೀನು ಇಷ್ಟು ಆಲಕ್ಷ್ಯ ಮಾಡುವುದಾದರೆ ಮತ್ತೆ ತಂದೆಯ ಶ್ರಾದ್ಧವನ್ನು ಏಕೆ ಮಾಡುವುದಿಲ್ಲ ? ಅನ್ನಕ್ಕೆ ಗತಿಯಿಲ್ಲದಿದ್ದರೂ ಏಷ್ಟೊಂದು ಪೊಗರು ? ಸರಿ ! ವಂಶೀಧರನು ಸಿಟ್ಟಿನಿಂದ ಕೆಂಡಾಮಂಡಲನಾದನು.

ಅಣ್ಣಾ ! ನಿಮ್ಮ ಆಜ್ಞೆಯಾದರೆ ನಾನು ಅವಶ್ಯವಾಗಿ ತಂದೆಯ ಶ್ರಾದ್ಧ ಮಾಡುವೆನು ಮತ್ತು ನನ್ನ ಶಕ್ತಿಗನುಸಾರವಾಗಿ ನಾಲ್ಕಾರು ಬ್ರಾಹ್ಮಣರಿಗೆ ಭೋಜನವನ್ನೂ ಮಾಡಿಸುವೆನು. ಶ್ರಾದ್ಧದಲ್ಲಿ ನೆಂಟರಿಷ್ಟರು ಹಾಗೂ ಜಾತಿ ಬಾಂಧವರಿಗೆ ಭೋಜನ ಮಾಡಿಸುವುದು ಪಾರಸ್ಪರಿಕ ವ್ಯವಹಾರವಾಗಿದೆ ಮತ್ತು ಉಚಿತವೂ ಆಗಿದೆ. ಆದರೆ ನಾವುಗಳು ಯಾವ **''ಶ್ರದ್ಧಯಾ ದೀಯತೇ ಅನೇನೇತಿ ಶ್ರಾದ್ಧಮ್''** ಈ ಶಾಸ್ತ್ರವಾಕ್ಯವನ್ನು ಮರೆತು ಕೇವಲ ನೆಂಟರಿಷ್ಟರಿಗೆ

ಸ್ವಾದಿಷ್ಟ ಭೋಜನ ಮಾಡಿಸುವುದರಲ್ಲೇ ನಮ್ಮ ಪಿತೃಗಳ ಉದ್ಧಾರವೆಂದು ತಿಳಿಯುತ್ತೇವೆ, ಇದು ಸರಿಯಲ್ಲ, ತನ್ನ ಸ್ವಾಭಾವಿಕ ಶಾಂತಿಯೊಂದಿಗೆ ನರಸೀ ಮೆಹತಾರವರು ನಿವೇದಿಸಿಕೊಂಡರು.

ಇಷ್ಟು ಕೇಳುತ್ತಲೇ ವಂಶೀಧರನಿಗೆ ಬೆಂಕಿಗೆ ತುಪ್ಪ ಹಾಕಿದಂತಾಯಿತು. ಸಿಟ್ಟಿನಿಂದ ಅವನ ಕಣ್ಣುಕೆಂಪಗಾಯಿತು ಮತ್ತು ಏನೂ ಮಾತನಾಡದೆ ತನ್ನ ಮನೆಗೆ ಬಂದು ಎಲ್ಲ ವೃತ್ತಾಂತವನ್ನು ದುರಿತಗೌರಿಗೆ ಹೇಳಿದನು. ದುರಿತಗೌರಿಯ ದ್ವೇಷ ಕುದಿಯಿತು ಹಾಗೂ ಮೈದುನನ ಎಲ್ಲ ಕ್ರೋಧವನ್ನು ತನ್ನ ಪತಿಯ ಮೇಲೆ ತೆಗೆದಳು-ನೀವು ಆ ಸುಟ್ಟ ಮೋರೆಯವನ ಮನೆಗೆ ಹೊದದ್ದಾದರೂ ಏಕೆ ? ನಾನಾದರೋ ಆ ಭಕ್ತ ದಂಪತಿಗಳನ್ನು ಮೊದಲಿನಿಂದಲೇ ತಿಳಿದಿದ್ದೆ. ಒಂದು ವೇಳೆ ಅವರು ಶ್ರಾದ್ಧಕ್ಕೆ ಬರದಿದ್ದರೆ ನಮ್ಮದೇನು ಕಳೆದು ಹೋಗುತ್ತದೆ ?

ಇತ್ತ ನರಸೀಮೆಹತಾರವರೂ ಶ್ರಾದ್ಧ ಮಾಡುವ ನಿಶ್ಚಯವನ್ನೇನೋ ಮಾಡಿದರು ; ಆದರೆ ಮನೆಯಲ್ಲಿ ಸೇರಿನಷ್ಟು ಅನ್ನಕ್ಕೆ ಗತಿ ಇರಲಿಲ್ಲ. ಆದರೂ ಕೂಡ ಭಕ್ತರಾಜರು ನಿಶ್ಚಿಂತರಾಗಿದ್ದರು. ಅವರು ತಮ್ಮ ಏಕಮಾತ್ರ ಭಗವಂತನ ಮುಂದೆ ಕುಳಿತುಕೊಂಡು ಕೀರ್ತನ ಮಾಡತೊಡಗಿದರು. ಮಾಣಿಕಗೌರಿಯು ಅವರು ನಿಶ್ಚಿಂತವಾಗಿರುವುದನ್ನು ನೋಡಿ ಅವರ ಬಳಿಗೆ ಹೋಗಿ ಹೇಳಿದಳು-ಸ್ವಾಮಿ! ನಾಳೆ ನಿಮ್ಮ ತಂದೆಯ ಶ್ರಾದ್ಧ ಮಾಡಲು ನಿಶ್ಚಿಯಿಸಿದ್ದೀರಿ, ಮನೆಯಲ್ಲಿ ಒಂದು ಕಾಳೂ ಇಲ್ಲ, ಮೊದಲು ಅದರ ವ್ಯವಸ್ಥೆ ಮಾಡಬೇಕಲ್ಲ.

ಪ್ರಿಯೇ ! ಮೊದಲು ನನಗೆ ಭಜನೆ ಮಾಡಲು ಬಿಡು; ಅನಂತರ ನಾನು ಪೇಟೆಗೆ ಹೋಗಿ ಕೆಲವು ಸಾಮಗ್ರಿಯನ್ನು ಎಲ್ಲಾದರೂ ಉಧರಿಯಾಗಿ ತರಲು ಪ್ರಯತ್ನಿಸುತ್ತೇನೆ. ಒಂದು ವೇಳೆ ಕಡವಾಗಿಯೂ ಸಿಗದಿದ್ದರೆ ನನ್ನ ಸ್ವಾಮಿ ಬಲ್ಲ, ಪಿತೃಗಳು ಬಲ್ಲರು ಎಂದು ಉತ್ತರಿಸಿದರು.

ಸ್ವಾಮಿ ! ನಾವು ಆ ಪರಮಾತ್ಮನನ್ನು ಒಡೆಯನೆಂದು ತಿಳಿದಿದ್ದೇವೆ ; ಆದರೆ ಅವನಲ್ಲಿ ನ್ಯಾಯವೆಲ್ಲಿದೆ ? ನೋಡಿ, ನಿಮ್ಮಣ್ಣನವರ ಮನೆಯಲ್ಲಿ ಎಷ್ಟು ಸಂಪತ್ತು ಬಿದ್ದಿದೆ ಮತ್ತು ನಮಗೆ ನಿತ್ಯ ನಮ್ಮ ಹೊಟ್ಟೆಯ ಚಿಂತೆ ಹತ್ತಿಕ್ಕೊಂಡಿದೆ. ಇಷ್ಟು ಹೇಳುತ್ತಾ - ಹೇಳುತ್ತಾ ಮಾಣಿಕಗೌರಿಯ ಕಣ್ಣುಗಳಿಂದ ಅಶ್ರುಧಾರೆ ಹರಿಯಿತು.

ಸಾಧ್ವೀ ! ನೀನು ಪದೇ - ಪದೇ ಇಂತಹ ತಿರಸ್ಕೃತ ಅಶ್ರದ್ಧೆಯನ್ನು ಪ್ರಕಟ ಪಡಿಸುತ್ತಾ ವೃಥಾ ಹೀಗೇಕೆ ಮಾತಾಡುತ್ತಿರುವೆ. ಇಂದೂ ಕೂಡ ಪುನಃ ನನ್ನ

ಸ್ವಾಮಿಯ ಮೇಲೆ ವ್ಯರ್ಥವಾಗಿ ದೋಷಾರೋಪಣೆ ಮಾಡಿ ಬಿಟ್ಟೆ ಭಗವಂತನು ತುಂಬಾ ನ್ಯಾಯಕಾರಿ ಮತ್ತು ದಯಾಳು ಆಗಿದ್ದಾನೆ. ಅವನ ಬಳಿ ಪಾಪ-ಪುಣ್ಯಗಳ ನ್ಯಾಯಯುಕ್ತ ವಿನಿಮಯ ಆಗುತ್ತಾ ಇರುತ್ತದೆ. ನನ್ನ ಅರ್ಧಾಂಗಿಯಾಗಿಯೂ ನಿನ್ನೊಳಗೆ ಶ್ರದ್ಧೆಯ ಅಭಾವ ವಿರುವುದು ನನ್ನ ದುರ್ಭಾಗ್ಯವಾಗಿದೆ. ನಾನು ಬಾರಿ-ಬಾರಿಗೂ ಹೇಳುತ್ತಿದ್ದೇನೆ ಮತ್ತು ಇಂದೂ ಕೂಡ ಹೇಳುತ್ತೇನೆ. ಯಾವುದು ನಿಜವಾದ ಚಿನ್ನವಿದೆಯೋ ಘರ್ಷಣ, ಛೇದನ, ತಾಪನ ಹಾಗೂ ತಾಡನ ಮೊದಲಾದ ದುಃಖಿಗಳನ್ನು ಸಹಿಸುತ್ತ ಒರೆಗೆ ಹತ್ತಬೇಕಾಗುತ್ತದೆ. ಸ್ವರ್ಣಕಾರನೂ ಕೂಡ ಲೋಹವೇ ಮೊದಲಾದ ಧಾತುಗಳನ್ನು ಪರೀಕ್ಷಿಸದೆ ನಿಜವಾದ ಚಿನ್ನದ್ದೇ ಪರೀಕ್ಷೆ ಮಾಡುವುದು ಉಚಿತವೇ ಆಗಿದೆ. ವಾಸ್ತವವಾಗಿ ಇಂದು ನಾವು ಒರೆಗಲ್ಲಿನಲ್ಲಿದ್ದೇವೆ ಮತ್ತು ಇಂತಹ ಪರಿಸ್ಥಿತಿಯೇ ಮನುಷ್ಯನ ನಿಜವಾದ ಪರೀಕ್ಷೆಯಾಗಿದೆ. ಆ ಪರಮಪಿತಾ ಭಗವಂತನ ದರಬಾರಿನಲ್ಲಿ ಎಂದೂ ಮರೆ ತಾದರೂ ಅನ್ಯಾಯವಾಗುವುದಿಲ್ಲ ಎಂಬ ದೃಢ ವಿಶ್ವಾಸ ನನಗಿದೆ. ನರಸೀಮೆಹತಾ ರವರು ತುಂಬಾ ನಿಖರವಾದ ಶಬ್ದಗಳಲ್ಲಿ ಪತ್ನಿಯ ಸಮಾಧಾನ ಮಾಡಿದರು.

ನಾಥಾ ! ಕ್ಷಮಿಸಿ, ಈಗ ನನ್ನ ಕಣ್ಣು ತೆರೆಯಿತು. ಇನ್ನು ಇದಕ್ಕಿಂತ ಹೆಚ್ಚಿನ ಯಾವುದೇ ಕಷ್ಟ ಬಂದೊದಗಿದರೂ ನಾನು ವಿಚಲಿತಳಾಗುವುದಿಲ್ಲ ಮತ್ತು ಆ ಕೃಪಾಳು ಜಗನ್ನಾಥನ ಮೇಲೆ ಪೂರ್ಣ ವಿಶ್ವಾಸವಿಡುವೆನು. ನನ್ನ ಬಳಿಯಲ್ಲಿ ಎರಡು ಮಾಶೆಯ ಚಿನ್ನದ ಓಲೆಗಳಿವೆ, ಇದನ್ನು ಮಾರಿ ಅವಶ್ಯಕ ಸಾಮಗ್ರಿಗಳನ್ನು ತನ್ನಿ ಮತ್ತು ನಾಳೆಯ ಕಾರ್ಯ ನಡೆಸಿರಿ. ಇಷ್ಟು ಹೇಳುತ್ತ ಮಾಣಿಕ ಗೌರಿಯು ಒಡವೆಗಳನ್ನು ನರಸೀಮೆಹತಾರವರ ಕೈಯಲ್ಲಿಟ್ಟಳು. ಪತಿಯ ಆಪತ್ತಿನಲ್ಲಿ ಅವನಿಗೆ ಧೈರ್ಯಹೇಳಿ, ತಾನೂ ಅವನ ದುಃಖಿದಲ್ಲಿ ಭಾಗಿಯಾಗುವವಳೇ ನಿಜವಾದ ಅರ್ಧಾಂಗಿನಿ ಆಗಿದ್ದಾಳೆ.

ಧೀರಜ ಧರ್ಮ ಮಿತ್ರ ಅರು ನಾರೀ । ಆಪದ ಕಾಲ ಪರಿಖಿಅಹಿ' ಚಾರೀ ॥

ಧನವು ನಾಶವಾದಾಗಲೇ ಪತ್ನಿಯ ಪರೀಕ್ಷೆ ಆಗುತ್ತದೆ.

ಮಾಣಿಕಗೌರಿಯ ಒಡವೆಯನ್ನು ಎತ್ತಿಕೊಂಡು ನರಸೀಮೆಹತಾ ಪೇಟೆಗೆ ಹೋಗಿ, ಅದನ್ನು ಮಾರಿ ಅವಶ್ಯಕ ಸಾಮಗ್ರಿಯನ್ನು ಖರೀದಿಸಿದರು, ಕೇವಲ ತುಪ್ಪ ತೆಗೆದು ಕೊಳ್ಳುವುದು ಉಳಿಯಿತು. ಬೇರೆ ಸಾಮಾನುಗಳನ್ನು ಎತ್ತಿಕೊಂಡು ಮನೆಗೆ ಬಂದರು. ಮಾಣಿಕಗೌರಿಯು ಎಲ್ಲ ವಸ್ತುಗಳನ್ನು ನೋಡಿ ಹೇಳಿದಳು -ಸ್ವಾಮಿ ! ಇಷ್ಟು ಸಾಮಾನಿನಲ್ಲಿ ಆರೇಳು ಜನರ ಭೋಜನ ಆಗಬಲ್ಲುದು.

ಆದ್ದರಿಂದ ನೀವು ಮೂರು ನಾಲ್ಕು ಬ್ರಾಹ್ಮಣರಿಗೆ ಹಾಗೂ ಪುರೋಹಿತರನ್ನು ಊಟಕ್ಕಾಗಿ ನಿಮಂತ್ರಣ ಕೊಟ್ಟು ಬನ್ನಿ.

ಮೆಹತಾರವರು ನಾಗರರ ಕಟ್ಟೆಗೆ ಬಂದರು. ಅಲ್ಲಿ ನಾಗರ ಜಾತಿಯ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಕುಳಿತಿದ್ದರು. ಭಕ್ತರಾಜರನ್ನು ನೋಡಿ ಪ್ರಸನ್ನರಾಯ ಎಂಬ ನಾಗರನು ನಗುತ್ತಾ ಕೇಳಿದನು- ಏನು ಭಕ್ತರೇ! ಯಾವ ಕಡೆಯಿಂದ ಶುಭಾಗಮನವಾಯಿತು.

ಅಯ್ಯಾ ! ನಾಳೆ ತಂದೆಯ ಶ್ರಾದ್ಧವಿದೆ ; ಆದ್ದರಿಂದ ಮೂರುನಾಲ್ಕು ನಾಗರ ಬಂಧುಗಳನ್ನು ಹಾಗೂ ಪುರೋಹಿತರನ್ನು ಭೋಜನಕ್ಕಾಗಿ ನಿಮಂತ್ರಣ ನೀಡಲು ಬಂದಿದ್ದೇನೆ ಎಂದು ನರಸೀಮೆಹತಾರವರು ಸರಳವಾಗಿ ಹೇಳಿದರು.

ಹಾಗಿರುವಾಗ ಮೂರು ನಾಲ್ಕು ನಾಗರರಿಗೆ ಏಕೆ ? ಉಳಿದ ಜನರ ದೋಷವೇನಿದೆ ? ಏನು ಇವರೆಲ್ಲ ನಿಮ್ಮ ತಂದೆಯ ಶ್ರಾದ್ಧದ ಸಂದರ್ಭ ನಿಮ್ಮ ಮನೆಗೆ ಬಂದು ಭಗವಂತನ ಪ್ರಸಾದ ಪಡೆಯಲಾರರೇ ? ಎಂದು ನಾಗರ ಜಾತಿಯ ಪುರೋಹಿತರು ಗೇಲಿಮಾಡುವವನಂತೆ ಹೇಳಿದರು.

ಸ್ವಾಮಿ ! ಭಗವತ್ ಪ್ರಸಾದಕ್ಕೆ ಎಲ್ಲರೂ ಅಧಿಕಾರಿಗಳಾಗಿದ್ದಾರೆ. ಆದರೆ ನಾಳೆ ನನ್ನ ಅಣ್ಣನ ಮನೆಯಲ್ಲಿ ಪಿತೃಶ್ರಾದ್ಧದ ನಿಮಿತ್ತ ಜಾತಿಯವರಿಗೆಲ್ಲ ನಿಮಂತ್ರಣ ಆಗಿಯೇ ಆಗುತ್ತದೆ; ಹಾಗಿರುವಾಗ ಅಕಿಂಚನನಾದ ನನ್ನ ಮನೆಗೆ ಯಾರು ಬರಲು ಬಯಸುವರು ? ನರಸೀಮೆಹತಾ ಅಭಿಮಾನ ರಹಿತವಾದ ದನಿಯಲ್ಲಿ ಹೇಳಿದರು.

ಮೆಹತಾರವರೇ ! ವಂಶೀಧರನ ಮನೆಯಲ್ಲಿ ಜಾತಿಭೋಜನದ ನಿಮಂತ್ರಣ ಆದರೂ ಕೂಡ ನೀವು ದುಃಖಿಸುವ ಕಾರಣವಿಲ್ಲ ! ನಿಮ್ಮ ಮನೆಗೆ ಬಂದು ನಾವೆಲ್ಲರೂ ಭಗವಂತನಿಗೆ ಸಮರ್ಪಿಸಿದ ನೈವೇದ್ಯವನ್ನು ಅವಶ್ಯವಾಗಿ ಸ್ವೀಕರಿಸುವೆವು ಮತ್ತು ಈ ರೀತಿಯಿಂದ ನಮ್ಮ ದೇಹಗಳನ್ನು ಪವಿತ್ರರಾಗಿಸುವೆವು. ನಿಮ್ಮ ಇಚ್ಛೆಯು ಪೂರ್ಣವಾಗಬಹುದು ಎಂದು ಪ್ರಸನ್ನರಾಯನು ಕಪಟಭಕ್ತಿಯನ್ನು ಪ್ರಕಟಪಡಿಸುತ್ತ ಹೇಳಿದನು.

ಯಾರದಾದರೂ ಕೀರ್ತಿಯನ್ನು ಕಲಂಕಿತವಾಗಿಸಲು ದುರ್ಜನರು ಅತ್ಯಂತ ವಿನಮ್ರರಾಗುತ್ತಾರೆ. ಪ್ರಸನ್ನರಾಯನ ಈ ಭಾವವನ್ನು ಅಲ್ಲಿ ಉಪಸ್ಥಿತರಿರಾದ ಎಲ್ಲ ನಾಗರರು ಸಂಕೇತದ ಮೂಲಕ ಪ್ರೋತ್ಸಾಹಿಸಿದರು. ಒಂದು ವೇಳೆ ಇಂದು ನರಸೀಮೆಹತಾ ಎಲ್ಲ ಜಾತಿ ಬಾಂಧವರಿಗೆ ನಿಮಂತ್ರಣ ಕೊಟ್ಟರೆ ತುಂಬಾ

ಚೆನ್ನಾಗಿತ್ತು. ಇಷ್ಟು ಜನರಿಗೆ ಭೋಜನ ವ್ಯವಸ್ಥೆ ಹೇಗೆ ಮಾಡುತ್ತಾನೆಂದು ನೋಡೋಣ !

ಶುದ್ಧ ಹೃದಯಿ ಮನುಷ್ಯನಿಗೆ ಎಲ್ಲಕಡೆ ತನ್ನಂತೆಯೇ ಶುದ್ಧತೆಯೇ ಕಂಡು ಬರುತ್ತದೆ. ಜಾತಿಯ ಎಲ್ಲ ಪ್ರತಿಷ್ಠಿತ ವ್ಯಕ್ತಿಗಳಿಗೆ ಭಗವತ್‌ಪ್ರಸಾದದ ಅಪೇಕ್ಷೆ ಇರುವುದಾದರೆ ಅವರ ಅನಾದರ ಮಾಡುವುದು ಉಚಿತವಲ್ಲ ಎಂದು ನರಸೀ ಮೆಹತಾರವರು ಯೋಚಿಸಿದರು. ಇನ್ನೊಮ್ಮೆ ಜಾತಿಗಂಗೆಯ ಆಗಮನದಿಂದ ನನ್ನ ಮನೆ ಪವಿತ್ರವಾದೀತು. ಈ ಪ್ರಕಾರದ ಭಾವ ಮನಸ್ಸಿಗೆ ಬರುತ್ತಲೇ, ಅವರು ಭಗವಂತನನ್ನು ಸ್ಮರಿಸಿ, ನಿಮಂತ್ರಣವಾದರೋ ಜಾತಿಯವರಿಗೆಲ್ಲರಿಗೂ ಕೊಟ್ಟೇ ಕೊಡುತ್ತೇನೆ. ಮತ್ತೆ ಪರಮಾತ್ಮನ ಇಚ್ಛೆ ಇದ್ದಂತೆಯೇ ಆಗುವುದು ! ಸರಿ, ಅವರು ಪುರೋಹಿತರಿಗೆ ಹೇಳಿದರು- ಪುರೋಹಿತರೇ ! ನೀವು ಏಳುನೂರು ಮನೆಯ ಎಲ್ಲ ಜಾತಿ ಬಂಧುಗಳಿಗೆ ನಿಮಂತ್ರಣ ಕೊಟ್ಟು ಬನ್ನಿ. ನಾಳೆ ಶ್ರೀದ್ವಾರಕಾ ಧೀಶನ ಜಯಧ್ವನಿ ಮಾಡುತ್ತಾ ಜಾತಿ ಬಾಂಧವರು ನನ್ನ ಪರ್ಣಕುಟಿಯನ್ನು ಪಾವನ ಮಾಡಲಿ. ಇದೂ ಒಂದು ಆನಂದದ ವಿಷಯವಾಗಬಹುದು.

ತಮ್ಮ ಆಜ್ಞೆ ಎಂದು ಹೇಳಿ ಪುರೋಹಿತರು ಎದ್ದು, ಜಾತಿಯ ಎಲ್ಲ ಜನರಿಗೆ ಸಕುಟುಂಬ ನಿಮಂತ್ರಣ ಕೊಟ್ಟು ಬಂದರು.

ಈ ನಿಮಂತ್ರಣದ ಸುದ್ದಿ ನಾಗರ ಜಾತಿಯಲ್ಲಿ ಹರಡಿಹೋಯಿತು. ಯಾರು ಯಾವ ರೀತಿಯ ಮನುಷ್ಯನಿದ್ದನೋ, ಅವನು ಹಾಗೆಯೇ ಕಲ್ಪನೆ ಮಾಡುತ್ತಿದ್ದನು, ಅಂತಹ ಮಾತನ್ನೇ ಯೋಚಿಸುತ್ತಾನೆ. ಯಾರೋ ಹೇಳಿದರು- ಎಂದು ಅವನ ಮನೆಯನ್ನು ನೋಡುವ ಅವಕಾಶವೇ ಇರಲಿಲ್ಲವೋ ಅಂತಹ ಜನರು ಇಂದು ಭಕ್ತನಿಗೆ ಮೋಸ ಮಾಡಿದರು. ಯಾರೋ ಹೇಳುತ್ತಾರೆ- ಅಯ್ಯಾ ಇದು ಒಣ ನಿಮಂತ್ರಣವೇ ಆಗಿದೆ. ಗೋಪೀಚಂದನ ಮತ್ತು ಕರತಾಳ ಬಿಟ್ಟು ಅವನ ಮನೆಯಲ್ಲಿ ಏನು ಇಟ್ಟಿದೆ? ಆ ಬೈರಾಗಿ ಪಾಪ ಎಲ್ಲ ಜಾತಿಗೆ ಎಲ್ಲಿಂದ ಭೋಜನ ಮಾಡಿಸಿಯಾನು? ಭೋಜನದ ಸಮಯ ಕರೆ ಬಂದರೆ ನೋಡೋಣ. ಯಾರೋ ಹೇಳುತ್ತಾನೆ- ಏನೇ ಆಗಲಿ ನಾವೇನು ಅನ್ನವಿಲ್ಲದೆ ಸಾಯುವುದಿಲ್ಲತಾನೇ ! ಇದರಿಂದ ಅವನು ನಿಜವಾದ ಭಕ್ತನೋ ಅಥವಾ ಅವನು ಜನರನ್ನು ಮೋಸಮಾಡಲು ವೇಷವನ್ನು ತೊಟ್ಟು ಕೊಂಡಿರುವನೋ ಎಂಬುದು ನಿಶ್ಚಯವಾಗಲಿ. ಒಂದು ವೇಳೆ ನಿಜವಾಗಿದ್ದರೆ ಎಲ್ಲರನ್ನೂ ಭೋಜನ

ದಿಂದ ಸಂತುಷ್ಟಗೊಳಿಸಿ ತನ್ನ ವಚನವನ್ನು ಉಳಿಸಿಕೊಳ್ಳುವನು. ಇಲ್ಲದಿದ್ದರೆ ತನ್ನ ಕಪ್ಪು ಮೊರೆಯನ್ನು ತೋರಿಸಲಾರನು. ಯಾರೋ ಹೇಳುತ್ತಾನೆ – ಅಯ್ಯಾ ! ಅವನು ಯಾರೋ ಮನುಷ್ಯನನ್ನು ತನ್ನ ಜಾಲದಲ್ಲಿ ಕೆಡವಿಕೊಂಡಿರಬಹುದು ಹಾಗೂ ಅವನ ಭರವಸೆಯಿಂದ ಇಂದು ಇಷ್ಟು ಉದಾರತೆಯು ಒಮ್ಮಿಂದೊಮ್ಮೆ ಅವನಲ್ಲಿ ಕಂಡು ಬಂದಿದೆ. ಈ ಪ್ರಕಾರ ಎಷ್ಟು ಬಾಯಿಗಳಿವೆಯೋ ಅಷ್ಟು ಮಾತುಗಳಾಡಿದರು.

ಮರುದಿನ ಪ್ರಾತಃಕಾಲವಾಗುತ್ತಲೇ ಭಜನಾದಿಗಳನ್ನು ಪೂರೈಸಿ ನರಸೀಮೆಹತಾ ತುಪ್ಪದ ಪಾತ್ರೆ ತೆಗೆದುಕೊಂಡು ಪೇಟೆಯ ಕಡೆಗೆ ಹೋದರು. ಸಮಸ್ತ ಜಾತಿಯವರ ಭೋಜನಕ್ಕಾಗಿ ಬೇಕಾದ ತುಪ್ಪ ಈ ಸಣ್ಣ ಪಾತ್ರೆಯಲ್ಲಿ ಹಿಡಿಸಿತೇ ಇಲ್ಲವೇ ಎಂಬುದೂ ಆ ವೀತರಾಗೀ ಮಹಾತ್ಮರಿಗೆ ತಿಳಿದಿರಲಿಲ್ಲ . ಅವರು ತಮ್ಮ ಭಜನೆಯ ಗುಂಗಿನಲ್ಲೇ ಮನೆಯಿಂದ ಹೊರಟರು.

ಅವರನ್ನು ನೋಡುತ್ತಲೇ ಓರ್ವ ವ್ಯಾಪಾರಿಯು ಪ್ರಶ್ನಿಸಿದ– ಏನು ಮೆಹತಾರವರೇ ಏಲ್ಲಿಗೆ ಹೊರಟಿರಿ ? ಯಾವ ವಸ್ತುವನ್ನು ಕೊಂಡುಕೊಳ್ಳಲು ಆಗಮಿಸಿರುವಿರಿ ? ಯಾವುದಾದರು ಸಾಧು ಮಂಡಳಿ ಬಂದಿಲ್ಲವಲ್ಲ ?

ಇಲ್ಲ ಸೇಠಜೀಯವರೇ ! ಸಾಧ ಮಂಡಳಿ ಬಂದಿಲ್ಲ. ಇಂದು ಪಿತೃಶ್ರಾದ್ಧ ದಲ್ಲಿ ಬ್ರಾಹ್ಮಣ ಭೋಜನ ಮಾಡಿಸಲು ಹತ್ತು ಮಣ ತುಪ್ಪದ ಅವಶ್ಯಕತೆ ಇದೆ. ಒಳ್ಳೆಯ ತುಪ್ಪವಿದ್ದರೆ ತೋರಿಸಿರಿ ಎಂದು ಭಕ್ತರಾಜರು ಉತ್ತರಿಸಿದರು.

ತುಪ್ಪದ ಬೆಲೆಯನ್ನು ತಂದಿರುವಿರೋ, ನಂತರ ಕೊಡುವಿರೋ ?

ಅಪ್ಪಾ ! ತುಪ್ಪದ ಹಣ ಈಗ ತಂದಿಲ್ಲ. ಒಂದು ತಿಂಗಳಲ್ಲಿ ಕೊಡುತ್ತೇನೆ.

ಸೇಠಜೀಯವರು ಮನಸ್ಸಿನಲ್ಲಿಯೇ ಯೋಚಿಸಿದರು – ಈ ನಿರ್ಧನ ಮನುಷ್ಯ ಒಂದು ತಿಂಗಳಲ್ಲಿ ಹೆಚ್ಚು ಕಮ್ಮಿ ಮುನ್ನೂರು ರೂಪಾಯಿ ಎಲ್ಲಿಂದ ಕೊಡುವನು ? ಆದಾಯದ ಯಾವ ಭರವಸೆಯೂ ಇಲ್ಲ. ಇಷ್ಟು ಕಡ ಕೊಡುವುದು ಸರಿಯಲ್ಲ. ಅವರು ಹೇಳಿದರು – ಭಕ್ತರೇ ! ನನ್ನ ಬಳಿ ಅಷ್ಟು ತುಪ್ಪ ಇಲ್ಲ. ನಾನು ಅಸಹಾಯಕನಾಗಿದ್ದೇನೆ.

ನರಸೀಮೆಹತಾ ಮುಂದಕ್ಕೆ ಹೋದರು. ಓರ್ವ ಭಗವದ್ಭಕ್ತ ವ್ಯಾಪಾರಿಯು ಅವರಿಗೆ ನಮಸ್ಕರಿಸಿ ಬಂದಿರುವ ಕಾರಣ ಕೇಳಿದರು. ನರಸೀಮೆಹತಾರವರು ಎಲ್ಲ ಪರಿಸ್ಥಿತಿಯನ್ನು ವಿಸ್ತಾರವಾಗಿ ತಿಳಿಸಿದಾಗ ಅವನು ವಿನಮ್ರನಾಗಿ ಹೇಳಿದನು– ಮೆಹತಾರವರೇ! ನಿಮಗೆ ಅವಶ್ಯಕತೆ ಇದ್ದಷ್ಟು ತುಪ್ಪವನ್ನು ನೀವು ನನ್ನಿಂದ

ಕೊಂಡುಹೋಗಿರಿ. ಆದರೆ ಮೊದಲು ಎರಡು-ಮೂರು ಭಗವದ್ಭಜನೆಹಾಡಿ ಶ್ರವಣಿಸಿರಿ.

ಚಾತಕ ಪಕ್ಷಿಗೆ ಸ್ವಾತೀನಕ್ಷತ್ರದ ನೀರು ದೊರೆತಾಗ, ನಿರ್ಧನ ಮನುಷ್ಯನಿಗೆ ಅಕಸ್ಮಾತ್ ಅತುಲ ಸಂಪತ್ತು ಸಿಕ್ಕಿದಾಗ ಎಷ್ಟು ಸಂತೋಷವಾಗುತ್ತದೋ, ಅಷ್ಟೇ ಅಲ್ಲ ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಸಂತೋಷ ಭಕ್ತರಾಜರಿಗಾಯಿತು. ಅವರು ಯೋಚಿಸಿದರು ಊಟಗಳಾಗುವಾಗ ಸಂಜೆ ಆಗಬಹುದು; ಇಂತಹ ಭಜನೆ ಮಾಡುವ ಅವಕಾಶ ಮತ್ತೆಲ್ಲಿ ಸಿಗಬಹುದು? ಸರಿ, ಆ ವ್ಯಾಪಾರಿಯ ಅಂಗಡಿಯಲ್ಲಿ ಆಸನಹಾಕಿ ಕುಳಿತರು ಮತ್ತು ಅತ್ಯಂತ ಪ್ರೇಮಪೂರ್ವಕ ಭಗವತ್ಸಂಕೀರ್ತನೆ ಮಾಡತೊಡಗಿದರು. ಅವರ ಸುಮಧುರ ಪ್ರೇಮಮಯ ವಾಣಿಯನ್ನು ಕೇಳಿ ಕೆಲವೇ ಕ್ಷಣಗಳಲ್ಲಿ ಅಲ್ಲಿ ನೂರಾರು ಜನರು ಬಂದು ಸೇರಿದರು. ನರಸೀಮೆಹತಾರವರು ಜಾತಿಭೋಜನ ಮತ್ತು ಪಿತೃಶ್ರಾದ್ಧವನ್ನು ಮರೆತು ಪ್ರಭುವಿನ ಭಜನೆಯಲ್ಲಿ ತನ್ಮಯರಾದರು.

ಭಕ್ತರಾಜರಾದರೋ ಎಲ್ಲವನ್ನು ಮರೆತು ಭಗವತ್ ಪ್ರೇಮದಲ್ಲಿ ಮುಳುಗಿದರು ; ಆದರೆ ಯಾವ ಭಗವಂತನ ಮೇಲೆ ಅವರಿಗೆ ಇಷ್ಟು ಪ್ರೇಮವಿತ್ತೋ ಮತ್ತು ಯಾರು ಅವರ ಯೋಗಕ್ಷೇಮವನ್ನು ನಡೆಸುವ ಹೊಣೆಯನ್ನು ಹೊತ್ತಿದ್ದನೋ ಅವನು ಹೇಗೆ ನಿಶ್ಚಿಂತನಾಗಿರಬಲ್ಲನು ? ಭಗವಂತನು ತನ್ನ ಧಾಮದಲ್ಲಿ ವಿಚಾರ ಮಗ್ನನಾದನು- ನರಸೀಮೆಹತನಾದರೋ ಭಜನೆಯಲ್ಲಿ ತಲ್ಲೀನನಾಗಿದ್ದಾನೆ. ಪಿತೃಶ್ರಾದ್ಧವನ್ನು ಮಾಡುವ ಮತ್ತು ಬ್ರಾಹ್ಮಣ ಭೋಜನ ಮಾಡಿಸಬೇಕೆಂಬ ವಿಚಾರ ಅವನಿಗೆ ಲವಲೇಶವೂ ಇಲ್ಲ. ಈಗ ನಾನು ಹೋಗಿ ಎಲ್ಲ ಕಾರ್ಯವನ್ನು ಸ್ವತಃ ಮಾಡದಿದ್ದರೆ ಇಂದು ಭಕ್ತನ ಮರ್ಯಾದೆ ನಾಶವಾದೀತು ಹಾಗೂ ನನ್ನ ಭಕ್ತವತ್ಸಲತೆಯ ಬಿರುದು ಹಾಳಾಗಿ ಹೋದೀತು. ಅವನು ಕೂಡಲೇ ಅಕ್ರೂರನನ್ನು ಕರೆದು-ನೀವು ವ್ಯಾಪಾರಿಯ ವೇಷಧರಿಸಿ ಶ್ರಾದ್ಧ ಮತ್ತು ಬ್ರಾಹ್ಮಣ ಭೋಜನಕ್ಕಾಗಿ ಎಲ್ಲ ಅವಶ್ಯಕ ಸಾಮಗ್ರಿಯನ್ನು ಮೆಹತಾರವರ ಮನೆಗೆ ತಲುಪಿಸಿ ಬಿಡಿರಿ ಎಂದು ಆಜ್ಞಾಪಿಸಿ, ನಾನೂ ಕೂಡ ನರಸೀಮೆಹತಾನ ರೂಪವನ್ನಾಂತು ಅಲ್ಲಿಗೆ ಬೇಗನೇ ಬರುತ್ತಿದ್ದೇನೆ ಎಂದು ಹೇಳಿದನು.

ನರಸೀಮೆಹತಾ ಹೊರಗೆ ಹೋಗಿ ತುಂಬಾ ಹೊತ್ತಾಗಿತ್ತು. ಮಾಣಿಕಗೌರಿಯು ಏನಾಯಿತು, ಇನ್ನೂ ತುಪ್ಪ ತರಲಿಲ್ಲವಲ್ಲ ! ಏನು ತುಪ್ಪ ಸಿಗಲಿಲ್ಲವೇ ? ಒಂದೊಮ್ಮೆ ಸಿಗದಿದ್ದರೆ ಮತ್ತೆ ಶ್ರಾದ್ಧ ಮತ್ತು ಬ್ರಾಹ್ಮಣ ಭೋಜನ ಹೇಗಾಗುವುದು ?

ಏನು ಇಂದು ಬ್ರಾಹ್ಮಣರು ಮನೆಯಿಂದ ಹಸಿದು ಹಿಂದಿರುಗುವರೇ ? ಅಯ್ಯೋ ! ಎಷ್ಟು ದೊಡ್ಡ ಪಾಪ ತಟ್ಟೀತು ಎಂದು ಯೋಚಿಸುತ್ತಾಳೆ. ಅವರು ತುಂಬಾ ನಿರ್ಲಕ್ಷರಾಗಿದ್ದಾರೆ ; ಎಲ್ಲೋ ಸಾಧುಗಳ ಮಂಡಳಿಯಲ್ಲಿ ಹೋಗಿ ಕುಳಿತು ಕೆಲಸ - ಕಾರ್ಯಗಳೆಲ್ಲ ಮರೆತಿದ್ದಾರೋ ಏನೋ ! ಇಲ್ಲವಾದರೆ ಬಂದೇ ಬರುತ್ತಿದ್ದರು. ಭಗವಂತಾ ! ಇಂದು ಹೇಗೆ ಮರ್ಯಾದೆ ಉಳಿದೀತು!

ಮಾಣಿಕಗೌರಿಯು ಇದೇ ಚಿಂತೆಯಲ್ಲಿ ಅಧೀರಳಾದಳು. ಅಷ್ಟರಲ್ಲಿ ಭಗವಂತನ ಆಜ್ಞೆಯಂತೆ ಸೇತಜೀವೇಷಧಾರಿ ಅಕ್ರೂರರು ಎಲ್ಲ ಸಾಮಾನು ಬಂಡಿಗಳಲ್ಲಿ ತುಂಬಿಕೊಂಡು ಬಂದು ತಲುಪಿದರು. ಮಾಣಿಕಗೌರಿಯ ಚಿಂತೆಯು ಒಮ್ಮಿಂದೊಮ್ಮೆಗೆ ಮಾಯವಾಯಿತು. ಅವಳು ತುಂಬಾ ಸಂತೋಷದಿಂದ ಎಲ್ಲ ಸಾಮಗ್ರಿಗಳನ್ನು ಯಥಾಸ್ಥಾನಗಳಲ್ಲಿ ಇರಿಸ ತೊಡಗಿದಳು. ಸ್ವಲ್ಪ ಹೊತ್ತಿನಲ್ಲಿಯೇ ಸ್ವತಃ ಭಗವಂತನೇ ನರಸೀಮೆಹತಾನ ರೂಪದಲ್ಲಿ ತುಪ್ಪವನ್ನು ಎತ್ತಿಕೊಂಡು ಬಂದು ತಲುಪಿದನು. ಈ ರಹಸ್ಯವನ್ನು ಯಾರೂ ತಿಳಿಯದಾದರು. ಮಾಣಿಕ ಗೌರಿಯು ಮೆಹತಾರೂಪಧಾರೀ ಭಗವಂತನಲ್ಲಿ ಪ್ರಶ್ನಿಸಿದಳು- ಇಷ್ಟು ಹೊತ್ತು ಏಕೆ ತಡ ಮಾಡಿದಿರಿ ? ನಾನು ತುಂಬಾ ಚಿಂತೆಯಲ್ಲಿ ಮುಳುಗಿದ್ದೆ. ಇಷ್ಟು ಸಾಮಾನು ಎಲ್ಲಿಂದ ದೊರೆಯಿತು ?

ಸಾಧ್ವೀ ! ಇಂದು ತಂದೆಯವರ ಶ್ರಾದ್ಧದ ನಿಮಿತ್ತದಿಂದ ಎಲ್ಲ ನಾಗರ ಜಾತಿಗೆ ಭೋಜನ ಮಾಡಿಸುವ ಇಚ್ಛೆ ಭಗವಂತನಿಗಾಯಿತು; ಇದೆಲ್ಲ ಸಾಮಾನು ಅವನೇ ಕೊಟ್ಟಿರುವನು ಎಂದು ಭಗವಂತನು ಹರ್ಷದಿಂದ ಉತ್ತರಿಸಿದನು.

ಸ್ವಾಮಿ! ನಾನು ಅಡಿಗೆಯ ವ್ಯವಸ್ಥೆ ಮಾಡುತ್ತೇನೆ. ನೀವು ಬೇಗನೆ ಪುರೋಹಿತರನ್ನು ಕರಕೊಂಡು ಬನ್ನಿ. ಮಧ್ಯಾಹ್ನವಾಗುತ್ತಾ ಇದೆ, ಈಗ ಶ್ರಾದ್ಧದ ಕಾರ್ಯ ಮಾಡಬೇಕಾಗಿದೆ ಎಂದು ಮಾಣಿಕಗೌರಿಯು ಹೇಳಿದಳು.

ಭಕ್ತ ವೇಷದಲ್ಲಿ ಭಗವಂತನು ಪುರೋಹಿತರ ಮನೆಗೆ ಹೋಗಿ, ಅವನು ವಿನೀತ ಸ್ವರದಲ್ಲಿ ಹೇಳಿದನು- ಪುರೋಹಿತರೇ ! ಸಮಯವಾಯ್ತು; ದಯಮಾಡಿ ನನ್ನ ಮನೆಗೆ ಬಂದು ಶ್ರಾದ್ಧ ಮಾಡಿಸಿರಿ.

ಈ ನಶ್ವರ ಭೌತಿಕ ಜಗತ್ತಿನಲ್ಲಿ ಧನಿಕನೇ ಹೆಚ್ಚು ಮಾನ್ಯನಾಗುತ್ತಾನೆ, ಸರ್ವತ್ರ ಪೂಜ್ಯನೆಂದು ತಿಳಿಯುತ್ತಾರೆ. ನಿರ್ಧನ ಮನುಷ್ಯನು ಅತ್ಯಂತ ಗುಣವಂತನಾಗಿದ್ದರೂ ಅವನ ಕಡೆಗೆ ಯಾರೂ ಗಮನವೇ ಕೊಡುವುದಿಲ್ಲ. ಇದೇ ಕಾರಣದಿಂದ ಯಾರೋ ನೀತಿಕಾರರು ಎಲ್ಲಿಯವರೆಗೆ ಹೇಳಿದ್ದಾರೆಂದರೆ-

ಜ್ಞಾನ ವೃದ್ಧಾಸ್ತಪೋವೃದ್ಧಾ ವಯೋವೃದ್ಧಾಸ್ತಥಾಪರೇ ।
ತೇ ಸರ್ವೇ ಧನವೃದ್ಧಸ್ಯ ದ್ವಾರೀ ತಿಷ್ಠಂತಿ ಕಿಂಕರಾಃ ॥

ಅರ್ಥಾತ್ ಜ್ಞಾನೀ, ತಪಸ್ವೀ, ಹಾಗೂ ವಯೋವೃದ್ಧ ಮನುಷ್ಯರೂ ಕೂಡ ಧನಿಕ ಮನುಷ್ಯನ ಬಾಗಿಲಲ್ಲಿ ಕಿಂಕರನಂತೇ ಇರಬೇಕಾಗುತ್ತದೆ. ನಮ್ಮ ಭಕ್ತರಾಜರೂ ಲೋಕದೃಷ್ಟಿಯಿಂದ ವಾಸ್ತವವಾಗಿ ನಿರ್ಧನರಾಗಿಯೇ ಇದ್ದರು. ಹಾಗಿರುವಾಗ ಅವರ ಕಾರ್ಯ ಮಾಡಿಸಲು ಪುರೋಹಿತರು ಹೇಗೆ ಸಿದ್ಧರಾಗುತ್ತಿದ್ದರು ? ಅವರ ಸ್ಥೂಲದೃಷ್ಟಿಯಲ್ಲಿ ಸಾಕಷ್ಟು ದಕ್ಷಿಣೆ ಕೊಡುವವರೇ ನಿಜವಾದ ಯಜಮಾನರಾಗಿದ್ದರು. ಆದುದರಿಂದ ಅವರು ಸ್ವಾರ್ಥದಲ್ಲಿ ಅಂಧರಾಗಿ ಹೇಳಿದರು – ನರಸೀಮೆಹತಾ ! ಇಂದು ವಂಶೀಧರನ ನಿಮಂತ್ರಣ ಬಂದಿರುವುದು ನೀನೂ ತಿಳಿದಿರುವೆ, ಮತ್ತೆ ಅವರನ್ನು ಬಿಟ್ಟು ನಿನ್ನ ಮನೆಗೆ ಹೇಗೆ ಬರಬಲ್ಲೆ?

ಏನು ಪುರೋಹಿತರೇ ! ನಾನು ನಿಮ್ಮ ಯಜಮಾನನಲ್ಲವೇನು ? ನಿಮ್ಮ ದೃಷ್ಟಿಯಲ್ಲಾದರೋ ಧನಿಕರು ಮತ್ತು ನಿರ್ಧನರು ಎಲ್ಲ ಯಜಮಾನರು ಒಂದೇ ರೀತಿಯಾಗಿರಬೇಕು ಎಂದು ನರಸೀಮೆಹತಾರೂಪಧಾರೀ ಭಗವಂತನು ಹೇಳಿದನು.

ಎಲ್ಲ ಯಜಮಾನರು ಹೇಗಯ್ಯ ಸರಿಯಾಗುವರು ? ನೀನಾದರೋ ಇಡೀ ಜೀವನದಲ್ಲಿ ಇಂದು ನಿಮಂತ್ರಣಕೊಟ್ಟಿರುವೆ ಮತ್ತು ವಂಶೀಧರನ ನಿಮಂತ್ರಣ ಆಗಾಗ ಬರುತ್ತಿರುತ್ತದೆ. ಅಲ್ಲದೆ ಇಂದು ನೀನೂ ಕೂಡ ದಕ್ಷಿಣೆ ಎಷ್ಟು ಕೊಡುವಿ ? ಸರಿಸಮಾನತೆ ತೋರಿಸಲು ಹೊರಟಿದ್ದಾನೆ ಎಂದು ಪುರೋಹಿತರು ತಿರಸ್ಕಾರದಿಂದ ನುಡಿದರು.

ಒಳ್ಳೆಯದು ಸ್ವಾಮಿ ! ಹಾಗಾದರೆ ನಾನು ನರಸೀಮೆಹತಾನ ಕುಲ ಪುರೋಹಿತನಲ್ಲ ಎಂದು ರಾಜಿನಾಮೆ ಬರೆದು ಕೊಡಿರಿ. ನಾನು ಯಾರಾದರು ಬೇರೆ ಬ್ರಾಹ್ಮಣರನ್ನು ಹುಡುಕಿಕೊಳ್ಳುವೆ ಎಂದು ಭಗವಂತನು ಹೇಳಿದನು.

ಪುರೋಹಿತರು ಉದ್ವಿಗ್ನರಾಗಿ ರಾಜಿನಾಮೆ ಬರೆದುಕೊಟ್ಟರು. ಪತ್ರವನ್ನು ಪಡೆದು ಭಗವಂತನು ಅಲ್ಲಿಂದ ಬರುವಾಗ ದಾರಿಯಲ್ಲಿ ಒರ್ವ ಮೂರ್ಖ, ನಿರ್ಧನ ಬ್ರಾಹ್ಮಣ ಕಂಡು ಬಂದನು. ಭಗವಂತನೆಂದು ಮಹಾರಾಜ ! ನೀವು ನನ್ನ ಮನೆಗೆ ಶ್ರಾದ್ಧ ಮಾಡಿಸಲು ಬರುವಿರೋ ?

ಬ್ರಾಹ್ಮಣನು ವಿನಮ್ರನಾಗಿ ಹೇಳಿದ – ನರಸೀಮೆಹತಾರವರೇ ! ನಾನು

ಓದು-ಬರಹ ಕಲಿತನವಲ್ಲ; ಕೇವಲ ಕೃಷಿಮಾಡಿ ನನ್ನ ಪರಿವಾರವನ್ನು ಸಾಕುತ್ತಿದ್ದೇನೆ. ಆದ್ದರಿಂದ ನಾನು ನಿಮ್ಮ ಕಾರ್ಯಕ್ಕೆ ಯೋಗ್ಯನಲ್ಲ; ನೀವು ದಯಮಾಡಿ ಬೇರೆ ಯಾರಾದರೂ ಬ್ರಾಹ್ಮಣರನ್ನು ಹುಡುಕಿಕೊಳ್ಳಿ.

ಸ್ವಾಮಿ ! ನೀವೇ ನಿಜವಾದ ಬ್ರಾಹ್ಮಣರಾಗಿದ್ದೀರಿ, ಎಲ್ಲವನ್ನೂ ಬಲ್ಲವ ರಾಗಿದ್ದೀರಿ. ಯಾವ ಬ್ರಾಹ್ಮಣನು ವಿದ್ವಾಂಸನಾಗಿದ್ದು ಅಹಂಕಾರ ಮದದಿಂದ ಮತ್ತನಾಗಿದ್ದಾನೋ, ಅವನು ಬ್ರಾಹ್ಮಣತ್ವದಿಂದ ಗಾವುದ ದೂರದಲ್ಲಿದ್ದಾನೆ. ಅಂತಹ ಬ್ರಾಹ್ಮಣರ ಆವಶ್ಯಕತೆ ನನಗಿಲ್ಲ. ನೀವು ದಯಮಾಡಿ ನನ್ನ ಮನೆಗೆ ದಯಮಾಡಿರಿ; ನಿಮ್ಮಿಂದ ನನ್ನ ಕಾರ್ಯ ನೆರವೇರಬಹುದು. ಎಂದು ಹೇಳಿ ಆ ಮೂರ್ಖ ಬ್ರಾಹ್ಮಣನನ್ನು ಮನೆಗೆ ಕರೆದುಕೊಂಡು ಬಂದನು.

ಭಗವಂತನ ಆಜ್ಞಾನುಸಾರ ಮನೆಯಲ್ಲಿ ಶ್ರಾದ್ಧದ ಎಲ್ಲ ಸಾಮಗ್ರಿ ಸಿದ್ಧಗೊಳಿಸಲಾಯಿತು. ನರಸೀಮೆಹತಾರೂಪೀ ಭಗವಂತನು ಶ್ರಾದ್ಧ ಮಾಡಲು ಕುಳಿತನು. ಭಗವಂತನ ಸ್ಪರ್ಶವಾದ ಮಾತ್ರದಿಂದ ಮೂರ್ಖಬ್ರಾಹ್ಮಣನು ಸಮಸ್ತ ವೇದ-ಶಾಸ್ತ್ರಗಳ ಪ್ರಕಾಂಡ ಪಂಡಿತನಾದನು. ಅವನು ಅತ್ಯಂತ ವಿಧಿ ಪೂರ್ವಕ ಶ್ರಾದ್ಧವನ್ನು ಮಾಡಿಸಿದನು. **'ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್ ।'** ಇಂತಹ ಶಕ್ತಿಯುಳ್ಳ ಭಗವಂತನೇ ಇರುವಾಗ ಇದರಲ್ಲಿ ಆಶ್ಚರ್ಯವೇನಿದೆ ? ಶ್ರಾದ್ಧ ಮುಗಿದ ಮೇಲೆ ಭಗವಂತನು ಬ್ರಾಹ್ಮಣರಿಗೆ ಐವತ್ತು ಸ್ವರ್ಣ ಮುದ್ರೆಗಳನ್ನು ದಕ್ಷಿಣೆಯಾಗಿ ಕೊಟ್ಟನು ಮತ್ತು ತುಂಬಾ ಆದರದಿಂದ ಭೋಜನ ಮಾಡಿಸಿದನು. ನಾಗರ-ವೇಷಧಾರೀ ಭಗವಂತನ ಅನುಚರರು ಸಮಸ್ತ ನಾಗರ ಜಾತಿಯವರನ್ನು ಕರೆದುಕೊಂಡು ಬಂದು ಅತ್ಯಂತ ಪ್ರೇಮಾದರಗಳಿಂದ ಭೋಜನ ಮಾಡಿಸಿದರು. ಎಲ್ಲರೂ ಅತ್ಯಂತ ಸಂತುಷ್ಟರಾದರು. ಈ ಪ್ರಕಾರ ಸಾಯಂಕಾಲದ ವರೆಗೆ ಭಕ್ತರಾಜನ ಎಲ್ಲ ಕಾರ್ಯಗಳನ್ನು ಮುಗಿಸಿ ತನ್ನ ಅನುಚರರೊಂದಿಗೆ ಭಗವಂತನು ಅಂತರ್ಹಿತ ನಾದನು.

ಎಲ್ಲ ಕಾರ್ಯ ಮುಗಿದ ಮೇಲೆ ಕೊನೆಯಲ್ಲಿ ಮಾಣಿಕಗೌರಿಯು ಪ್ರಸಾದ ಸ್ವೀಕರಿಸಲು ಕುಳಿತಳು. ಸರಿಯಾಗಿ ಇದೇ ಸಮಯಕ್ಕೆ ಭಕ್ತರಾಜರು ಕೈಯಲ್ಲಿ ತುಪ್ಪ ಹಿಡಿದುಕೊಂಡು ಮನೆಯಲ್ಲಿ ಪ್ರವೇಶಿಸಿದರು. ಅವರು ಹೊತ್ತಾದ ರಿಂದ ಮತ್ತು ಶ್ರಾದ್ಧ ಮಾಡದೇ ಇರುವ ಕಾರಣ ಮನಸ್ಸಿನಲ್ಲೇ ಸಂಕುಚಿತ ರಾಗಿದ್ದರು. ಅವರನ್ನು ನೋಡುತ್ತಲೇ ಮಾಣಿಕಗೌರಿಯು ಆಶ್ಚರ್ಯದಿಂದ

ಕೇಳಿದಳು - ಸ್ವಾಮಿ ! ಬ್ರಾಹ್ಮಣ ಭೋಜನವೆಲ್ಲ ಮುಗಿಸಿ ನೀವು ಇದೇನು ತಂದಿರುವಿರಿ ?

ಏನೇ ! ನೀನು ಏನು ಹೇಳುತ್ತಿರುವುದು ? ಬ್ರಾಹ್ಮಣಭೋಜನ ಮತ್ತು ಶ್ರಾದ್ಧವಾಯಿತೇ ? ನಾನಾದರೋ ಬೆಳಿಗ್ಗೆಯೇ ತುಪ್ಪ ತರಲು ಹೋದವನು ಈಗ ಬರುತ್ತಿದ್ದೇನೆ. ದಾರಿಯಲ್ಲಿ ಓರ್ವ ಭಕ್ತನು ಸಿಕ್ಕಿದ. ಅವರಲ್ಲಿ ಸ್ವಲ್ಪ ಭಜನೆಮಾಡಿ ನಾನು ಈಗಲೇ ಬಂದಿರುವೆನು. ಇದರಿಂದ ನನಗೆ ತಡವೂ ಆಯಿತು ಎಂದು ನರಸೀಮೆಹತಾರವರು ವಿಸ್ಮಯರಾಗಿ ಹೇಳಿದರು.

ಸ್ವಾಮಿ ! ಹಾಗಾದರೆ ವಿಧಿವತ್ತಾಗಿ ಶ್ರಾದ್ಧಗೈದು ಸಾವಿರಾರು ಬ್ರಾಹ್ಮಣರಿಗೆ ಭೋಜನ ಯಾರು ಮಾಡಿಸಿದರು ? ನಾನಾದರೋ ಸ್ಪಷ್ಟವಾಗಿ ನೋಡುತ್ತಿದ್ದೆ, ನೀವೇ ಎಲ್ಲವನ್ನು ಮಾಡಿದುದು. ನೀವು ಏನೋದ ಮಾಡುತ್ತಿದ್ದಿರೋ ಎಂದು ಚಕಿತಳಾಗಿ ಮಾಣಿಕಗೌರಿಯು ಹೇಳಿದಳು.

ಪ್ರಿಯೇ ! ನಾನು ಹಾಸ್ಯಮಾಡುತ್ತಿಲ್ಲ ; ನಾನಾದರೋ ಈಗ ಬಂದಿದ್ದೇನೆ. ಅವಶ್ಯವಾಗಿ ಇದು ನನ್ನ ಪ್ರಿಯತಮ ಶ್ರೀಕೃಷ್ಣನ ಕಾರ್ಯವಾಗಿದೆ. ನನ್ನ ಸ್ವರೂಪವನ್ನಾಂತು ಮನಮೋಹನನೇ ನನ್ನ ಧರ್ಮವನ್ನು ಕಾಪಾಡಿದನು. ಭಗವಂತನ ದಯೆ ಎಷ್ಟು ಮಹಾನ್ ಆಗಿದೆ. ಇಷ್ಟು ಹೇಳುತ್ತಾ ಪತಿ-ಪತ್ನಿಯರ ಕಣ್ಣುಗಳಿಂದ ಪ್ರೇಮಾಶ್ರುಗಳು ಕೋಡಿಯಾಗಿ ಹರಿದುವು. ಅವರು ಅತ್ಯಂತ ಪ್ರೇಮಮಗ್ನರಾಗಿ ಭಗವದ್ಭಜನೆ ಮಾಡತೊಡಗಿದರು.

ಭಜನೆಯ ಪ್ರಭಾವ

ಇಂದು ಏಕಾದಶಿಯ ದಿನ. ಏಕಾದಶಿಯ ದಿನ ಉಪವಾಸವಿದ್ದು ದಿನವಿಡೀ ಭಗವದ್ಭಜನೆಯಲ್ಲದೆ ಬೇರೆ ಯಾವ ಕಾರ್ಯವನ್ನು ಮಾಡದಿರುವ ನಿಯಮ ಭಕ್ತದಂಪತಿಯವರದಾಗಿತ್ತು. ಆದ್ದರಿಂದ ಇಂದು ನಿತ್ಯಕರ್ಮಗಳಿಂದ ನಿವೃತ್ತರಾಗಿ ದಂಪತಿಗಳಿಬ್ಬರೂ ಭಜನೆಯಲ್ಲಿ ಮುಳುಗಿದರು. ಬೇರೆ ದಿನಗಳಲ್ಲಿ ಭೋಜನಾದಿಗಳ ಜಂಜಾಟವಿರುತ್ತಿತ್ತು. ಆದರಿಂದ ಭಜನೆಯಲ್ಲಿ ಅಡ್ಡಿ ಉಂಟಾಗುತ್ತಿತ್ತು. ಇಂದು ಅದರಿಂದಲೂ ಬಿಡುಗಡೆ. ಆದರಿಂದ ಬೇರೆ ದಿನಗಳಿಂದ ಇಂದು ಎಷ್ಟೋ ಅಧಿಕವಾದ ಆನಂದವಿತ್ತು; ನಿಶ್ಚಿಂತ ರೂಪದಿಂದ ಇಬ್ಬರ ಭಜನೆ ನಡೆಯುತ್ತಿತ್ತು.

ಇಂದಿನ ಕಾಲದಲ್ಲಿ ಧಾರ್ಮಿಕ ಕಾರ್ಯಗಳಲ್ಲಿ ಶ್ರದ್ಧೆಯಿಲ್ಲದ ಅನೇಕ ನವಶಿಕ್ಷಿತ ಯುವಕರು ಏಕಾದಶೀ ಮೊದಲಾದ ದಿನಗಳಲ್ಲಿ ಉಪವಾಸವಿರುವುದು ಯಾವ ಅವಶ್ಯಕತೆಯನ್ನು ತಿಳಿಯುವುದಿಲ್ಲ. ಅವರ ದೃಷ್ಟಿಯಲ್ಲಿ ಇವೆಲ್ಲ ಮಾತುಗಳು ಆರೋಗ್ಯದ ವಿರುದ್ಧವಾಗಿವೆ. ಆದರೆ ವಾಸ್ತವವಾಗಿ ನೋಡಿದರೆ ಅವರು ಭ್ರಮೆಯಲ್ಲಿದ್ದಾರೆ. ನಮ್ಮ ಪ್ರಾಚೀನ ಋಷಿ-ಮುನಿಗಳು ಏಕಾದಶೀ ಆದಿ ವ್ರತಗಳನ್ನು ಧರ್ಮದೊಂದಿಗೆ ಜೋಡಿಸಿ ನಮಗೆ ದೊಡ್ಡ ಉಪಕಾರ ಮಾಡಿದ್ದಾರೆ. ಒಂದು ವೇಳೆ ನಾವು ಧಾರ್ಮಿಕ ತತ್ತ್ವವನ್ನು ಬಿಟ್ಟರೂ ಕೂಡ ವೈಜ್ಞಾನಿಕ ದೃಷ್ಟಿಯಿಂದ ಈ ವ್ರತಗಳ ಮಹತ್ವ ತುಂಬಾ ಇದೆ. ಹತ್ತು ಇಂದ್ರಿಯಗಳು ಮತ್ತು ಮನಸ್ಸು ಸಂಯಮಿಸುವುದು ಮನುಷ್ಯನಿಗಾಗಿ ಅತ್ಯಂತ ಅವಶ್ಯವಾಗಿದೆ ಎಂಬುದನ್ನು ಎಲ್ಲರೂ ಸ್ವೀಕರಿಸುವರು.

ಆದರೆ ಮಾಣಿಕಗೌರಿಯ ಶರೀರ ಇಂದು ಸ್ವಲ್ಪ ಅಸ್ವಸ್ಥವಾಗಿತ್ತು. ಅವಳಿಗೆ ಸಾಧಾರಣ ಜ್ವರ ಬಂದಿತ್ತು. ಆದರೂ ಅವಳು ಶರೀರದ ಯಾವ ಪರಿವೆ ಇಲ್ಲದೆ ಪತಿಯ ಜೊತೆಗೆ ಭಜನೆಮಾಡುವುದಲ್ಲಿ ತಲ್ಲೀನಳಾಗಿದ್ದಳು. **''ಕೋಟಿ ಜನ್ಮಾರ್ಜಿತೆ ಪುಣ್ಯೇ ಕೃಷ್ಣೇ ಭಕ್ತಿಃ ಪ್ರಜಾಯತೇ ।''** ಈ ಶಾಸ್ತ್ರವಚನವನ್ನು ಲಕ್ಷ್ಯದಲ್ಲಿಟ್ಟು ಅವಳು ತನ್ನ ಮನುಷ್ಯಜನ್ಮವನ್ನು ಸಫಲವಾಗಿಸುತ್ತಿದ್ದಳು. ಪತಿಪತ್ನಿಯರಿಬ್ಬರೂ ಈ ಮಾಯಿಕ ಜಗತ್ತಿನಿಂದ ಬೇರೆಯಾಗಿ ಭಜನಾನಂದದ ಅನುಪಮ ಜಗತ್ತಿನಲ್ಲಿ ವಿಹರಿಸುತ್ತಿದ್ದಾರೋ ಎಂಬಂತೆ ಭಗವತ್ ಪ್ರೇಮದಲ್ಲಿ ಮಗ್ನರಾಗಿದ್ದರು.

ಭಜನೆ ಮಾಡುತ್ತಾ-ಮಾಡುತ್ತಾ ಸಾಯಂಕಾಲವಾಯಿತು. ಭಕ್ತರಾಜರು

ಭಜನೆಯನ್ನು ನಿಲ್ಲಿಸಿ ಸ್ನಾನ ಮಾಡಲು ದಾಮೋದರ ಕುಂಡಕ್ಕೆ* ಬಂದರು. ಸ್ನಾನ ಮುಗಿಸಿ ಅವರು ಹತ್ತಿರದ ಉದ್ಯಾನದಿಂದ ಹೂವು, ತುಳಸೀಯನ್ನು ಕಿತ್ತುಕೊಂಡು ಮನೆಯ ಕಡೆಗೆ ಹೊರಟರು. ಅವರ ಮುಖದಿಂದ **'ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ'** ಎಂಬ ಧ್ವನಿ ನಿರಂತರವಾಗಿ ನಡೆಯುತ್ತಿತ್ತು.

ದಾರಿಯಲ್ಲಿ ಹೋಗುತ್ತಿರುವಾಗ ಅಕಸ್ಮಾತ್ತಾಗಿ ಭಕ್ತರಾಜರೇ! ಜಯ ಶ್ರೀಕೃಷ್ಣ (ವಂದನೆಗಳು) ಎಂಬ ಧ್ವನಿ ಕಿವಿಗೆ ಬಿತ್ತು. ಎಚ್ಚೆತ್ತು ದೃಷ್ಟಿಯನ್ನು ಅತ್ತ ಹೊರಳಿಸಿದಾಗ ಸ್ವಲ್ಪ ದೂರದಲ್ಲಿ ಓರ್ವ ಅಂತ್ಯಜನು ಕೈ ಜೋಡಿಸಿ ನಮಸ್ಕರಿಸುವುದನ್ನು ನೋಡಿದರು. ಮೊದಲಿನಿಂದಲೂ ಆ ಅಂತ್ಯಜನ ಶ್ರದ್ಧೆ ಭಕ್ತರಾಜರ ಮೇಲಿತ್ತು. ಅವರು ಪ್ರತಿದಿನ ಸ್ನಾನಮಾಡಿ ಮರಳುವಾಗ ಭಕ್ತರಾಜರ ದರ್ಶನ ಪಡೆಯುತ್ತಿದ್ದನು. ಅವನ ದೃಷ್ಟಿಯಲ್ಲಿ ಭಕ್ತರಲ್ಲಿ ಮತ್ತು ಭಗವಂತನಲ್ಲಿ ಯಾವ ಭೇದವೂ ಇರಲಿಲ್ಲ.

ನರಸೀಮೆಹತಾರವರಾದರೋ **'ಆತ್ಮವತ್ಸರ್ವಭೂತೇಷು'** ಈ ಭಾವವನ್ನು ಇರಿಸುವವರಾಗಿದ್ದರು. ಅವರು **'ಜಯಶ್ರೀಕೃಷ್ಣ'** ಎಂದು ಉತ್ತರಿಸಿದರು.

ಭಗವದ್ಭಕ್ತರೇ ! ನಾನು ನಿಮ್ಮಲ್ಲಿ ಒಂದು ವಿನಂತಿ ಮಾಡಲು ಬಯಸುತ್ತೇನೆ ಎಂದು ಅಂತ್ಯಜನು ವಿನಮ್ರನಾಗಿ ನಿವೇದಿಸಿಕೊಂಡನು.

ಅಯ್ಯಾ ! 'ನನ್ನಲ್ಲಿ ವಿನಂತಿ ಮಾಡುವಂತಹ ಯಾವ ಕಾರ್ಯ ಬಂದೊದಗಿದೆ ? ನಾನಾದರೋ ಶ್ರೀಕೃಷ್ಣನ ನಾಮವಲ್ಲದೆ ಬೇರೆ ಏನೂ ತಿಳಿಯುವುದಿಲ್ಲ, ಆದರೂ ನನಗೆ ಯೋಗ್ಯವಾದ ಯಾವುದಾದರು ಕಾರ್ಯವಿದ್ದರೆ ಸಂಕೋಚಬಿಟ್ಟು ಹೇಳು' ಎಂದು ನರಸೀಮೆಹತಾರವರು ಅಭಿಮಾನ ರಹಿತರಾಗಿ ಹೇಳಿದರು.

ಮೆಹತಾರವರೇ ! ನಾನು ಯಾವುದೇ ಸಾಂಸಾರಿಕ ಕಾರ್ಯಕ್ಕಾಗಿ ವಿನಂತಿಸುವುದಿಲ್ಲ. ಇಂದು ಏಕಾದಶೀ ಉಪವಾಸವನ್ನು ನಾನೂ ಮಾಡಿದ್ದೇನೆ. ಆದುದರಿಂದ ರಾತ್ರಿಯಲ್ಲಿ ಜಾಗರಣೆ ಮಾಡುವ ನಿಮಿತ್ತ ಭಜನೆ ಮಾಡಿಸಲು ಬಯಸುತ್ತೇನೆ. ನನ್ನ ವಿನಂತಿಯನ್ನು ಸ್ವೀಕರಿಸಿ ನೀವು ಬಂದು ನನ್ನ ಅಂಗಳವನ್ನು

---

* ನರಸೀಮೆಹತಾರವರು ಪ್ರತಿದಿನ ಇದೇ ಕುಂಡದಲ್ಲಿ ಸ್ನಾನ ಮಾಡುತ್ತಿದ್ದರು. ಇಂದೂ ಕೂಡ ಆ ಕುಂಡವು ಜೂನಾಗಡದಿಂದ ಎರಡು ಮೈಲಿ ದೂರದಲ್ಲಿ ಗಿರಿನಾರ ಪರ್ವತದ ತಪ್ಪಲಿನಲ್ಲಿ ಇದೆ. ತುಂಬಾ ದೂರ-ದೂರದ ಯಾತ್ರಿಗಳು ಈ ದಾಮೋದರ ಕುಂಡದಲ್ಲಿ ಸ್ನಾನ ಮಾಡಲು ಇಂದೂ ಬರುತ್ತಿದ್ದಾರೆ.

ಪವಿತ್ರರಾಗಿಸುವಿರೇನು ? ಅಂತ್ಯಜನು ಶ್ರದ್ಧೆಯಿಂದೊಡಗೂಡಿ ತನ್ನ ಇಚ್ಛೆಯನ್ನು ಪ್ರಕಟಿಸಿದನು.

ಅಯ್ಯಾ ! ಈ ಕೆಲಸಕ್ಕಾಗಿ ವಿನಂತಿ ಮಾಡುವ ಅವಶ್ಯಕತೆ ಏನಿದೆ ? ಭಗವಂತನ ಭಜನೆ ಮಾಡುವುದು ನನ್ನ ಕೆಲಸವೇ ಆಗಿದೆ. ಸ್ವಯಂ ಭಗವಂತನೇ ಹೀಗೆ ಹೇಳಿರುವನು.

ನಾಹಂ ವಸಾಮಿ ವೈಕುಂಠೇ ಯೋಗಿನಾಂ ಹೃದಯೇ ನ ಚ ।
ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ ॥

ಯಾವ ಸ್ಥಳದಲ್ಲಿ ಭಗವಂತನ ಭಜನೆಯಾಗುತ್ತದೋ ಅದು ಸಾಕ್ಷಾತ್ ವೈಕುಂಠವೇ ಆಗಿದೆ. ಯಾವ ಮನುಷ್ಯನು ಭಗವಂತನ ನಾಮವನ್ನು ಕೊಂಡಾಡುತ್ತಾನೋ ಅವನು ಹೀನ ಜಾತಿಯವನಾದರೂ ಕೂಡ ದೇವ ಸಮಾನನಾಗಿದ್ದಾನೆ. ಭಗವದ್ಭಜನೆಯ ಪ್ರಭಾವವನ್ನು ತಿಳಿದಿದ್ದರೂ ಭಗವಂತನಿಗೆ ವಿಮುಖನಾಗಿರುವ ಮನುಷ್ಯನು, ಉಚ್ಚಕುಲದಲ್ಲಿ ಹುಟ್ಟಿದ್ದರೂ ಆತ್ಮಹತ್ಯೆಯ ಮಹಾಪಾಪಕ್ಕೆ ಭಾಗಿಯಾಗುತ್ತಾನೆ. ಭಗವಂತನ ಭಜನೆ ಮಾಡಲು ಮತ್ತು ಕೇಳಲು ಬ್ರಾಹ್ಮಣನಿಂದ ಹಿಡಿದು ಚಾಂಡಾಲವರೆಗೆ ಎಲ್ಲರಿಗೂ ಅಧಿಕಾರವಿದೆ. ಶ್ರೀಮದ್ಭಗವದ್ಗೀತೆಯಲ್ಲಿ- ಬ್ರಾಹ್ಮಣ, ಆಕಳು, ಆನೆ, ನಾಯಿ ಮತ್ತು ಚಾಂಡಾಲನಲ್ಲಿಯೂ ಸಮದೃಷ್ಟಿಯನ್ನಿರಿಸುವವನು ನಿಜವಾದ ಜ್ಞಾನೀ ಎಂದು ಹೇಳಲಾಗಿದೆ. ಸಾಮಾಜಿಕ ಆಚಾರ - ವಿಚಾರದಲ್ಲಿ ಭೇದಗಳಿದ್ದರೂ ಅದು ಇರಲೇಬೇಕು. ಅದಕ್ಕಾಗಿ ಭಗವಂತನು ಸಮದೃಷ್ಟಿಯನ್ನಿರಿಸಲು ಹೇಳಿದುದು, ಎಲ್ಲ ವಿಷಯಗಳಲ್ಲಿ ಸಮಾನವಾಗಿ ವರ್ತಿಸಲು ಅಲ್ಲ. ಆದರೂ ಭಜನೆಯ ಅಧಿಕಾರ ಎಲ್ಲರಿಗಿದೆ. ಆದ್ದರಿಂದ ನೀನು ನಿನ್ನ ಅಂಗಳದಲ್ಲಿ ತುಳಸೀಕಟ್ಟೆಯ ಬಳಿ ಸೆಗಣಿಯಿಂದ ನೆಲವನ್ನು ಸಾರಿಸಿ, ರಂಗವಲ್ಲಿಯನ್ನಿಟ್ಟು ಭಜನೆಯ ಸಿದ್ಧತೆಮಾಡು. ನಾನು ನಿನ್ನ ಇಚ್ಛೆಯಂತೆ ಇಂದು ರಾತ್ರಿ ನಿನ್ನ ಅಂಗಳದಲ್ಲಿ ಭಗವಂತನ ಭಜನೆ ಮಾಡುವೆನು.

ಈ ಪ್ರಕಾರ ಅಂತ್ಯಜ ಭಕ್ತನಿಗೆ ಮಾತನ್ನು ಕೊಟ್ಟು ನರಸೀಮೆಹತಾರವರು ತಮ್ಮ ಮನೆಗೆ ಬಂದರು. ಅಂತ್ಯಜನೂ ಭಕ್ತರ ಆಜ್ಞೆಯಂತೆ ಎಲ್ಲ ಸಿದ್ಧತೆ ಮಾಡಿ, ಬೇರೆ ಸಾಧು-ಸಂತರನ್ನು, ಭಕ್ತರನ್ನು ಆಮಂತ್ರಿಸಿದನು. ನರಸೀಮೆಹತಾರವರು ತಮ್ಮ ಮನೆಯಲ್ಲಿ ಭಗವಂತನ ಪೂಜೆಮಾಡಿ, ಕರತಾಳ, ಮೃದಂಗ ಮೊದಲಾದ

ಭಜನೆಯ ಸಾಮಗ್ರಿಯನ್ನು ತೆಗೆದುಕೊಂಡು ಅಂತ್ಯಜ ಭಕ್ತನ ಅಂಗಳದಲ್ಲಿ ಉಪಸ್ಥಿತರಾದರು ಹಾಗೂ ಭಜನೆ ಮಾಡತೊಡಗಿದರು. ಅವರು ಬಾಹ್ಯ ಜಗತ್ತನ್ನು ಸಂಪೂರ್ಣವಾಗಿ ಮರೆತು ಭಗವತ್ ಪ್ರೇಮದಲ್ಲಿ ಉನ್ಮತ್ತರಾದರು. ಅವರ ನೇತ್ರಗಳಿಂದ ಆನಂದಾಶ್ರುಗಳು ಧಾರಾಕಾರವಾಗಿ ಹರಿಯುತ್ತಿದ್ದುವು. ಅವರು ಹೆಚ್ಚೆಚ್ಚು ಉತ್ಸಾಹದಿಂದ ಕೀರ್ತನೆ ಮಾಡುತ್ತಾ ಇದ್ದರು. ಅವರ ಸುತ್ತಲೂ ಕುಳಿತಿರುವ ಶ್ರೋತೃಗಳು ಮಂತ್ರಮುಗ್ಧ ಸರ್ಪದಂತೆ ಏಕಾಗ್ರತೆಯಿಂದ ಭಜನಾನಂದವನ್ನು ಸೂರೆಗೊಳ್ಳುತ್ತಿದ್ದರು. ಆ ಸಮಯಲ್ಲಿ ಶಾಂತಿ, ಪವಿತ್ರತೆಯ ಮತ್ತು ಆನಂದದ ಸಾಮಾಜ್ಯವೇ ಹರಡಿತ್ತೋ ಎಂಬಂತಿತ್ತು. ಈ ಪ್ರಕಾರ ರಾತ್ರಿಯಿಡೀ ಭಕ್ತರಾಜರು ಭಜನೆ ಮಾಡುತ್ತಲೇ ಇದ್ದರು.

ಆ ಕಡೆ ಮನೆಯಲ್ಲಿ ಮಾಣಿಕಗೌರಿಯ ಜ್ವರವು ಮೆಲ್ಲ-ಮೆಲ್ಲನೆ ಭೀಷಣ ರೂಪವನ್ನು ಧರಿಸಿತು. ಆ ಸಮಯಲ್ಲಿ ಅವರ ಶುಶ್ರೂಷೆ ಮಾಡುವವರು ಮನೆಯಲ್ಲಿ ಯಾರೂ ಇರಲಿಲ್ಲ. ಅವಳೂ ಕೂಡ ನಿರಂತರ ಭಗವನ್ನಾಮವನ್ನು ಕೊಂಡಾಡುತ್ತಿದ್ದಳು. ಎಚ್ಚರವಿಲ್ಲದ ಸ್ಥಿತಿಯಲ್ಲಿಯೂ ಅವಳ ನಾಲಿಗೆ ಭಗವಂತನನ್ನು ಕರೆಯುತ್ತಿತ್ತು. ಅವಳು ಪ್ರಪಂಚದ ಎಲ್ಲ ಸಂಬಂಧವನ್ನು ಕಡಿದು ಸಮಾಧಿಸ್ಥ ಅವಸ್ಥೆಯಲ್ಲಿ ಕೇವಲ ಭಗವಂತನ ಸಂಬಂಧವನ್ನೇ ಪಡೆದುಕೊಂಡಿದ್ದಳೋ ಎಂಬಂತಿತ್ತು. ಪ್ರಾತಃಕಾಲ ಭಜನೆಯನ್ನು ಮುಗಿಸಿ ನರಸೀಮೆಹತಾರವರು ಮನೆಗೆ ಬಂದು ನೋಡಿದಾಗ ಪತ್ನಿಯು ಮರಣಾಸನ್ನ ಸ್ಥಿತಿಯಲ್ಲಿದ್ದಾಳೆ, ಕೇವಲ ಕೊನೆಯ ಶ್ವಾಸ ಎಣಿಸುತ್ತಿದ್ದಳು. ನರಸೀಮೆಹತಾರವರು ಪತ್ನಿಯ ಈ ಸ್ಥಿತಿಯನ್ನು ಕಂಡು ಅವಳ ಸೇವೆಯಲ್ಲಿ ತೊಡಗಿದರು ; ಭಗವನ್ನಾಮವನ್ನು ಹೇಳುತ್ತಾ ಅವಳ ಶುಶ್ರೂಷೆ ಮಾಡತೊಡಗಿದರು. ಆದರೆ ಭಗವಂತನ ವಿಧಾನ ಬೇರೆಯೇ ಆಗಿತ್ತು. ಪತಿಯು ಬಂದಾಗ ಒಮ್ಮೆ ಕಣ್ಣುಬಿಟ್ಟು ಅವರ ದರ್ಶನಗೈದು, ಕೊನೆಯಬಾರಿ ಭಗವಂತನ ನಾಮವನ್ನು ಜೋರಾಗಿ ಉಚ್ಚರಿಸಿ ಈ ಮರ್ತ್ಯಲೋಕದಿಂದ ಎಂದೆಂದಿಗೂ ಸಂಬಂಧವನ್ನು ಹರಿದುಕೊಂಡಳು. ಆ ಸಮಯದ ದೃಶ್ಯವು ವಜ್ರಹೃದಯದ ಮನುಷ್ಯನನ್ನೂ ಕೂಡ ಕರಗಿಸುಷ್ಟು ಶಕ್ತಿಯುತವಾಗಿತ್ತು. ಹಾಗಿರುವಾಗ ಏಕೈಕ ನವವಿವಾಹಿತ ಯುವಕ ಪುತ್ರನ ಮೃತ್ಯು ಹಾಗೂ ಪ್ರೌಢ ಅವಸ್ಥೆಯಲ್ಲಿ ಸಹಧರ್ಮಿಣಿಯ ದೇಹಾಂತ ಎರಡೂ ವಿಪತ್ತುಗಳು ಒಂದರ ಮೇಲೆ ಒಂದು ಬರುವುದು ದುಃಖದ ಪರಮಾವಧಿಯೆಂದೇ ಹೇಳಬೇಕು. ಆದರೂ ಕೂಡ ವೀತರಾಗೀ ಭಕ್ತಪ್ರವರ ನರಸೀ ಮೆಹತಾರವರು ಸ್ಥಿರ ಮತ್ತು

ಶಾಂತರಾಗಿದ್ದರು. ಅವರು ವಾಸ್ತವವಾಗಿ ಈ ಜನ್ಮ-ಮರಣಮಯ ಸಂಸಾರದಲ್ಲಿ ಎಲ್ಲಿ ಇರುತ್ತಿದ್ದರು ? ಇಲ್ಲಿಯ ಯಾವ ದುಃಖ- ಶೋಕಗಳು ಅವರಿಗೆ ಸ್ಪರ್ಶಿಸಬಲ್ಲವು ? ಅವರಾದರೋ ಸದಾಕಾಲ ಯಾವುದೋ ದಿವ್ಯ-ಲೋಕದಲ್ಲಿ ವಾಸಮಾಡುತ್ತಿದ್ದರು, ಅಲ್ಲಿ ನಿರಂತರ ಏಕರಸ ಆನಂದವೇ ಪ್ರವಹಿಸುತ್ತಿತ್ತು.

ಪತ್ನಿಯ ವಿಯೋಗವನ್ನು ಕಂಡು ಭಕ್ತರಾಜರು ವಿಚಾರ ಮಾಡಿದರು ಈ ಪ್ರಪಂಚದಲ್ಲಿ ಯಾವ ವಸ್ತುವಿನೊಂದಿಗೆ ಇದ್ದ ಕಾರಣ ನಾನು ಸಂಸಾರೀ ಎಂದು ಹೇಳಿಸಿಕೊಳ್ಳುತ್ತಿದ್ದೇನೋ, ಆ ವಸ್ತುವನ್ನು- ಪತ್ನಿಯನ್ನು ಇಂದು ಪರಮಾತ್ಮನು ನನ್ನಿಂದ ಬೇರೆಯಾಗಿಸಿದನು, ಇದು ಭಗವಂತನ ಅನುಗ್ರಹವೇ ಆಗಿದೆ. ಭಜನೆ ಮಾಡುವುದರಲ್ಲಿ ಸಹಯೋಗ ಕೊಡುತ್ತಿದ್ದ ಸಂಗಿನಿಯ ವಿಯೋಗವಾಯಿತು, ಆದರೂ ಇದರಿಂದ ಭಜನೆ ಹೆಚ್ಚುವ ಸಂಭವವೇ ಇದೆ. ಕಳೆದು ಹೋದ ವಸ್ತುವಿನ ಬಗ್ಗೆ ಶೋಕಮಾಡದೆ, ಭಗವಂತನ ಇಚ್ಛೆಯಂತೆ ಏನೆಲ್ಲ ನಡೆಯುತ್ತದೋ ಅದು ನ್ಯಾಯ ಪೂರ್ಣ ಮತ್ತು ಮಂಗಲಮಯವೇ ಆಗುತ್ತದೆ ಎಂದು ತಿಳಿಯುವುದೇ ಉಚಿತವಾಗಿದೆ. ದುಃಖಿಬಂದಾಗ ಶೋಕ ಮಾಡುವುದರಿಂದ ಮನುಷ್ಯನಿಗೆ ಸಿಗುವುದಾದರೂ ಏನು ? ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನೂ ಕೂಡ ಹೀಗೇ ಆಜ್ಞಾಪಿಸಿದ್ದಾನೆ -

ಯೋನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ।
ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಃ ಸ ಮೇ ಪ್ರಿಯಃ ॥
(೧೨/೧೭)

ಅರ್ಥಾತ್ 'ಯಾರು ಎಂದೂ ಹರ್ಷಿತನಾಗುವುದಿಲ್ಲವೋ, ದ್ವೇಷಿಸುವುದಿಲ್ಲವೋ, ಶೋಕಿಸುವುದಿಲ್ಲವೋ, ಆಕಾಂಕ್ಷೆ ಮಾಡುವುದಿಲ್ಲವೋ, ಶುಭಾಶುಭ ಕರ್ಮಗಳ ಫಲಗಳ ತ್ಯಾಗಿಯಾಗಿದ್ದಾನೋ ಆ ಭಕ್ತಿಯುಳ್ಳ ಪುರುಷನು ನನಗೆ ಪ್ರಿಯನಾಗಿದ್ದಾನೆ.' ಆದುದರಿಂದ ಈ ಸಾಂಸಾರಿಕ ಕ್ಷಣಿಕ ಸುಖವು ಬಂದಾಗ, ಹರ್ಷ ಮತ್ತು ದುಃಖಿ ಉಂಟಾದಾಗ ಶೋಕಿಸುವುದು ಭಗವದಾಜ್ಞೆಯ ಉಲ್ಲಂಘನೆ ಮಾಡುವುದಾಗಿದೆ. ಈ ಪ್ರಕಾರ ವಿಚಾರ ಗೈದು ಅವರು ಶಾಂತ ಚಿತ್ತರಾಗಿ ಪತ್ನಿಯ ವಿಧಿಯಪೂರ್ವಕ ಅಗ್ನಿ ಸಂಸ್ಕಾರ ಮಾಡಿದರು ಹಾಗೂ ಉಳಿದ ಅಸ್ಥಿಗಳನ್ನು ಗಂಗೆಯಲ್ಲಿ ತೇಲಿಬಿಟ್ಟರು.

★ ★ ★ ★ ★

ಇತ್ತ ಅಂತ್ಯಜನ ಮನೆಯಲ್ಲಿ ಕೀರ್ತನೆ ಮಾಡಿದ ಸಮಾಚಾರ ನಾಗರ ಜಾತಿಯಲ್ಲಿ ಹರಡಿತು. ದುರ್ಜನ ಮನುಷ್ಯರು ಪರಛಿದ್ರಾನ್ವೇಷಣದಲ್ಲಿ ಚತುರರಾಗಿದ್ದು ಯಾವುದಾದರೂ ಪ್ರಕಾರದಿಂದ ಬೇರೆ ಮನುಷ್ಯರೊಡನೆ ದ್ವೇಷಮಾಡುವುದರಲ್ಲಿಯೇ ಅವರು ತಮ್ಮ ಕರ್ತವ್ಯದ ಇತಿಶ್ರೀ ಎಂದು ತಿಳಿಯುತ್ತಾರೆ. ಈ ರೀತಿಯ ನಾಗರರಿಗೆ ನರಸೀಮೆಹತಾನ ನಿಂದೆ ಮಾಡುವ ಒಂದು ನೆಪ ಸಿಕ್ಕಿತು. ನಾಗರರ ಕಟ್ಟೆಯ ಮೇಲೆ ನರಸೀಮೆಹತನ ಚರ್ಚೆ ಜೋರಾಗಿ ಶುರುವಾಯಿತು.

ಅಪ್ಪಾ ! ಆ ಭಕ್ತನಾದರೋ ಈಗ ಜಾತಿ-ನೀತಿ ಮರ್ಯಾದೆಯನ್ನು ರಸಾತಳಕ್ಕೆ ಅಟ್ಟಿ ಬಿಟ್ಟನು. ಅವನು ಈಗ ಮೇರೆ ಮಿರುತ್ತಿದ್ದಾನೆ. ನಮ್ಮ ಜಾತಿಯಲ್ಲಿ ಇಂತಹ ಒಂದು ಬಕಪಕ್ಷಿ ಭಕ್ತ ಹುಟ್ಟಿದುದು ನಮ್ಮ ದುರ್ಭಾಗ್ಯವಾಗಿದೆ ಎಂದು ಪ್ರಾರಂಭಿಸಿದನು.

ಸಾರಂಗಧರ ಮೆಹತಾನು ಗಂಭೀರವಾಗಿ- ಕೊನೆಗೆ ಏನಪ್ಪ ಮಾತು? ಸ್ಪಷ್ಟವಾಗಿ ಏಕೆ ಹೇಳುವುದಿಲ್ಲ? ನೀನು ಆ ಮಾಂತ್ರಿಕನಿಂದ ಏಕೆ ಹೆದರುತ್ತಿ? ಎಂದು ಹೇಳಿದನು.

ಏನು ನೀವು ಕೇಳಲಿಲ್ಲವೇ ! ಇದಾದರೋ ಎಲ್ಲರೂ ತಿಳಿದಿರುವರು, ನಿನ್ನೆ ಅವನು ಭಜನೆಯ ನೆಪಮಾಡಿ ರಾತ್ರಿಯಿಡೀ ಓರ್ವ ಅಂತ್ಯಜನ ಮನೆಯಲ್ಲಿ ನಿಸ್ಸಂಕೋಚವಾಗಿ ಬಿದ್ದುಕೊಂಡಿದ್ದ. ಈಗಲಾದರೋ ಅವನಿಗೆ ಯಾರೂ ಏನೂ ಹೇಳುವವರೇ ಇಲ್ಲ. ಒಂದು ವೇಳೆ ಅವನು ಹೀಗೆ ಮಾಡುತ್ತಿದ್ದರೆ ಸರಿ, ಸಮಸ್ತ ನಾಗರ ಜಾತಿಯ ಸತ್ಯಾನಾಶವಾಗಿ ಹೋದೀತು ಎಂದು ಮಧ್ಯದಲ್ಲೆ ಪ್ರಸನ್ನರಾಯನು ಸಾಸಿವೆಯನ್ನು ಬೆಟ್ಟವಾಗಿಸಿ ಎಲ್ಲ ವೃತ್ತಾಂತವನ್ನು ಹೇಳಿ ಮುಗಿಸಿದನು.

ಕಟ್ಟೆಯ ಮೇಲೆ ಕುಳಿತಿರುವ ಎಲ್ಲ ನಾಗರರಲ್ಲಿ ಗದ್ದಲವೆದ್ದಿತು. ಎಲ್ಲ ಜನರು ಈ ಘಟನೆಯ ಕುರಿತು ಅಭಿಪ್ರಾಯ ನೀಡಿದರು. ಓರ್ವ ವೃದ್ಧ ನಾಗರನು ಹೇಳಿದನು - ಸರಿ, ಈಗ ಕಲಿಯುಗದ ಪ್ರಭಾವ ಪೂರ್ಣವಾಗಿ ಹರಡಿತು ; ಉಚ್ಚ ಕುಲೋತ್ಪನ್ನ ಬ್ರಾಹ್ಮಣ ಅಂತ್ಯಜನ ಮನೆಯಲ್ಲಿ ರಾತ್ರಿಯಿಡೀ ಕುಳಿತಿದ್ದ. ಪೃಥ್ವಿ ಮಾತೆಯು ಇಂತಹ ಪಾಪದ ಹೊರೆಯನ್ನು ಹೇಗೆ ಹೊರಬಲ್ಲಳು? ನನ್ನಂತಹ ವೃದ್ಧರಾದರೋ ಇನ್ನು ಪ್ರಪಂಚದಲ್ಲಿ ಬದುಕುವುದೇ ವ್ಯರ್ಥವಾಗಿದೆ. ಇನ್ನೊರ್ವ ವೃದ್ಧ ಹೇಳುತ್ತಾನೆ - ಒಂದು ವೇಳೆ ಇಂತಹ ಅಧರ್ಮ ನಡೆಯುತ್ತಿದ್ದರೆ

ಸ್ವಲ್ಪ ಸಮಯದಲ್ಲೇ ಪ್ರಳಯವಾಗಿ ಹೋಗುತ್ತದೆ. ಮತ್ತೊಬ್ಬ ನಾಗರನು ತನ್ನ ತೀರ್ಮಾನವನ್ನು ತಿಳಿಸಿದನು - ಹಾಗಿರುವಾಗ ಇಂತಹ ಪತಿತರ ಪಾಪವನ್ನು ನಾನು ಎಷ್ಟುದಿನ ನೋಡಬಹುದು ? ಇಂದಿನಿಂದಲೇ ಅವನಿಗೆ ಜಾತಿಯಿಂದ ಬಹಿಷ್ಕಾರ ಹಾಕಬೇಕು. ಆಗ ತನ್ನಿಂದ ತಾನೇ ಅವನ ಬುದ್ಧಿ ನೆಟ್ಟಗಾಗಬಹುದು.

ಕೆಲವು ಜನರು ಹೇಳಿದರು- ಅವನಾದರೋ ಭಜನೆಮಾಡಲು ಹೋಗಿದ್ದ ಅಲ್ಲಿ ಊಟ-ತಿಂಡಿಯ ಯಾವ ಮಾತೂ ಇರಲಿಲ್ಲ ಹಾಗಿರುವಾಗ ಏಕೆ ಹೀಗೆ ಮಾಡಲಾಗುತ್ತದೆ. ಆದರೆ ಢೋಲಿನ ಮುಂದೆ ವೀಣೆ ಯಾರು ಕೇಳಬಲ್ಲರು ?

ನೆರೆದಿರುವ ಎಲ್ಲ ಜಾತಿ ಮುಖಂಡರು ಈ ಮಾತಿನ ಬಗ್ಗೆ ಸಹಮತರಾದರು ಇಂದಿನಿಂದ ನರಸೀಮೆಹತಾ ಜಾತಿಚ್ಯುತನೆಂದು ತಿಳಿಯುವುದು ಮತ್ತು ಅವನೊಂದಿಗೆ ಊಟ-ತಿಂಡಿ ಮೊದಲಾದ ವ್ಯವಹಾರ ನಿಲ್ಲಿಸಲಾಗುವುದು ಎಂದು ಎಲ್ಲರೂ ನಿಶ್ಚಯಿಸಿದರು. ಈ ಪ್ರಕಾರ ಭಕ್ತರಾಜನನ್ನು ಜಾತಿಯಿಂದ ಬಹಿಷ್ಕೃತ ಮಾಡಿ ಜಾತಿ ಮುಖಂಡರು ತಮ್ಮ ದೃಷ್ಟಿಯಲ್ಲಿ ತಮ್ಮ ಜಾತಿಯ ಪವಿತ್ರತೆಯನ್ನು ರಕ್ಷಿಸಿದರು ಮತ್ತು ಇದರಿಂದ ಅವರಿಗೆ ತುಂಬಾ ಸಂತೋಷ ವಾಯಿತು.

ಮರುದಿನ ಕೃಷ್ಣರಾಯ ಎಂಬ ಓರ್ವ ನಾಗರನ ತಾಯಿಯ ಏಕಾದಶಾಹ ಶ್ರಾದ್ಧದ ನಿಮಿತ್ತ ಜಾತಿ ಬಾಂಧವರಿಗೆ ಊಟವಿತ್ತು. ಜಾತಿಯ ಎಲ್ಲ ಆಬಾಲವೃದ್ಧರಿಗೆ ನಿಮಂತ್ರ ನೀಡಲಾಗಿತ್ತು. ಕೇವಲ ಬಹಿಷ್ಕೃತನಾದ ಕಾರಣ ನರಸೀಮೆಹತಾರವರಿಗೆ ನಿಮಂತ್ರಣ ಕೊಟ್ಟಿರಲಿಲ್ಲ. ಸಾಯಂಕಾಲ ಕೃಷ್ಣರಾಯರ ಮನೆಯಲ್ಲಿ ಎಲ್ಲ ನಾಗರರು ಸೇರಿ, ಭೋಜನಕ್ಕಾಗಿ ಪಂಕ್ತಿಹಿಡಿದು ಕುಳಿತರು.

ಭಕ್ತರಾಜ ನರಸೀಮೆಹತಾರವರಿಗೆ ನಾನು ಜಾತಿಚ್ಯುತನಾಗಿದ್ದೇನೆ ಎಂಬ ಮಾತು ಬಹುಶಃ ತಿಳಿದಿರಲಿಲ್ಲ. ಅವರಿಗೆ ಇಂತಹ ಮಾತಿನ ಕಡೆಗೆ ಲಕ್ಷ್ಯಕೊಡುವಷ್ಟು ಸಮಯವೆಲ್ಲಿತ್ತು ? ನಿಜವಾದ ಭಕ್ತರಾದರೋ ಒಂದು ಕ್ಷಣಕ್ಕಾಗಿಯಾದರೂ ತಮ್ಮ ಸ್ವಾಮಿಯನ್ನು ಮರೆತು ಬೇರೆಡೆಗೆ ಲಕ್ಷ್ಯಕೊಡುವುದು ಮರಣಕ್ಕಿಂತಲೂ ಹೆಚ್ಚು ದುಃಖಿಮಯವೆಂದು ತಿಳಿಯುತ್ತಾರೆ. ಆದರೆ ತನ್ನ ಪ್ರತಿಜ್ಞೆಯಂತೆ ಭಗವಂತನಿಗೆ ಚಿಂತೆ ಇದ್ದೇ ಇರುತ್ತದೆ. ಭಗವಂತನು ತನ್ನ ಅಪಮಾನವನ್ನಾದರೂ ಸಹಿಸಬಲ್ಲನು, ಆದರೆ ಭಕ್ತರ ಅಪಮಾನವನ್ನು ಎಂದಿಗೂ ಸಹಿಸಲಾರನು. ಅವನು ನಾಗರರಿಗೂ ಭಕ್ತರಾಜನ ಅಪಮಾನದ ಸೇಡು ತೀರಿಸಿಕೊಳ್ಳುವುದು ಉಚಿತವೆಂದು ತಿಳಿದನು. ಅವನು ಕೂಡಲೇ ತನ್ನ ಮಾಯೆಯನ್ನು ಹಬ್ಬಿಸಿದನು.

ನಾಗರರ ಪಂಕ್ತಿಯಲ್ಲಿ ಊಟ ಬಡಿಸಿ ಭೋಜನವನ್ನು ಪ್ರಾರಂಭಿಸುತ್ತಲೇ ಪ್ರತಿಯೋರ್ವ ನಾಗರನು ತನ್ನ ಪಕ್ಕದಲ್ಲಿ ಓರ್ವ ಅಂತ್ಯಜನು ಕುಳಿತಿರುವುದನ್ನು ನೋಡಿದನು. ಈ ದೃಶ್ಯವನ್ನು ನೋಡಿ ಎಲ್ಲ ನಾಗರರಿಗೆ ತುಂಬಾ ಆಶ್ಚರ್ಯ ವಾಯಿತು ಹಾಗೂ ಭೋಜನವನ್ನು ಬಿಟ್ಟು ಓಡತೊಡಗಿದರು.

ಜಾತಿಯ ಮುಖಂಡ ಸಾರಂಗಧರನು ಚಿಂತಿತನಾಗಿ ಹೇಳಿದ– ಅನಂತ ರಾಯರೇ ! ಅನರ್ಥವಾಯಿತು. ಈ ಅಂತ್ಯಜರ ಜೊತೆ ಭೋಜನವನ್ನು ಮಾಡಿ ಇಂದು ನಾವೆಲ್ಲ ಪಾಪಕ್ಕೆ ಗುರಿಯಾದೆವು. ಈಗ ಏನು ಮಾಡಲಾದೀತು? ನಮ್ಮೆಲ್ಲರಿಗೆ ಗಂಗಾಸ್ನಾನಮಾಡಿ ಪ್ರಾಯಶ್ಚಿತ್ತ ಮಾಡಬೇಕಾಗಿದೆ. ಈ ಪಾಪದಿಂದ ಪಾರಾಗಲು ಬೇರೆ ಉಪಾಯವೇನಿದೆ ?

ಸಾರಂಗಧರರೇ! ಭಕ್ತ ನರಸೀಮೆಹತಾರವರಿಗೆ ಜಾತಿಚ್ಯುತ ಮಾಡಿದ್ದೇ ಈ ಪರಿಣಾಮದ ಮೂಲವಾಗಿದೆ. ಈಗಲಾದರೋ ನಾವು ಮಾಡಿದುದರ ಫಲ ಭೋಗಿಸಲೇಬೇಕು ಎಂದು ಅನಂತರಾಯರು ಹೇಳಿದರು.

ಹಾಗಾದರೇನು ಇದೆಲ್ಲ ಆ ಮಾಂತ್ರಿಕನ ಕೈವಾಡವಾಗಿದೆಯೇ? ಎಂದು ಸಾರಂಗಧರನು ಉತ್ಸುಕತೆಯಿಂದ ಕೇಳಿದನು.

ಅಯ್ಯಾ ! ಅಂತಹ ಮಾತಲ್ಲ ! ನರಸೀಮೆಹತಾ ಭಗವಾನ್ ಶ್ರೀಕೃಷ್ಣನ ಏಕನಿಷ್ಠ ನಿಜ ಭಕ್ತನಾಗಿದ್ದಾನೆ. ಪ್ರಾಯಶ್ಚಿತ್ತದ ಮೂಲಕ ನಾವು ಬೇರೆ ಪಾಪಗಳಿಂದ ಕದಾಚಿತ್ ಬಿಡುಗಡೆ ಹೊಂದಬಲ್ಲೆವು; ಆದರೆ ಓರ್ವ ನಿಜಭಕ್ತನ ಕುರಿತು ಮಾಡಿರುವ ಅಪರಾಧರೂಪೀ ಪಾಪದಿಂದ ಗಂಗಾಸ್ನಾನ ಮಾಡಿದರೂ ಅಥವಾ ಬೇರೆ ಪ್ರಾಯಶ್ಚಿತ್ತ ಮಾಡಿಕೊಂಡರೂ ಎಂದಿಗೂ ನಮಗೆ ಮುಕ್ತಿಸಿಗಲಾರದು. ಒಂದು ವೇಳೆ ನನ್ನ ಮಾತಿನಲ್ಲಿ ಸ್ವಲ್ಪವಾದರೂ ವಿಶ್ವಾಸವಿದ್ದರೆ ಬೇಗನೇ ಆ ವೀತರಾಗೀ ಮಹಾತ್ಮನ ಚರಣಗಳಲ್ಲಿ ನಮಸ್ಕರಿಸಿಕೊಂಡು ಅವರಲ್ಲಿ ಕ್ಷಮೆಯನ್ನು ಬೇಡಿರಿ ಹಾಗೂ ಅವನನ್ನು ಜಾತಿಯಲ್ಲಿ ಸೇರಿಸಿಕೊಂಡು ನಮ್ಮ ಜೊತೆ ಭೋಜನ ಮಾಡಿಸಿರಿ. ನಮ್ಮ ಅಪರಾಧದ ಇದೇ ಪ್ರಾಯಶ್ಚಿತ್ತವಾಗಿದೆ ಎಂದು ಅನಂತರಾಯರು ಸ್ಪಷ್ಟವಾಗಿ ಹೇಳಿದರು.

ಅನಂತರಾಯರು ನರಸೀಮೆಹತಾರವರಿಗೆ ಮಾವನಾಗಿದ್ದರು. ವಿದ್ವತ್ತು ವಾಕ್‌ಪಟುತೆ, ಹಾಗೂ ನಮ್ರತೆ ಮೊದಲಾದ ಸದ್ಗುಣಗಳ ಕಾರಣದಿಂದ ಸಮಸ್ತ ನಾಗರ ಜಾತಿಯಲ್ಲಿ ಅವರಿಗೆ ಹೆಚ್ಚಿನ ಮಾನ್ಯತೆ ಇತ್ತು ಆದ್ದರಿಂದ ಜಾತಿಯ ಎಲ್ಲ ಜನರಿಗೆ ಅವರ ಮಾತಿನ ಮೇಲೆ ವಿಶ್ವಾಸವುಂಟಾಯಿತು.

ನಾಗರರ ಪಂಕ್ತಿಯಲ್ಲಿ ಊಟ ಬಡಿಸಿ ಭೋಜನವನ್ನು ಪ್ರಾರಂಭಿಸುತ್ತಲೇ ಪ್ರತಿಯೋರ್ವ ನಾಗರನು ತನ್ನ ಪಕ್ಕದಲ್ಲಿ ಓರ್ವ ಅಂತ್ಯಜನು ಕುಳಿತಿರುವುದನ್ನು ನೋಡಿದನು. ಈ ದೃಶ್ಯವನ್ನು ನೋಡಿ ಎಲ್ಲ ನಾಗರರಿಗೆ ತುಂಬಾ ಆಶ್ಚರ್ಯ ವಾಯಿತು ಹಾಗೂ ಭೋಜನವನ್ನು ಬಿಟ್ಟು ಓಡತೊಡಗಿದರು.

ಜಾತಿಯ ಮುಖಂಡ ಸಾರಂಗಧರನು ಚಿಂತಿತನಾಗಿ ಹೇಳಿದ– ಅನಂತ ರಾಯರೇ ! ಅನರ್ಥವಾಯಿತು. ಈ ಅಂತ್ಯಜರ ಜೊತೆ ಭೋಜನವನ್ನು ಮಾಡಿ ಇಂದು ನಾವೆಲ್ಲ ಪಾಪಕ್ಕೆ ಗುರಿಯಾದೆವು. ಈಗ ಏನು ಮಾಡಲಾದೀತು? ನಮ್ಮೆಲ್ಲರಿಗೆ ಗಂಗಾಸ್ನಾನಮಾಡಿ ಪ್ರಾಯಶ್ಚಿತ್ತ ಮಾಡಬೇಕಾಗಿದೆ. ಈ ಪಾಪದಿಂದ ಪಾರಾಗಲು ಬೇರೆ ಉಪಾಯವೇನಿದೆ ?

ಸಾರಂಗಧರರೇ! ಭಕ್ತ ನರಸೀಮೆಹತಾರವರಿಗೆ ಜಾತಿಚ್ಯುತ ಮಾಡಿದ್ದೇ ಈ ಪರಿಣಾಮದ ಮೂಲವಾಗಿದೆ. ಈಗಲಾದರೋ ನಾವು ಮಾಡಿದುದರ ಫಲ ಭೋಗಿಸಲೇಬೇಕು ಎಂದು ಅನಂತರಾಯರು ಹೇಳಿದರು.

ಹಾಗಾದರೇನು ಇದೆಲ್ಲ ಆ ಮಾಂತ್ರಿಕನ ಕೈವಾಡವಾಗಿದೆಯೇ? ಎಂದು ಸಾರಂಗಧರನು ಉತ್ಸುಕತೆಯಿಂದ ಕೇಳಿದನು.

ಅಯ್ಯಾ ! ಅಂತಹ ಮಾತಲ್ಲ ! ನರಸೀಮೆಹತಾ ಭಗವಾನ್ ಶ್ರೀಕೃಷ್ಣನ ಏಕನಿಷ್ಠ ನಿಜ ಭಕ್ತನಾಗಿದ್ದಾನೆ. ಪ್ರಾಯಶ್ಚಿತ್ತದ ಮೂಲಕ ನಾವು ಬೇರೆ ಪಾಪಗಳಿಂದ ಕದಾಚಿತ್ ಬಿಡುಗಡೆ ಹೊಂದಬಲ್ಲೆವು; ಆದರೆ ಓರ್ವ ನಿಜಭಕ್ತನ ಕುರಿತು ಮಾಡಿರುವ ಅಪರಾಧರೂಪೀ ಪಾಪದಿಂದ ಗಂಗಾಸ್ನಾನ ಮಾಡಿದರೂ ಅಥವಾ ಬೇರೆ ಪ್ರಾಯಶ್ಚಿತ್ತ ಮಾಡಿಕೊಂಡರೂ ಎಂದಿಗೂ ನಮಗೆ ಮುಕ್ತಿಸಿಗಲಾರದು. ಒಂದು ವೇಳೆ ನನ್ನ ಮಾತಿನಲ್ಲಿ ಸ್ವಲ್ಪವಾದರೂ ವಿಶ್ವಾಸವಿದ್ದರೆ ಬೇಗನೇ ಆ ವೀತರಾಗೀ ಮಹಾತ್ಮನ ಚರಣಗಳಲ್ಲಿ ನಮಸ್ಕರಿಸಿಕೊಂಡು ಅವರಲ್ಲಿ ಕ್ಷಮೆಯನ್ನು ಬೇಡಿರಿ ಹಾಗೂ ಅವನನ್ನು ಜಾತಿಯಲ್ಲಿ ಸೇರಿಸಿಕೊಂಡು ನಮ್ಮ ಜೊತೆ ಭೋಜನ ಮಾಡಿಸಿರಿ. ನಮ್ಮ ಅಪರಾಧದ ಇದೇ ಪ್ರಾಯಶ್ಚಿತ್ತವಾಗಿದೆ ಎಂದು ಅನಂತರಾಯರು ಸ್ಪಷ್ಟವಾಗಿ ಹೇಳಿದರು.

ಅನಂತರಾಯರು ನರಸೀಮೆಹತಾರವರಿಗೆ ಮಾವನಾಗಿದ್ದರು. ವಿದ್ವತ್ತು ವಾಕ್‌ಪಟುತೆ, ಹಾಗೂ ನಮ್ರತೆ ಮೊದಲಾದ ಸದ್ಗುಣಗಳ ಕಾರಣದಿಂದ ಸಮಸ್ತ ನಾಗರ ಜಾತಿಯಲ್ಲಿ ಅವರಿಗೆ ಹೆಚ್ಚಿನ ಮಾನ್ಯತೆ ಇತ್ತು ಆದ್ದರಿಂದ ಜಾತಿಯ ಎಲ್ಲ ಜನರಿಗೆ ಅವರ ಮಾತಿನ ಮೇಲೆ ವಿಶ್ವಾಸವುಂಟಾಯಿತು.

ಶ್ಯಾಮಲ ಶಾಹನಿಗೆ ಹುಂಡೀ

ಸ್ವಾರ್ಥಮಯ ಪ್ರಪಂಚದಲ್ಲಿ ಶ್ರೀಮಂತ-ದರಿದ್ರ, ದಾತಾ-ಕೃಪಣ, ವಿದ್ವಾನ್-ಮೂರ್ಖ, ಕುಲೀನ-ನೀಚ, ಸಜ್ಜನ-ದುರ್ಜನರಲ್ಲಿ ಪರಂಪರಾಗತ ವೈರವು ನಡೆದುಕೊಂಡೇ ಬಂದಿದೆ. ಶ್ರೀಮದ್ಭಗವದ್ಗೀತೆಯಲ್ಲಿ ದೈವೀ ಹಾಗೂ ಆಸುರೀ ಸಂಪತ್ತುಗಳಲ್ಲಿ ಪರಸ್ಪರ ಭೇದ ಹೇಳಲಾಗಿದೆ. ಆದರೆ ಆ ವೈರದಲ್ಲಿ ಕೊನೆಗೆ ದೈವೀ ಪಕ್ಷದ ವಿಜಯ ಮತ್ತು ಆಸುರೀ ಶಕ್ತಿಯ ಪರಾಜಯವಾಗುವುದು ನಿಶ್ಚಿತವಿದೆ ಎಂಬುದನ್ನು ಹೇಳುವ ಆವಶ್ಯಕತೆ ಇಲ್ಲ.

ದೈವೀ ಸಂಪತ್ತು ಸಂಪನ್ನ ನರಸೀಮೆಹತಾರವರೂ ಕೂಡ ಮೊದಲಿನಿಂದಲೇ ಈ ಯುದ್ಧಮಾಡುತ್ತಾ ಬಂದಿದ್ದರು. ಅದರಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಎರಡೂ ದೃಷ್ಟಿಗಳಿಂದ ಅವರ ವಿಜಯವೂ ಆಗುತ್ತಾ ಬಂದಿತ್ತು. ಇವರಿಗೆ ಪುನಃ ಒಂದು ಆಪತ್ತು ಎದುರಿಸಬೇಕಾಯ್ತು. ಅವರ ಪತ್ನಿ, ಸತ್ತು ಪ್ರಾಯಶಃ ಒಂಭತ್ತು ದಿನಗಳಾಗಿದ್ದುವು. ಈಗ ಅಂತ್ಯಕ್ರಿಯೆ ಮಾಡುವ ಮತ್ತು ಆದರನಿಮಿತ್ತ ಬ್ರಾಹ್ಮಣರಿಗೆ, ಜಾತಿ ಬಾಂಧವರಿಗೆ ಭೋಜನ ಮಾಡಿಸುವ ಆವಶ್ಯಕತೆ ಉಂಟಾಗಿತ್ತು. ಆದರೆ ಅವರು ಭಗವಂತನ ಭರವಸೆಯಿಂದ ನಿಶ್ಚಿಂತರಾಗಿದ್ದರು.

ನಾರಗಜಾತಿಯ ಮುಖ್ಯಸ್ಥರು ನರಸೀಮೆಹತಾರವರ ಬಳಿಗೆ ಬಂದು ಜಾತಿಯ ಎಲ್ಲರಿಗೆ ಏಕಾದಶಾಹ, ದ್ವಾದಶಾಹ ಎರಡೂ ದಿನಗಳಲ್ಲಿ ಭೋಜನ ಮಾಡಿಸಬೇಕೆಂದು ಒತ್ತಾಯಿಸುತ್ತಿದ್ದರು. ಆದರೆ ಅವರು 'ಭಗವಂತನ ಇಚ್ಛೆ ಇದ್ದಂತಾಗುವುದು' ಎಂದು ತಟಸ್ಥರಾಗಿದ್ದರು. ಒಂದು ದಿನ ಬೆಳಿಗ್ಗೆಯೇ ಸಾರಂಗಧರನೆಂಬ ಪ್ರಮುಖ ನಾಗರನು ಇವರ ಬಳಿ ಉಪಸ್ಥಿತನಾದನು. ಅವನು ಬರುತ್ತಲೇ 'ಜೈ ಶ್ರೀಕೃಷ್ಣ' ಎಂದು ಹೇಳಿ ಭಕ್ತರಾಜರಿಗೆ ವಂದಿಸಿಕೊಂಡನು. ಭಕ್ತರಾಜರೂ 'ಜೈ ಶ್ರೀಕೃಷ್ಣ' ಎಂದು ವಂದಿಸಿ, ಬನ್ನಿರಿ ಸಾರಂಗಧರರೇ ಎಂದು ಹೇಳಿದರು. ಇಂದಾದರೋ ನನ್ನ ಪರ್ಣಕುಟಿಯನ್ನು ಪಾವನಗೊಳಿಸಿದಿರಿ. ಈ ರೀತಿ ಶಿಷ್ಟಾಚಾರದ ಒಂದೆರಡು ಮಾತುಗಳಾದ ಬಳಿಕ ಸಾರಂಗಧರ ಹೇಳಿದನು – ನರಸೀಮೆಹತಾ ! ಇಂದು ನಾನು ನಿನಗೊಂದು ಸಲಹೆಕೊಡಲು ಬಂದಿರುವೆನು. ನೀನು ಉಚ್ಚ ಕುಲದವನಾಗಿರುವೆ. ನಮ್ಮ ಕುಲ ಪದ್ಧತಿಯಂತೆ ಮಾಣಿಕಗೌರಿಯ ನಿಮಿತ್ತ ಏಕಾದಶಾಹ, ದ್ವಾದಶಾಹ ಎರಡೂ ದಿನ ಜಾತಿ ಬಾಂಧವರಿಗೆ ಊಟ ಕೊಡಬೇಕು. ಇದರಲ್ಲಿ ಕೊರತೆ ಮಾಡಿದರೆ ನಿನ್ನ ಗೌರವಕ್ಕೆ ಕಳಂಕಬಂದೀತು.

ಸಾರಂಗಧರರೇ ! ನೀವು ಹೇಳುವುದು ಸರಿಯೇ ಆಗಿದೆ, ಆದರೆ ಇದರಲ್ಲಿ

ಕುಲಪದ್ಧತಿಯ ಯಾವುದೇ ನಿಯಮವಿಲ್ಲ. ಈ ಮಾತಾದರೋ ನಮ್ಮ ವರ್ತಮಾನ ಪರಿಸ್ಥಿತಿಯ ಮೇಲೆ ಅವಲಂಬಿಸಿದೆ. ಶಕ್ತಿಮೀರಿ ಯಾವುದೇ ಕೆಲಸ ಮಾಡುವುದು ಸರಿಯಲ್ಲ. ನಾನಾದರೋ ನಾಲ್ಕಾರು ಸಾಧು ಸಂತರಿಗೆ.....

ಸಾರಂಗಧರನು ಅವನ ಮಾತನ್ನು ಮಧ್ಯದಲ್ಲೇ ಖಂಡಿಸಿ ಹೇಳಿದನು- ಹುಚ್ಚನೇನಾದರು ಆಗಿದ್ದೀಯೋ ನರಸೀಮೆಹತಾ ? ನಾಲ್ಕಾರು ಭಕ್ತ-ಭಿಕ್ಷುಕರಿಗೆ ಭೋಜನ ಮಾಡಿಸಿದರೆ ನಿನ್ನ ಪತ್ನಿಗೆ ಉತ್ತಮಗತಿ ಸಿಗುತ್ತದೇನು ? ಜಾತಿ ಸಮುದಾಯವನ್ನು ತೃಪ್ತಿಪಡಿಸದಿದ್ದರೆ ಆ ಬಡಪಾಯಿಗೆ ಹೇಗೆ ಸದ್ಗತಿ ದೊರೆಯಬಲ್ಲದು ? ಆ ಬಡಪಾಯಿ ಜೊತೆಗೆ ಏನು ಕೊಂಡು ಹೋಗಿದ್ದಾಳೇ? ಈಗ ಇದೇ ಅಂತಿಮ ಸಂಬಂಧವಾಗಿದೆ. ಅವಳ ಹೆಸರಿನಲ್ಲಿ ಇಷ್ಟಾದರೂ ನೀನು ಮಾಡಲಾರೆಯಾ ? ಪದೇ ಪದೇ ಇದನ್ನು ಮಾಡುತ್ತಾರೆಯೆ ?

ಅಯ್ಯಾ! ನೀನು ಹೇಳುವುದು ಯಥಾರ್ಥವಾಗಿದೆ. ಸಾಯುವ ವ್ಯಕ್ತಿಯು ಜೊತೆಗೆ ಏನೂ ಕೊಂಡುಹೋಗುವುದಿಲ್ಲ ಮತ್ತು ಅವನ ಹೆಸರಿನಲ್ಲಿ ಯಥಾಶಕ್ತಿ ಬ್ರಾಹ್ಮಣ ಭೋಜನ ಮಾಡಿಸುವುದು ಉಚಿತವೇ ಆಗಿದೆ. ಆದರೆ ತನ್ನ ಶಕ್ತಿಮೀರಿ ಅನೇಕ ದಿನಗಳವರೆಗೆ ಹೆಚ್ಚೆಚ್ಚು ಜನರಿಗೆ ಭೋಜನ ಮಾಡಿಸುತ್ತಾ ಇರುವುದು ಆಗತ್ಯವಿಲ್ಲ. ಶ್ರದ್ಧಾಪೂರ್ವಕ ಎಷ್ಟು ಜನರಿಗೆ ಭೋಜನ ಮಾಡಿಸಲಾಗುತ್ತದೋ ಅದರಿಂದಲೇ ಅವರಿಗೆ ಶಾಂತಿ ಸಿಗುತ್ತದೆ ಮತ್ತೂ ಅವರಿಗೆ ಸದ್ಗತಿಯೂ ಸಿಗುತ್ತದೆ. ಜಾತಿ ಪದ್ಧತಿ ಸರಿಯಾಗಿಯೇ ಇದೆ; ಆದರೆ ಸಾಧುಗಳ ಮತ್ತು ಅನಾಥರ ಸೇವೆ ಅದಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ. ಜಾತಿಯವರ ಭೋಜನವಾದರೋ ಹೆಚ್ಚಾಗಿ ವ್ಯವಹಾರದ ವಿಷಯವಾಗಿದೆ ಎಂದು ನರಸೀಮೆಹತಾ ಉತ್ತರಿಸಿದನು.

ಸಾರಂಗಧರನಾದರೋ ಉಪದೇಶ ಪಡೆಯಲು ಬಂದಿರಲಿಲ್ಲ. ಅವನು ಸಮಸ್ತ ಜ್ಞಾತಿಗಳ ಕಡೆಯಿಂದ ಪಂಚನಾಗಿ ಬಂದಿದ್ದನು ಮತ್ತು ಅವನಿಗೆ ತಮ್ಮ ಕಾರ್ಯ ಸಾಧಿಸುವುದಿತ್ತು. ಆದ್ದರಿಂದ ಅವನು ನರಸೀಮೆಹತಾರರವರಿಂದ ಒಪ್ಪಿಗೆ ಪಡೆಯದೆ ಹೋಗುವವನಾಗಿರಲಿಲ್ಲ.

'ಉಪದೇಶೋ ಹಿ ಮೂರ್ಖಾಣಾಂ ಪ್ರಕೋಪಾಯ ನ ಶಾಂತಯೇ' ।

ಈ ನ್ಯಾಯದಿಂದ ನರಸೀಮೆಹತಾರ ಉಪದೇಶವು ಅವನ ಮೇಲೆ ವಿಪರೀತವಾಗಿ ಪರಿಣಮಿಸಿತು. ಇದರಿಂದ ಅವನು ಭೀಷಣರೂಪವನ್ನು ತಾಳಿ ಹೇಳಿದನು - ನರಸೀಮೆಹತಾ ! ಇಂತಹ ಜ್ಞಾನ ಯಾರಾದರೂ ಲಂಗೋಟಿ ಸಾಧುಗಳಿಗೆ ಹೇಳು. ಇಂದಿನವರೆಗೆ ನೀನು ಜಾತಿಯಲ್ಲಿದ್ದುಕೊಂಡು ಎಲ್ಲರ

ಮನೆಯಲ್ಲಿ ಭೋಜನ ಮಾಡಿರುವೆ ಮತ್ತು ಇಂದು ನೀನು ಭೋಜನ ಹಾಕಿಸುವ ಸಮಯ ಬಂದಾಗ ಹಿಂದೆ ಸರಿಯಲು ನೋಡುತ್ತಿರುವೆ. ಹೀಗೆ ಎಂದಿಗೂ ಆಗಲಾರದು. ನಾನು ಹೇಳಿ ಬಿಡುತ್ತೇನೆ - ನಾಳೆಯಿಂದ ಎರಡು ದಿನ ನೀನು ಜಾತಿಯವರಿಗೆ ಭೋಜನ ಮಾಡಿಸಲೇಬೇಕು. ಇದಕ್ಕಾಗಿ ಬೇಕಾದರೆ ಮನೆಯನ್ನು ಮಾರು ಅಥವಾ ಹೆಂಡತಿಯ ಒಡವೆಯನ್ನು ಮಾರು.

ಸಾರಂಗಧರನ ಮಾತನ್ನು ಕೇಳಿ ಸರಳ ಸ್ವಭಾವದ ನರಸಿಂಹಮೆಹತಾರವರು ಭಗವನ್ನಾಮ ಜಪ ಮಾಡುತ್ತಾ-ಮಾಡುತ್ತಾ ತಲೆಅಲ್ಲಾಡಿಸಿ ಸಮ್ಮತಿಯನ್ನು ಸೂಚಿಸಿದರು. ಸರಿ, ಇನ್ನೇನುಬೇಕು ? ಸಾರಂಗಧರನ ಕಾರ್ಯ ಯಶಸ್ವಿಯಾಯಿತು. ಅವನು ತನ್ನ ವಿಜಯದಿಂದ ಉಬ್ಬಿ ತನ್ನ ಮನೆಗೆ ಮರಳಿದನು.

ಸಾರಂಗಧರನು ಹೋದ ಮೇಲೆ ಭಕ್ತರಾಜರು ಯೋಚಿಸತೊಡಗಿದರು- ನಾನು ಜಾತಿಭೋಜನವನ್ನು ಮಾಡಿಸಲು ಒಪ್ಪಿಕೊಂಡೆ; ಆದರೆ ಈಗ ಇದನ್ನು ಪೂರ್ಣ ಮಾಡುವುದು ಶ್ಯಾಮಸುಂದರನ ಅಧೀನವಾಗಿದೆ. ಅವನು ಇಚ್ಛೆ ಇದ್ದಂತೆ ಮಾಡಲೀ ವ್ಯರ್ಥವಾಗಿ ಚಿಂತಿಸಿ ಸಮಯದ ದುರುಪಯೋಗ ಮಾಡುವುದರಲ್ಲಿ ಲಾಭವೇನಿದೆ ? ಎಂದೆಣಿಸಿ ಅವನು ಭಗವಂತನ ಧ್ಯಾನದಲ್ಲಿ ಮಗ್ನರಾದನು.

ಈ ಕಡೆ ಕಟ್ಟೆಯ ಮೇಲೆ ಕುಳಿತು ನಾಗರ ಜಾತಿಯ ಕೆಲವು ಪ್ರಮುಖರು ತಮ್ಮ ತಮ್ಮಲ್ಲಿ ಹರಟೆಹೊಡೆಯುತ್ತಿದ್ದರು. ಇದೇ ಸಮಯ ನಾಲ್ಕು ಪ್ರವಾಸಿಗರು ಅಲ್ಲಿಗೆ ಬಂದರು. ಅವರು ವಿನಮ್ರರಾಗಿ ಕೇಳಿದರು- ಅಯ್ಯಾ! ಈ ಊರಿನಲ್ಲಿ ನಮ್ಮ ಏಳುನೂರ ಐವತ್ತು ರೂಪಾಯಿ ಪಡೆದು ದ್ವಾರಕೆಯ ಒಂದು ಹುಂಡೀ ಬರೆದು ಕೊಡಬಲ್ಲ ಶ್ರೀಮಂತ ವ್ಯಾಪಾರಿ ಯಾರಿದ್ದಾರೆ ?

ಕಟ್ಟೆಯ ಮೇಲೆ ಕುಳಿತ ನಾಗರರಲ್ಲಿ ನರಸೀಮೆಹತಾನ ವಿಷಯವೇ ನಡೆಯುತ್ತಿತ್ತು. ಪ್ರವಾಸಿಗರ ಮಾತು ಕೇಳಿ ಒರ್ವ ಮತ್ಸರೀ ನಾಗರನು ಕೂಡಲೇ ಉತ್ತರಕೊಟ್ಟ-ನೀವು ನರಸೀಮೆಹತಾನ ಮನೆಗೆ ಹೋಗಿರಿ. ದ್ವಾರಕೆಯಲ್ಲಿ ಅವನ ದೊಡ್ಡ ಅಂಗಡಿ ಇದೆ. ಹುಂಡೀ ಅಲ್ಲಿ ಸ್ವೀಕೃತವಾಗುವುದು. ನಿಮಗೆ ಬೇರೆ ಕಡೆಯಲ್ಲಿ ಇಂತಹ ಸೌಲಭ್ಯ ಸಿಗಲಾರದು. ಉಳಿದ ನಾಗರರು ವ್ಯಂಗವಾಗಿ ಹೌದು, ಹೌದು ಎಂದರು.

ಪ್ರವಾಸಿಗರಿಗೆ ವಿಶ್ವಾಸ ಉಂಟಾಗಿ ಕೇಳುತ್ತಾ-ಕೇಳುತ್ತಾ ನರಸೀಮೆಹತಾರವರ ಮನೆಗೆ ಬಂದು ತಲುಪಿದರು. ಭಕ್ತರಾಜರು ಭಗವದ್ಭಜನೆಯಿಂದ ನಿವೃತ್ತರಾಗಿ

ಭಗವಂತನಿಗೆ ನೈವೇದ್ಯ ಸಮರ್ಪಿಸುತ್ತಿದ್ದರು. ಪ್ರವಾಸಿಗರು ಮೆಹತಾರವರಿಗೆ ನಮಸ್ಕಾರ ಮಾಡಿದರು. ಭಕ್ತರಾಜರು ಅಭಿವಾದನಕ್ಕೆ ಉತ್ತರಿಸುತ್ತ, ಆಸನ, ನೀರು ಮತ್ತು ಭಗವತ್ ಪ್ರಸಾದವನ್ನಿತ್ತು ಯಥೋಚಿತ ಸತ್ಕಾರಮಾಡಿ, ಬಂದ ಕಾರಣವನ್ನು ಕೇಳಿದರು.

ನರಸೀಮೆಹತಾರವರೇ ! ನಾವು ಪರದೇಶದ ಪ್ರವಾಸಿಗಳಾಗಿದ್ದೇವೆ. ಜೂನಾಗಡದಿಂದ ದ್ವಾರಕಾಪುರಿಯ ಮಾರ್ಗ ವಿಕಟವಾದ ಕಾರಣ ಹಣವನ್ನು ತೆಗೆದುಕೊಂಡು ಹೋಗುವುದು ನಮಗೆ ಅನುಚಿತ ಮತ್ತು ಭಯಾವಹವಾಗಿ ಕಾಣುತ್ತದೆ. ಆದುದರಿಂದ ಈ ಏಳುನೂರ ಐವತ್ತು ರೂಪಾಯಿಗಳನ್ನು ಪಡೆದು ದ್ವಾರಕೆಯಹುಂಡೀ ಬರೆದುಕೊಟ್ಟರೆ ದೊಡ್ಡ ಕೃಪೆಯಾಗಬಹುದು ಎಂದು ಓರ್ವನು ವಿನಮ್ರವಾಗಿ ಹೇಳಿದನು.

ಸಜ್ಜನರೇ! ನನ್ನ ಮನೆಯನ್ನು ನಿಮಗೆ ಯಾರು ತೋರಿಸಿದರು? ಎಂದು ನಗುತ್ತ ನರಸೀಮೆಹತಾರವರು ಕೇಳಿದರು.

ಭಗವದ್ಭಕ್ತರೇ ! ಇಲ್ಲೇ ಸಮೀಪದಲ್ಲಿ ಕಟ್ಟೆಯ ಮೇಲೆ ಕೆಲವು ದೊಡ್ಡ ಮನುಷ್ಯರು ಕುಳಿತಿದ್ದರು, ಅವರೇ ನಿಮ್ಮ ಪರಿಚಯವನ್ನು ಹೇಳಿ ಇಲ್ಲಿ ದ್ವಾರಕೆಯ ಹುಂಡೀ ಸಿಗುವುದು ಎಂದು ವಿಶ್ವಾಸವುಂಟು ಮಾಡಿದರು ಎಂದು ಓರ್ವ ಪ್ರವಾಸಿಯು ನುಡಿದನು. ಇದನ್ನು ಕೇಳಿ ಭಕ್ತರಾಜರಿಗೆ ತಮ್ಮ ಜಾತಿ ಬಾಂಧವರ ಕಾರ್ಯದ ಬಗ್ಗೆ ನಗುಬಂತು. ಸಜ್ಜನರು ದುರ್ಜನರ ಅನುಚಿತ ಕಾರ್ಯದಿಂದಲೂ ಗಾಬರಿಪಡದೇ ಅದನ್ನೂ ಕೂಡ ಉಪಯೋಗಿ (ಭಗವದಿಚ್ಛೆ ಎಂದು) ತಿಳಿದು ಸಂತೋಷಪಡುತ್ತಾರೆ. ಮಹಾಸಾಗರದ ಉಪ್ಪುನೀರನ್ನು ಮೇಘಮಂಡಲವು ಅಮೃತವಾಗಿಸಿ ಜಗತ್ತಿಗೆ ಜೀವನ ಪ್ರದಾನ ಮಾಡುತ್ತದೆ. ಭಕ್ತರಾಜರು ಯೋಚಿಸಿದರು – ಹೀಗೆ ಅನಾಯಾಸವಾಗಿ ಎದುರಾದ ಸಂಯೋಗದಲ್ಲಿ ಅವಶ್ಯವಾಗಿ ಈಶ್ವರೀಯ ಸಂಕೇತ ಇರಲೇಬೇಕು, ಇಲ್ಲದಿದ್ದರೆ ಈ ಅಸಂಭವ ಕಾರ್ಯ ಹೇಗೆ ಸಂಭವಿಸುತ್ತಿತ್ತು ? ನಾಳೆಯಿಂದಲೇ ಪತ್ನಿಯ ಏಕಾದಶಾಹ-ದ್ವಾದಶಾಹದ ನಿಮಿತ್ತವಾಗಿ ಜಾತಿಭೋಜನ ಮಾಡಿಸಬೇಕು. ಈ ಕಾರ್ಯಕ್ಕಾಗಿಯೇ ಈ ರೂಪದಿಂದ ಭಗವಂತನು ಸಹಾಯವನ್ನು ಕಳಿಸಿದ್ದಾನೆ. ಇಲ್ಲವಾದರೆ ಈ ಪ್ರವಾಸಿಗರ ಮತ್ತು ನನ್ನ ಸಂಯೋಗ ಹೇಗೆ ಉಂಟಾಗುತಿತ್ತು? ಸಮಯವನ್ನು ವಿಚಾರಮಾಡಿ ಕಾರ್ಯ ಮಾಡುವ ಮನುಷ್ಯನೇ ಎಚ್ಚರವುಳ್ಳವನೆಂದು ಹೇಳಲಾಗುತ್ತದೆ. ಆದ್ದರಿಂದ ಹುಂಡಿಯನ್ನು ಬರೆಯುವುದರಲ್ಲಿ

ತಡಮಾಡುವುದು ಉಚಿತವಲ್ಲ. ಪರಮಾತ್ಮನ ಇಚ್ಛೆಗನು ಸಾರವಾಗಿ ಈ ಸುಯೋಗವು ಉಪಸ್ಥಿತವಾಗಿದೆ ಮತ್ತು ನನ್ನ ಹುಂಡಿಯನ್ನು ಆ ದ್ವಾರಕಾವಾಸೀ ಭಗವಂತನು ಅವಶ್ಯವಾಗಿ ಸ್ವೀಕರಿಸುವನು. ಹೀಗೆ ದೃಢ ನಿಶ್ಚಯಗೈದು ಭಕ್ತರಾಜನು ಏಳುನೂರ ಐವತ್ತು ರೂಪಾಯಿಗಳನ್ನು ಪಡೆದು ಹುಂಡೀ ಬರೆದುಕೊಟ್ಟನು.

ಹುಂಡೀ

ಸಿದ್ಧಶ್ರೀ ಪರಮಕೋಭಾಧಾಮ ಶ್ರೀದ್ವಾರಕಾನಿವಾಸಿ ಪ್ರಿಯತಮ ಪ್ರಾಣಾಧಾರ ಸೇಠ ಶ್ರೀಶ್ಯಾಮಲಶಾಹ ವಸುದೇವರ ಸೇವೆಯಲ್ಲಿ ಸಪ್ರೇಮ ವಂದನೆಗಳು. ಈಗ ತಿಳಿಸುವುದೇನೆಂದರೆ– ನಾನು ಇಲ್ಲಿ ಈ ನಾಲ್ಕು ಪ್ರವಾಸಿಗಳಿಂದ ನಗದಾಗಿ ಏಳುನೂರ ಐವತ್ತು ರೂಪಾಯಿ ಪಡೆದು ನಿಮ್ಮ ಮೇಲೆ ಈ ಹುಂಡಿಯನ್ನು ಬರೆದುಕೊಟ್ಟಿರುವೆನು. ಆದ್ದರಿಂದ ಈ ಹುಂಡೀ ಪತ್ರವನ್ನು ನೋಡಿದಾಕ್ಷಣ ಇವರಿಗೆ ಏಳುನೂರ ಐವತ್ತು ರೂಪಾಯಿಗಳನ್ನು ನಗದಾಗಿ ಕೊಡುವ ಕೃಪೆ ಮಾಡಬೇಕು. ಜೂನಾಗಡದ ನಿಮ್ಮ ನಮ್ರ ಸೇವಕ ನರಸಿಂಹರಾಮ

ಹುಂಡಿಯನ್ನು ತೆಗೆದುಕೊಂಡು ನಾಲ್ಕೂ ಪ್ರವಾಸಿಗಳು ಅಲ್ಲಿಂದ ಹೊರಟು ಹೋದರು. ಭಗವಂತನಿಗೆ ನೈವೇದ್ಯ ಸಮರ್ಪಿಸಿ ಭಕ್ತರಾಜರು ಭಗವಂತನಲ್ಲಿ ಪ್ರಾರ್ಥಿಸಿಕೊಂಡರು – ಹೇ ಭಕ್ತವತ್ಸಲ ಭಗವಂತಾ ! ನಿನ್ನ ವಿಶ್ವಾಸದ ಮೇಲೆ ನಾನು ಹುಂಡೀ ಬರೆದುಕೊಟ್ಟಿರುವೆ. ನೀನು ಅದನ್ನು ಸ್ವೀಕರಿಸಿ ನನ್ನ ಗೌರವವನ್ನು ರಕ್ಷಿಸಲಾರೆಯಾ ? ಸ್ವಾಮಿ ! ಅದರಿಂದ ನನ್ನ ಗೌರವದಲ್ಲಿ ಯಾವುದೇ ಹಾನಿ ಉಂಟಾಗದು ; ಆದರೆ ಜಗತ್ತಿನಲ್ಲಿ ನೀನು ಅಪಹಾಸ್ಯಕ್ಕೆ ಗುರಿಯಾಗುವಿ. ದಯಾಳುವಾದ ದಾಮೋದರಾ ! ನಾಳೆಯಿಂದ ಎರಡು ದಿನ ಜಾತಿಗೆಲ್ಲ ಭೋಜನ ಮಾಡಿಸಬೇಕೆಂಬುದು ನಿನಗೆ ತಿಳಿದಿಲ್ಲವೇ ? ಈ ಕಾರಣದಿಂದಲೇ ನಾನು ಈ ಉದ್ಧಟತನ ಮಾಡಿದೆ, ಅದೂ ಕೂಡಾ ಕೇವಲ ಏಳುನೂರಐವತ್ತು ರೂಪಾಯಿಗಳಿಗಾಗಿ, ನೀನು ಮರಣೋನ್ಮುಖ ಗಜೇಂದ್ರನಿಗೆ ಪ್ರಾಣದಾನ ಮಾಡಿರುವಿ, ಸತಿ ಪಾಂಚಾಲಿಗೆ ತುಂಬಿದ ಸಭೆಯಲ್ಲಿ ಅಕ್ಷಯಾಂಬರವನ್ನು ಕರುಣಿಸಿ ಅವಳ ಮಾನವನ್ನು ಕಾಪಾಡಿರುವಿ. ಇಷ್ಟೇ ಅಲ್ಲ! ನನ್ನ ಮಗನ ವಿವಾಹದಲ್ಲಿ, ಪಿತೃಶ್ರಾದ್ಧದಲ್ಲಿ ಹಾಗೂ ಬೇರೆ ವ್ಯಾವಹಾರಿಕ ಪ್ರಸಂಗಗಳಲ್ಲಿ ನೀನು ನನಗೆ ಸಹಾಯ ಮಾಡಿರುವೆ. ಈ ಏಳುನೂರ ಐವತ್ತು ರೂಪಾಯಿಗಳ ವ್ಯವಸ್ಥೆಮಾಡಲಾರೆಯಾ?

ಪ್ರಾರ್ಥನೆ ಮಾಡುವ ಸಮಯದಲ್ಲಿ ಭಕ್ತರಾಜರ ಕಣ್ಣುಗಳಿಂದ ಅಶ್ರುಪ್ರವಾಹ

ಹರಿಯುತ್ತಿತ್ತು. ಇಷ್ಟು ಹೇಳಿ ಅವರು ಭಗವಂತನ ಪ್ರತಿಮೆಯ ಚರಣಗಳಲ್ಲಿ ಹೊರಳಾಡಿದರು. ಅವರು ಎಷ್ಟು ಹೊತ್ತು ಹೀಗೆ ಬಿದ್ದಿದ್ದರೋ ಅದು ಅವರಿಗೂ ತಿಳಿದಿರಲಿಲ್ಲ.

ಮರುದಿನ ಬೆಳಿಗ್ಗೆಯೇ ಜಾತಿ ಭೋಜನದ ಸಿದ್ಧತೆ ನಡೆಯಿತು. ಅವಶ್ಯಕ ಸಾಮಗ್ರಿಗಳೆಲ್ಲ ಪೇಟೆಯಿಂದ ತರಿಸಲಾಯಿತು ಮತ್ತು ತುಂಬಾ ವೈಭವದಿಂದ ಎರಡು ದಿನಗಳವರೆಗೆ ಜಾತಿಭೋಜನ ಆಗುತ್ತಿತ್ತು. ಜಾತಿಯ ಎಲ್ಲ ಜನರೂ ತುಂಬಾ ಸಂತುಷ್ಟರಾದರು.

★ ★ ★ ★ ★

ನಾಲ್ಕೂ ಪ್ರವಾಸಿಗಳು ಸರಿಯಾದ ಸಮಯಕ್ಕೆ ದ್ವಾರಕೆಗೆ ತಲುಪಿದರು. ಅವರು ಭಗವಾನ್ ದ್ವಾರಕಾಧೀಶನ ದರ್ಶನಗೈದು ಅನಂತರ ರೂಪಾಯಿಯನ್ನು ಪಡೆಯಲು ಸೇಠ ಶ್ಯಾಮಲಶಾಹ ವಸುದೇವನನ್ನು ಹುಡುಕತೊಡಗಿದರು. ಪೇಟೆಯಲ್ಲಿ ಕೇಳಿದಾಗ ಯಾರೂ ಆ ವ್ಯಾಪಾರಿಯ ವಿಳಾಸ ಹೇಳಲಿಲ್ಲ. ಪ್ರವಾಸಿಗರಿಗೆ ತುಂಬಾ ಚಿಂತೆ ಇಟ್ಟುಕೊಂಡಿತು. ಅವರ ಮನಸ್ಸಿನಲ್ಲಿ ಸಂಶಯವುಟಾಗಿ ಯೋಚಿಸುತ್ತಾರೆ- ಎಲ್ಲಾದರೂ ಆ ಭಕ್ತನು ನಮ್ಮನ್ನು ಮೋಸಗೊಳಿಸಲಿಲ್ಲವಲ್ಲ ! ಒಂದು ವೇಳೆ ಹೀಗೆ ಆದರೆ....ಜೂನಾಗಡದಲ್ಲಿ ಅವನ ಮನೆಯಾದರೂ ಇದೆಯಲ್ಲ; ಅಲ್ಲಿಂದ ಏಲ್ಲಿಗೆ ಹೋದಾನು ? ಅಲ್ಲಾದರೋ ಅವನು ಹಣಕೊಡಲೇ ಬೇಕಾಗುವುದು. ಆದರೆ ಅವನು ನೋಡುವಾಗ ಸತ್ಪುರುಷನಂತೆ ಕಾಣುತ್ತಾನೆ. ಅವನು ಹೇಗೆ ಮೋಸಮಾಡ ಬಲ್ಲನು ? ಆದರೆ ಇಲ್ಲಿ ಶ್ಯಾಮಲಶಾಹ ಸೇಠನ ಯಾವುದೇ ಹೆಸರು, ಪರಿಚಯವೇ ಇಲ್ಲ.

ಈ ರೀತಿ ವಿಚಾರ ಮಾಡುತ್ತಾ ಅವರು ಸೇಠಜಿಯನ್ನು ದಿನವಿಡೀ ಹುಡುಕಿದರು, ಆದರೆ ಯಾರೂ ಆ ಸೇಠಜಿಯ ಹೆಸರು, ವಿಳಾಸ ತಿಳಿಸಲಿಲ್ಲ. ಯಾತ್ರಿಗಳು ನಿರಾಶರಾದರು. ಈಗ ಇಲ್ಲಿ ಸೇಠಜಿಯಠಾವು ಸಿಗುವುದು ಕಷ್ಟವೇ. ಜೂನಾಗಡಕ್ಕೆ ಹೋಗಿಯೇ ಹಣ ವಸೂಲು ಮಾಡಬೇಕು ಎಂದು ನಿಶ್ಚಯಿಸಿದರು.

ಮರುದಿನ ಅಮಾವಾಸ್ಯೆಯ ಪರ್ವವಾದ ಕಾರಣ ದ್ವಾರಕೆಯಲ್ಲಿ ಯಾತ್ರಿಗಳ ಗದ್ದಲ ತುಂಬಾ ಇತ್ತು. ಪುರೋಹಿತರು ಗೋಮತಿಯಲ್ಲಿ ಯಾತ್ರಿಗಳ ಪಾಪ ಪರಿಹಾರಕ್ಕೆ ಅವರಿಂದ ಸಂಕಲ್ಪ ಸ್ನಾನಮಾಡಿಸುತ್ತಿದ್ದರು. ಭಗವಂತನ ದರ್ಶನಕ್ಕಾಗಿ ಮಂದಿರದಲ್ಲಿ ಭಕ್ತರ ಗದ್ದಲವಿತ್ತು ಎಲ್ಲ ಕಡೆಗಳಲ್ಲಿ '**ಗೋಮತಿ ಮಾತಾಕೀ ಜೈ**

ದ್ವಾರಕಾಧೀಶಕೀ ಜೈ'ಎಂಬ ಧ್ವನಿಯಿಂದ ಆಕಾಶವೇ ಪ್ರತಿಧ್ವನಿಸುತಿತ್ತು. ಇದೇ ಸಮಯದಲ್ಲಿ ಭಕ್ತವತ್ಸಲ ಭಗವಂತನು ಭಕ್ತನ ಕಾರ್ಯವನ್ನು ಮಾಡಲು ಸೇಠಜೀಯ ರೂಪದಲ್ಲಿ ಪ್ರಕಟನಾದನು. ಅವನೊಂದಿಗೆ ಗುಮಾಸ್ತನಾಗಿ ಅಕ್ರೂರನು ಲೆಕ್ಕ ಪುಸ್ತಕ, ಲೇಖನೀ ಶ್ಯಾಹಿ ಹಿಡಿದುಕೊಂಡು ಸಿದ್ಧನಾಗಿದ್ದನು. ಅವರು ದೇವಸ್ಥಾನದ ಸಮೀಪವೇ ಒಂದು ಚಿಕ್ಕದಾದ ಕಟ್ಟೆಯ ಮೇಲೆ ತಮ್ಮ ಆಸನ ವ್ಯವಸ್ಥೆ ಮಾಡಿಕೊಂಡರು.

ಇತ್ತ-ನಾಲ್ಕೂ ಪ್ರವಾಸಿಗಳು ಗೋಮತಿ ಸ್ನಾನ ಮಾಡಿ ಭಗವಂತನ ಮಂದಿರಕ್ಕೆ ಬಂದು ದ್ವಾರಕಾಧೀಶನ ದರ್ಶನ ಮಾಡಿ ಹೊರಬಂದು ಜೂನಾಗಡಕ್ಕೆ ಹೋಗುವ ವಿಚಾರಮಾಡಿದರು. ಮಂದಿರದಿಂದ ಹೊರಗೆ ಬರುತ್ತಲೇ ಅವರ ದೃಷ್ಟಿ ಈ ಹೊಸ ಸೇಠಜಿಯವರ ಮೇಲೆ ಬಿತ್ತು. ಸರಿ! ಹೋಗುವಾಗ ಇಲ್ಲಿಯೂ ಸ್ವಲ್ಪ ಕೇಳಿಬಿಡುವಾ ಎಂದು ಆಲೋಚಿಸಿ ಅವರಲ್ಲಿ ಒಬ್ಬನು ಪ್ರಶ್ನಿಸಿದನು- ಸೇಠಜೀ ನಿಮ್ಮ ಹೆಸರೇನು?

ಸೇಠಜೀ ರೂಪದಲ್ಲಿದ್ದ ಭಗವಂತನೆಂದ- ನನ್ನ ಹೆಸರು ಶ್ಯಾಮಲಶಾಹ ವಾಸುದೇವ. ಇದನ್ನು ಕೇಳುತ್ತಲೇ ಪ್ರವಾಸಿಗರಿಗೆ ಒಣಗಿದ ಹೃದಯಕ್ಕೆ ಆಸೆಯ ಅಮೃತದ ಮಳೆ ಸುರಿದಂತಾಯಿತು. ಅಯಾಸವಿಲ್ಲದೇ ಸೇಠಜೀಯವರು ಸಿಕ್ಕಿರುವುದರಿಂದ ಅವರಿಗೆ ಅಪಾರ ಆನಂದವಾಯಿತು. ಅವರು ತತ್‌ಕ್ಷಣ ಸೇಠಜೀಯವರಿಗೆ ಹುಂಡೀ ಪತ್ರವನ್ನು ಕೊಟ್ಟರು. ಸೇಠಜೀಯವರು ಹುಂಡಿಯನ್ನು ನೋಡಿ ಅದನ್ನು ಗುಮಾಸ್ತನ ಕೈಗಿತ್ತು, ಏಳುನೂರ ಐವತ್ತು ರೂಪಾಯಿ ಕೊಡಲು ಆಜ್ಞಾಪಿಸಿದರು. ಗುಮಾಸ್ತ ಅಕ್ರೂರನು ಪೂರಾ ಏಳುನೂರ ಐವತ್ತು ರೂಪಾಯಿಗಳನ್ನು ಎಣಿಸಿ ಅವರಿಗಿತ್ತನು.

ಪ್ರವಾಸಿಗಳು ಹಣವನ್ನು ಎಣಿಸಿಕೊಂಡು, ಹುಂಡೀ ಪತ್ರದ ಮೇಲೆ ಹಸ್ತಾಕ್ಷರ ಮಾಡಿದರು. ಹಣಪಡೆದು ಅವರು ನರಸೀಮೆಹತಾರವರ ತುಂಬಾ ಪ್ರಶಂಸೆ ಮಾಡಿದರು. ಭಗವಂತನು ಭಕ್ತನ ಪ್ರಶಂಸೆ ಮಾಡುತ್ತಾ, ನರಸೀಮೆಹತಾರವರು ನನ್ನ ಪರಮ ಸ್ನೇಹಿತರಾಗಿದ್ದಾರೆ, ನಾನಾದರೋ ಅವರ ಓರ್ವ ಆಜ್ಞಾಕಾರಿ ಯಾಗಿದ್ದೇನೆ.

ಈ ಪ್ರಕಾರ ಭಗವಾನ್ ಶ್ರೀಕೃಷ್ಣನು ಭಕ್ತಶ್ರೇಷ್ಠ ನರಸೀಮೆಹತಾನ ಹುಂಡಿಯನ್ನು ಸ್ವೀಕರಿಸಿ ಭಕ್ತನ ಗೌರವವನ್ನು ಕಾಪಾಡಿದನು ಮತ್ತು ತನ್ನ ಭಕ್ತ ವತ್ಸಲತೆಯ ಕೀರ್ತಿಯನ್ನು ಅಕ್ಷುಣ್ಣವಾಗಿಸಿದನು.

ಕುಂವರಬಾಯಿಯ ಸಂಸಾರ

ಭಾರತೀಯ ಜೀವನದಲ್ಲಿ ಅವಿಭಕ್ತ ಕುಟುಂಬದ ಪದ್ಧತಿ ಒಂದು ವಿಶೇಷತೆಯಾಗಿದೆ. ಈ ಪದ್ಧತಿಯು ಒಂದು ಕಾಲದಲ್ಲಿ ಗಾರ್ಹಸ್ಥ್ಯ ಜೀವನವನ್ನು ಮಹಾನ್ ಉಜ್ವಲ ಮತ್ತು ಸುಖ-ಶಾಂತಿಮಯ ಮಾಡುವುದರಲ್ಲಿ ತುಂಬಾ ಸಹಾಯ ಮಾಡಿದೆ ಮತ್ತು ಇಂದೂ ಕೂಡ ಅನೇಕ ಕಡೆಗಳಲ್ಲಿ ಇದರ ಗುಣಗಳು ಕಂಡು ಬರುತ್ತವೆ. ಆದರೆ ನಮ್ಮ ಅಜ್ಞತೆಯಿಂದ ಈ ಸುಂದರ ಪದ್ಧತಿಯ ಒಂದು ದುಷ್ಪರಿಣಾಮವೂ ನಮ್ಮ ಮನೆಗಳಲ್ಲಿ ನೋಡಲಾಗುತ್ತದೆ ಮತ್ತು ಗೃಹಕಲಹಕ್ಕೆ ಬಲಿಯಾಗುತ್ತಾ ಇದೆ. ಈ ಕಾರಣದಿಂದ ಸಾವಿರಾರು ಕೋಮಲ, ಅವಿಕಸಿತ ಮೊಗ್ಗುಗಳು, ಅನೇಕ ಕುಲಾಂಗನೆಯರು ಅಕಾಲದಲ್ಲೇ ಕಾಲದ ಹೊಡೆತಕ್ಕೆ ತುತ್ತಾಗುತ್ತಾರೆ ಮತ್ತು ಎಷ್ಟೋ ಶ್ರೀಮಂತ ಪರಿವಾರಗಳು ಎಂದೆಂದಿಗೂ ದುಃಖ ಸಾಗರದಲ್ಲಿ ಮುಳುಗಿ ಹೋಗುತ್ತಿವೆ. ಈ ಗೃಹಕಲಹವು ಸಾಮಾನ್ಯ ಮಾತಿಗಾದರೂ ಕೂಡ ಇಂದು ಹಗಲು-ರಾತ್ರಿ ಎಲ್ಲ ಪರಿವಾರವನ್ನು ಬೆಂಕಿಯಂತೆ ಸುಡುತ್ತದೆ ಮತ್ತು ಯಾವುದೇ ಯಜಮಾನನಿಂದ ನಂದಿಸಲು ಅಸಾಧ್ಯವಾಗಿದೆ. ಎಲ್ಲಿಯವರೆಗೆಂದರೆ - ನ್ಯಾಯಾಧೀಶರು ಕೋರ್ಟಿನಲ್ಲಿ ಕುಳಿತು ಸಮಾಜದ ದೊಡ್ಡ-ದೊಡ್ಡ ಅತ್ಯಂತ ಜಟಿಲ ಮೊಕದ್ದಮೆಗಳನ್ನು ಇತ್ಯರ್ಥ ಮಾಡುತ್ತಾರೆ. ಅವರೂ ಕೂಡ ಮನೆಯ ಮೊಕದ್ದಮೆಯನ್ನು ತೀರ್ಮಾನಿಸುವುದರಲ್ಲಿ ಅಸಮರ್ಥರಾಗುತ್ತಾರೆ. ಯಾವ ದೊಡ್ಡ-ದೊಡ್ಡ ಪದವೀಧರ ವೈದ್ಯರು ಭೀಷಣ, ಪ್ರಾಣಘಾತಕ ರೋಗಗಳ ಚಿಕಿತ್ಸೆಯನ್ನು ಮಾಡುವುದರಲ್ಲಿ ಸಫಲರಾಗುತ್ತಾರೆ, ಆದರೆ ಅವರೂ ಕೂಡ ಈ ಗೃಹರೋಗವನ್ನು ನಿವಾರಿಸಲು ವಿಫಲರಾಗುತ್ತಾರೆ, ಈ ಭಾರತೀಯ ಗೃಹಕಲಹದ ಅನಾಹುತವನ್ನು ಇದಕ್ಕಿಂತ ಹೆಚ್ಚು ಏನು ವರ್ಣಿಸಬಹುದು ? ಭಗವಂತನು ಈ ಮಹಾಮಾರಿಯಿಂದ ಭಾರತವನ್ನು ಕಾಪಾಡಲೀ.

ಭಕ್ತರಾಜ ನರಸೀಮೆಹತಾರವರ ಪ್ರಿಯ ಪುತ್ರಿ ಕುಂವರಬಾಯಿಯ ವಿವಾಹವು ಒಂದು ಸುಸಂಪನ್ನ ಶಿಕ್ಷಿತ ಪರಿವಾರದಲ್ಲಾಗಿತ್ತು ಮತ್ತು ಗಂಡನ ಮನೆಗೆ ಹೋದಾಗಿನಿಂದ ಕುಲೋಚಿತ ಧರ್ಮದ ಪಾಲನೆಯನ್ನು ಪೂರ್ಣರೂಪದಿಂದ ಮಾಡುವ ಪ್ರಯತ್ನ ಮಾಡುತ್ತಿದ್ದಳು ; ಅವಳು ಎಂದೂ ಯಾವುದೇ ಕೆಲಸದಲ್ಲಿ ಕಳ್ಳತನ ಮಾಡದೆ ಸದಾಕಾಲ ಎಲ್ಲರೊಡನೆ ಆದರ, ಪ್ರೇಮದಿಂದ ವರ್ತಿಸುತ್ತಿದ್ದಳು.

ಆದರೂ ಮನೆಯಲ್ಲಿ ಆ ಬಡಪಾಯಿಯನ್ನು ಯಾರೂ ಆದರಿಸುತ್ತಿರಲಿಲ್ಲ. ಮನೆಯಲ್ಲಿ ನಿರಂತರ ಕಲಹವೇ ಇರುತ್ತಿತ್ತು. ಅತ್ತೆ-ನಾದಿನಿ-ನೆಗಣ್ಣಿ ಎಲ್ಲರೂ ಅವಳಮೇಲೆ ವಾಗ್ಬಾಣಗಳ ಮಳೆಸುರಿಸುತ್ತಿದ್ದರು. ಒಂದು ಅವಳು ಬಡತನದ ಮನೆಯ ಮಗಳಾಗಿದ್ದಳು, ಇನ್ನೊಂದು ಅವಳ ಪತಿ ವಸಂತರಾಯನು ದುರ್ವ್ಯಸನೀ, ಲಂಪಟ ಮತ್ತು ಕ್ರೋಧಿಯಾಗಿದ್ದನು. ಈ ಕಾರಣದಿಂದ ಅವಳ ಅಳಲನ್ನು ಅವನೂ ಕೇಳುತ್ತಿರಲಿಲ್ಲ. ಆ ಬಡಪಾಯಿಯು ಒಳಗೊಳಗೆ ತನ್ನ ವ್ಯಥೆಯನ್ನು ದೇವರಲ್ಲಿ ಹೇಳಿಕೊಂಡು ಹಗುರಾಗಿಸಿಕೊಳ್ಳುತ್ತಿದ್ದಳು.

ಇದಲ್ಲದೇ ಒಂದು ಮೂರನೇಯ ಕಾರಣವು ಇದಿರಾಯಿತು. ಅವಳ ವಿವಾಹವಾಗಿ ಅನೇಕ ವರ್ಷಗಳು ಕಳೆದು ಹೋದರೂ ಅವಳಿಗೆ ಸಂತಾನವಾಗಲಿಲ್ಲ. ಪುತ್ರಹೀನಳಾದ ಕುಲವಧುಗಳನ್ನು ಸಮಾಜದಲ್ಲಿ ಜನರು ಕೀಳಾಗಿನೋಡುತ್ತಾರೆ ಮತ್ತು ಈ ಕಾರಣದಿಂದಲೂ ಅವರಿಗೆ ತುಂಬಾ ದುಃಖಸಹಿಸಬೇಕಾಗುತ್ತದೆ. ಜನರು ಅವರಿಗೆ ಅನೇಕ ರೀತಿಯ ಕೆಟ್ಟ ಮಾತುಗಳನ್ನು ಆಡುತ್ತಿರುತ್ತಾರೆ ಮತ್ತು ಎರಡನೇ ಮದುವೆ ಮಾಡಿಕೊಳ್ಳುವ ಬೆದರಿಕೆ ಹಾಕುತ್ತಾರೆ. ಕುಂವರಬಾಯಿಯು ದುಃಖಗಳನ್ನು ಸಹಿಸುತ್ತಿದ್ದಳು, ಆದರೆ ಈ ದುಃಖ ಅವಳಿಗೆ ಅಸಹನೀಯ ವಾಯಿತು. ಏಕೆಂದರೆ ಇದರಲ್ಲಿ ಅವಳ ದೋಷವೇನಿತ್ತು ? ಅಥವಾ ಇದಕ್ಕಾಗಿ ಸ್ವತಃ ಅವಳು ಏನು ಮಾಡಬಹುದಾಗಿತ್ತು ? ಕುಂವರಬಾಯಿಯ ಮಾವ ಶ್ರೀರಂಗಧರ ಮೆಹತಾ ರಾಜ್ಯದ ಒಂದು ಉಚ್ಚಹುದ್ದೆಯಲ್ಲಿದ್ದರು. ಅವರು ಸ್ವತಃ ವಿಚಾರ ಶೀಲ ಹಾಗೂ ದಯಾಳು ಸ್ವಭಾವದ ಪುರುಷರಾಗಿದ್ದರು. ಅವರು ಸೊಸೆಯ ಕಷ್ಟಗಳನ್ನು ಏನೂ ತಿಳಿದಿರಲಿಲ್ಲವೆಂದಲ್ಲ ; ಆದರೂ ಕೂಡ ಅವರು ಈ ವಿಷಯದಲ್ಲಿ ಏನಾದರೂ ಮಾಡಲು ಅಸಮರ್ಥರಾಗಿದ್ದರು. ಆದುದರಿಂದ ಆ ಬಡಪಾಯಿಯು ಒಂದು ಮೂಕ ಪಶುವಿನಂತೆ ಎಲ್ಲವನ್ನೂ ಕೇಳಿಕೊಂಡು ಸಹಿಸುತ್ತಿದ್ದಳು ಮತ್ತು ಏಕಮಾತ್ರ ಭಗವಂತನಲ್ಲಿ ತನ್ನ ದುಃಖಗಳನ್ನು ಹೇಳಿಕೊಂಡು ಸಂತೋಷಪಡುತ್ತಿದ್ದಳು.

ಮನುಷ್ಯನು ಎಲ್ಲ ಕಡೆಗಳಿಂದ ಆಸೆಯನ್ನು ಬಿಟ್ಟು ಕೇವಲ ಭಗವಂತನೋರ್ವನನ್ನೇ ದೀನನಾಗಿ ಕೂಗಿದಾಗ, ಅವನ ಕೂಗು ಭಗವಂತನ ಕಿವಿಗೆ ಅವಶ್ಯವಾಗಿ ತಲುಪುತ್ತದೆ, ಮತ್ತೆ ಭಗವಂತನಿಗೆ ಆ ಪ್ರಾಣಿಯ ಕಷ್ಟಗಳನ್ನು ದೂರಾಗಿಸದೇ ಸಮಾಧಾನವಾಗುವುದಿಲ್ಲ. ಕೊನೆಗೂ ಅಸಹಾಯ ಕುಂವರ ಬಾಯಿಯ ಮೂಕ ಪ್ರಾರ್ಥನೆ ಭಗವಂತನಿಗೆ ತಲುಪಿತು ಹಾಗೂ ಭಗವಂತನು

ಅವಳ ಮೇಲೆ ಕೃಪೆಮಾಡಿದನು. ಅವಳು ಗರ್ಭವತಿಯಾದಳು, ಹಾಗೂ ದಿನಕಳೆಯುತ್ತಾ ಗರ್ಭಕ್ಕೆ ಏಳು-ಎಂಟು ತಿಂಗಳಾದುವು.

ಗುಜರಾತ-ಕಾಠಿಯಾವಾಡಗಳಲ್ಲಿ ಸೊಸೆಯ ಸೀಮಂತವನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ ಮತ್ತು ಎರಡು ದಿನ ಜಾತಿ ಬಾಂಧವರ ಊಟ-ಉಪಚಾರಾದಿಗಳು ನಡೆಯುತ್ತವೆ. ಯಾವ ಸ್ತ್ರೀಯಳ ಸೀಮಂತ ನಡೆಯುವುದೋ ಅವಳಿಗೆ ಮತ್ತು ಅವಳ ಅತ್ತೆ ಮೊದಲಾದ ಸಂಬಂಧಿಗಳಿಗೆ ಯಥಾಶಕ್ತಿ ಸೀರೆಗಳನ್ನು ಕೊಟ್ಟು ಸಂತೋಷಪಡಿಸುತ್ತಾರೆ. ಉಚ್ಚಕುಲಗಳಲ್ಲಿ ವೈದಿಕವಿಧಿಯಿಂದ ಶಾಸ್ತ್ರೀಯವಾಗಿ ಸೀಮಂತ ಸಂಸ್ಕಾರ ನಡೆಯುತ್ತದೆ.

ಕುವರಬಾಯಿಯ ಸೀಮಂತದ ಮುಹೂರ್ತ ಮಾಘ ಶುಕ್ಲ ಸಪ್ತಮಿಯ ದಿನದಂದು ನಿಶ್ಚಯಿಸಲಾಯಿತು. ಎಲ್ಲ ಸಂಬಂಧಿಗಳಿಗೂ ಆಮಂತ್ರಣ ಪತ್ರಿಕೆ ಕಳಿಸಿಕೊಡಲಾಯಿತು. ಆದರೆ ಕುವರಬಾಯಿಯ ತಂದೆ ನರಸೀಮೆಹತಾರವರಿಗೆ ಬಡವರೆಂದು ಯೋಚಿಸಿ ಅವರಿಗೆ ಪತ್ರಿಕೆ ಕಳಿಸಲಿಲ್ಲ. ಕುವರಾಬಾಯಿಗೆ ಈ ವಿಷಯ ತಿಳಿದಾಗ ಅವಳಿಗೆ ತುಂಬಾ ದುಃಖವಾಯಿತು. ಅವಳು ಅತ್ತೆಯ ಬಳಿಗೆ ಹೋಗಿ ಕೇಳಿದಳು- ಅಮ್ಮಾ! ಜೂನಾಗಢಕ್ಕೆ ನನ್ನ ತಂದೆಯವರಿಗೆ ಪತ್ರಿಕೆ ಕಳಿಸಲಿಲ್ಲವೇ ?

ಅವರಿಗೆ ಪತ್ರಿಕೆ ಕಳಿಸಿದರೆ ಅವರೇನು ಮಾಡಿಯಾರು ? ನಮ್ಮ ಇಷ್ಟು ದೊಡ್ಡ ವಿಶಾಲ ಕುಟುಂಬಕ್ಕಾಗಿ ಅವರು ಸೀರೆಗಳನ್ನು ಎಲ್ಲಿಂದ ಹೊಂದಿಸಬಲ್ಲರು? ಅವರ ಮನೆಯಲ್ಲಾದರೋ ಶಂಖನಾದ ನಡೀತಾ ಇದೆ ಎಂದು ಅತ್ತೆಯು ಒರಟಾಗಿ ಉತ್ತರಿಸಿದಳು.

ಅತ್ತೆಯಮ್ಮ! ನೀವು ಹೇಳುವುದು ಸರಿಯಾಗಿದೆ. ಆದರೆ ತಂದೆ-ತಾಯಂದಿರ ಪ್ರೇಮ ತನ್ನ ಮಕ್ಕಳ ಮೇಲೆ ಎಷ್ಟಿರುತ್ತದೆ ಎಂಬುದು ನಿಮಗೂ ಗೊತ್ತಿದೆ. ಪರಿಸ್ಥಿತಿ ಕೆಟ್ಟದಾಗಿದ್ದರೂ ಅವರು ನನ್ನ ಬಯಕೆಯನ್ನು ಅವಶ್ಯವಾಗಿ ಪೂರ್ಣ ಮಾಡುವ ಪ್ರಯತ್ನ ಮಾಡುವರು. ನೀವು ಅವರ ಬಳಿಗೆ ಆಮಂತ್ರಣ ಪತ್ರಿಕೆ ಅವಶ್ಯವಾಗಿ ಕಳಿಸಿಕೊಡಿ ಎಂದು ಆಗ್ರಹ ಪಡಿಸಿದಳು.

ಅಮ್ಮಾ! ಅತ್ತಿಗೆ ಹೇಳುವುದು ಸರಿಯೇ! ಅವಶ್ಯವಾಗಿ ಆಮಂತ್ರಣ ಕಳಿಸಿರಿ. ಸಾಧುಗಳೊಂದಿಗೆ ಇಲ್ಲಿಗೆ ಬಂದು ನಮಗೆ ಗೋಪೀ ಚಂದನ, ತುಲಸೀ ಮಾಲೆ ಮತ್ತು ಕೌಪೀನ ಕೊಟ್ಟು ನಮಗೂ ತಮ್ಮಂತೆ ಲಂಗೋಟಿಧಾರೀ ಸಾಧುಗಳಾಗಿಸುವ ಶಕ್ತಿ ಅವರಿಗೆ ಇದ್ದೇ ಇದೆ. ತಾಯೀ ! ಅವರಿಗಾದರೋ

ಅವಶ್ಯವಾಗಿ ಕರೆ ಕಳಿಸಲೇಬೇಕು ಎಂದು ಮಧ್ಯದಲ್ಲೇ ಕುಂವರಬಾಯಿಯ ನಾದಿನಿ ವ್ಯಂಗವಾಗಿ ಹೇಳಿದಳು.

ನಾದಿನಿಯ ಈ ಚುಚ್ಚು ಮಾತುಗಳಿಂದ ಕುಂವರಬಾಯಿಯ ಹೃದಯಕ್ಕೆ ದೊಡ್ಡ ಆಘಾತವಾಯಿತು. ಅವಳ ಕಣ್ಣುಗಳಲ್ಲಿ ಏಕಪ್ರಕಾರ ನೀನು ಸುರಿಯ ತೊಡಗಿತು. ಓರ್ವ ಕುಲವಧುವಿನ ಹತ್ತಿರ ಅಳುವುದಲ್ಲದೆ ಬೇರೆ ಯಾವ ಬಲವಿರುತ್ತದೆ ?

ಅತ್ತೆಯವರೇ ! ನೀವು ಇಂತಹ ನಿರ್ದಯತೆ ತೋರಬೇಡಿ. ನನ್ನ ತಂದೆಯವರಿಗೆ ಸುದ್ದಿ ಅಗತ್ಯವಾಗಿ ಕಳಿಸಿಕೊಡಿರಿ. ಅವರು ಏನೂ ತಾರದಿದ್ದರೂ ನಿಮ್ಮ ಬಳಿ ಕಡಿಮೆ ಏನಿದೆ ? ಕನಿಷ್ಠ ತಂದೆ - ಮಗಳ ಭೇಟಿಯಾದರೂ ಆಗಬಹುದಲ್ಲ! ನಾನು ಬಂದಾಗಿನಿಂದ ಜೂನಾಗಢಕ್ಕೆ ಒಮ್ಮೆಯೂ ಹೋಗಲಿಲ್ಲ. ಈ ಮಧ್ಯೆ ನನ್ನ ತಮ್ಮ ಮತ್ತು ತಾಯಿಯ ದೇಹಾಂತವಾದುದು ನಿಮಗೆ ತಿಳಿದೇ ಇದೆ ಎಂದು ಹೇಳುತ್ತಾ-ಹೇಳುತ್ತಾ ಕುಂವರಬಾಯಿಯ ಕಂಠ ಉಮ್ಮಳಿಸಿ ಬಂದು ಬಿಕ್ಕಿ-ಬಿಕ್ಕಿ ಅಳತೊಡಗಿದಳು.

ಈ ಸಮಯದಲ್ಲಿ ಕುಂವರಬಾಯಿಯ ವಿಲಾಪವನ್ನು ಕೇಳಿ ಎಂತಹ ವಜ್ರಹೃದಯವೂ ಕರಗದೇ ಇರಲಾರದು. ಆದರೂ ಕೂಡ ಅವಳ ಅತ್ತೆಯ ಹೃದಯದ ಮೇಲೆ ಸ್ವಲ್ಪವೂ ಪ್ರಭಾವ ಉಂಟಾಗಲಿಲ್ಲ. ಅವಳು ಆ ವಿಲಾಪದ ಅರ್ಥ ವಿಪರೀತವಾಗಿಸಿಕೊಂಡಳು. ಅವಳು ಹೆಳತೊಡಗಿದಳು- ನೋಡು, ಹೇಗೆ ಸಾಧು ಹಸುವಿನಂತಾಗುತ್ತಾಳೆ. ಇಲ್ಲಿ ತಂದೆ-ತಂದೆ ಎಂದು ಹೇಳುತ್ತಿರುತ್ತಾಳೆ, ಅಲ್ಲಿ ಕೇಳುವವರೇ ಇಲ್ಲ. ಒಂದು ವೇಳೆ ಆ ಅನಾಥನಲ್ಲಿ ಸ್ವಲ್ಪವಾದರೂ ಪ್ರೇಮವಿರುತ್ತಿದ್ದರೆ ಎಂದಾದರು ಇಲ್ಲಿಗೆ ಬಂದು ಮಗಳ ಸಮಾಚಾರ ತಿಳಿಯುತ್ತಿರಲಿಲ್ಲವೆ ? ಬಂದಾಗಿನಿಂದ ಒಂದು ಪಕ್ಷಿಯೂ ಇಣುಕಲು ಇತ್ತ ಬಂದಿಲ್ಲ ! ಇದು ಎಂತಹ ಪ್ರೇಮ ? ಅವನಿಗೆ ಪುಕ್ಕಟೆ ತಿನ್ನುವುದರಲ್ಲಿ, ಟೋಪಿ- ಲಂಗೋಟಿ ಧರಿಸುವುದರಲ್ಲಿ, ಕುಣಿದು - ಕುಪ್ಪಳಿಸುವುದರಲ್ಲಿ ಪ್ರೇಮವಿದೆ. ಮತ್ತೆ ಅವನಿಗೆ ಬೇರೆ ಏನು ಬೇಕು ? ದಿನವಿಡೀ ಶಾಲಿಗ್ರಾಮ ಕಲ್ಲಿಗೆ ತಲೆ ಕುಟ್ಟಿಕೊಳ್ಳುವುದು.....

ಅವಳು ಇದೇ ಗುಂಗಿನಲ್ಲಿ ಇನ್ನೂ ಏನೇನು ಹೇಳುತ್ತಿದ್ದಳೋ; ಆದರೆ ಅಷ್ಟರಲ್ಲಿ ಶ್ರೀರಂಗಧರ ಮೆಹತಾ ಮನೆಯೊಳಗೆ ಬಂದರು ಮತ್ತು ಮನೆ ಶಾಂತವಾಯಿತು. ಅವರು ಪತ್ನಿಯ ಧ್ವನಿ ಹಾಗೂ ಸೊಸೆಯ ಅಳುವನ್ನು ಕೇಳಿ

ಸ್ವಲ್ಪಸಿಟ್ಟುಗೊಂಡು ಕೇಳಿದರು– ಏನು ಮಾತು ? ಇಂದು ಸೊಸೆ ಏಕೆ ಅಳುತ್ತಿದ್ದಾಳೆ ? ತಾಯಿ–ಮಗಳು ನೀವಿಬ್ಬರೂ ಈ ಬಡ ಹುಡುಗಿಗೆ ಏಕೆ ಬೆನ್ನುಹತ್ತಿರುವಿರಿ ?

ಮಾತು, ಏನಿಲ್ಲ ಸೊಸೆ ಹೇಳುತ್ತಿದ್ದಾಳೆ ನನ್ನ ತಂದೆಯವರಿಗೆ ಆಮಂತ್ರಣ ಪತ್ರಿಕೆ ಕಳಿಸಿ ಎಂದು ಮತ್ತು ನಾನು ಹೇಳುತ್ತಿದ್ದೇನೆ ಯಾವ ಆವಶ್ಯಕತೆಯೂ ಇಲ್ಲವೆಂದು ಶ್ರೀರಂಗಧರನ ಪತ್ನಿಯು ಉತ್ತರಿಸಿದಳು.

ಇದರಲ್ಲಿ ದೊಡ್ಡಮಾತೇನಿದೆ ? ನಾನಾದರೋ ಪತ್ರಿಕೆ ಏಕೆ ಕಳಿಸಲಿಲ್ಲವೆಂದರೆ– ಇದರಿಂದ ಭಕ್ತರಾಜರ ಭಜನೆಯಲ್ಲಿ ವ್ಯರ್ಥವಾಗಿ ತೊಂದರೆ ಉಂಟಾದೀತು ಮತ್ತು ಖರ್ಚಿನ ಹೊರೆಯಿಂದ ಅವರಿಗೆ ಕಷ್ಟವಾಗಬಹುದು. ಇನ್ನು ಸೊಸೆಯ ಇಚ್ಛೆ ಇದ್ದರೆ ನಾನು ಇಂದೇ ಬ್ರಾಹ್ಮಣನ ಕೈಯಲ್ಲಿ ಪತ್ರಿಕೆ ಕಳಿಸುತ್ತೇನೆ. ಎಂದು ಶ್ರೀರಂಗಧರ ಮೆಹತಾರವರು ಶುದ್ಧ ಹೃದಯದಿಂದ ಆಶ್ವಾಸನೆ ಕೊಡುತ್ತಾ ಹೇಳಿದರು.

ತಮ್ಮ ಮಾತಿನಂತೆ ಶ್ರೀರಂಗಧರ ಮೆಹತಾರವರು ಕೂಡಲೇ ಓರ್ವಬ್ರಾಹ್ಮಣರನ್ನು ಕರೆದು, ಅವರ ಕೈಗೆ ಆಮಂತ್ರಣ ಪತ್ರಿಕೆಕೊಟ್ಟು ಜೂನಾಗಢಕ್ಕೆ ಕಳಿಸಿಕೊಟ್ಟರು. ಕು°ವರಬಾಯಿಗೆ ಇದರಿಂದ ಆನಂದವಾಗಿ ಅವಳು ಸಂತೋಷವಾಗಿ ತನ್ನ ಗೃಹಕಾರ್ಯದಲ್ಲಿ ತೊಡಗಿದಳು.

ಭಕ್ತಸುತೆಯ ಸೀಮಂತ

ಸಂಸಾರದಲ್ಲಿದ್ದುಕೊಂಡು ಭಗವಂತನ ಭಕ್ತಿಮಾಡುವುದು ಎರಡು ಅಲಗಿನ ಕತ್ತಿಯ ಆಟಕ್ಕೆ ಸಮವಾಗಿದೆ. ಇಂತಹ ಭಕ್ತರ ಮುಂದೆ ಒಂದು ಕಡೆ ಸಾಂಸಾರಿಕ ಬಾಧೆಗಳು ಗೋಡೆಯಂತೆ ಅಡ್ಡ ನಿಂತಿರುತ್ತವೆ, ಮತ್ತೊಂದು ಕಡೆ, ಶುದ್ಧ ಸಾತ್ವಿಕ ಜೀವನದ ಬಂಗಾರದ ಕಿರಣಗಳು ತನ್ನತ್ತ ಎಳೆಯುತ್ತಿರುತ್ತವೆ. ಆದರೂ ಕೂಡ ಭಕ್ತರು ಭಗವಂತನ ಕೃಪೆಯಿಂದ ತಮ್ಮ ಸಾಂಸಾರಿಕ ಮತ್ತು ಪಾರಮಾರ್ಥಿಕ ಎರಡೂ ಕಾರ್ಯಗಳನ್ನು ಶಾಸ್ತ್ರಗಳ ಆಜ್ಞೆಗನುಸಾರ ಸರಿಯಾಗಿ ಸಾಧಿಸಿಕೊಳ್ಳುತ್ತಾರೆ.

ಮಧ್ಯಾಹ್ನ ಕಳೆದು ಹೋಗಿತ್ತು. ಭಗವಂತನ ಪೂಜೆ ಮಾಡಿ ನರಸೀಮೆಹತಾ ಭೋಜನದ ಸಿದ್ಧತೆಮಾಡುತ್ತಿದ್ದರು. ಸರಿಯಾಗಿ ಅದೇ ಸಮಯಕ್ಕೆ ಶ್ರೀರಂಗಧರ ಮೆಹತಾರವರು ಕಳಿಸಿದ ಬ್ರಾಹ್ಮಣನು ಬಂದು ಅವರಿಗೆ ಪತ್ರಿಕೆಯನ್ನು ಕೊಟ್ಟರು. ಪತ್ರಿಕೆ ತೆರೆದು ಓದ ತೊಡಗಿದರು–

ಪರಮ ಸ್ನೇಹೀ ಭಕ್ತರಾಜ ನರಸೀಮೆಹತಾರವರೇ–

ಸಪ್ರೇಮ ಭಗವತ್ಸ್ಮರಣೆಗಳು

ನಿಮ್ಮ ಪುತ್ರಿ ॥ ಕು॥ವರಬಾಯಿಯ ಸೀಮಂತದ ಮೂಹೂರ್ತವನ್ನು ಮಾಘ ಶು॥ ಸಪ್ತಮಿ ಭಾನುವಾರ ನಿಶ್ಚಯಿಸಲಾಗಿದೆ. ಆ ಪ್ರಯುಕ್ತ ನೀವು ಈ ಶುಭ ಅವಸರದಲ್ಲಿ ತಮ್ಮ ಇಷ್ಟ ಮಿತ್ರರೊಂದಿಗೆ ದಯಮಾಡಿಸಿ ನಮ್ಮ ಮನೆಯ ಶೋಭೆಯನ್ನು ಹೆಚ್ಚಿಸುವ ಕೃಪೆಮಾಡಬೇಕೆಂದು ವಿನಂತಿಕೊಳ್ಳುತ್ತೇನೆ. ಇಲ್ಲಿ ಎಲ್ಲ ರೀತಿಯಿಂದ ಕುಶಲವಿದೆ, ನೀವು ಕುಶಲರಾಗಿರಬಹುದೆಂದು ಆಶಿಸುತ್ತೇನೆ.

ನಿಮ್ಮವ

ಶ್ರೀರಂಗಧರರಾಯ

ನರಸೀಮೆಹತಾರವರು ಬ್ರಾಹ್ಮಣನ ಯಥೋಚಿತ ಸತ್ಕಾರಗೈದು ಭಗವತ್ ಪ್ರಸಾದವಿತ್ತು ಮರುದಿನ ಕಳಿಸಿಕೊಟ್ಟರು.

ಭಕ್ತರಾಜರು ತಮ್ಮ ಮನದಲ್ಲಿ ವಿಚಾರ ಮಾಡತೊಡಗಿದರು– ಇಂದಿನವರೆಗಿನ ವ್ಯಾವಹಾರಿಕ ಕಾರ್ಯಗಳಲ್ಲಿ ಮತ್ತು ನನ್ನ ಜೀವನದಲ್ಲಿಯೂ ಇದು ಕೊನೆಯ ಪ್ರಸಂಗವಾಗಿದೆ. ಆದ್ದರಿಂದ ಶಕ್ತ್ಯಾನುಸಾರ ಮಗಳಿಗೆ ಕೊಟ್ಟು ಅವಳನ್ನು

ಸಂತೋಷಗೊಳಿಸಬೇಕು. ಆದರೆ..... ಇದಕ್ಕಾಗಿ ನಾನು ಏಕೆ ವ್ಯರ್ಥ ಚಿಂತೆ ಮಾಡಬೇಕು ? ನನಗೇನು ? ಭಕ್ತವತ್ಸಲ ಭಗವಂತನು ನನ್ನ ಈ ಅಂತಿಮ ಪ್ರಸಂಗವನ್ನು ನೆರವೇರಿಸುವನು.

ನರಸೀಮೆಹತಾರವರು ಯಾರೋ ಸೇವಕನ ಹಳೆಯ ಎತ್ತಿನ ಗಾಡಿಗೆ ಮುದಿ ಎತ್ತುಗಳನ್ನು ಹೂಡಿ ಜೂನಾಗಢದಿಂದ ಹೊರಟರು. ಅವರೊಂದಿಗೆ ಮೂರುನಾಲ್ಕು ಸಾಧುಗಳ ತಂಡವಿತ್ತು ಮತ್ತು ಸಾಮಾನೆಂದರೆ ಕೇವಲ ಭಗವಂತನ ಪ್ರತಿಮೆ, ಕರತಾಳ, ಗೋಪೀ ಚಂದನಾದಿ ಪೂಜೆಯ ಸಾಮಗ್ರಿ ಇತ್ತು. ಅಂದಾಜು ಎಂಟಹತ್ತು ದಿನಗಳಲ್ಲಿ ಭಜನೆ ಕೀರ್ತನೆ ಮಾಡುತ್ತಾ ಅವರು ಊನಾ ತಲುಪಿದರು.

ಶ್ರೀರಂಗಧರ ಮೆಹತಾರವರ ಮನೆಯಲ್ಲಿ ತುಂಬಾ ವೈಭವದಿಂದ ಉತ್ಸವದ ಸಿದ್ಧತೆ ನಡೆಯುತ್ತಿತ್ತು. ಭಕ್ತರಾಜರು ಬಂದಿರುವ ಸಮಾಚಾರ ತಿಳಿದು ಅವರು ಅವರ ಭೇಟಿಗೆ ಬಂದು, ಕುಶಲ ಸಮಾಚಾರ ಕೇಳಿ ಒಂದು ಹಳೆಯ ಮನೆಯಲ್ಲಿ ಉಳಕೊಳ್ಳಲು ವ್ಯವಸ್ಥೆ ಮಾಡಿದರು. ಸಭ್ಯ ಸಮಾಜದಲ್ಲಾದರೋ ಭಕ್ತಿಯನ್ನು ಒಂದು ಕಸರತ್ತು ಎಂದು ತಿಳಿಯುತ್ತಾರೆ. ಇಂತಹ ವ್ಯರ್ಥ ತಮಾಶೆಯನ್ನು ಮಾಡುವವರಿಗೆ ಯಾವುದೇ ಸುಂದರ ಸ್ಥಾನದಲ್ಲಿ ಉಳಕೊಳ್ಳುವ ಲಾಭವೇನಿದೆ?

ಆದರೆ ನಮ್ಮ ಭಕ್ತರಾಜರಿಗೆ ಪರ್ಣಕುಟೀ ಮತ್ತು ರಾಜಭವನ ಎರಡೂ ಒಂದೇ ಆಗಿತ್ತು. ಅವರು ಭಗವಂತನ ಮೂರ್ತಿಯನ್ನು ಒಂದು ಮೂಲೆಯಲ್ಲಿ ಸ್ಥಾಪಿಸಿ, ಸ್ನಾನಾದಿಗಳನ್ನು ಗೈದು ನಿಯಮಾನುಸಾರ ಶ್ರೀಕೃಷ್ಣ ಕೀರ್ತನದಲ್ಲಿ ಪ್ರವೃತ್ತರಾದರು.

ತಂದೆಯವರು ಬಂದ ಸುದ್ದಿ ಕೇಳಿ ಕುಂವರಬಾಯಿಗೆ ತುಂಬಾ ಪ್ರಸನ್ನತೆ ಉಂಟಾಯಿತು. ಅವಳು ಅವರ ಭೇಟಿಗೆ ಅಲ್ಲಿಗೆ ಬಂದಳು. ಆದರೆ ಅಲ್ಲಿಯ ವ್ಯವಸ್ಥೆಯನ್ನು ಕಂಡು ತುಂಬಾ ನಿರಾಶಳಾಗಿ, ಕಣ್ಣೀರಧಾರೆ ಹರಿಯಿತು.

ಮಗೂ! ಏಕೆ ಅಳುತ್ತಿರುವೆ ? ಭಜನೆ ಮಾಡುತ್ತಾ ಭಕ್ತರಾಜರು ಕೇಳಿದರು.

ಅಪ್ಪಾ ! ನಾಗರ ಜಾತಿಯೆಲ್ಲ ನನ್ನನ್ನು ಅಪಹಾಸ್ಯ ಮಾಡುತ್ತಿದ್ದಾರೆ. ನೀವು ಈ ಸಾಧು ಮಂಡಳಿಯನ್ನು ಜೊತೆಗೆ ತಾರದೇ, ತಮ್ಮ ಕೆಲವು ಬಂಧುಗಳೊಂದಿಗೆ ಬಂದಿದ್ದರೆ ಈ ಜನರಿಗೆ ಕೆಡುಕೆನಿಸುತ್ತಿರಲಿಲ್ಲ ಎಂದು ಕುಂವರಬಾಯಿಯು ಉತ್ತರಿಸಿದಳು.

ಮಗೂ ! ನೀನು ಆ ಜನರ ಮಾತಿಗೆ ಏಕೆ ಲಕ್ಷ್ಯ ಕೊಡುತ್ತಿರುವೆ?

ಗಂಗೆಯು ಪಾಪವನ್ನು, ಚಂದ್ರನು ತಾಪವನ್ನು ಮತ್ತು ಕಲ್ಪತರು ದಾರಿದ್ರ್ಯವನ್ನು ನಾಶಮಾಡುತ್ತವೆ, ಆದರೆ ಸಂತಜನರು ಪಾಪ, ತಾಪ ಮತ್ತು ದಾರಿದ್ರ್ಯ ಈ ಮೂರನ್ನು ನಾಶಮಾಡುತ್ತಾರೆ. ಹಾಗಿರುವಾಗ ಇವರಿಗಿಂತ ಹೆಚ್ಚಾಗಿ ಆತ್ಮೀಯ ಸಂಬಂಧಿ ಯಾರಿದ್ದಾರೆ ? ಸಾಂಸಾರಿಕ ಬಂಧು - ಬಾಂಧವರು ಸ್ವಾರ್ಥದ ಕುರಿತು ನಿರ್ಭರರಾಗಿರುತ್ತಾರೆ. ಒಂದೊಮ್ಮೆ ಸ್ವಾರ್ಥ ಸಿದ್ಧಿಸದಿದ್ದರೆ ತಂದೆ-ತಾಯಿ, ಅಣ್ಣ-ತಂಗಿ, ಬಂಧು-ಬಾಂಧವರೆಲ್ಲರೂ ಅಗಲಿ ಹೋಗುತ್ತಾರೆ. ಆದುದರಿಂದ ನಾನು ಇಂತಹ ಶ್ರೇಯಸ್ಕರ ಸಾಧು ಮಂಡಳಿಯನ್ನು ಬಿಟ್ಟು ಸ್ವಾರ್ಥೀ ಸಂಬಂಧಿಗಳ ಸಂಗವನ್ನು ತಿಳಿದು-ತಿಳಿದು ಹೇಗೆ ಮಾಡಲೀ ?

ಒಳ್ಳೆಯದು, ಅಪ್ಪಾ! ಸಂಗದ ಮಾತು ಹೋಗಲೀ. ನನ್ನ ಅತ್ತೆ ನಾನಿದಿಯರಿಗೆ ಮತ್ತು ಬೇರೆ ಕುಟುಂಬಿಗಳಿಗಾಗಿ ನೀವು ಎಂತಹ ಸೀರೆ ತಂದಿರುವಿರಿ? ತೋರಿಸಿರಿ ಎಂದು ಕುಂವರಬಾಯಿಯು ಉತ್ಸುಕತೆಯಿಂದ ಕೇಳಿದಳು.

ಮಗು ! ನೀನಾದರೋ ತಿಳಿದೇ ಇರುವೆ. ನಿನ್ನ ಈ ಬಡತಂದೆ ಏನನ್ನೂ ಮಾಡಲು ಶಕ್ತನಲ್ಲ, ಏನು ಮಾಡಬೇಕೋ ಅದನ್ನು ದೀನದಯಾಳುವೇ ಮಾಡುವನು ಎಂದು ಭಕ್ತರಾಜರು ನಿಶ್ಚಂತರಾಗಿ ಉತ್ತರಿಸಿದರು.

ಅಪ್ಪಾ ! ನಾಳೆಯೇ ಸೀಮಂತದ ಮುಹೂರ್ತವಿದೆ ಹಾಗೂ ನೀವು ಜೊತೆಯಲ್ಲಿ ಏನೂ ತರಲಿಲ್ಲ, ಮತ್ತೆ ಭಗವಂತನು ಯಾವ ಪ್ರಕಾರ ತಲುಪಿಸ ಬಲ್ಲನು ? ಅವನು ಎಲ್ಲಿರುತ್ತಾನೆ ಎಂಬದೂ ನಿಶ್ಚಿತವಿಲ್ಲ ಎಂದು ಧೈರ್ಯಗುಂದಿದ ಕುಂವರಬಾಯಿಯು ಹೇಳಿದಳು.

ಮಗೂ ! ನೀನು ಇದೇನು ಹೇಳುತ್ತಿರುವೇ ? ನೀನು ಇಷ್ಟು ಏಕೆ ಗಾಬರಿಗೊಂಡಿರುವೆ ? ನೀನಾದರೋ ಆ ಒಡೆಯನ ದೀನದಯಾಳುತ್ವವನ್ನು ಪ್ರತ್ಯಕ್ಷವಾಗಿ ಕಂಡಿರುವೆ. ನಿನ್ನ ತಮ್ಮ ಶ್ಯಾಮಲದಾಸನ ವಿವಾಹ ಕಾರ್ಯದಲ್ಲಿ ಅವನು ಎಷ್ಟು ಪರಿಶ್ರಮ ಪಟ್ಟಿರುವನು? ನಿನ್ನನ್ನು ಗಂಡನಮನೆಗೆ ಅವನೇ ತಾನೇ ಕಳಿಸಿಕೊಟ್ಟಿದುದು. ಹಾಗಿರುವಾಗ ನಿನ್ನ ಹೃದಯದಲ್ಲಿ ಇಂತಹ ಸಂಶಯ ಏಕೆ ಉಂಟಾಯಿತು? ಅವನ ವಾಸವಾದರೋ ಜಡ-ಚೇತನ, ಆಕಾಶ-ಪಾತಾಳ, ಪೃಥ್ವಿಯಲ್ಲಿ ಸರ್ವತ್ರವಿದೆ. ಆದ್ದರಿಂದ ನೀನು ನಿಶ್ಚಿಂತಳಾಗಿ ನಿನ್ನ ಮನೆಗೆ ಹೋಗು; ಭಗವಂತನು ಎಲ್ಲ ಒಳ್ಳೆಯದನ್ನೇ ಮಾಡುವನು ಎಂದು ಭಕ್ತರಾಜರು ಕುಂವರಬಾಯಿಯನ್ನು ಸಮಾಧಾನ ಪಡಿಸಿದನು.

ಕುಂವರಬಾಯಿಯು ಸ್ವಲ್ಪ ಧೈರ್ಯತಂದುಕೊಂಡು ತನ್ನ ಮನೆಗೆ ಹಿಂತಿರುಗಿ

ಗೃಹಕೃತ್ಯದಲ್ಲಿ ತೊಡಗಿದಳು. ಇತ್ತ ನರಸೀಮೆಹತಾ ಭಗವಂತನಿಗೆ ನೈವೇದ್ಯವನ್ನು ಸಮರ್ಪಿಸಿ ಸಾಧು ಮಂಡಳಿಯೊಂದಿಗೆ ಶ್ರೀರಂಗಮೆಹತಾರವರ ಮನೆಗೆ ಆಗಮಿಸಿದರು. ಅಲ್ಲಿ ಜಾತಿಯ ಎಲ್ಲ ಜನರು ಸೇರಿದ್ದರು ಮತ್ತು ಭೋಜನದ ಸಿದ್ಧತೆ ನಡೆಯುತ್ತಿತ್ತು. ಜನರು ಸ್ನಾನಮಾಡಿ ಊಟಕ್ಕೆ ಕುಳಿತಿದ್ದರು. ನರಸೀ ಮೆಹತಾರವರು ಸ್ನಾನಕ್ಕೆ ಹೋದರು ; ಆದರೆ ನೀರು ಮುಟ್ಟುವುದೂ ಕಷ್ಟವಾಗುವಷ್ಟು ಬಿಸಿಯಾಗಿತ್ತು. ಪರೀಕ್ಷೆಗಾಗಿಯೇ ತಿಳಿದು – ತಿಳಿದು ಇಷ್ಟು ಬಿಸಿ ನೀರು ಕೊಡಲಾಗಿತ್ತು ಎಂಬುದು ಅವರಿಗೇನು ಗೊತ್ತು. ಅವರು ಸರಳವಾಗಿ ಸ್ವಲ್ಪ ತಣ್ಣೀರು ಕೇಳಿದರು.

ಆಗ ಕುಂವರಬಾಯಿಯ ಅತ್ತೆ ಪರಿಹಾಸ್ಯ ಮಾಡುತ್ತಾ ಹೇಳಿದಳು– ನೀವಾದರೋ ಭಗವಂತನ ಪ್ರಿಯ ಭಕ್ತರಾಗಿದ್ದೀರಿ, ಆಕಾಶದಿಂದ ಮಳೆಸುರಿಸಿ ಭಗವಂತನಿಂದ ತಣ್ಣೀರನ್ನು ಪಡೆದುಕೊಳ್ಳಿರಿ.

ಅಲ್ಲಿ ನೆರೆದ ಎಲ್ಲ ನಾಗರರು ವ್ಯಂಗ ತುಂಬಿದ ದನಿಯಲ್ಲಿ ಹೇಳಿದರು– ಹೌದು, ಹೌದು! ಸರಿಯಾಗಿಯೇ ಇದೆ. ಭಕ್ತರಾಜರಿಗೆ ಇದೇನು ದೊಡ್ಡಮಾತು ! ಭಕ್ತರು ತುಂಬಾ ಪೇಚಿಗೆ ಸಿಕ್ಕಿಬಿದ್ದರು. ಯೋಚಿಸಿದರು– ಎಲ್ಲ ಜನರು ಊಟಕ್ಕೆ ಸಿದ್ಧರಾಗಿ ಕುಳಿತಿದ್ದಾರೆ, ಮಳೆಯಾದರೆ ಎಲ್ಲ ಜನರು ಊಟವಿಲ್ಲದೆ ಇರುವರು ಮತ್ತು ಈ ಜನರು ನೀರು ಕೊಡಲು ಬಯಸುವುದಿಲ್ಲ. ಇರಲಿ, ಭಗವಂತನ ಇಚ್ಛೆ ಇದ್ದಂತಾಗಲೀ.

ಅವರು ತಮ್ಮ ಕರತಾಳವನ್ನು ತರಿಸಿ ಮಲ್ಹಾರರಾಗದಲ್ಲಿ ಭಗವಂತನ ಕೀರ್ತನೆ ಪ್ರಾರಂಭಿಸಿದರು. ಕೀರ್ತನೆಯ ಭಾವ ಹೀಗಿತ್ತು —

ಭಗವಂತಾ ! ನೀನು ಸುಧನ್ವನಿಗಾಗಿ ಕುದಿಯುವ ಎಣ್ಣೆ ಕೊಪ್ಪರಿಗೆಯನ್ನು ಶಾಂತ ಗೊಳಿಸಲಿಲ್ಲವೇ ? ಇದು ಅಂತಹುದೇ ಒಂದು ಕಾರ್ಯವಾಗಿದೆ, ನೀನು ಅನೇಕ ಬಾರಿ ನನಗೆ ಸಹಾಯ ಮಾಡಿದೆ ; ಈ ಧರ್ಮ ಸಂಕಟದಿಂದ ಪಾರುಮಾಡಲು ನೀನು ಅಸಮರ್ಥನಾದೆಯಾ ? ಹೇ ನನ್ನ ರಾಧೇಶ್ಯಾಮಾ! ಬೇಗನೇ ನೀರು ಸುರಿಸುವ ಕೃಪೆ ಮಾಡು ಮತ್ತು ಈ ನಿಂದೆ ಮಾಡುವವರ ಬಾಯಿಯನ್ನು ಮುಚ್ಚಿಸು.

ಭಜನೆ ಮುಗಿಯುತ್ತಾ ಮಾಘ ಮಾಸದ ನಿರ್ಮಲ ಆಕಾಶವು ದಟ್ಟವಾದ ಕರಿ ಮೋಡಗಳಿಂದ ತುಂಬಿ ಹೋಯಿತು. ನೋಡುತ್ತಾ–ನೋಡುತ್ತಾ ಶ್ರಾವಣ–ಭಾದ್ರಪದದಂತೆ ಮುಸಲಧಾರೆಯಿಂದ ಮಳೆ ಸುರಿಯಿತು. ಎಲ್ಲ ಜನರು

ನೆನೆದು ಹೋದರು. ಭಗವಂತನ ಕೃಪೆಯಿಂದ ಭಕ್ತರಾಜರ ಬೀಸಿನೀರು ತಣ್ಣಗಾಯಿತು, ಮಳೆ ನಿಂತು ಹೋಯಿತು. ಆಗ ಸ್ನಾನಮಾಡಿ ಅವರೂ ಎಲ್ಲರೊಂದಿಗೆ ಊಟಕ್ಕೆ ಆಸನದಲ್ಲಿ ಕುಳಿತರು. ಎಲ್ಲ ಜನರು ಅವರ ಭಕ್ತಿಯನ್ನು ನೋಡಿ ಆಶ್ಚರ್ಯದಲ್ಲಿ ಮುಳುಗಿದರು. ಆದರೂ ಎಲ್ಲರಿಗೆ ಭಗವಂತನ ಮೇಲೆ ವಿಶ್ವಾಸ ಉಂಟಾಗಲಿಲ್ಲ. ಇದರಲ್ಲಿ ಏನೋ ನರಸೀಮೆಹತಾನ ಇಂದ್ರಜಾಲ ವಿರಬೇಕೆಂದು ತಿಳಿದರು.

ಮರುದಿನ ಬೆಳಿಗ್ಗೆಯೇ ಸೀಮಂತದ ಸಂಸ್ಕಾರ ಪ್ರಾರಂಭವಾಯಿತು. ಶ್ರೀರಂಗಧರ ಮೆಹತಾನ ಅಂಗಳ ವಿದ್ವಾನ್ ಬ್ರಾಹ್ಮಣರಿಂದ, ಬಂಧು-ಬಾಂಧವರಿಂದ, ಕುಲದ ಪರಿವಾರದವರಿಂದ, ಯುವಕರು, ಬಾಲಕರು, ವೃದ್ಧರು, ಸ್ತ್ರೀಯರಿಂದ ತುಂಬಿ ತುಳುಕುತ್ತಿತ್ತು. ಅನೇಕ ಪ್ರಕಾರದ ವಾದ್ಯಗಳು ಮೊಳಗುತ್ತಿದ್ದುವು ಹಾಗೂ ಮಂಗಳ ಗೀತೆಗಳು ಹಾಡಲ್ಪಡುತ್ತಿದ್ದುವು. ಕ್ರಮ-ಕ್ರಮವಾಗಿ ವೈದಿಕ ವಿಧಿಗನುಸಾರವಾಗಿ ಸೀಮಂತ ಸಂಸ್ಕಾರವು ಸಾಂಗೋಪಾಂಗವಾಗಿ ಜರುಗಿತು. ಈಗ ಸಂಬಂಧಿಗಳಿಗೆ ಸೀರೆ ಕೊಡುವ ಸಮಯ ಬಂತು. ಕುಂವರಬಾಯಿಯು ಒಮ್ಮೆ ಕಣ್ಣೆತ್ತಿ ತಂದೆಯ ಕಡೆಗೆ ನೋಡಿದಳು, ಸಂಕೇತದ ಮೂಲಕ ಸೀರೆ ಹಂಚುವ ಮಾತನ್ನು ಅವಳು ನೆನಪುಮಾಡಿಕೊಡುವಂತಿತ್ತು.

ಭಕ್ತ ನರಸೀಮೆಹತಾರವರು ಎದುರಾದ ಸಮಯವನ್ನು ನೋಡಿ ತಮ್ಮ ಕರತಾಳವನ್ನು ಎತ್ತಿಕೊಂಡು ಕೀರ್ತನೆ ಮಾಡುತ್ತಾ ಭಗವಂತನನ್ನು ಕರೆಯಲು ಪ್ರಾರಂಭಿಸಿದರು. ಅವರ ಹಾಡಿದ ಕೀರ್ತನೆಯ ತಾತ್ಪರ್ಯ ಹೀಗೆ ಇತ್ತು - ಹೇ ಭಕ್ತವತ್ಸಲ ಪರಮಾತ್ಮಾ! ನಾನು ನಿನ್ನವನು, ನೀನು ನನ್ನವನಾಗಿದ್ದಿ; ಹಾಗಿರುವಾಗ ನೀನು ಈ ಕೊನೆಯ ವ್ಯಾವಹಾರಿಕ ಕಾರ್ಯದಲ್ಲಿ ನನಗೆ ಸಹಾಯ ಮಾಡಲಾರೆಯಾ? ಪ್ರಭೋ! ನೀನಾದರೋ ಈ ವಚನವನ್ನು ಕೊಟ್ಟಿರುವೆ —

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ ॥
(ವಾ. ರಾ. ೬/೧೮/೩೩)

ಅರ್ಥಾತ್-ಯಾರು ಒಂದು ಬಾರಿಯಾದರೂ ನನ್ನಲ್ಲಿ ಶರಣಾಗಿ 'ನಾನು ನಿನ್ನವನಾಗಿದ್ದೇನೆ' ಎಂದು ಹೇಳಿ ಯಾಚಿಸುತ್ತಾನೋ, ಅವನನ್ನು ನಾನು ಎಲ್ಲ ಭೂತಗಳಿಂದ ಅಭಯನನ್ನಾಗಿಸುತ್ತೇನೆ, ಇದು ನನ್ನ ವ್ರತವಾಗಿದೆ.

ಈ ಪ್ರಕಾರ ಭಜನೆ ಮಾಡುತ್ತಾ-ಮಾಡುತ್ತಾ ಭಕ್ತರಾಜರು ತನ್ಮಯರಾದರು. ಆ ಕಡೆ ಕುಳಿತ ಸ್ತ್ರೀಯರಲ್ಲಿ ಭಕ್ತರಾಜರ ಈ ಕಾರ್ಯದ ವಿಷಯಲ್ಲಿ ಚರ್ಚೆ ಪ್ರಾರಂಭವಾಯಿತು. ಓರ್ವಳು ಹೇಳಿದಳು -ನೋಡು, ಈ ಬೈರಾಗಿಯನ್ನು ಏನು ಇದೇ ಸೀರೆ ಕೊಡುವ ಕ್ರಮವೇ ? ಮಹಾ, ಈ ಪ್ರಕಾರ ಹಾಡಿ-ಕುಣಿಯುವುದರಿಂದ ಭಗವಂತನು ಬಂದು ಸೀರೆ ಕೊಡುವನೇ ಇನ್ನೊಬ್ಬಳು ನಗುತ್ತಾ ಹೇಳಿದಳು-ನಿನಗೆ ಇಷ್ಟೂ ಗೊತ್ತಿಲ್ಲವೇ ? ಬಳಿಯಲ್ಲಿ ಇರಿಸಿಕೊಂಡ ಶಂಖ ಮತ್ತು ಗೋಪೀಚಂದನವಾದರೋ ನಮಗೆ ಸಿಕ್ಕಿಯೇ ಸಿಗಬಹುದು. ಇದನ್ನು ಕೇಳಿ ಎಲ್ಲ ಸ್ತ್ರೀಯರು ನಗತೊಡಗಿದರು. ಕುಂವರಬಾಯಿಯು ನಾಚಿಕೆ ಮತ್ತು ಅಪಮಾನದಿಂದ ಮುದುಡಿಹೋದಳು. ನೆಲವೇ ಇಬ್ಭಾಗವಾದರೆ ನಾನು ಅದರಲ್ಲಿ ಒಂದಾಗಿ ಹೋಗುವೆ ಎಂದು ಯೋಚಿಸಿದಳು. ಆದರೆ ಬಡಪಾಯಿ ಮೌನವಾಗಿರುವುದಲ್ಲದೆ ಈ ಸಮಯದಲ್ಲಿ ಏನು ಮಾಡಬಲ್ಲಳು ? ಓರ್ವ ಧರ್ಮಪರಾಯಣ ಅನುಭವೀ ವೃದ್ಧ ಸ್ತ್ರೀಯು ಎಲ್ಲರನ್ನು ತಡೆಯುತ್ತ ಹೇಳಿದಳು-ಭಗವಂತನ ಇಂತಹ ಅನನ್ಯ ಭಕ್ತರನ್ನು ಹೀಗೆ ಹಾಸ್ಯಮಾಡಬಾರದು. ಏನು ಲೀಲೆ ನಡೆಯುವುದೋ ತಿಳಿಯದು. ಭಗವಂತನ ನಿಜ ಭಕ್ತಿಯ ಬಲದಿಂದ ಏನಾಗಲಿಕ್ಕಿಲ್ಲ? ಏನು ನೀವೆಲ್ಲ ದ್ರೌಪದಿಯ ಅಕ್ಷಯಾಂಬರದ ಕಥೆ ಕೇಳಲಿಲ್ಲವೇ?

ಜಗತ್ತಿನಲ್ಲಿ ವಿಮರ್ಶಕರಿಗೆ ಯಾವ ಕೊರತೆಯೂ ಇಲ್ಲ. ಪ್ರತಿಯೊಬ್ಬ ಮನುಷ್ಯನೂ ಬೇಕಾದರೆ ಅವನಿಗೆ ತಿಳಿದಿರಲಿ, ತಿಳಿಯದಿರಲಿ ತನ್ನ ಬುದ್ಧಿಗನುಸಾರವಾಗಿ ಬೇರೆಯವರ ವಿಮರ್ಶೆಮಾಡುತ್ತಾ ಇರುತ್ತಾನೆ. ಒಂದು ವೇಳೆ ಸಾಧಕನು ಅಸ್ಥಿರ ಚಿತ್ತದವನಾಗಿದ್ದರೆ ಅವನು ಪಥಭ್ರಷ್ಟವಾಗುವುದರಲ್ಲಿ ಹೊತ್ತು ಬೀಳದಷ್ಟು ಈ ವಿಮರ್ಶೆಯ ಪ್ರಬಲ ಪ್ರವಾಹ ಹರಿಯುತ್ತದೆ. ಭಕ್ತರಾಜ ನರಸೀಮೆಹತಾರವರಾದರೋ ಇಂತಹ ಸಾಂಸಾರಿಕ ಬಾಧೆಗಳಿಂದ ಸಂಪೂರ್ಣ ಅತೀತರಾಗಿದ್ದರು, ಅವರಿಗೆ ಬೇರೆಯವರ ವಿಮರ್ಶೆಯನ್ನು ಕೇಳುವಷ್ಟು ಸಮಯವಾದರೂ ಎಲ್ಲಿದೆ ? ಅವರಾದರೋ ತನ್ಮಯರಾಗಿ ಭಗವಂತನನ್ನು ಆವಾಹನೆ ಮಾಡುತ್ತಿದ್ದರು. ಕೊನೆಗೆ ಅವರ ಏಕಮುಖೀ ದೀನವಾದ ಕೂಗು ಏಳು ಲೋಕಗಳನ್ನು ಭೇದಿಸಿ ದಿವ್ಯ ಭಗವದ್ಧಾಮಕ್ಕೆ ತಲುಪಿತು. ಭಕ್ತವತ್ಸಲ ಭಗವಂತನು ತತ್‌ಕ್ಷಣ ಭಕ್ತನ ಕಾರ್ಯ ಮಾಡಲಿಕ್ಕಾಗಿ ತೀವ್ರಗತಿಯಿಂದ ಹೊರಟನು.

ಭಕ್ತರಾಜರ ಕೀರ್ತನೆ ಮುಗಿಯುತ್ತಿರುವಂತೆ ಮಂಗಲಗೀತೆಗಳನ್ನು ಹಾಡುತ್ತಾ

ದಿವ್ಯ ವಸ್ತ್ರಾಭೂಷಣಗಳಿಂದ ಸುಸಜ್ಜಿತ ದಿವ್ಯ ತೇಜೋಮಯ ಅನೇಕ ಸುಂದರಿಯರೊಂದಿಗೆ ಓರ್ವ ಸೇಠಜಿಯ ರೂಪದಲ್ಲಿ ಸ್ವತಃ ಭಗವಂತನು ಸಂಸ್ಕಾರ ಮಂಟಪಕ್ಕೆ ಪ್ರವೇಶಿಸಿದನು. ಈ ರಹಸ್ಯವನ್ನು ಬೇರೆಯಾರೂ ತಿಳಿಯದಾದರು. ತಿಳಿಯುವುದು ಹೇಗೆ ? ಈ ಚರ್ಮಚಕ್ಷುಗಳ ಮೂಲಕ ಯೋಗಮಾಯಾ ಸಮಾವೃತ ಭಗವಂತನ ದಿವ್ಯದರ್ಶನವು ಬೇರೆಯವರಿಗೆ ಹೇಗಾಗಬಲ್ಲದು? ಭಕ್ತರಾಜರು ಭಗವಂತನನ್ನು ಗುರುತಿಸಿ ಅವನ ಚರಣಗಳಲ್ಲಿ ಹೊರಳಾಡಿದನು.

ಸೇಠಜೀರೂಪಧಾರೀ ಭಗವಂತನು ತನ್ನ ಪರಿಚಯನ್ನು ಕೊಡುತ್ತಾ ಶ್ರೀರಂಗಧರ ಮೆಹತಾರ ಬಳಿ ಹೇಳುತ್ತಾನೆ- ಶ್ರೀರಂಗಧರರೇ ! ನರಸೀ ಮೆಹತಾರವರು ನನ್ನ ಅಭಿನ್ನ ಸ್ನೇಹಿತರಾಗಿದ್ದಾರೆ. ನಾನು ದ್ವಾರಕೆಯಲ್ಲಿ ಇದ್ದುಕೊಂಡು ಇವರ ಪಾಲುದಾರಿಕೆಯಲ್ಲಿ ವ್ಯಾಪಾರ ಮಾಡುತ್ತೇನೆ. ನನ್ನ ಎಲ್ಲ ಸಂಪತ್ತು ಇವರ ಕೃಪೆಯ ಫಲವೇ ಆಗಿದೆ.

ಇಷ್ಟು ಹೇಳಿ ಸೇಠಜೀಯವರು ತಮ್ಮ ಕೈಯಿಂದಲೇ ಸಮಸ್ತ ಸಂಬಂಧಿಗಳಿಗೆ ಅಮೂಲ್ಯ ವಸ್ತ್ರಾಭೂಷಣಗಳನ್ನು ಪ್ರದಾನಗೈದನು. ಜಾತಿ ಪದ್ಧತಿಗಿಂತ ತುಂಬಾ ಹೆಚ್ಚಾಗಿಯೇ ರಾಶಿ-ರಾಶಿ ಸೀರೆಗಳನ್ನು ಪ್ರದಾನಗೈದು ಅವನು ಎಲ್ಲರನ್ನೂ ಸಂತೋಷಪಡಿಸಿದನು. ಎಲ್ಲ ಉಪಸ್ಥಿತ ಜನರು ವಿಸ್ಮಯದೊಂದಿಗೆ ಈ ಲೀಲೆಯನ್ನು ನೋಡಿ ಭಕ್ತರಾಜರನ್ನು ತುಂಬಾ-ತುಂಬಾ ಪ್ರಶಂಸೆ ಮಾಡಿದರು.

ಭಕ್ತರಾಜರು ಗದ್ಗದ ಕಂಠದಿಂದ ಭಗವಂತನ ಹಾರ್ದಿಕ ಸ್ವಾಗತ ಮಾಡಿದನು. ಶ್ರೀರಂಗಧರ ಮೆಹತಾರವರು ಆಗ್ರಹ ಮಾಡಿದುದರಿಂದ ಭಗವಂತನು ಆ ದಿನ ಅವನ ಆತಿಥ್ಯವನ್ನು ಸ್ವೀಕರಿಸಿ, ಮರುದಿನ ಅಲ್ಲಿಂದ ಬೀಳ್ಕೊಂಡು ಅಂತರ್ಹಿತ ನಾದನು. ಸಾಧು ಮಂಡಳಿಯ ಜೊತೆಗೆ ಭಕ್ತರಾಜರೂ ಜೂನಾಗಡಕ್ಕೆ ಮರಳಿದರು.

ದ್ವೇಷದ ಪ್ರತೀಕಾರ

ಮನುಷ್ಯನ ಜೀವನದಲ್ಲಿ ಯಾವುದಾದರೊಂದು ಮಾತು ವಿಚಿತ್ರವಾಗಿ ಹೋದರೆ ಎಲ್ಲಕಡೆ ಅವನ ಖ್ಯಾತಿ ಹರಡಿಕೊಳ್ಳುತ್ತದೆ; ಬಳಿಕ ಅವನ ಜೀವನವೆಲ್ಲ ರಹಸ್ಯಮಯವಾಗಿರಲಿ, ಅಪೂರ್ವವಾಗಿರಲಿ ಅವನು ಎಲ್ಲಿಯವರೆಗೆ ಪ್ರಪಂಚದ ಕಣ್ಣಿಂದ ಮರೆಯಾಗಿಸಬಲ್ಲನು ? ಭಕ್ತರಾಜ ನರಸೀಮೆಹತಾರವರು ಅಣ್ಣನಿಂದ ಬೇರೆಯಾದಾಗಿನಿಂದ ಅವರ ಜೀವನ ಪ್ರಪಂಚದ ದೃಷ್ಟಿಯಿಂದ ರಹಸ್ಯಮಯ ವಾಗಿತ್ತು. ಯಾವುದೇ ಕೆಲಸವಿಲ್ಲದೆ, ಸಂಪಾದನೆ ಇಲ್ಲದೆ ಹಗಲು-ರಾತ್ರಿ ಭಜನೆ ಕೀರ್ತನೆಯಲ್ಲಿ ತೊಡಗಿರುತ್ತಿದ್ದರು, ಬಡವರಂತೆ ವೇಷವಿತ್ತು ; ಆದರೆ ಅವಕಾಶ ಬಂದಾಗ ಅವರ ಖರ್ಚು ನೋಡಿದರೆ ಅಷ್ಟು ಪ್ರಾಯಶಃ ಶ್ರೀಮಂತರ ಮನೆಗಳಲ್ಲಿಯೂ ನೋಡಲು ಸಿಗುತ್ತಿರಲಿಲ್ಲ. ಇದರ ರಹಸ್ಯ ಏನು ಎಂದು ಎಲ್ಲ ಜನರು ಈ ಕುರಿತು ಚಿಂತಿತರಾಗಿದ್ದರು. ಮಗಳ ಸೀಮಂತ ಮುಗಿಸಿ ನರಸೀಮೆಹತಾ ಮರಳಿದರೋ ಆಗಲಂತೂ ಅವರ ಯಶ ಇನ್ನೂ ಹೆಚ್ಚಾಯಿತು. ಎಲ್ಲ ಕಡೆ ಅದರ ಚರ್ಚೆಯೇ ನಡೆಯುತ್ತಿತ್ತು.

ಆದರೆ ಈ ಯಶವನ್ನು ಅವರ ಜಾತಿಯ ಮತ್ಸರೀ ಜನರು ಹೇಗೆ ಸಹಿಸಬಲ್ಲರು ? ನರಸೀಮೆಹತಾರವರ ಹಿರಿತನ ಕೇಳಿ ಅವರಿಗೆ ಛಳಿಜ್ವರ ಬಂದಂತಿತ್ತು. ಅವರು ಈ ರೋಗದ ಬೇರನ್ನೇ ಕತ್ತರಿಸುವ ಚಿಂತೆಯಲ್ಲಿ ಮುಳುಗಿದ್ದರು. ಉಚ್ಚ ಮನುಷ್ಯರ ಸರಿಸಮಾನತೆ ಆಗದಿದ್ದಾಗ ದುಷ್ಟ ಜನರು ಮತ್ಸರದಿಂದ ಅವರನ್ನು ಹೇಗಾದರೂ ಕೆಳಗೆ ಬೀಳಿಸಿಯಾದರೂ ತಮ್ಮ ದೊಡ್ಡಸ್ತಿಕೆಯನ್ನು ಮೆರೆಯಲು ವ್ಯರ್ಥ ಚೇಷ್ಟೆ ಮಾಡುತ್ತಿರುತ್ತಾರೆ. ಆದರೆ ಇಂತಹ ಜನರಿಂದ ಸತ್ಪುರುಷರಿಗೆ ಸ್ವಲ್ಪವೂ ಹಾನಿ ಉಂಟಾಗುವುದಿಲ್ಲ, ಅಲ್ಲದೆ ಅವರ ಗೌರವವು ಇನ್ನೂ ಹೆಚ್ಚುತ್ತದೆ ಮತ್ತು ಇಂತಹ ಪ್ರಯತ್ನ ಮಾಡುವವರಿಗೆ ಅದರ ವಿರುದ್ಧ ಫಲ ಉಣ್ಣಬೇಕಾಗುತ್ತದೆ. ಆದರೂ ದುರ್ಜನರು ಮೂಢತೆಯಿಂದ ಹಿಂದೆಗೆಯುವುದಿಲ್ಲ.

ನಾಗರ ಜಾತಿಯ ಕೆಲವು ಜನರು ಒಂದು ಸಂಚು ಹೂಡಿದರು, ಅದರಲ್ಲಿ ಸಾರಂಗಧರ ಮತ್ತು ನರಸೀಮೆಹತಾರವರ ಅಣ್ಣ ವಂಶೀಧರನೂ ಸೇರಿದ್ದನು. ಆ ಜನರು ಊರಿನ ಖ್ಯಾತಳೂ, ಸುಂದರಿಯೂ ಆದ ವೇಶ್ಯೆ ಚಂಚಲೆಯನ್ನು

ಹಣದ ಆಸೆ ತೋರಿಸಿ, ಭಕ್ತರಾಜರನ್ನು ತನ್ನ ಮೋಹಪಾಶದಲ್ಲಿ ಕೆಡಹಲು ಅವರು ಕಳಿಸಿ ಕೊಟ್ಟರು.

ಸಂಜೆಯ ಸಮಯ, ಸಂಧ್ಯಾಕಾಲದ ಪೂಜೆ, ಆರತಿ ಇತ್ಯಾದಿ ಮುಗಿಸಿ ಸಾಧು ಮಂಡಳಿಯ ನಡುವೆ ಕುಳಿತು ಭಕ್ತರಾಜರು ಹರಿಕೀರ್ತನದ ಸಿದ್ಧತೆ ಮಾಡುತ್ತಿದ್ದರು. ಪುಷ್ಪ-ಧೂಪಗಳ ಪರಿಮಳ ಮತ್ತು ಭಗವಂತನ ಸಾನ್ನಿಧ್ಯದಿಂದ ಅಲ್ಲಿಯ ವಾತಾವರಣ ತುಂಬಾ ಪವಿತ್ರ ಮತ್ತು ಆನಂದಮಯವಾಗಿತ್ತು. ಸರಿಯಾಗಿ ಇದೇ ಸಮಯದಲ್ಲಿ ಬಿಳಿಯ ಬಟ್ಟೆ ಉಟ್ಟು ಗೋಪೀ ಚಂದನದ ತಿಲಕವಿಟ್ಟು ಕೊರಳಲ್ಲಿ ತುಲಸೀ ಮಾಲೆಯನ್ನು ತೊಟ್ಟು ಚಂಚಲೆಯು ಭಕ್ತರಾಜರ ಮನೆಯನನ್ನು ಪ್ರವೇಶಿಸಿದಳು. ಆಗ ಅವಳು ಓರ್ವ ಭಕ್ತಿಮತಿ ಸಾಧ್ವಿಯಂತೆ ಶೋಭಿಸುತ್ತಿದ್ದಳು. ಉಪಸ್ಥಿತ ಸಂತರಿಗೆಲ್ಲ ವಂದಿಸಿ ಅವಳು ಒಂದೆಡೆ ಕುಳಿತುಕೊಂಡು, ತುಂಬಾ ಭಾವಯುಕ್ತಳಾಗಿ ಎಲ್ಲರೊಡನೆ ಸೇರಿ ಹರಿಕೀರ್ತನೆ ಮಾಡತೊಡಗಿದಳು. ಎಲ್ಲ ಸಾಧುಗಳು, ಸ್ವತಃ ಭಕ್ತರಾಜರೂ ಕೂಡ ಮಂತ್ರಮುಗ್ಧರಂತೆ ಅವಳ ತನ್ಮಯತೆಯನ್ನು ನೋಡತೊಡಗಿದರು.

ಭಜನೆಯು ಮುಗಿದು ಹೋದಮೇಲೆ ಭಕ್ತರಾಜರು ಚಂಚಲೆಯನ್ನು ಪ್ರಶ್ನಿಸಿದರು - ತಂಗೀ ನೀನು ಎಲ್ಲಿರುತ್ತಿ ?

ನನ್ನ ನಿವಾಸ ಪ್ರಭಾಸ ಕ್ಷೇತ್ರದಲ್ಲಿದೆ; ನಾನು ದ್ವಾರಕೆಗೆ ಹೋಗುತ್ತಿದ್ದೇನೆ. ನಿಮ್ಮ ಹೆಸರು ಕೇಳಿ ಒಂದು ಕಾರ್ಯಕ್ಕಾಗಿ ನಾನು ನಿಮ್ಮ ಬಳಿಗೆ ಬಂದಿರುವೆನು ಎಂದು ಚಂಚಲೆಯು ತನ್ನ ಸುಳ್ಳು ಪರಿಚಯವನ್ನು ಕೊಟ್ಟಳು.

ನನ್ನ ಬಳಿಗೆ ಬರುವ ಆವಶ್ಯಕತೆ ಬಿದ್ದಿರುವಂತಹ ಯಾವ ಕಾರ್ಯವಿದೆ? ಭಕ್ತರಾಜರು ವಿಸ್ಮಯದಿಂದ ಕೇಳಿದರು.

ಚಂಚಲೆಯು ಉತ್ತರಿಸಿದಳು - ನಾನು ಒಂದು ದಾನ ಪಡೆಯುವ ಇಚ್ಛೆಯಿಂದ ಇಲ್ಲಿಗೆ ಬಂದಿರುವೆನು.

ಸಾಧ್ವೀ ! ನಿನಗೆ ಯಾವುದೇ ರೀತಿಯ ದಾನವನ್ನು ಪಡೆಯುವ ಇಚ್ಛೆ ಇದ್ದರೆ ನೀನು ಯಾರಾದರೂ ಶ್ರೀಮಂತರ ಮನೆಗೆ ಹೋಗು. ನನ್ನ ಬಳಿಯಲ್ಲಾದರೋ ಕರತಾಳ, ಮೃದಂಗ, ಗೋಪೀಚಂದನ ಬಿಟ್ಟು ಬೇರೆ ಯಾವ ವಸ್ತುವೂ ಇಲ್ಲ ಎಂದು ಭಕ್ತರಾಜರು ಸರಳತೆಯಿಂದ ಹೇಳಿದರು.

ಭಕ್ತರೇ ! ನಾನು ಪಡೆಯಲಿಚ್ಛಿಸುವ ವಸ್ತುವನ್ನು ಬೇರೆಯಾರಿಂದಲೂ ಪಡೆಯಲು ಬಯಸುವುದಿಲ್ಲ. ಒಂದು ವೇಳೆ ನೀವು ದಯಪಾಲಿಸಿದರೆ ನಾನು

ಕೃತ ಕೃತ್ಯಳಾಗುವೆ ಎಂದು ವಿನಯವನ್ನು ತೋರುತ್ತಾ ಚಂಚಲೆಯು ನುಡಿದಳು.

ಸರಿ, ಹೇಳು, ನಿನಗೆ ಯಾವ ವಸ್ತುವಿನ ಬಯಕೆ ಇದೆ ? ಭಗವಂತನ ಇಚ್ಛೆಯಾದರೆ ಸಿಗಬಹುದು ಎಂದು ಭಕ್ತರಾಜರು ಉದಾಸೀನತೆಯಿಂದ ಹೇಳಿದರು.

ನಿಮ್ಮ ಆಜ್ಞೆಯಾಯಿತು ಸಾಕು. ಈಗ ಇಷ್ಟೇ ಸಾಕಾಗಿದೆ. ನಂತರ ಸಮಯ ಬಂದಾಗ ನಾನು ನಿಮ್ಮಿಂದ ಕೇಳಿ ಪಡೆಯುವೆ ಎಂದು ಚಂಚಲೆ ನುಡಿದಳು.

ವಿಕಾರೀ ಮನುಷ್ಯರ ದೃಷ್ಟಿಯಲ್ಲಿ ಎಲ್ಲ ಮನುಷ್ಯರೂ ತನ್ನಂತೆಯೇ ವಿಕಾರಿಗಳೆಂದೇ ಕಂಡು ಬರುತ್ತಾರೆ. ಅವರು ಶುದ್ಧ ಮನುಷ್ಯನನ್ನೂ ವಿಕಾರೀ ಎಂದೇ ತಿಳಿದುಕೊಳ್ಳುತ್ತಾರೆ. ಶುದ್ಧ ಮನುಷ್ಯನ ಜ್ಞಾನಯುಕ್ತ ವಚನಗಳೂ ಕೂಡ ಅವರಿಗೆ ವಿಕಾರದ ಸೂಚಕವೆಂದು ಕಾಣುತ್ತವೆ ಮತ್ತು ಅದಕ್ಕೆ ವಿಪರೀತ ಅರ್ಥಹಚ್ಚಿ ತಮ್ಮ ಅಭೀಷ್ಟವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಚಂಚಲೆಯೂ ಕೂಡ ಭಕ್ತರಾಜರ ಶಬ್ದಗಳ ಅರ್ಥವನ್ನು ವಿಪರೀತವಾಗಿ ತಿಳಿದುಕೊಂಡು ನನ್ನ ರೂಪದ ಮೇಲೆ ಮೋಹಿತರಾಗಿ ನನ್ನ ಯಾಚನೆಯನ್ನು ಸ್ವೀಕರಿಸಿದರು ಎಂದು ತಿಳಿದುಕೊಂಡಳು.

ಭಜನೆಯು ಮುಗಿದ ಮೇಲೆ ಎಲ್ಲ ಜನರೂ ತಮ್ಮ-ತಮ್ಮ ಸ್ಥಾನಗಳಲ್ಲಿ ಹೋಗಿ ಮಲಗಿದರು. ಚಂಚಲೆಗೂ ಒಂದು ಉಪಯುಕ್ತವಾದ ಸ್ಥಾನವನ್ನು ಭಕ್ತರಾಜರು ತೋರಿಸಿದರು. ಕೊನೆಗೆ ಅವರೂ ಕೂಡ ಮಂದಿರದ ಬಾಗಿಲಲ್ಲಿ ಮಲಗಿದರು. ನಿಧಾನವಾಗಿ ಎಲ್ಲ ಜನರೂ ಗಾಢ ನಿದ್ರೆಯಲ್ಲಿ ಮುಳುಗಿದರು. ಆದರೆ ಚಂಚಲೆಯ ಬಳಿ ನಿದ್ದೆಯು ಸುಳಿಯಲಿಲ್ಲ. ಅವಳಾದರೋ ತನ್ನ ಸ್ವಾರ್ಥವನ್ನು ಸಾಧಿಸುವ ಚಿಂತೆಯಲ್ಲಿ ಸರಿಯಾದ ಸಮಯದ ಪ್ರತೀಕ್ಷೆ ಮಾಡುತ್ತಿದ್ದಳು.

ಅರ್ಧರಾತ್ರಿ ಕಳೆದುಹೋದ ಮೇಲೆ ಯಾರೂ ಎಚ್ಚರವಿಲ್ಲ ಎಂದು ಚಂಚಲೆಗೆ ವಿಶ್ವಾಸಉಂಟಾಯಿತೋ ಆಗ ಅವಳು ವೇಷ ಬದಲಿಸಿ ಸುಂದರ ವಸ್ತ್ರಾಭೂಷಣ ಗಳನ್ನು ಧರಿಸಿದಳು. ಆಗ ಅವಳ ಮುಖಾಕೃತಿ, ಶರೀರದ ನಿಲುವು ಮತ್ತು ಶೃಂಗಾರವನ್ನು ನೋಡಿದರೆ ಯಾರೋ ದೇವಾಂಗನೆಯಂತೆ ಕಂಡು ಬರುತ್ತಿದ್ದಳು.

ಅವಳು ಎದ್ದು ನಿಧಾನವಾಗಿ ಭಕ್ತರಾಜರ ಬಳಿಗೆ ಬಂದಳು. ಅವಳ ಕಾಲಿನ ನೂಪುರಗಳ ಧ್ವನಿಯಿಂದ ಭಕ್ತರಾಜರು ಎಚ್ಚರಗೊಂಡರು.

ಈ ಸಮಯದಲ್ಲಿ ಯಾರು ಇಲ್ಲಿ? ಎಂದು ಪ್ರಶ್ನಿಸಿದರು.

ನಾನು ನಿಮ್ಮೊಂದಿಗೆ ಭಜನೆ ಮಾಡುತ್ತಿದ್ದ ಅವಳೇ ಆಗಿರುವೆ ಎಂದು ಚಂಚಲೆಯು ಉತ್ತರಿಸಿದಳು.

ಮತ್ತೆ ಈ ಹೊತ್ತಿನಲ್ಲಿ ನೀನು ಇಲ್ಲಿಗೇಕೆ ಬಂದೆ ? ಎಂದು ಪುನಃ ಪ್ರಶ್ನಿಸಿದರು. ನರಸೀಮೆಹತಾರವರೇ ! ನಾನು ಇಂದು ನಿಮ್ಮ ಬಳಿ ಖಚಿತದಾನವನ್ನು ಪಡೆಯಲು ಬಂದಿರುವೆ, ಇದಕ್ಕಾಗಿ ಸಂಜೆ ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ನಾನು ಬೇರೆ ಯಾವ ವಸ್ತುವನ್ನೂ ಬಯಸುವುದಿಲ್ಲ. ನೀವು..... ಎಂದು ಚಂಚಲೆ ಹೇಳಿದಳು.

ಚಂಚಲೆಯ ನಿರ್ಲಜ್ಜತೆಯನ್ನು ಕಂಡು ನರಸೀಮೆಹತಾ ಅವಾಕ್ಕಾದರು. ಅವರ ಬಾಯಿಂದ ಕೇವಲ 'ಹರಿ-ಹರಿ' ಎಂಬ ಶಬ್ದ ಹೊರಟಿತು.

ಚಂಚಲೆಯು ಪುನಃ ಅಧೀರಳಾಗಿ ಹೇಳಿದಳು-ಭಕ್ತರಾಜರೇ! ನೀವು ಈಗ ನನ್ನನ್ನು ಹೆಚ್ಚು ಸತಾಯಿಸಬೇಡಿ, ಬೇಗನೇ ನನ್ನ ಮನೋಕಾಮನೆಯನ್ನು ಪೂರ್ಣಗೈದು ನನ್ನನ್ನು ಸಂತೋಷಗೊಳಿಸಿರಿ.

ಸಾಧ್ವೀ ! ನೀನು ಇದು ಏನು ಹೇಳುತ್ತಿರುವೆ ? ಏನು ನನ್ನ ಬಳಿ ಈ ದಾನವನ್ನು ಪಡೆಯಲು ನೀನು ಬಂದಿರುವೆಯಾ ? ಸಾಧುಗಳ ವೇಷವನ್ನು ಧರಿಸಿ ಇಂತಹ ನೀಚ ವಿಚಾರ ಮನಸ್ಸಿನಲ್ಲಿಯೂ ಇರಿಸುವುದರಿಂದ ಮನುಷ್ಯ ಪಾಪಕ್ಕೆ ಭಾಗಿಯಾಗುತ್ತಾನೆ ಮತ್ತು ಕೊನೆಗೆ ಅಧಃಪತನದ ಆಳವಾದ ಹೊಂಡದಲ್ಲಿ ಬೀಳುತ್ತಾನೆ. ಮನುಷ್ಯ ಜೀವನವು ಪಾಪಮಾಡಲಿಕ್ಕಾಗಿ ಅಲ್ಲ, ಅಕ್ಷಯ ಪುಣ್ಯವನ್ನು ಗಳಿಸುವುದಕ್ಕಾಗಿ ಇದೆ; ವ್ಯಭಿಚಾರಕ್ಕಾಗಿ ಅಲ್ಲ, ಸಂಯಮಕ್ಕಾಗಿ ಇದೆ; ವಾಸನಾ ತೃಪ್ತಿಗಾಗಿ ಅಲ್ಲ, ಶುದ್ಧ ಸಾತ್ವಿಕ ಪ್ರೇಮವನ್ನು ಪ್ರಾಪ್ತಿಮಾಡಿಕೊಳ್ಳುವುದಕ್ಕಾಗಿ ಇದೆ ; ಚಾರಿತ್ರ್ಯದ ಸರ್ವನಾಶ ಮಾಡಿಕೊಳ್ಳುವುದಕ್ಕಾಗಿ ಅಲ್ಲ, ಸಚ್ಚಾರಿತ್ರ್ಯದ ಸಂಗ್ರಹ ಮಾಡಲಿಕ್ಕಾಗಿ ಇದೆ ; ಅವಿದ್ಯೆಯ ಉಪಾಸನೆ ಮಾಡುವುದು ಮನುಷ್ಯ ಜೀವನದ ಲಕ್ಷ್ಯವಲ್ಲ, ಅವಿದ್ಯೆಯ ನಾಶಮಾಡಿ ಸದ್ವಿದ್ಯೆಯ ಸೇವನ ಮಾಡುವುದಾಗಿದೆ.

ಲಬ್ಧ್ವಾ ಕಥಂಚಿನ್ನರಜನ್ಮ ದುರ್ಲಭಂ ತತ್ರಾಪಿ ಪುಂಸ್ತ್ವಂ ಶ್ರುತಿಪಾರದರ್ಶನಮ್ ।
ಯಸ್ತ್ವಾತ್ಮಮುಕ್ತ್ಯೈ ನ ಯತೇತ ಮೂಢಧೀಃ ಸ ಆತ್ಮಹಾ ಸ್ವಂ ವಿನಿಹಂತ್ಯಸದ್ಗ್ರಹಾತ್ ॥

ಅರ್ಥಾತ್-ಪೂರ್ವಾರ್ಜಿತ ಪುಣ್ಯದ ಪ್ರಭಾವದಿಂದ ಈ ದುರ್ಲಭವಾದ

ಮನುಷ್ಯದೇಹ ಹಾಗೂ ವೇದಜ್ಞಾನ ಸಂಪನ್ನ ಪುರಷತ್ವ ಪ್ರಾಪ್ತವಾಗಿದ್ದರೂ ಯಾವ ಮೂಢಬುದ್ಧಿ ಮನುಷ್ಯನು ಮೋಕ್ಷಕ್ಕಾಗಿ ಪ್ರಯತ್ನ ಮಾಡುವುದಿಲ್ಲವೋ, ಆ ಆತ್ಮಘಾತಿ ಮನುಷ್ಯನು ಅಸತ್ ಪ್ರಪಂಚವನ್ನು ತನ್ನದಾಗಿಸಿಕೊಂಡು ತನ್ನ ನಾಶ ಮಾಡಿಕೊಳ್ಳುತ್ತಾನೆ.

ಸಾಧ್ವೀ ! ವಿಷಯಗಳ ತೃಷ್ಣೆ, ಪ್ರಪಂಚದ ಬೇರೆ ಪದಾರ್ಥಗಳ ತೃಷ್ಣೆ ಹಾಗೂ ಮಾನ-ಕೀರ್ತಿ ಮಾದಲಾದ ತೃಷ್ಣೆಗಳು ಮನುಷ್ಯನನ್ನು ಬಲವಂತವಾಗಿ ನರಕದತ್ತ ಕೊಂಡು ಹೋಗುತ್ತವೆ. ಮತ್ತೆ ಒಂದು ವೇಳೆ ಒಮ್ಮೆ ಈ ತೃಷ್ಣೆಗಳನ್ನು ತೃಪ್ತಿಪಡಿಸಿದರೂ ಮನುಷ್ಯನಿಗೆ ಅದರಿಂದ ಶಾಶ್ವತ ಸುಖವು ಎಂದಿಗೂ ಸಿಗಲಾರದು. ಅಲ್ಲದೆ ಈ ತೃಷ್ಣೆಗಳನ್ನು ಪ್ರೋತ್ಸಾಹಿಸುವುದರಿಂದ ಇನ್ನೂ ಹೆಚ್ಚುತ್ತಾ ಹೋಗುತ್ತವೆ. ವಯಸ್ಸು ಕಳೆದುಹೋಗುತ್ತದೆ, ಶರೀರ ಮುದಿಯಾಗುತ್ತದೆ, ಆದರೆ ತೃಷ್ಣೆಯು ಮುದಿಯಾಗುವುದಿಲ್ಲ. ಈ ಕಾಮನೆಯ ಬೆಂಕಿಯು ವಿಷಯರೂಪೀ ಇಂಧನದಿಂದ ನಂದಿಹೋಗುವುದಿಲ್ಲ, ಹೆಚ್ಚಾಗುತ್ತದೆ ಮತ್ತು ಮನುಷ್ಯನ ಸಮಸ್ತ ಸುಖ- ಶಾಂತಿಯನ್ನು ಭಸ್ಮವಾಗಿಸಿ ಪುನಃ ಪುನಃ ಜನ್ಮ-ಮರಣದ ಚಕ್ರದಲ್ಲಿ ಕೆಡಹುತ್ತದೆ. ಆದುದರಿಂದ ಈ ತೃಷ್ಣೆಯನ್ನು ನಾಶಮಾಡುವುದೇ ಮೋಕ್ಷದ ಪ್ರಧಾನ ಸಾಧನವಾಗಿದೆ, ಭೋಗಗಳನ್ನು ಭೋಗಿಸುವುದರಿಂದ ತೃಷ್ಣೆಯು ಶಮನವಾಗುವುದಿಲ್ಲ. ಏಕೆಂದರೆ —

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

(ಮನುಸ್ಮೃತಿ ೨/೯೪)

ತುಪ್ಪದ ಆಹುತಿಯಿಂದ ಅಗ್ನಿಯು ವಿಶೇಷವಾಗಿ ಪ್ರಜ್ವಲಿತವಾಗುವಂತೆ ಇಚ್ಛೆಗಳನ್ನು ತೃಪ್ತಿಪಡಿಸುವುದರಿಂದ ಅವು ಭಯಂಕರ ರೂಪವನ್ನು ಧರಿಸಿ ಮನುಷ್ಯನ ಸತ್ಯಾನಾಶ ಮಾಡುವುದರಲ್ಲಿ ಸಹಾಯ ಮಾಡುತ್ತವೆ.

ಸಂಸಾರವು ಒಂದು ಪ್ರಕಾರದ ಮಹಾರೋಗವಾಗಿದೆ; ಅದನ್ನು ದೂರಮಾಡಲು ಭಗವನ್ನಾಮ ಸ್ವರೂಪೀ ದಿವ್ಯ ಔಷಧಿಯೇ ಉಪಕಾರಿಯಾಗಿದೆ. ಆದರೆ ಆ ಔಷಧಿ ಸೇವಿಸುವ ಜೊತೆ-ಜೊತೆಗೆ ವಿಷಯಾದಿರೂಪೀ ಕುಪಥ್ಯವನ್ನು ಸೇವಿಸುವುದರಿಂದ ಹೊಸ-ಹೊಸ ರೋಗಗಳು ಮೊಳೆಯುತ್ತವೆ ಮತ್ತು ಅದಕ್ಕಾಗಿ ಮಹಾರೋಗ ನಾಶವಾಗುವುದು

ಕಷ್ಟಸಾಧ್ಯವಾಗುತ್ತದೆ. ಇಷ್ಟೇ ಅಲ್ಲ ವಿಷಯಾಸಕ್ತಿಯು ಬೆಳೆಯುವುದರಿಂದ ಭಗವನ್ನಾಮ ಬಿಟ್ಟು ಹೋಗುತ್ತದೆ ಮತ್ತು ಈ ಮಹಾರೋಗವು ಸನ್ನಿಪಾತದ ಭೀಷಣ ಸ್ವರೂಪವನ್ನು ಧರಿಸುತ್ತದೆ.

ಈ ಜೀವಿಯು ಅನೇಕ ಜನ್ಮಗಳಿಂದ ಸಂಸಾರದ ಇಂದ್ರಿಯ ಜನಿತ ವಿಷಯ ಸುಖದ ಅನುಭವವನ್ನು ಪಡೆಯುತ್ತ ಬಂದಿದ್ದಾನೆ. ಆದರೆ ಇನ್ನೂ ಕೂಡ ಸ್ವಲ್ಪವೂ ಸಂತೋಷದ ಅನುಭವ ಉಂಟಾಗಲಿಲ್ಲ. ಆದುದರಿಂದ ಶಾಸ್ತ್ರಕಾರರೂ ಹಾಗೂ ಅನುಭವಿಗಳು ಈ ಸಂಸಾರವು ಅನಿತ್ಯ ಮತ್ತು ಸುಖಹೀನವೆಂದು ನಿಶ್ಚಯಿಸಿದ್ದಾರೆ. ಭಗವಂತನು ಹೇಳಿರುವನು –

ಅನಿತ್ಯ ಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಮ್ ॥

(ಗೀತಾ ೯/೩೩.)

ಈ ಅನಿತ್ಯವೂ, ಸುಖಹೀನವಾದ ಸಂಸಾರವನ್ನು ಪಡೆದು ನನ್ನನ್ನು ಭಜಿಸು. ಆದುದರಿಂದ ಕೇವಲ ಆತ್ಮಚಿಂತನೆ ಮತ್ತು ಭಜನೆಯ ದಿವ್ಯ ಆನಂದವೇ ನಿಜ ಸುಖವಾಗಿದೆ. ವಿಷಯಾದಿಗಳ ಆನಂದವಾದರೋ ಮೂರ್ಖತೆಯಿಂದ ಕಂಡು ಬರುತ್ತದೆ.

ನರಸೀಮೆಹತಾರವರ ಈ ವಿಸ್ತೃತ ವಿವೇಚನೆಯು ಚಂಚಲೆಯ ಹೃದಯವನ್ನು ಒಮ್ಮಿಂದೊಮ್ಮೆಗೆ ಪರಿವರ್ತಿಸಿತು. ಅವಳ ಜನ್ಮ-ಜನ್ಮಾಂತರಗಳ ಕೆಟ್ಟ ಸಂಸ್ಕಾರಗಳ ಮೇಲೆ ಇಂದ್ರಜಾಲದಂತೆ ಪರಿಣಾಮಬೀರಿತು ಮತ್ತು ಅವಳ ಹೃದಯ ಪಟದಿಂದ ತನ್ನಿಂದ-ತಾನೇ ದೂರಾದವು. ವಿಷಯ ಗಂಧದಿಂದ ಅಪವಿತ್ರವಾದ ಅವಳ ತಮೋಮಯ ಸ್ವರೂಪವು ಸತ್ಸಂಗಕಾರೀ ಪೂರ್ಣಿಮೆಯ ಸಂಸರ್ಗದಿಂದ ನಿರ್ಮಲ ಚಂದ್ರನಂತೆ ವಿಕಸಿತವಾಗತೊಡಗಿತು. ಅವಳ ಸೌಂದರ್ಯದಲ್ಲಿ ಸಾತ್ವಿಕ ಶಾಂತಿಯ ಮಿಶ್ರಣವಾಯಿತು.

'ಭಕ್ತರಾಜರೇ ! ನನ್ನನ್ನು ಕ್ಷಮಿಸಿ, ಇಂದು ನೀವು ನನ್ನನ್ನು ಪ್ರಗಾಢ ಅಂಧಕಾರದಿಂದ ಹೊರತಂದು ಪರಮ ಪ್ರಕಾಶದಲ್ಲಿ ತಲುಪಿಸಿದಿರಿ. ಇಂದಿನಿಂದ ನೀವೇ ನನಗೆ ಸದ್ಗುರುಗಳಾಗಿದ್ದೀರಿ. ನಿಮ್ಮ ಸದುಪದೇಶವು ನನ್ನ ವಿಕಾರಗಳನ್ನು ನಿರ್ಮೂಲವಾಗಿಸಿತು. ಆದರೆ.....ನಾನು ಇಂದಿನವರೆಗೆ ಪಾಪಗಳನ್ನು ಗಳಿಸುವುದರಲ್ಲಿ ಯಾವುದೇ ಕೊರತೆ ಮಾಡಲಿಲ್ಲ. ನನ್ನ ದುಸ್ಸಂಗದಿಂದ ಅನೇಕ ಸುಶೀಲ ಯುವಕರು ಪ್ರಥಭ್ರಷ್ಟರಾಗಿ ನಷ್ಟ-ಭ್ರಷ್ಟರಾಗಿ ಹೋಗಿದ್ದಾರೆ. ಇಂದು

ನನ್ನ ಕೆಟ್ಟಕೃತ್ಯಗಳ ನೆನಪಿನಿಂದ ಹೃದಯ ನಡುಗುತ್ತಿದೆ. ಅದನ್ನು ನೋಡಿದರೆ ನನಗೆ ರೌರವ ನರಕದಲ್ಲಿಯೂ ಜಾಗಸಿಗಲಾರದು ಎಂದು ತೋರುತ್ತದೆ. ನೀವು ನನ್ನ ಶ್ರೇಯಸ್ಸಿನ ಮಾರ್ಗದ ನಿರ್ದೇಶಕರಾಗಿ ನನಗೆ ಉಚಿತವಾದ ಉಪದೇಶ ನೀಡಿರಿ' ಎಂದು ಗದ್ಗದ ಕಂಠದಿಂದ ಹೇಳುತ್ತ ಚಂಚಲೆಯು ಭಕ್ತರಾಜರ ಚರಣಗಳಲ್ಲಿ ಕುಸಿದುಬಿದ್ದಳು.

ಮಗಳೇ ! ಅನೇಕ ಪ್ರಕಾರದ ಪಾಪ ಮಾಡಿದರೂ ಒಂದು ವೇಳೆ ಮನುಷ್ಯನು ನಿಜವಾದ ಹೃದಯದಿಂದ ಪಶ್ಚಾತ್ತಾಪಪಟ್ಟರೆ, ಅವನು ಆ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ. ಹಾಗಿರುವಾಗ ಭಗವಂತನ ಅನನ್ಯಚಿಂತನವು ಪತಿತ ಮನುಷ್ಯರನ್ನೂ ಕೂಡ ಪಾವನ ಮಾಡುವುದರಲ್ಲಿ ಪ್ರಸಿದ್ಧವಿದೆ.

ಭಗವಂತನು ಸ್ವತಃ ಹೇಳಿರುವನು —

ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥
ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿ ಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥
(ಗೀತಾ ೯/೩೦-೩೧)

ಒಂದು ವೇಳೆ ಯಾರಾದರು ಅತ್ಯಂತ ದುರಾಚಾರಿಯಾಗಿದ್ದರೂ ಕೂಡ ಅನನ್ಯ ಭಾವದಿಂದ ನನ್ನ ಭಕ್ತನಾಗಿ, ನನ್ನನ್ನು ನಿರಂತರ ಭಜಿಸುತ್ತಾನಾದರೆ ಅವನು ಸಾಧುವೆಂದೇ ಪರಿಗಣಿಸಲು ಯೋಗ್ಯನಾಗಿದ್ದಾನೆ. ಏಕೆಂದರೆ ಅವನು ಯಥಾರ್ಥವಾದ ನಿಶ್ಚಿತ ಬುದ್ಧಿಯುಳ್ಳವನಾಗಿದ್ದಾನೆ. ಅರ್ಥಾತ್ ಭಗವಂತನ ಭಜನೆಗೆ ಸಮಾನವಾದುದು ಬೇರೆ ಏನೂ ಇಲ್ಲ ಎಂಬುದನ್ನು ಅವನು ನಿಶ್ಚಯಿಸಿಕೊಂಡಿದ್ದಾನೆ.

ಅವನು ಬಹುಬೇಗನೇ ಧರ್ಮಾತ್ಮನಾಗುತ್ತಾನೆ ಮತ್ತು ಶಾಶ್ವತವಾದ ಪರಮ ಶಾಂತಿಯನ್ನು ಪಡೆಯುತ್ತಾನೆ. ಹೇ ಅರ್ಜನಾ! ನನ್ನ ಭಕ್ತನಾದವನು ಎಂದಿಗೂ ನಾಶವಾಗುವುದಿಲ್ಲ ಎಂಬ ದೃಢಸತ್ಯವನ್ನು ತಿಳಿ.

ಆದ್ದರಿಂದ ನೀನು ನಿನ್ನ ಮನೆಗೆ ಹೋಗಿ ಭಗವಂತನನ್ನು ಅನನ್ಯ ಭಾವದಿಂದ, ಪ್ರೇಮಪೂರ್ವಕ ಸ್ಮರಣೆ ಮಾಡು; ನಿನಗಾಗಿ ಇದೇ ನಿಜವಾದ ಉಪದೇಶವಾಗಿದೆ. ನಾನು ಗುರುವಾಗಲು ಬಯಸುವುದಿಲ್ಲ; ಏಕೆಂದರೆ ನನ್ನಲ್ಲಿ ಅಂತಹ ಯೋಗ್ಯತೆ

ಇಲ್ಲವೇ ಇಲ್ಲ ಎಂದು ಭಕ್ತರಾಜರು ನುಡಿದರು.

ಚಂಚಲೆಯು ಭಕ್ತರಾಜರ ಆಜ್ಞೆಯನ್ನು ಶಿರಸಾವಹಿಸಿಕೊಂಡು ತನ್ನ ಮನೆಗೆ ಹೊರಟು ಹೋದಳು. ಅವಳು ಅದೇ ದಿನದಿಂದ ತನ್ನ ವೇಶ್ಯಾವೃತ್ತಿಯನ್ನು ಬಿಟ್ಟುತುಂಬಾ ಸರಳವಾಗಿದ್ದುಕೊಂಡು ಭಗವದ್ಭಜನೆ ಹಾಗೂ ಸಾಧು ಸೇವೆಯಲ್ಲಿ ಜೀವನ ಕಳೆಯಲು ತೊಡಗಿದಳು.

ಎಂಟು ಹತ್ತು ದಿನಗಳ ಬಳಿಕ ಸಾರಂಗಧರನು ಚಂಚಲೆಯ ಮನೆಗೆ ಹೋದನು. ಅಲ್ಲಿಯ ಹೊಸತನವನ್ನು ನೋಡಿ ಆಶ್ಚರ್ಯಪಟ್ಟನು. ಚಂಚಲೆಯು ಆ ಸಮಯದಲ್ಲಿ ಸಾಧು ಮಂಡಳಿಯಲ್ಲಿ ಕುಳಿತು ಭಜನೆ ಮಾಡುತ್ತಿದ್ದಳು. ಅವಳ ಮುಖದಲ್ಲಿ ಒಂದು ಅಲೌಕಿಕ ತೇಜವು ನರ್ತಿಸುತ್ತಿತ್ತು.

ಏನು ಚಂಚಲೇ ! ಆ ವಿಷಯ ಏನಾಯಿತು ? ಎಂದು ಸಾರಂಗಧರನು ಕೇಳಿದನು.

ಸಾರಂಗಧರರೇ ! ನೀವು ನಿರಪರಾಧೀ ಭಕ್ತರಾಜರ ಮೇಲೆ ವ್ಯರ್ಥವಾಗಿ ದೋಷಾರೋಪಣೆ ಮಾಡಿ ಪಾಪಕ್ಕೆ ಭಾಗಿಯಾಗುತ್ತಿದ್ದೀರಿ. ಆದರೆ ನೆನಪಿಡಿ! ಬೇರೆಯವರಿಗಾಗಿ ತೋಡಿದ ಹಳ್ಳದಲ್ಲಿ ತಾನೇ ಸ್ವತಃ ಬಿದ್ದುಬಿಡುತ್ತಾನೆ. ನಿಮ್ಮಗಳ ದ್ವೇಷವು ಅವರ ಮೇಲೆ ಯಾವ ಪ್ರಭಾವವೂ ಬೀರಲಾರದು. ನೀವು ಜಾತಿಯ ಅಗ್ರಗಣ್ಯ, ಮುಖಂಡರಾಗಿದ್ದು ಬೇರೆಯವರ ಉನ್ನತಿಯನ್ನು ಸಹಿಸದಿರುವುದು ನನಗಾದರೋ ಅಸಹ್ಯವುಂಟು ಮಾಡುತ್ತದೆ. ಇದಕ್ಕಿಂತ ಹೆಚ್ಚಾಗಿ ನಿಮ್ಮಲ್ಲಿ ಮಾತಾಡಲು ಬಯಸುವುದಿಲ್ಲ; ನೀವಿದ್ದೀರಿ ನಿಮ್ಮ ಕೆಲಸವುಂಟು. ಇಷ್ಟು ಹೇಳಿ ಚಂಚಲೆಯು ಪುನಃ ಭಗವದ್ಭಜನೆಯಲ್ಲಿ ತನ್ಮಯಳಾದಳು.

ಭಗವಂತನ ಲೀಲೆಯೂ ವಿಚಿತ್ರವಾಗಿದೆ. ಚಂಚಲೆಯ ಮನೆಯಲ್ಲಿ ತಿರಸ್ಕೃತನಾದ ಸಾರಂಗಧರನು ಹಿಂದಕ್ಕೆ ಬರುವಾಗ ಮಾರ್ಗದಲ್ಲಿ ಒಂದು ಭಯಂಕರ ಹಾವು ಕಡಿಯಿತು. ಕ್ಷಣಾರ್ಧದಲ್ಲಿ ವಿಷವು ಅವನ ರೋಮ-ರೋಮದಲ್ಲಿ ಹರಡಿಕೊಂಡಿತು. ಅವನು ದಾರಿಯಲ್ಲೇ ನಿಶ್ಚೇಷ್ಟಿತನಾಗಿ ಬಿದ್ದುಬಿಟ್ಟನು. ನೋಡು-ನೋಡುತ್ತಾ ಅಲ್ಲಿ ಅನೇಕ ಜನರು ಸೇರಿದರು. ನಾನಾ ಪ್ರಕಾರದ ಉಪಚಾರಗಳನ್ನು ಮಾಡಲಾಯಿತು. ಆದರೂ ವಿಷ ಇಳಿಯಲಿಲ್ಲ. ಜನರು ಅವನ ಜೀವನದಿಂದ ನಿರಾಶರಾದರು ಮತ್ತು ಅವನ ಪರಿವಾರದ ಜನರು ಅಳುತ್ತಿದ್ದರು.

ಕೊನೆಯಲ್ಲಿ ಓರ್ವನಾಗರನು ಹೇಳಿದನು-ತಮ್ಮಂದಿರೇ! ಒಂದು

ಉಪಾಯವಿದೆ, ಅದನ್ನೂ ಮಾಡಿ ನೋಡಬೇಕು. ಇಂದಿನ ಕಾಲದಲ್ಲಿ ನರಸೀಮೆಹತಾ ಮಂತ್ರಗಾರನಾಗಿದ್ದಾನೆ. ಎಲ್ಲಾದರೂ ಅವನ ಕೈಯಿಂದ ಸಾರಂಗಧರನ ವಿಷ ಇಳಿಯಲೂಬಹುದು. ಎಲ್ಲ ಜನರೂ ಸಹಮತರಾದರು. ಸಾರಂಗಧರನನ್ನು ಎತ್ತಿಕೊಂಡು ಭಕ್ತರಾಜರ ಮಂದಿರಕ್ಕೆ ತಂದರು. ಭಕ್ತರಾಜರಿಗೆ ಎಲ್ಲ ವೃತ್ತಾಂತವನ್ನು ಹೇಳಿದಾಗ ಅವರು ಹೇಳಿದರು–ಬಂಧುಗಳೇ ! ನಾನು ಯಾವುದೇ ಮಂತ್ರ–ತಂತ್ರ ತಿಳಿಯುವುದಿಲ್ಲ. ಆದರೆ ಭಗವಂತನ ಕೃಪೆಯಿಂದ ಅವನ ಚರಣೋದಕದಿಂದ ಎಲ್ಲಾದರು ಮೃತ್ಯುವಿನ ಭಯ ದೂರವಾಗಬಹುದು.

ಇಷ್ಟು ಹೇಳಿ ಭಕ್ತರಾಜರು ಭಗವಂತನ ಸ್ಮರಣೆ ಮಾಡಿ, ಭಗವಂತನ ಚರಣತೀರ್ಥವನ್ನು ತಂದು ಸಾರಂಗಧರನ ಮುಖಕ್ಕೆ ಸಿಂಪಡಿಸಿದರು. ಭಗವಂತನ ದಯೆಯಿಂದ ಸಾರಂಗಧರನ ವಿಷವು ಇಳಿದು ಹೋಯಿತು. ಅವನು ಎಚ್ಚತ್ತು ಎದ್ದುಕುಳಿತನು. ಆದರೆ ಅವನು ಮುಂದುಗಡೆ ನರಸೀಮೆಹತಾರನ್ನು ನೋಡುತ್ತಲೇ ಒಳಗೊಳಗೆ ಕ್ರೋಧಗೊಂಡನು. ಅವನು ಅಲ್ಲಿಂದೆದ್ದು ಸುಮ್ಮನೆ ಮನೆಗೆ ಹೊರಟು ಹೋದನು.

ಈ ಪ್ರಕಾರ ಭಕ್ತರಾಜರು ದ್ವೇಷಕ್ಕೆ ಬದಲು ಪ್ರೇಮವನ್ನು ಕೊಟ್ಟು ತನ್ನ ವಿಶ್ವಪ್ರೇಮದ ಆದರ್ಶವನ್ನು ಜನರ ಮುಂದೆ ಪ್ರಕಟಪಡಿಸಿದರು.

ಭಕ್ತರಾಜರ ಪರೀಕ್ಷೆ

ಹಾವಿಗೆ ಹಾಲುಣಿಸಿದರೂ ಅದರ ವಿಷವೇ ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ. ಭಕ್ತರಾಜ ನರಸೀಮೆಹತಾರವರು ಸ್ವಾಭಾವಿಕ ದಯೆಯಿಂದಲೇ ಸಾರಂಗಧರನಿಗೆ ಜೀವದಾನ ಮಾಡಿದರೂ ಕೂಡ ಅದರ ಪರಿಣಾಮ ಅವನ ಮೇಲೆ ವಿಪರೀತ ಪ್ರಭಾವ ಬಿತ್ತು. ನರಸೀಮೆಹತಾನು ಮಂತ್ರವಾದಿಯಾಗಿದ್ದಾನೆ ಮತ್ತು ಇದೆಲ್ಲ ಅವನ ದುಷ್ಟತೆಯ ಫಲವಾಗಿದೆ ಎಂದು ತಿಳಿದನು. ಆದುದರಿಂದ ಭಕ್ತರಾಜರ ಕುರಿತು ಅವನ ಮನಸ್ಸಿನಲ್ಲಿ ದ್ವೇಷಾಗ್ನಿಯು ಹೆಚ್ಚು ಹೊತ್ತಿ ಉರಿಯಿತು.

ಯಾವ ಸಮಯದಲ್ಲಿ ಈ ಪ್ರಸಂಗ ನಡೆಯಿತೋ ಆಗ ಜೂನಾಗಡವನ್ನು ರಾವಮಾಂಡಲೀಕ ಎಂಬ ಕ್ಷತ್ರಿಯ ರಾಜನು ಆಳುತ್ತಿದ್ದನು. ಸಾರಂಗಧರನೂ ಕೂಡ ರಾಜ್ಯದ ಒಂದು ಪ್ರತಿಷ್ಠಿತ ಅಧಿಕಾರದಲ್ಲಿ ನಿಯುಕ್ತನಾಗಿದ್ದನು. ಸಾರಂಗ ಧರನು ಚಂಚಲೆಯ ಮೂಲಕ ಭಕ್ತರಾಜರ ಮಾನಭಂಗವನ್ನು ಮಾಡಲು ಅಸಮರ್ಥನಾದಾಗ, ಅವನು ರಾಜನಲ್ಲಿ ಅವನ ನಿಂದೆ ಮಾಡಲು ಪ್ರಾರಂಭಿಸಿದನು. ಆದರೂ ರಾಜನು ಅವನ ಮಾತಿನ ಕಡೆಗೆ ವಿಶೇಷ ಲಕ್ಷ್ಯ ಕೊಡುತ್ತಿರಲಿಲ್ಲ.

ಆದರೂ ಸಾರಂಗಧರನು ತನ್ನ ಛಲದಲ್ಲಿ ಗಟ್ಟಿಯಾಗಿದ್ದನು. ಭಕ್ತರಾಜನಿಗೆ ಪ್ರಾಣದಂಡ ಅಥವಾ ಕಾರಾಗೃಹವಾದರೂ ಕೊಡಿಸದೇ ಅವನಿಗೆ ನೆಮ್ಮದಿ ಇರಲಿಲ್ಲ. ರಾಜನು ಲಕ್ಷ್ಯಕೊಡದಿದ್ದರೂ ಅವನು ಯಾವಾಗಲೂ ಭಕ್ತರಾಜನ ಬಗ್ಗೆ ಏನಾದರೊಂದು ತಕರಾರು ಮಾಡುತ್ತಲೇ ಇದ್ದನು. ಕೊನೆಗೆ ಒಂದು ದಿನ ರಾಜನಲ್ಲಿ ಅವನು ಇದನ್ನು ಹೇಳಿ ಬಿಟ್ಟನು– ರಾತ್ರಿಯಲ್ಲಿ ಭಜನೆಯ ನೆಪದಿಂದ ನರಸೀಮೆಹತಾನು ಅನಾಚಾರದ ಪ್ರಚಾರ ಮಾಡುತ್ತಿದ್ದಾನೆ. ಇಂತಹ ಕಪಟಿಗೆ ದಂಡ ಕೊಡುವುದು ಅತ್ಯಂತ ಆವಶ್ಯಕವಾಗಿದೆ.

'ದೊಡ್ಡ ಜನರಿಗೆ ಕಿವಿಗಳಿರುತ್ತವೆ, ಕಣ್ಣುಗಳಿರುವುದಿಲ್ಲ' ಎಂಬ ಒಂದು ನಾಲ್ನುಡಿ ಇದೆ. ಪ್ರತಿದಿನ ದೂರು ಕೇಳಿದ ಕಾರಣದಿಂದ ಒಂದು ದಿನ ರಾಜನು ಭಕ್ತರಾಜರನ್ನು ರಾಜ್ಯಸಭೆಯಲ್ಲಿ ಕರೆಸಲು ಆಜ್ಞೆ ಮಾಡಿದನು ಮತ್ತು ಮರುದಿನ ಅವನ ನ್ಯಾಯತೀರ್ಮಾನಿಸಲು ನಿಶ್ಚಯಿಸಿದನು.

ಅದೇ ದಿನ ಭಕ್ತರಾಜರು ಭಗವಂತನ ಸೇವೆ–ಪೂಜೆ ಮುಗಿಸಿ ಭಗವನ್ನಾಮದ ಜಪಮಾಡುತ್ತಿದ್ದರು, ಆಗ ಅಲ್ಲಿಗೆ ಒರ್ವ ವೃದ್ಧ ಬ್ರಾಹ್ಮಣನು ಬಂದನು.

ಬ್ರಾಹ್ಮಣನಿಗೆ ಆಸನವಿತ್ತು, ಜಲಪಾನಾದಿ ಉಪಚಾರವಾದ ಮೇಲೆ ಅವರು ವಿನಯಪೂರ್ವಕ ಬಂದ ಕಾರಣವನ್ನು ಕೇಳಿದರು.

ಬ್ರಾಹ್ಮಣರು–ಭಕ್ತರಾಜರೇ! ವೃದ್ಧಾವಸ್ಥೆಯ ಕಾರಣ ನಾನು ದ್ರವ್ಯವನ್ನುಗಳಿಸಲು ಅಶಕ್ತನಾಗಿದ್ದೇನೆ ಮತ್ತು ಈ ಕಾರಣದಿಂದ ನನ್ನ ಮಗಳು ವಿವಾಹಕ್ಕೆ ಯೋಗ್ಯಳಾಗಿದ್ದರೂ ನಾನು ಕನ್ಯಾದಾನ ಮಾಡಿಕೊಡಲು ಅಸಮರ್ಥನಾಗಿದ್ದೇನೆ. ನೀವು ನನಗೆ ಅರವತ್ತು ರೂಪಾಯಿಗಳನ್ನು ಸಹಾಯಮಾಡಿದರೆ ನಿಮಗೆ ಶ್ರೇಯಸ್ಸು ಆಗುತ್ತದೆ ಎಂದು ಹೇಳಿದರು.

ಭಕ್ತರಾಜರು – ಸ್ವಾಮಿಗಳೇ ! ನನ್ನ ಬಳಿಯಲ್ಲಿ ಹಣವಾದರೋ ಇಲ್ಲ. ಆದರೆ ನೀವು ಸ್ವಲ್ಪ ಹೊತ್ತು ಇಲ್ಲಿಯೇ ಕುಳಿತಿದ್ದರೆ, ನಾನು ಪ್ರಯತ್ನಮಾಡುತ್ತೇನೆ; ದೇವರ ದಯೆ ಆದರೆ ನಿಮ್ಮ ಕಾರ್ಯ ಯಶಸ್ವೀಯಾಗಬಹುದು.

ನರಸೀಮೆಹತಾರವರು ಬ್ರಾಹ್ಮಣರನ್ನು ಮನೆಯಲ್ಲಿ ಕುಳ್ಳಿರಿಸಿ, ಸ್ವತಃ ಪೇಟೆಗೆ ಹೋಗಿ ತನ್ನ ಪರಿಚಿತ ಅನೇಕ ಜನರಲ್ಲಿ ಅರವತ್ತು ರೂಪಾಯಿ ಸಾಲವಾಗಿ ಕೇಳಿದರು. ಆದರೆ ಈ ರೀತಿ ಹಣ ಕೊಡಲೂ ಯಾರೂ ಒಪ್ಪಲಿಲ್ಲ. ಈ ಹಣವನ್ನು ಇವನು ಹೇಗೆ ಹಿಂತಿರುಗಿಸಬಲ್ಲನು ಎಂಬ ಭಯ ಜನರಲ್ಲಿತ್ತು.

ಕೊನೆಗೆ ನರಸೀಮೆಹತಾ ಧರಣೀಧರ ಎಂಬ ಒರ್ವ ನಾಗರನ ಮನೆಗೆ ಹೋದರು. ಧರಣೀಧರನು ಒರ್ವ ಭಕ್ತನಾಗಿದ್ದು, ನರಸೀಮೆಹತಾರವರ ಮೇಲೆ ಅವನಿಗೆ ಸ್ವಲ್ಪ ಶ್ರದ್ಧೆಯೂ ಇತ್ತು. ಆದರೆ ಅವನು ಸ್ಪಷ್ಟವಾದಿಯಾಗಿದ್ದನು. ನರಸೀಮೆಹತಾ ಎಲ್ಲ ವೃತ್ತಾಂತವನ್ನು ತಿಳಿಸಿದಾಗ **'ಆಹಾರೇ ವ್ಯವಹಾರೇ ಚ ಸ್ಪಷ್ಟವಕ್ತಾ ಸುಖೀ ಭವೇತ್ !'** ಈ ನ್ಯಾಯದಿಂದ ಸ್ಪಷ್ಟವಾಗಿ ಹೇಳಿದನು– ನರಸೀಮೆಹತಾರವರೇ ! ನಿಮಗೆ ಹಣ ಕೊಡುವುದರಲ್ಲಾದರೋ ಯಾವ ಆಡ್ಡಿಯೂ ಇಲ್ಲ ; ಆದರೆ ಹಣ–ಕಾಸಿನ ವ್ಯವಹಾರ ಸೂಕ್ಷ್ಮವಾಗಿರುತ್ತದೆ. ಕೇವಲ ಮಾತಿನ ಮೇಲೆ ವಿಶ್ವಾಸ ವಿಡುವುದಕ್ಕಿಂತ ಯಾವುದಾದರೂ ವಸ್ತುವನ್ನು ಗಿರವಿ ಇಟ್ಟು ಕೊಳ್ಳುವುದು ಉತ್ತಮವಾಗಿದೆ. ನೀವು ಯಾವುದಾದರೂ ವಸ್ತುವನ್ನು ತಂದರೆ ಈಗಲೇ ಅರವತ್ತು ರೂಪಾಯಿ ಕೊಡಬಲ್ಲೆ.

ನರಸೀಮೆಹತಾರವರು ವಿಚಾರ ಮಾಡಿದರು–ನನ್ನ ಬಳಿ ಗಿರವಿ ಇಡುವಂತಹ ಯಾವ ವಸ್ತುವು ಇಲ್ಲವೇ ಇಲ್ಲ. ಹಾಗಾದರೆ ಈಗ ಬ್ರಾಹ್ಮಣನ ಕಾರ್ಯ ವಾಗುವುದಿಲ್ಲವೆ ? ಒಂದುಗಳಿಗೆ ಯೋಚಿಸಿದಾಗ ಒಂದು ಉಪಾಯ ಹೊಳೆಯಿತು. ನನ್ನ ಬಳಿ ಎಲ್ಲಕ್ಕಿಂತ ಪ್ರಿಯವಾದ ಕೇದಾರರಾಗವಿದೆ. ಭಗವಂತನ

ಆವಾಹನೆಯನ್ನು ನಾನು ಇದೇ ರಾಗದಿಂದ ಮಾಡುತ್ತಿರುತ್ತೇನೆ. ಈ ರಾಗವಿಲ್ಲದೆ ನನ್ನ ಕಾರ್ಯವು ಒಂದು ಕ್ಷಣವೂ ನಡೆಯುವುದಿಲ್ಲ. ಆದುದರಿಂದ ಈರಾಗವು ನನಗೆ ಬಹುಮೂಲ್ಯವಾಗಿದೆ. ಒಂದು ವೇಳೆ ಧರಣೀಧರನು ಇದನ್ನು ತನ್ನ ಬಳಿ ಇಟ್ಟುಕೊಂಡರೆ ಬ್ರಾಹ್ಮಣನಿಗಾಗಿ ಇದನ್ನು ಕೂಡ ಗಿರವಿಯಾಗಿ ಇಡಬಲ್ಲೆ.

ಹೀಗೆ ಯೋಚಿಸುತ್ತ ನರಸೀಮೆಹತಾರವರು ಹೇಳಿದರು-ಧರಣೀಧರರೇ! ನನ್ನ ಬಳಿ ಅಡವಿಡಲು ಬೇರೆ ಯೋಗ್ಯವಸ್ತುವು ಇಲ್ಲ. ನಿಮಗೆ ವಿಶ್ವಾಸ ಉಂಟಾದರೆ ನಾನು ಕೇದಾರರಾಗವನ್ನು ನಿಮ್ಮ ಬಳಿ ಇಡುಗಂಟಾಗಿ ಇರಿಸುತ್ತೇನೆ. ನಿಮ್ಮ ಹಣ ತೀರಿಸುವ ತನಕ ಪ್ರಾಣವೇ ಹೋದರೂ ನಾನು ಕೇದಾರರಾಗವನ್ನು ಹಾಡುವುದಿಲ್ಲ.

ಕೇದಾರರಾಗವು ಭಕ್ತರಾಜರಿಗಾಗಿ ಎಷ್ಟು ಆವಶ್ಯಕವಿತ್ತು ಇದು ಧರಣೀಧರನಿಗೆ ತಿಳಿದಿತ್ತು. ಆದುದರಿಂದ ಅವನು ಸಿದ್ಧನಾದನು. ಭಕ್ತರಾಜರು ಅವನಿಗೆ ಈ ಉದ್ದೇಶದ ಪ್ರತಿಜ್ಞಾ ಪತ್ರವನ್ನು ಬರೆದುಕೊಟ್ಟು, ನಾನು ಭಗವಂತನ ಮೇಲೆ ಆಣೆ ಇಟ್ಟು ಹೇಳುತ್ತೇನೆ - ನಾನು ಧರಣೀಧರನಿಗೆ ಅರವತ್ತು ರೂಪಾಯಿ ತೀರಿಸುವ ತನಕ ಕೇದಾರರಾಗವನ್ನು ಹಾಡುವುದಿಲ್ಲ.

ಈ ಪತಿಜ್ಞಾಪತ್ರವನ್ನು ಪಡೆದು ಧರಣೀಧರನು ಅರವತ್ತು ರೂಪಾಯಿಗಳನ್ನು ಭಕ್ತರಾಜರಿಗೆ ಕೊಟ್ಟನು, ನರಸೀಮೆಹತಾರವರು ತುಂಬಾ ಸಂತೋಷವಾಗಿ ಹಣವನ್ನು ತಂದು ಆ ಬ್ರಾಹ್ಮಣನಿಗೆ ಎಲ್ಲವನ್ನೂ ಸಮರ್ಪಿಸಿದರು. ಬ್ರಾಹ್ಮಣನು ಭಕ್ತರಾಜರಿಗೆ ಹಾರ್ದಿಕ ಆಶೀರ್ವಾದವಿತ್ತು ಹೊರಟುಹೋದರು. ಭಕ್ತರಾಜರು ಈ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು.

ರಾಜ ದರಬಾರಿನಲ್ಲಿ ಭಕ್ತರಾಜರು

ಮರುದಿನ ರಾವಮಾಂಡಲೀಕನ ದರಬಾರಿನಲ್ಲಿ ಭಕ್ತರಾಜರು ಉಪಸ್ಥಿತರಾದರು. ಸಾರಂಗಧರ, ವಂಶೀಧರ, ಅನಂತರಾಯ ಮೊದಲಾದ ತನ್ನ ಕುಟುಂಬದ ಜನರೇ ನರಸೀಮೆಹತಾರವರ ಅಪಮಾನ ಮಾಡಲು ಉತ್ಸುಕರಾಗಿ ದರಬಾರಿನಲ್ಲಿ ಕುಳಿತಿದ್ದರು. ಮರವನ್ನು ಕಡಿಯಲು ಮರದ ತುಂಡೇ ಕೊಡಲಿಯಕಾವಾಗಿ ಇರುತ್ತದೆ. ಭಕ್ತರಾಜರನ್ನು ಜ್ಞಾನಹೀನನೆಂದು ನಿಶ್ಚಿಯಿಸಲು ಸಾರಂಗಧರನು ತನ್ನ ಜೊತೆಗೆ ಊರಿನ ಮೂರು ನಾಲ್ಕು ಸಂನ್ಯಾಸಿಗಳನ್ನು ಹಣದ ಲಾಲಸೆ ತೋರಿಸಿ ಕರಕೊಂಡು ಬಂದಿದ್ದನು. ಎಲ್ಲ ಜನರು ಯಥಾಸ್ಥಾನದಲ್ಲಿ ಬಂದು ಕುಳಿತಾಗ ರಾಜನು ಸಾರಂಗಧರನ ಮಂಡಳಿಯ ಕಡೆಗೆ ನೋಡಿ ಹೇಳಿದನು–ಹೇಳಿರಿ, ನಿಮ್ಮಗಳ ಹೇಳಿಕೆ ಏನಿದೆ?

ಮಹಾರಾಜರೇ ! ಈ ನರಸೀಮೆಹತಾನು ಈ ಊರಿನಲ್ಲಿದ್ದು ಅನೇಕ ಪ್ರಕಾರದ ಕಪಟಗಳನ್ನು ಮಾಡುತ್ತಾ ಜನರನ್ನು ಭ್ರಮೆಯಲ್ಲಿ ಕೆಡಹುತ್ತಿದ್ದಾನೆ; ಭಕ್ತಿಯ ಸುಳ್ಳು ನೆಪಗಳನ್ನು ಹೇಳಿ ಅನಾಚಾರಗಳನ್ನು ಪೋಷಿಸುತ್ತಿದ್ದಾನೆ ಮತ್ತು ಸ್ವತಃ ಅಜ್ಞಾನಿಯಾಗಿದ್ದರೂ ಬೇರೆ ಮನುಷ್ಯರಿಗೆ ಜ್ಞಾನೋಪದೇಶ ಮಾಡುವ ನಿಂದನೀಯ ಮತ್ತು ಧರ್ಮಶಾಸ್ತ್ರವಿರುದ್ಧ ಕಾರ್ಯಮಾಡುತ್ತಿದ್ದಾನೆ. ಆದ್ದರಿಂದ ಇಂತಹ ಅಧರ್ಮವನ್ನು ಬೆಳೆಸುತ್ತಿರುವ ಮನುಷ್ಯನಿಗೆ ಶಿಕ್ಷೆಯನ್ನು ಕೊಟ್ಟು ಅಧರ್ಮದಿಂದ ದೇಶವನ್ನು ಕಾಪಾಡುವುದು ರಾಜರ ಧರ್ಮವಾಗಿದೆ ಎಂದು ಸಾರಂಗಧರನು ತನ್ನ ದೂರನ್ನು ವಿವೇದಿಸಿಕೊಂಡನು.

ಸಾರಂಗಧರರೇ! ನಾನು ತುಂಬಾ ದಿನಗಳಿಂದ ಭಕ್ತರಾಜರ ಕೀರ್ತಿಯನ್ನು ಕೇಳುತ್ತಾ ಇದ್ದೇನೆ. ಅವರು ಭಗವಂತನ ಪ್ರಿಯಭಕ್ತರಾಗಿದ್ದಾರೆ. ಹುಟ್ಟಿದಾಗಿನಿಂದ ಇಂದಿನವರೆಗೆ ಅವರ ಮೇಲೆ ಯಾವುದೇ ಕಲಂಕ ಬಂದಿರುವುದು ನಾವು ಕೇಳಲಿಲ್ಲ. ಹಾಗಿರುವಾಗ ಇಂದು ವೃದ್ಧಾವಸ್ಥೆಯಲ್ಲಿ ಅವರೊಳಗೆ ಯಾವುದೇ ಕೆಟ್ಟವೃತ್ತಿ ಉಂಟಾಗುವುದೆಂದು ನೀವು ಹೇಳುವುದು ಅಸಂಭವವಾಗಿದೆ. ಇಂತಹ ವೀತರಾಗೀ ಮಹಾತ್ಮರು ಭಗವದ್ಭಕ್ತಿಯ ಮೂಲಕ ಜಗತ್ತಿಗೆ ನಿಜವಾದ ಮಾರ್ಗದರ್ಶನ ಮಾಡುತ್ತಾರೆ, ಅವರ ಆಚರಣೆಯೇ ಧರ್ಮಶಾಸ್ತ್ರವಾಗಿರುತ್ತದೆ. ಕೊನೆಗೆ ನಿಮ್ಮ ಧರ್ಮಶಾಸ್ತ್ರವಾದರೂ ಏನು ? ಇಂತಹ ಮಹಾನುಭಾವರ ಅನುಭವ, ಉಪದೇಶ ಮತ್ತು ಜೀವನಪದ್ಧತಿಯೇ ಆಗಿದೆಯಲ್ಲ ! ಆದ್ದರಿಂದ

ಇವರ ಆಚರಣೆಯು ಧರ್ಮಶಾಸ್ತ್ರವಿರುದ್ಧ ಆಗಲಾರದು. ಈಗ ಉಳಿಯಿತು ಅವರ ಅನಾಚಾರದ ಮಾತು. ಆದರೆ ಈ ವಿಷಯದಲ್ಲಿ ಯಾವುದೇ ವಿಶ್ವಸನೀಯ ಸಾಕ್ಷಿ ದೊರೆಯುವವರೆಗೆ ಅವರನ್ನು ದುರಾಚಾರಿ ಎಂದು ಹೇಳುವುದು ಪಾಪವಾಗಿದೆ ಎಂದು ರಾಜರು ಹೇಳಿದರು.

ಆಗ ಅನಂತರಾಯನು ಮಾತಾಡತೊಡಗಿದನು–ಮಹಾರಾಜರೇ! ನೀವು ತಿಳಿಸಿದ ವ್ಯಾಖ್ಯೆಯು ಅದು ಅನನ್ಯ ಭಕ್ತರಿಗಾಗಿ ಖಂಡಿತವಾಗಿ ಸರಿಯಾಗಿದೆ. ಈ ನರಸೀಮೆಹತಾನಾದರೋ ನನ್ನ ಆಳಿಯನಾಗಿದ್ದಾನೆ; ಆದರೆ ಇವನು ವಾಸ್ತವವಾಗಿ ಭಜನೆಯ ನೆಪದಿಂದ ಅನಾಚಾರವನ್ನು ಬೆಳೆಸುತ್ತಿದ್ದಾನೆ ಎಂದು ಹೇಳುವುದಕ್ಕೆ ನನಗೆ ಯಾವುದೇ ಸಂಕೋಚವಾಗುವುದಿಲ್ಲ. ಈ ವಿಷಯದಲ್ಲಿ ನನ್ನದೊಂದು ಪ್ರತ್ಯಕ್ಷ ಅನುಭವವಿದೆ, ಅದನ್ನು ನಾನು ನಿವೇದಿಸಿ ಕೊಳ್ಳುತ್ತೇನೆ.

ನನ್ನ ಪತ್ನಿಯೂ ಕೂಡ ದಿನವೂ ಇವರ ಭಜನೆಯಲ್ಲಿ ಪಾಲ್ಗೊಳುತ್ತಿದ್ದಳು. ಅವಳು ಪ್ರತಿದಿನ ಮಧ್ಯರಾತ್ರಿಯಲ್ಲಿ ಭಜನೆಯ ಮಧ್ಯದಲ್ಲಿ ಇವನಿಗೆ ನೀರು ಕುಡಿಸುತ್ತಿದ್ದಳು. ಈ ಮಾತನ್ನು ಸಾರಂಗಧರನು ನನಗೆ ಅನೇಕ ಬಾರಿ ಹೇಳಿದ್ದರು, ಆದರೆ ನಾನು ಇದನ್ನು ಒಪ್ಪುತ್ತಿರಲಿಲ್ಲ. ಒಂದು ದಿನ ನಾನು ಸ್ವತಃ ಅವನಿಗೆ ನೀರು ಕುಡಿಸುವುದನ್ನು ನೋಡಿ, ಮರುದಿನದಿಂದ ಅವಳನ್ನು ಭಜನೆಗೆ ಹೋಗುವದನ್ನು ನಿಲ್ಲಿಸಿ ಬಿಟ್ಟೆ. ಆದರೆ ಅವಳು ನನ್ನ ಮಾತನ್ನು ಮನ್ನಿಸದೆ ಆ ದಿನವೂ ಹೊರಟು ಹೋದಳು. ಬಳಿಕ ಬೇಸರಪಟ್ಟು ಎರಡನೇ ದಿನ ಅವಳನ್ನು ನಾನು ಬಂಧಿಸಿ ಕೊಠಡಿಯಲ್ಲಿ ಕೂಡಿ ಹಾಕಿ ಬೀಗ ಹಾಕಿ ಬೀಗದ ಕೈಯನ್ನು ನನ್ನಬಳಿ ಇರಿಸಿಕೊಂಡೆ. ಭಜನೆಯ ಮಧ್ಯದಲ್ಲಿ ಇವನು ಬೇರೆಯವರ ಕೈಯ್ಯ ನೀರು ಕುಡಿಯುವುದಿಲ್ಲವೆಂದು ನಾನು ಕೇಳಿದ್ದೆ. ಆದಕ್ಕಾಗಿ ಕುತೂಹಲದಿಂದ ನಾನು ಆ ರಾತ್ರಿ ಇವನ ಮನೆಗೆ ಹೋಗಿ ಇವನ ನಿಯತ್ತು ಹೇಗಿರುತ್ತದೆ ಎಂದು ನೋಡಿದೆ. ವಿಶ್ರಾಂತಿಯ ಸಮಯದಲ್ಲಿ ಅದೇ ನನ್ನ ಪತ್ನಿಯು ತನ್ನ ಕೈಯಿಂದ ನೀರು ಕುಡಿಸುತ್ತಿರುವುದನ್ನು ನೋಡಿದೆ.* ಈ ದೃಶ್ಯವನ್ನೂ ನೋಡುತ್ತಲೇ ನನಗೆ ತುಂಬಾ ಕೋಪ ಬಂತು, ಅವಳನ್ನು ಯಾರು ಬಿಡುಗಡೆ ಮಾಡಿದರು ಎಂದು. ನಾನು ಆಕ್ಷಣವೇ ಮನೆಗೆ ಹೋದೆ. ಆದರೆ ಅಲ್ಲಿ ಹೋಗಿ ನೋಡಿದಾಗ

* ಅನಂತರಾಯನ ಪತ್ನಿಯು ಬಂದಿಯಾಗಿದ್ದಾಗ ಆ ದಿನ ಸ್ವತಃ ಭಗವಂತನು ಅವಳ ರೂಪವನ್ನಾಂತು ಭಕ್ತರಾಜರಿಗೆ ನೀರು ಕುಡಿಸಿದನೆಂದು ಹೇಳುತ್ತಾರೆ. ಇದರ ರಹಸ್ಯವನ್ನು ತಿಳಿಯದ ಕಾರಣ ಸಾರಂಗ ಮತ್ತು ಅನಂತರಾಯರು ಭಕ್ತರಾಜರಿಗೆ ಅನಾಚಾರೀ ಎಂದು ತಿಳಿದರು.

ಬೀಗ ಹಾಗೆಯೇ ಇತ್ತು ಮತ್ತು ಅವಳು ಅದೇ ರೀತಿ ಬಂದಿಯಾಗಿದ್ದ ಅವಸ್ಥೆಯಲ್ಲಿಯೇ ರಾಧಾಕೃಷ್ಣನ ನಾಮವನ್ನು ಕೊಂಡಾಡುತ್ತಾ ಬಿದ್ದಿದಳು, ಆಗಲಾದರೋ ತುಂಬಾ ಆಶ್ಚರ್ಯವಾಯಿತು. ಸಂಗತಿ ಏನೆಂದು ತಿಳಿಯಲಿಲ್ಲ. ಕೊನೆಗೆ ಇದೇ ಪ್ರಕಾರ ನರಸೀಮೆಹತಾನು ಇಂದ್ರಜಾಲದ ಬಲದಿಂದ ಅನೇಕ ಸ್ತ್ರಿಯರನ್ನು ತನ್ನತ್ತ ಆಕರ್ಷಿಸಿ, ಅವರೊಂದಿಗೆ ಸ್ವೇಚ್ಛಾವಿಹಾರ ಮಾಡುತ್ತಾನೆಂಬ ನಿಶ್ಚಯಕ್ಕೆ ನಾನು ಬಂದೆ. ಒಂದು ವೇಳೆ ನಿಮಗೆ ವಿಶ್ವಾಸವಾಗದಿದ್ದರೆ ನೀವು ಸ್ವತಃ ಊರೊಳಗೆ ಹೋಗಿ ಚಂಚಲಾ ವೇಶ್ಯೆಯನ್ನು ನೋಡಿ ಬನ್ನಿ. ಅವಳೂ ಕೂಡ ಇವನ ಜಾಲದಲ್ಲಿ ಸಿಲುಕಿ ವಿಚಿತ್ರ ವೇಷಧರಿಸಿ ಕೊಂಡಿರುವಳು ಮತ್ತು ಪ್ರತಿದಿನ ಅವಳೂ ಇವನಲ್ಲಿಗೆ ಬಂದು ಹೋಗುತ್ತಾಳೆ. ಈ ಮಾತನ್ನು ಎಲ್ಲ ಜನರೂ ತಿಳಿದಿರುವರು. ರಾಜರೇ ! ಯಾವನಾದರು ಮನುಷ್ಯನು ರಾತ್ರಿಯ ಸಮಯ ಏಕಾಂತದಲ್ಲಿ ವೇಶ್ಯೆಯ ಜೊತೆಗಿದ್ದು ಪವಿತ್ರನಾಗಿ ಇರಬಲ್ಲನೇನು? ಇದ್ದಲು ಗಣಿಯಲ್ಲಿ ಬಿಳಿಬಟ್ಟೆಯನ್ನುಟ್ಟು ಹೋದವನು ಕಪ್ಪಿನಿಂದ ಉಳಿಯ ಬಲ್ಲನೇ ? ನೀವು ಸ್ವತಃ ವಿಚಾರ ಮಾಡಿ-ನಮ್ಮಗಳ ಮೊಕದ್ದಮೆ ಸರಿಯೋ ತಪ್ಪೋ ಎಂದು.

ಅನಂತರಾಯನ ಸಪ್ರಮಾಣ ವಕ್ತವ್ಯವನ್ನು ಕೇಳಿ ರಾಜನು ಆಳವಾದ ವಿಚಾರದಲ್ಲಿ ಮುಳುಗಿದನು. ಚಂಚಲಾ ವೇಶ್ಯೆಯ ಮಾತಾದರೋ ಸರ್ವವಿದಿತವಾಗಿದೆ, ಅವಳು ಭಕ್ತರಾಜರ ಬಳಿಗೆ ಹೋಗಿ ಬರುತ್ತಿರುತ್ತಾಳೆ, ಹಾಗಿರುವಾಗ ಅನಂತರಾಯನು ದೇವರ ಮೇಲೆ ಆಣೆ ಇಟ್ಟು ಸ್ವತಃ ತನ್ನ ಅನುಭವ ಹೇಳುತ್ತಿದ್ದಾನೆ; ತನ್ನ ಮನೆಯ ವಿಷಯದ ಕುರಿತು ಓರ್ವ ಪ್ರತಿಷ್ಠಿತ ಮನುಷ್ಯನು ಎಂದೂ ಸುಳ್ಳು ಹೇಳಲಾರನು ಎಂದು ಯೋಚಿಸಿದನು. ಹಾಗಿರುವಾಗ ಈ ವಿಷಯದಲ್ಲಿ ಹೇಗೆ ನಿರ್ಣಯ ಮಾಡುವುದು? ಇರಲಿ, ಸ್ವಲ್ಪ ನರಸೀಮೆಹತಾನನ್ನು ಕೇಳಬೇಕು. ನೋಡೋಣ, ಅವನು ಈ ಮಾತುಗಳಿಗೆ ಹೇಗೆ ಉತ್ತರಿಸುತ್ತಾನೆ. ಎರಡೂ ಪಕ್ಷಗಳ ಮಾತನ್ನು ಮೊದಲು ಕೇಳಿ ಕೊಳ್ಳುವುದು ಅವಶ್ಯಕವಾಗಿದೆ. ಈ ಪ್ರಕಾರ ಯೋಚಿಸಿ ಅವನು ಭಕ್ತರಾಜರತ್ತ ನೋಡಿ ಹೇಳಿದನು-ಭಕ್ತರಾಜರೇ ! ಈ ವಿಷಯದಲ್ಲಿ ನೀವು ಏನು ಹೇಳಲು ಬಯಸುತ್ತಿರಿ ?

ಮಹಾರಾಜಾ ! ಅನಂತರಾಯರ ಹೇಳಿಕೆಯು ಯಥಾರ್ಥವೇ ಆಗಿದೆ. ಆದರೆ ಯಾವುದೇ ಮನುಷ್ಯನು ಭಜನೆಗೆ ಬರಲು ನಾನು ಆಗ್ರಹಿಸುವುದಿಲ್ಲ

ಮತ್ತು ಯಾರನ್ನೂ ತಡೆಯುವುದೂ ಇಲ್ಲ. ನನ್ನ ಮನೆಗೆ ಬಂದು ಭಗವದ್ಭಜನೆ ಮಾಡುವ ಅಧಿಕಾರವು ಆಬಾಲ ವೃದ್ಧ ಸ್ತ್ರೀ-ಪುರುಷರೆಲ್ಲರಿಗೆ ಸಮಾನವಾಗಿವೆ. ಈ ವಿಷಯದಲ್ಲಿ ನನ್ನನ್ನು ದೋಷಿ ಎಂದು ನಾನು ತಿಳಿಯುವುದಿಲ್ಲ. ನಾನು ನನ್ನ ರಾಧೇಶ್ಯಾಮನ ನಾಮವಲ್ಲದೇ ಬೇರೆ ಏನನ್ನೂ ತಿಳಿಯುವುದಿಲ್ಲ. ನಾನಾದರೋ ನನ್ನ ಬಳಿಗೆ ಬಂದು ಭಗವಂತನ ಭಜನೆ ಮಾಡುವವರನ್ನು ತಡೆದು ಅವರಿಗೆ ದುಃಖಿಕೊಡುವುದೆಂದರೆ ಸ್ವತಃ ಭಗವಂತನಿಗೇ ದೋಷಕೊಡುವುದಕ್ಕೆ ಸಮವೆಂದು ತಿಳಿಯುತ್ತೇನೆ. ಹಾಗಿರುವಾಗ ನೀವು ರಾಜರಾಗಿದ್ದೀರಿ ; ನಿಮ್ಮಲ್ಲಿಯೂ ಪರಮಾತ್ಮನ ಅಂಶವಿದೆ ; ನಾನು ದೋಷಿಯೋ, ಅಲ್ಲವೊ ? ಎಂಬುದನ್ನು ನೀವು ಸ್ವತಃ ವಿಚಾರ ಮಾಡಬಲ್ಲಿರೀ. ನಿಮಗೆ ನನ್ನ ದೋಷವೆಂದು ತಿಳಿದುಬಂದರೆ, ನೀವು ನನಗೆ ಉಚಿತವಾದ ಶಿಕ್ಷೆ ಕೊಡಬಹುದು ಎಂದು ಭಕ್ತರಾಜರು ಸರಳತೆಯಿಂದ ನಿವೇದಿಸಿಕೊಂಡರು.

ಮಹಾತ್ಮರ ಹೃದಯವು ಅತ್ಯಂತ ಕೋಮಲ ದಯಾಪೂರ್ಣವಾಗಿರುತ್ತದೆ. ಅವರು ಸ್ವತಃ ಆಪತ್ತಿನಲ್ಲಿ ಬಿದ್ದರೂ ತಮ್ಮ ಬಾಯಿಯಿಂದ ಅಪರಾಧಿಯನ್ನೂ ಅಪರಾಧಿ ಎಂದು ಹೇಳುವುದಿಲ್ಲ. ನರಸೀಮೆಹತಾ- ಈ ಜನರು ಮತ್ಸರದಿಂದಲೇ ಇದೆಲ್ಲ ಉಪದ್ವ್ಯಾಪ ರಚಿಸಿದ್ದಾರೆಂದು ತಿಳಿದಿದ್ದರು. ಆದರೂ ಆ ಜನರನ್ನು ದೋಷಿಗಳೆಂದು ನಿಶ್ಚಯಿಸುವುದು ಅವರಿಗಾಗಿ ಪಾಪವೇ ಆಗಿತ್ತು.

ಭಕ್ತರಾಜರ ವಚನಗಳು ಸಾರಂಗಧರನಿಂದ ಸಹಿಸಲಾಗಲಿಲ್ಲ. ಅವನು ಕೂಡಲೇ ತನ್ನ ಆಸನದಿಂದ ಎದ್ದು, ನರಸಿಂಹರಾಮ್ ! ನೀನು ತುಂಬಾ ಅನರ್ಥಮಾಡುತ್ತಿರುವೆ. ನಿನಗೆ ಶಾಸ್ತ್ರಜ್ಞಾನವು ಖಂಡಿತವಾಗಿ ಏನೂ ಇಲ್ಲ ಮತ್ತು ಉಪದೇಶಕನಾಗಿ ಕುಳಿತಿದ್ದಿ. ನೀನು ನಿನ್ನನ್ನು ಉಪದೇಶ ಕೊಡಲು ಅಧಿಕಾರಿ ಎಂದು ತಿಳಿಯುವುದಾದರೆ ಈ ಸಂನ್ಯಾಸಿಗಳೊಂದಿಗೆ ಶಾಸ್ತ್ರಾರ್ಥ ಮಾಡಿ ಈ ಸಭೆಯಲ್ಲಿ ಸರ್ವಜ್ಞತೆಯನ್ನು ಸಿದ್ಧಗೊಳಿಸು ಎಂದು ಗದರಿದನು.

ತಮ್ಮಾ ! ನಾನು ಶಾಸ್ತ್ರಜ್ಞನಲ್ಲ ಮತ್ತು ಸರ್ವಜ್ಞನೂ ಅಲ್ಲ. ಪರಮಾತ್ಮನಲ್ಲದೆ ಈ ಜಗತ್ತಿನಲ್ಲಿ ಯಾರೂ ಕೂಡ ಸರ್ವಜ್ಞನಾಗಿರುವ ವಾದ ಮಾಡಲಾರನು. ಆದುದರಿಂದ ನಾನು ಶಾಸ್ತ್ರಾರ್ಥ ಅಥವಾ ವೇದಾರ್ಥವನ್ನು ಮಾಡುವುದರಲ್ಲಿ ಅಸಮರ್ಥನಾಗಿರುವೆ. ಓರ್ವ ಕವಿ ಹೇಳುತ್ತಾನೆ —

काम क्रोध मद मोहको जब लगि घटमें स्थान ।
क्या पंडित क्या मूरखा दोनोंए एक समान ॥

(ಕಾಮ, ಕ್ರೋಧ, ಮದ, ಮೋಹಾದಿಗಳನ್ನು ತನ್ನಲ್ಲಿ ಇಟ್ಟುಕೊಂಡವರಿಗೆ ಪಂಡಿತ ಅಥವಾ ಮೂರ್ಖನೆಂದು ಹೇಳುವುದು ಎರಡೂ ಸಮಾನವಾಗಿದೆ).

ಶಾಸ್ತ್ರಗಳನ್ನು ಓದಿ ವಾದ-ವಿವಾದ ಹಾಗೂ ಕಾಮ-ಕ್ರೋಧಾದಿಗಳ ವಶನಾಗಿ ಆ ಶಾಸ್ತ್ರಗಳ ದುರುಪಯೋಗ ಮಾಡುವವನನ್ನು ಪಂಡಿತನೆಂದು ಹೇಳುವವನೂ ಮೂರ್ಖನಾಗಿದ್ದಾನೆ. ಆದ್ದರಿಂದ ನಾನು ಪಂಡಿತನಾಗುವುದು ಮೊದಲಿನಿಂದಲೂ ಮೆಚ್ಚುವುದಿಲ್ಲ. ನಾನಾದರೋ ಕೇವಲ ಆತ್ಮಚಿಂತನೆ ಮತ್ತು ಭಗವಂತನ ನಾಮವನ್ನು ಮಾತ್ರ ತಿಳಿಯುತ್ತೇನೆ. ಭಗವಂತನ ಚಿಂತನದಿಂದ ಆತ್ಮನ ಪರಿಚಯವಾಗುವವರೆಗೆ ಯಜ್ಞ, ತಪ, ವ್ರತಾದಿ ಯಾವ ಸಾಧನೆಯೂ ಫಲವನ್ನು ಕೊಡಲಾರವು. ಕೇಳಿರಿ ಎಂದು ಒಂದು ಪದವನ್ನು ಹಾಡಿದರು. ಅದರ ಭಾವ ಹೀಗಿದೆ

ಹೇ ಮನಸ್ಸೇ ! ನೀನು ಆತ್ಮ ತತ್ತ್ವವನ್ನು ಪೂರ್ಣ ರೂಪದಿಂದ ತಿಳಿದು ಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಎಲ್ಲ ಸಾಧನೆಗಳು ಹುಸಿಯಾಗಿವೆ. ನಿನ್ನ ಮನುಷ್ಯ ಶರೀರವೂ ಕೂಡ ಶರದ್ ಋತುವಿನ ಮಳೆಯಂತೆ ವ್ಯರ್ಥವಾಗಿ ಹೊರಟು ಹೋಗುವುದು.

ಸ್ನಾನ, ಸೇವೆ-ಪೂಜೆ, ದಾನ ಮಾಡುವುದು ಹಾಗೂ ಭಸ್ಮವನ್ನು ಹಚ್ಚಿ ಕಣ್ಣು ಕೆಂಪಾಗಿಸುವುದರಿಂದ ಏನುಲಾಭವಿದೆ ? ತಪಸ್ಸು, ತೀರ್ಥಸೇವನ, ಜಪ, ತಿಲಕ ಮಾಲೆ ಧರಿಸುವುದು ಮತ್ತು ಗಂಗಾಜಲ ಪಾನ ಮಾಡುವುದರಿಂದ ಏನಾಯಿತು? ವೇದ, ವ್ಯಾಕರಣ ವಾಣಿಯಿಂದ ಮಾತಾಡುವುದು, ಅರಸು-ಆಳುಗಳನ್ನು ಗುರುತಿಸುವುದು, ದೇವ ದರ್ಶನ ಮತ್ತು ಪೂಜೆ ಮಾಡುವುದು ಹಾಗೂ ವರ್ಣ ಭೇದ ತಿಳಿಯವುದರಿಂದ ಏನಾಯಿತು ? ಇವೆಲ್ಲ ಹೊಟ್ಟೆ ತುಂಬಿಸುವ ವಿಷಯಗಳಾಗಿವೆ. ಈ ಸಾಧನೆಗಳ ಮೂಲಕ ಪರಬ್ರಹ್ಮ ಪರಮಾತ್ಮನ ಚಿಂತನ ಆಗಲಾರದು. ಅದಕ್ಕಾಗಿ ನರಸಿಂಹ ಹೇಳುತ್ತಾನೆ - ಆತ್ಮದರ್ಶನ ಮಾಡದೆ ನೀನು ಈ ಚಿಂತಾಮಣಿಯಂತಿರುವ ಮನುಷ್ಯ ತನುವನ್ನು ವ್ಯರ್ಥವಾಗಿ ಕಳೆದುಬಿಟ್ಟೆ.

ಆದ್ದರಿಂದ ಬಂಧುಗಳೇ ! ಈ ವ್ಯರ್ಥವಾದ ಜಂಜಾಟದಲ್ಲಿ ಏಕೆ ಬೀಳಬೇಕು ? ಶಾಸ್ತ್ರಾರ್ಥವು ಯಾರಿಗೆ ತಮ್ಮ ಗೀಳಾಗಿದೆಯೋ ಅವರಿಗೆ ಧನ್ಯವಾದಗಳು. ನನಗಾದರೋ ರೊಟ್ಟಿಯ ತುಂಡು ಸಿಕ್ಕಿದರೆ ಸರಿ, ಸಿಗದಿದ್ದರೂ ಸರಿ. ಈ ಪ್ರಕಾರ ಭಕ್ತರಾಜರು ಪಂಡಿತ-ಅಪಂಡಿತರ ವಿವೇಚನೆ ಗೈದು ಆತ್ಮ ಚಿಂತನದ ಮಹತ್ತ್ವವನ್ನು ತೋರಿಸಿದರು.

ಭಕ್ತರಾಜರ ಈ ನಿರ್ಭೀಕ ವಿವೇಚನೆಯನ್ನು ಕೇಳಿ ಕುಳಿತವರೆಲ್ಲ ಜನರು ಅವಾಕ್ಕಾದರು. ಪೂರ್ಣರೂಪದಿಂದ ಪರೀಕ್ಷಿಸದೆ ಭಕ್ತರಾಜನನ್ನು ದೋಷಿ ಅರ್ಥವಾ ನಿರ್ದೋಷಿ ಎಂದು ಹೇಳುವುದು ನ್ಯಾಯವಿರುದ್ಧವಾಗಿದೆ ಎಂದು ರಾಜರು ವಿಚಾರ ಮಾಡಿದರು. ಈಗ ಯಾವುದಾದರೊಂದು ಉಪಾಯ ಮಾಡಬೇಕು ಅದರಿಂದ ನಿರಪರಾಧೀ ಮನುಷ್ಯನಿಗೆ ಶಿಕ್ಷೆಯಾಗಬಾರದು ಮತ್ತು ಬೇರೆ ಪಕ್ಷಕ್ಕೂ ಕೂಡ ಪೂರ್ಣ ಸಂತೋಷವಾಗಬೇಕು. ಹೀಗೆ ವಿಚಾರ ಮಾಡುತ್ತಾ-ಮಾಡುತ್ತಾ ರಾಜರಿಗೆ ಒಂದು ದಾರಿ ಹೊಳೆಯಿತು. ಅವರು ಒಂದು ಹೂವಿನ ಹಾರವನ್ನು ತರಿಸಿ ಅದನ್ನು ಕೈಯಲ್ಲಿ ಹಿಡಿದು ಹೇಳಿದರು- ಭಕ್ತರಾಜರೇ ! ನೀವು ಹೇಳುವುದು ಖಂಡಿತವಾಗಿ ಸತ್ಯವಾಗಿದ್ದರೂ ನಿಮ್ಮ ವಿರುದ್ಧ ಈ ಜನರ ಸಾಕ್ಷಿಯಾಗಿರುವುದರಿಂದ ಸತ್ಯ-ಅಸತ್ಯದ ನಿರ್ಣಯ ಮಾಡುವುದು ಕಷ್ಟವಾಗಿದೆ. ಆದ್ದರಿಂದ ನಾನು ಒಂದು ಉಪಾಯವನ್ನು ಯೋಚಿಸಿದ್ದೇನೆ, ಅದರಿಂದ ನ್ಯಾಯವೂ ಸರಿಯಾಗಿ ಸಿಗುವುದು ಮತ್ತು ಎರಡೂ ಪಕ್ಷಗಳಲ್ಲಿ ಯಾರಿಗೂ ಯಾವುದೇ ತಕರಾರು ಎತ್ತುವ ಅವಕಾಶ ಸಿಗಲಾರದು ನೀವು ಈ ಪುಷ್ಪಹಾರವನ್ನು ನಿಮ್ಮ ಕೈಗೆತ್ತಿಕೊಂಡು ರಾಜಮಂದಿರಕ್ಕೆ ಹೋಗಿ ಭಗವಾನ್ ರಾಧಾ-ದಾಮೋದರನಿಗೆ ತೊಡಿಸಿರಿ. ನಾನು ಸ್ವತಃ ಮಂದಿರಕ್ಕೆ ಬೀಗಹಾಕಿ ಬೀಗದ ಕೈಯನ್ನು ನನ್ನ ಬಳಿಯೇ ಇಟ್ಟುಕೊಳ್ಳುವೆ. ನಾಳೆ ಬೆಳಗಾಗುವುದರ ಮೊದಲು ಸ್ವತಃ ಭಗವಂತನು ಪ್ರಕಟವಾಗಿ ಇದೇ ಹಾರವನ್ನು ನಿಮ್ಮ ಕೊರಳಿಗೆ ಹಾಕಿದರೆ ನಿಮ್ಮ ನಿರ್ದೋಷತೆ ಸಿದ್ಧವಾಗುವುದು. ಒಂದು ವೇಳೆ ಹಾಗಾಗದಿದ್ದರೆ ನಿಮಗೆ ಉಚಿತವಾದ ಶಿಕ್ಷೆ ಕೊಡಲಾಗುವುದು.

ರಾಜರ ಈ ಅಂತಿಮ ತೀರ್ಮಾನ ಕೇಳಿ ಭಕ್ತರಾಜರು ಸಂತೋಷವಾಗಿ ಹೇಳಿದರು — ನ್ಯಾಯಪ್ರಿಯ ಮಹಾರಾಜರೇ! ಭಗವಂತನು ಭಕ್ತವತ್ಸಲನಾಗಿದ್ದಾನೆ. ನನ್ನ ಭಕ್ತಿಯು ಅವನಲ್ಲಿ ನಿಜವಾಗಿ ನಿಷ್ಕಾಮವಾಗಿದ್ದರೆ ಅವನು ಅವಶ್ಯವಾಗಿ ತನ್ನ ಕೊರಳಿನ ಮಾಲೆಯನ್ನು ನನಗೆ ಕೊಡುವನು; ಒಂದು ವೇಳೆ ಹೀಗಾಗದಿದ್ದರೇನಾಯಿತು? ನನಗಾಗಿ ಅರಮನೆ ಮತ್ತು ಸೆರೆಮನೆ ಒಂದೇ ಆಗಿದೆ. ನನಗಾದರೋ ಭಗವತ್ಕೀರ್ತನ ಮಾಡಲಿಕ್ಕಾಗಿ ಯಾವುದಾದರೊಂದು ಜಾಗ ಸಿಗಬೇಕು; ಇಷ್ಟೇ ನನಗೆ ಸಾಕು.

ನರಸೀಮೆಹತಾರವರು ರಾಜರ ಕೈಯಿಂದ ಹೂವಿನ ಹಾರವನ್ನು ತೆಗೆದುಕೊಂಡು ಅರಮನೆಯ ಮಂದಿರಕ್ಕೆ ಹೋಗಿ ಭಗವಾನ್ ರಾಧಾ-

ದಾಮೋದರನ ಕಂಠದಲ್ಲಿ ಹಾರವನ್ನು ಹಾಕಿದರು ಮತ್ತು ಭಕ್ತಿಪೂರ್ವಕ ನಮಸ್ಕರಿಸಿ ಹೊರಗೆ ಬಂದರು. ರಾಜರು ಮಂದಿರಕ್ಕೆ ಬೀಗ ಹಾಕಿ ಕೈಯನ್ನು ತನ್ನ ಬಳಿ ಇಟ್ಟುಕೊಂಡನು.

ಸಾರಂಗಧರನು ತನ್ನ ಅಧಿಕಾರವನ್ನು ಪ್ರದರ್ಶಿಸುತ್ತಾ ಹೇಳಿದನು- ನರಸೀಮೆಹತಾ ! ಈ ನ್ಯಾಯದಲ್ಲಿ ನೀನು ವಿಫಲನಾದರೆ ರಾಜರ ಕತ್ತಿಯಿಂದ ನಿನ್ನ ರುಂಡ ಮುಂಡದಿಂದ ಬೇರ್ಪಡಿಸಲಾಗುವುದು.

ತಮ್ಮಾ ! ರಾಜರ ಕೈಯಿಂದ, ಭಗವಂತನ ಮಂದಿರದಲ್ಲಿ ಮತ್ತು ನನ್ನ ಸ್ವಾಮಿಯ ಮುಂದೆಯೇ ಒಂದು ವೇಳೆ ಮೃತ್ಯುವಾದರೆ ಇದಕ್ಕಿಂತ ಮಿಗಿಲಾದ ಸೌಭಾಗ್ಯದ ಮಾತು ಬೇರೆನಿರಬಹುದು? ಮತ್ತೆ ನನ್ನ ಆತ್ಮವನ್ನಾದರೋ ಸ್ವತಃ ಯಮರಾಜನೂ ಕೂಡ ನಾಶ ಮಾಡಲಾರನು. ಈ ನಾಶಯುಕ್ತ ದೇಹವು ನಾಶವಾಗುವುದಕ್ಕೆ ನನಗೆ ಎಳ್ಳಷ್ಟೂ ದುಃಖವಿಲ್ಲ ; ಏಕೆಂದರೆ ಸತ್ಯಕ್ಕಾಗಿ ಮಾಡಿದ ದೇಹತ್ಯಾಗವು ನನ್ನನ್ನು ಅಮರವಾಗಿಸುವುದು ಎಂದು ಭಕ್ತರಾಜರು ದೃಢತೆಯಿಂದ ಹೇಳಿದರು.

ಇಷ್ಟು ಹೇಳಿ ಭಕ್ತರಾಜರು ಮಂದಿರದ ಕಟ್ಟೆಯ ಮೇಲೆ ಕುಳಿತು ಭಜನೆ ಮಾಡತೊಡಗಿದರು. ಬೇರೆ ಪಕ್ಷದವರ ಜೊತೆಗೆ ಸ್ವತಃ ರಾಜನೂ ಅಲ್ಲಿ ಭಕ್ತರಾಜರ ನ್ಯಾಯ ತೀರ್ಮಾನಿಸಲು ಕುಳಿತು ಬಿಟ್ಟನು.

ಹಾರ ಪ್ರದಾನ

ಯಾರೇ ಮನುಷ್ಯನು ಸಂಗ್ರಹಿಸಿದ ದ್ರವ್ಯವು ಸಮಯ ಬಂದಾಗ ನಾಶವಾಗುತ್ತದೆ; ವಿದ್ಯಾ, ಯೌವನ ಮತ್ತು ಜೀವನವೂ ಚಂಚಲವಾದ ಕಾರಣ ಕಾಲ-ಕರ್ಮಕ್ಕಧೀನವಾಗಿ ನಾಶವಾಗುತ್ತವೆ. ಆದರೆ ಭಗವಂತನ ಭಜನೆಯು ಕಾಲಾಂತರದಲ್ಲಿಯೂ ನಾಶವಾಗುವುದಿಲ್ಲ. ಅದರ ಫಲವು ಈ ಜನ್ಮದಲ್ಲಿ ಸಿಗದಿದ್ದರೂ ಜನ್ಮಾಂತರಗಳಲ್ಲಿ ಚಕ್ರಬಡ್ಡೀ ಜೊತೆಗೆ ಖಂಡಿತವಾಗಿ ದೊರೆಯುತ್ತದೆ. ವ್ಯರ್ಥವಾಗುವುದಿಲ್ಲ. ನರಸೀಮೆಹತಾರವರು ಇದೇ ವಿಶ್ವಾಸವನ್ನು ಹೃದಯ ದಲ್ಲಿಟ್ಟುಕೊಂಡು ಭಗವಂತನ ಭಜನೆ ಮಾಡುತ್ತಿದ್ದರು. ಆದರೆ ನನ್ನ ಪ್ರಿಯರಾಗ ಕೇದಾರವಾದರೋ ಐರವತ್ತು ರೂಪಾಯಿಗಳಿಗೆ ಒತ್ತೆಯಾಗಿದೆಯಲ್ಲ ಎಂಬ ಮಾತು ಆಗಾಗ ಅವರ ಹೃದಯದಲ್ಲಿ ಚುಚ್ಚುತ್ತಿತ್ತು. ಅದಿಲ್ಲದೆ ಭಗವಂತನ ಆವಾಹನೆ ಹೇಗೆ ಮಾಡಲೀ ? ಅವರು ಭಗವಂತನ ಧ್ಯಾನ ಮಾಡಲು ಪ್ರಯತ್ನಮಾಡಿದರೂ, ಈ ಮಾತಿಗಾಗಿ ಅವರ ಚಿತ್ತ ವಿಹ್ವಲವಾಗುತ್ತಿತ್ತು.

★ ★ ★ ★ ★

ದಿವ್ಯವಾದ ವೈಕುಂಠಧಾಮದಲ್ಲಿ ಭಗವಾನ್ ಶ್ರೀಕೃಷ್ಣನು ಮಲಗಿದ್ದನು. ಜಗನ್ಮಾತೆ ಲಕ್ಷ್ಮೀದೇವಿಯು ಪಾದಸೇವೆ ಮಾಡುತ್ತಿದ್ದಳು. ಅರ್ಧರಾತ್ರಿಯ ಸಮಯ ಭಗವಂತನು ಒಮ್ಮಿಂದೊಮ್ಮೆಗೇ ಎಚ್ಚರಗೊಂಡನು. ಎಲ್ಲಿಗೋ ಹೋಗಲು ಹೊರಟಂತಿದೆ. ಈ ಪ್ರಕಾರ ಹೊರಟಿರುವುದನ್ನು ಕಂಡು ಲಕ್ಷ್ಮೀದೇವಿ ಸಹಿತ ಸಮಸ್ತ ಪಾರ್ಷದರಿಗೆ ತುಂಬಾ ಆಶ್ಚರ್ಯವಾಯಿತು.

ಶ್ರೀಲಕ್ಷ್ಮೀದೇವಿಯು ನಗುತ್ತಾ ಪ್ರಶ್ನಿಸಿದಳು – ಪ್ರಾಣನಾಥಾ ! ಇಂದು ಅಕಸ್ಮಾತ್ತಾಗಿ ನಿಮ್ಮ ನಿದ್ದೆ ಏಕೆ ಭಂಗವಾಯಿತು? ಏನು ಯಾರಾದರು ದುರ್ಧರ್ಷ ದೈತ್ಯನ ವಧೆಗಾಗಿ ಈ ಸಮಯದಲ್ಲಿ ನೀವು ಹೊರಟಿರುವರೋ ಅಥವಾ ಭಕ್ತ ಗಜೇಂದ್ರನಂತೆ ಯಾವುದಾದರೂ ಪಶುವನ್ನು ಉದ್ಧರಿಸಬೇಕೆ ?

ಪ್ರಿಯೇ ! ನೀವೆಲ್ಲ ಈ ರಹಸ್ಯವನ್ನು ಹೇಗೆ ತಿಳಿಯಬಲ್ಲಿರಿ ? ನನ್ನಲ್ಲಿ ಶರಣು ಬಂದಿರುವ ಸಮಸ್ತ ಜೀವರು ನನಗೆ ಒಂದೇ ರೀತಿಯಾಗಿದ್ದಾರೆ, ಬೇಕಾದರೆ ಪಶುಯೋನಿಯಾಗಿರಲಿ ದೇವಯೋನಿಯಾಗಿರಲಿ. ಆದರೆ ಇಂದಾದರೋ ಓರ್ವ ನನ್ನ ಪರಮಪ್ರಿಯ ಭಕ್ತನಿಗೆ ಸಹಾಯ ಮಾಡಲು ಹೋಗುತ್ತಿದ್ದೇನೆ. ಆ ನಿರಪರಾಧೀ ಭಕ್ತನಿಗೆ.....ಇಷ್ಟು ಹೇಳುತ್ತಿರುವಂತೆ

ಮಾತು ಅರ್ಧಕ್ಕೆ ಬಿಟ್ಟು ಭಗವಂತನು ಅತ್ಯಂತ ಶೀಘ್ರವಾಗಿ ನಡೆದೇ ಬಿಟ್ಟನು. ಭಕ್ತವತ್ಸಲ ಭಗವಂತನು ಇಂದು ಜೊತೆಯಲ್ಲಿ ಗರುಡನನ್ನೂ ಅಥವಾ ಪಾರ್ಷದರನ್ನು ಕರೆದುಕೊಳ್ಳುವ ಅವಶ್ಯಕವೆಂದು ತಿಳಿಯಲಿಲ್ಲ. ಭಕ್ತರಾಜರ ದುಃಖಿತ ಹೃದಯದ ಕೂಗು ಕೇಳಿ ಅವನ ಹೃದಯಲ್ಲಿಯೂ ದುಃಖವುಂಟಾಗಿತ್ತು. ಅವನು ಕೂಡಲೇ ಜೂನಾಗಡಕ್ಕೆ ಬಂದು ಭಕ್ತರಾಜನಂತೆ ಸ್ವರೂಪವನ್ನಾಂತು ಧರಣೀಧರ ಮೆಹತಾನ ಮನೆಗೆ ತಲುಪಿ ಅವರ ಮನೆ ಬಾಗಿಲು ಬಡಿದನು.

ಯಾರು ? ಯಾರು ಬಂದಿರುವರು ? ಎಂದು ಮಲಗಿದ ಧರಣೀಧರನು ಪ್ರಶ್ನಿಸಿದನು. ಬಾಗಿಲು ತೆಗೆಯಿರಿ ನಾನು ನರಸೀಮೆಹತಾ ಋಣಮುಕ್ತನಾಗಲು ಬಂದಿರುವೆನು ಎಂದು ಭಕ್ತರಾಜರೂಪೀ ಭಗವಂತನು ಹೇಳಿದನು.

ಭಕ್ತರಾಜರ ಧ್ವನಿಯನ್ನು ಕೇಳಿ ಧರಣೀಧರನ ಪತ್ನಿಯು ಬಾಗಿಲ ತೆರೆದಳು. ಭಕ್ತರಾಜ ಸ್ವರೂಪೀ ಭಗವಂತನು ಮುಂದೆ ಬಂದಾಗ ಧರಣೀಧರನು ನಮಸ್ಕರಿಸಿ ಹೇಳಿದನು-ಭಕ್ತರಾಜರೇ ! ಇಷ್ಟು ಅವಸರವೇನಿತ್ತು ? ಈ ಹೊತ್ತಿನಲ್ಲಿ ಏಕೆ ತೊಂದರೆ ತೆಗೆದುಕೊಂಡಿರಿ ? ಅಲ್ಲದೆ ಕೆಲದಿನಗಳು ಹಣ ಇರುತ್ತಿದ್ದರೂ ಆಪತ್ತೇನಿದೆ ?

ಅಯ್ಯಾ ! ಅದು ಸರಿಯೇ ! ಆದರೆ ಓರ್ವ ಉದಾರ ಗೃಹಸ್ಥನಿಂದ ಹಣ ದೊರೆತಾಗ ಅದನ್ನು ಮನೆಯಲ್ಲಿ ಇಟ್ಟುಕೊಳ್ಳುವುದರಿಂದ ಏನು ಲಾಭ ? ಅಲ್ಲದೆ ಇದೇ ಸಮಯದಲ್ಲಿ ನನಗೆ ಕೇದಾರ ರಾಗವನ್ನು ಹಾಡಲು ತುಂಬಾ ಅವಸರವಾಗುತ್ತಿದೆ ; ಇದರಿಂದ ಈಗಲೇ ಹಣವನ್ನು ತೀರಿಸಿ ರಾಗವನ್ನು ಬಿಡಿಸಿಕೊಳ್ಳುವ ವಿಚಾರ ಮಾಡಿದೆ ಎಂದು ನರಸೀಮೆಹತಾ ರೂಪಿ ಭಗವಂತನು ಉತ್ತರಿಸಿದನು.

ಭಗವಂತನು ಇಷ್ಟು ಹೇಳಿ ಇರವತ್ತು ರೂಪಾಯಿಗಳನ್ನು ಧರಣೀಧರನ ಮುಂದಿಟ್ಟನು. ಧರಣೀಧರನು ಹಣವನ್ನು ಎಣಿಸಿಕೊಂಡು ನರಸೀಮೆಹತಾನ ಪ್ರತಿಜ್ಞಾಪತ್ರಕ್ಕೆ ಹಸ್ತಾಕ್ಷರ ಮಾಡಿ ಭಗವಂತನ ಕೈಗೆ ಕೊಟ್ಟನು. ಪತಿಜ್ಞಾಪತ್ರವನ್ನು ತೆಗೆದುಕೊಂಡು ಅರಮನೆಯ ಮಂದಿರದಲ್ಲಿ ಭಕ್ತರಾಜರು ಏಕಾಗ್ರಚಿತ್ತದಿಂದ ಭಗವದ್ಭಜನೆ ಮತ್ತು ಧ್ಯಾನ ಮಾಡುತ್ತಿದ್ದಲ್ಲಿಗೆ ಬಂದನು. ಭಗವಂತನು ಅಂತರಿಕ್ಷದಿಂದ ಆ ಪತ್ರವನ್ನು ಬೀಳಿಸಿದನು. ಆದರೆ ಇದನ್ನು ಭಕ್ತರಾಜರಲ್ಲದೆ ಬೇರೆಯಾರೂ ನೋಡಲಿಲ್ಲ. ಭಕ್ತರಾಜರು ಮುಂದೆ ಬಿದ್ದ ಪತ್ರವನ್ನು ಕುತೂಹಲವಾಗಿ ನೋಡಿ ಎತ್ತಿಕೊಂಡರು. ಇದಾದರೋ ನನ್ನ ಪ್ರತಿಜ್ಞಾಪತ್ರವಿದೆ ಎಂದು ನೋಡಿ ಅವರಿಗೆ

ತುಂಬಾ ವಿಸ್ಮಯವಾಯಿತು; ಮತ್ತೆ ಅದರ ಮೇಲಿನ ಹಸ್ತಾಕ್ಷರವನ್ನು ಓದಿದರು. ಅದರಲ್ಲಿ ಹೀಗೆ ಬರೆದಿತ್ತು-ಇಂದು ನಡುರಾತ್ರಿಯಲ್ಲಿ ಎಚ್ಚರಿಸಿ ನರಸೀ ಮೆಹತಾರವರು ನನ್ನ ಅರವತ್ತು ರೂಪಾಯಿಗಳನ್ನು ಸಂದಾಯ ಮಾಡಿದರು. ಆದುದರಿಂದ ನಾನು ಪಾವತಿಯನ್ನು ಬರೆದುಕೊಟ್ಟಿರುವೆನು ; ಈಗ ನೀವು ಕೇದಾರ ರಾಗವನ್ನು ಪ್ರೇಮದಿಂದ ಹಾಡಬಲ್ಲಿರಿ - ಧರಣೀಧರ ರಾಯ.

ಪತ್ರವನ್ನು ಓದುತ್ತಾ-ಓದುತ್ತಾ ಭಕ್ತರಾಜರ ಕಣ್ಣುಗಳಿಂದ ಪ್ರೇಮಾಶ್ರುಗಳು ಚಿಮ್ಮಿದವು, ಕಂಠ ಉಮ್ಮಳಿಸಿತು, ಶರೀರದಲ್ಲಿ ರೋಮಾಂಚನವಾಯಿತು. ಈ ಕೆಲಸವು ಭಗವಂತನೇ ಮಾಡಿರುವನು ಎಂದು ಯೋಚಿಸಿ ಅವರು ಪ್ರೇಮೋನ್ಮತ್ತರಾಗಿ ಕುಣಿಯಲು ತೊಡಗಿದರು. ಅವನ ಈ ಸ್ಥಿತಿಯನ್ನು ನೋಡಿ ಅಲ್ಲಿ ಉಪಸ್ಥಿತ ಜನರು ತಮ್ಮ ಮನಸ್ಸಿನಲ್ಲಿ ನಾನಾ ಪ್ರಕಾರದ ಕಲ್ಪನೆ ಮಾಡತೊಡಗಿದರು. ಅನಂತರಾಯನು ಹೇಳಿದನು-ನೋಡಿ, ಈಗ ರಹಸ್ಯ ಬಯಲಾಗುವ ಭಯದಿಂದ ಇವನು ಹುಚ್ಚನಂತೇ ನಾಟಕವಾಡುತ್ತಿದ್ದಾನೆ. ಸಾರಂಗಧರನು ಹೇಳಿದನು-ಬೆಳಗಾದಾಗಲೇ ರಾಜರ ಖಡ್ಗದಿಂದ ಹುಚ್ಚುತನ ತನ್ನಿಂದ-ತಾನೇ ದೂರವಾಗುತ್ತದೆ.

ಆದರೆ ನರಸೀಮೆಹತಾರವರಿಗೆ ಇವೆಲ್ಲ ಮಾತುಗಳಿಂದ ಏನು ಪ್ರಯೋಜವಿತ್ತು? ಅವರ ಹೃದಯದಲ್ಲಿ ಅನಾಯಾಸವಾಗಿ ಪ್ರತಿಜ್ಞಾಪತ್ರ ಪ್ರಾಪ್ತವಾದುದರಿಂದ ಭಗವಂತನ ಕುರಿತು ಪ್ರೇಮವು ಉಕ್ಕುತ್ತಿತ್ತು. ಭಗವಂತನ ಹೃದಯದಲ್ಲಿ 'ನನ್ನಂತಹ ಕ್ಷುದ್ರ ಜೀವಿಗಾಗಿಯೂ ಸ್ಥಾನವಿದೆಯಲ್ಲ!' ಈ ವಿಚಾರವು ಅವನನ್ನು ಹುಚ್ಚುನಾಗಿಸಿತ್ತು ಹಾಗೂ ಎಚ್ಚರವಿಲ್ಲದೆ ಪ್ರೇಮಾವೇಶದಲ್ಲಿ ನೃತ್ಯ ಮಾಡುತ್ತಿದ್ದರು. ಈಗ ಪ್ರಾತಃಕಾಲ ವಾಗುವುದಕ್ಕೆ ಸ್ವಲ್ಪವೇ ಸಮಯ ಉಳಿದಿದೆ ಎಂಬ ಎಚ್ಚರವೂ ಅವರಿಗೆ ಇರಲಿಲ್ಲ

ರಾಜಾ ಮಾಂಡಲೀಕರು ಭಕ್ತರಾಜರನ್ನು ಎಚ್ಚರಿಸುತ್ತ ಹೇಳಿದರು-ಭಕ್ತರಾಜರೇ ! ಹುಚ್ಚುತನ ತೋರಿಸುತ್ತಾ-ತೋರಿಸುತ್ತಾ ಬೆಳಗಾಗುತ್ತಿದೆ. ಈಗ ಈ ಕೊನೆಯ ಗಳಿಗೆಯಲ್ಲಿ ನಿಮ್ಮ ಕೊರಳಿಗೆ ಹಾರ ಬೀಳದಿದ್ದರೆ ಈ ನೃತ್ಯ ನಿಮ್ಮನ್ನು ಕಾಪಾಡಲಾರದು. ಈ ವ್ಯರ್ಥವಾದ ಮಾತಿನಲ್ಲೇನಿದೆ ? ಬೇಗನೆ ಶರತ್ತನ್ನು ಪೂರ್ಣಮಾಡಿರಿ.

ರಾಜನ ಅಧಿಕಾರ ವಾಣಿಯಿಂದ ಭಕ್ತರಾಜರು ಪ್ರೇಮ ಸಮಾಧಿಯಿಂದ ಎಚ್ಚರಗೊಂಡರು. ಆಗ ಪೂರ್ವದಿಕ್ಕಿನಲ್ಲಿ ಅರುಣೋದಯವಾಗತೊಡಗಿತ್ತು.

ಪಕ್ಷಿ ಸಂಕುಲವು ಎಚ್ಚತ್ತು ತಮ್ಮ ಕಲರವದಿಂದ ಭಗವಾನ್ ಭಾಸ್ಕರನ ಆವಾಹನೆ ಮಾಡುತ್ತಿದ್ದುವು. ಭಕ್ತರ ಹೃದಯಲ್ಲಿ ಸ್ಥಿತವಾದ ತುಂಟ ನಟವರನ ಮನೋಹರ ಮೂರ್ತಿ ಮಂದ-ಮಂದವಾಗಿ ನಗುತ್ತಿತ್ತು.

ರಾಜನು ಹೇಳಿದುದು ಸರಿಯಾಗಿಯೇ ಇದೆ ಎಂದು ಭಕ್ತರಾಜರು ಮನದಲ್ಲಿ ವಿಚಾರಗೈದನು. ನಾನಾದರೋ ಭಗವಂತನ ವಿಶ್ವಾಸದಿಂದ ಕುಳಿತಿರುವೆನು, ಆದರೆ ಅವನೇನು ವಿಚಾರ ಮಾಡುತ್ತಿದ್ದಾನೋ ತಿಳಿಯದು. ಏನು ಇಷ್ಟರವರೆಗೂ ಅವನು ನಿದ್ದೆಯಲ್ಲಿ ಮಗ್ನನಾಗಿ ಮಲಗಿರಬಹುದೆ ? ಅಥವಾ ಈ ಪ್ರೇಮಯಜ್ಞದಲ್ಲಿ ಅವನು ನನ್ನ ಬಲಿದಾನವನ್ನು ಬಯಸುತ್ತಿರುವನೇ? ಈ ಪ್ರಕಾರ ಯೋಚಿಸುತ್ತಾ ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿತು. ಅವರು ತಮ್ಮ ಕರತಾಳವನ್ನು ಎತ್ತಿಕೊಂಡು ಕೇದಾರ ರಾಗದಲ್ಲಿ ಪ್ರೇಮಪೂರ್ಣ ಭಜನೆ ಹಾಡತೊಡಗಿದರು. ಆ ಭಜನೆಯ ಭಾವ ಇಂತಿತ್ತು.

ದಯಾಮಯ ದೇವಾ ! ಏನು ನಿನ್ನ ಪ್ರೀತಿಯ ಫಲವು ಇದೇ ಸಿಗುವುದೇ? ಆದರೆ ನನ್ನ ಕೊರಳಿಗಿಂತ ನಿನ್ನ ಕೀರ್ತಿಯ ಬೆಲೆ ಹೆಚ್ಚಾಗಿದೆ ಎಂಬುದು ನನ್ನ ನಿಶ್ಚಯವಾಗಿದೆ. ಭಗವಂತಾ ! ಶಾಸ್ತ್ರ-ಪುರಾಣಗಳಲ್ಲಿ ನಿನ್ನ ಮಹಾನ್ ಉದಾರತೆಯನ್ನು ತೋರಿಸುತ್ತ ಹೇಳಲಾಗಿದೆ-ನೀನು ಒಂದು ಮುಷ್ಟಿ ಅವಲಕ್ಕಿಯ ಬದಲಿಗೆ ಸುದಾಮನಿಗೆ ರತ್ನ ಮಹಲನ್ನು ನಿರ್ಮಿಸಿಕೊಟ್ಟೆ; ಒಂದು ನೂಲಿನ ಬದಲಿಗೆ ದ್ರೌಪದಿಗೆ ೯೯ ಸೀರೆಗಳನ್ನು (ಅಕ್ಷಯಾಂಬರವನ್ನು) ಕರುಣಿಸಿ ಅವಳ ಮಾನವನ್ನು ಕಾಯ್ದೆ; ಕುಬ್ಜೆಯ ಚಂದನವನ್ನು ಸ್ವೀಕರಿಸಿ ಅವಳನ್ನು ಅನುಪಮ ಸುಂದರಿಯಾಗಿಸಿದೆ ಮತ್ತು ಗೋಪ ಬಾಲಕರ ಗೋವರ್ಧನ ಯಜ್ಞವನ್ನು ಸ್ವೀಕರಿಸಿ ಅವರ ರಕ್ಷಣೆಗಾಗಿ ಏಳು ದಿನಗಳವರೆಗೆ ತನ್ನ ಕಿರುಬೆರಳ ಮೇಲೆ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದಿದ್ದೆಯಂತೆ. ಹಾಗಿರುವಾಗ ನನಗಾಗಿ ಈ ಪುಷ್ಪಹಾರಕ್ಕಾಗಿ ಕೃಪಣನಾದೆಯಾ ? ಪ್ರಭೋ !

ಪರಮಾತ್ಮಾ ! ರಾಜನು ಹೇಳುವುದು ಸರಿಯಾಗಿದೆ ; ಶರತ್ತು ಪೂರ್ಣವಾಗುವುದರಿಂದ ಕೆಲಸವಾದೀತು ; ಅಲ್ಲದೆ ಈ ಕಾರ್ಯದಲ್ಲಿ ನೀನು ವಿಳಂಬ ಮಾಡಿದರೆ ಮಾಂಡಲೀಕರ ಖಡ್ಗದಿಂದ ನನ್ನ ಮೃತ್ಯುವಾಗುವುದು. ಆದರೆ ಸ್ವಾಮಿ ! ನಾನು ಮೃತ್ಯುವಿಗೆ ಹೆದರಿ ನಿನ್ನನ್ನು ಪ್ರಾರ್ಥಿಸುತ್ತಿಲ್ಲ ನಾನು ಹೆದರುವುದು ನಿನ್ನ ಅಪಕೀರ್ತಿಗೆ. ಒಂದು ವೇಳೆ ಶರತ್ತು ಪೂರ್ಣವಾಗದಿದ್ದರೆ ಹಿಂದಿನಿಂದ ಜಗತ್ತು ನಿನ್ನ ಬಗ್ಗೆ ನಗುವರು-ನರಸೀ ಮೆಹತಾನ ದೃಢಸಂಕಲ್ಪದ ಫಲ ಇಷ್ಟೇ ಆಯಿತು.

ಆದರೆ ಮದನ ಮೋಹನಾ ! ನಾನು ಮರೆಯುತ್ತಿದ್ದೇನೆ. ಇದಾದರೋ ನಾನು ತನ್ನ ಕರ್ಮಗಳ ಫಲವನ್ನು ಭೋಗಿಸುತ್ತಿದ್ದೇನೆ. ಇದರಲ್ಲಿ ಖಂಡಿತವಾಗಿ ನಿನ್ನ ದೋಷವಿಲ್ಲ. ಆದರೂ ಸ್ವಾಮಿ ! ನಿನ್ನಲ್ಲದೆ ಬೇರೆಯಾರನ್ನು ಕರೆಯಲಿ? ನನ್ನಂತಹವರು ನಿನಗೆ ತುಂಬಾ ಸೇವಕರು ಅವಶ್ಯವಾಗಿದ್ದಾರೆ; ಆದರೆ ನರಸೀ ಮೆಹತಾನಿಗೆ ನೀನೊಬ್ಬನೇ ಪತಿಯಾಗಿರುವೆ. ಪ್ರಾಣವೇ ಬೇಕಾದರೆ ಹೋಗಲಿ, ಅವನು ಬೇರೆ ಪತಿಯನ್ನು ಹೇಗೆ ಆಶ್ರಯಿಸಬಲ್ಲನು ? ನನ್ನ ಪ್ರಾಣಗಳನ್ನು ರಕ್ಷಿಸು ಅಥವಾ ರಕ್ಷಿಸದಿರು, ನಾನಾದರೋ ನೀನಲ್ಲದೆ ಬೇರೆ ಯಾವ ಪತಿಯ ಸೇವೆಯನ್ನು ಸ್ವೀಕರಿಸಲಾರೆನು. ಮತ್ತು ತನ್ನ ಪ್ರಿಯ ಜನರು ಬೇರೆ ಪತಿಯೊಂದಿಗೆ ರಮಣ ಮಾಡುವುದನ್ನು ನೋಡುವ ನಿರ್ಲಜ್ಜಪತಿ ಯಾರಿರಬಹುದು ?

ದಯಾಳು ದಾಮೋದರಾ ! ಹೇಗಾದರೂ ಈ ನರಸೀಮೆಹತಾ ನಿಮ್ಮವನೇ ಆಗಿರುವನು. ಅವನನ್ನು ಬೇಕಾದರೆ ಕೊಲ್ಲು ಅಥವಾ ಬದುಕಿಸು.

ಸರಿ, ಭಕ್ತವತ್ಸಲ ಭಗವಂತನು ಇದರಿಂದ ಹೆಚ್ಚಾಗಿ ಪ್ರೇಮೋಪಾಲಂಭನವನ್ನು ಹೇಗೆ ಸಹಿಸಬಲ್ಲನು ? ಆ ಪರೀಕ್ಷಕನು ಇನ್ನು ಹೆಚ್ಚು ಪರೀಕ್ಷಿಸುವುದು ಉಚಿತ ವಲ್ಲವೆಂದು ತಿಳಿದನು. ಅತ್ತ ಆಗಸದಲ್ಲಿ ಯಾವಾಗ ಭಗವಾನ್ ಭುವನ ಭಾಸ್ಕರನು ತನ್ನ ವರೇಣ್ಯಭರ್ಗದ ಮೊದಲ ಕಿರಣ ತೋರಿದಾಗಲೇ ಇತ್ತ ಅರಮನೆಯಲ್ಲಿ ಮಂದಿರದ ಬಾಗಿಲಿನ ಗಟ್ಟಿಮುಟ್ಟಾದ ಕಬ್ಬಿಣದ ಸಂಕೋಲೆ ಮತ್ತು ಬೀಗ ಮುರಿದು ಡಬ್ಬನೆ ನೆಲಕ್ಕೆ ಬಿತ್ತು. ಬಾಗಿಲು ತನ್ನಿಂದ ತಾನೇ ತೆರೆದುಕೊಂಡಿತು. ಒಂದು ದಿವ್ಯ ಜ್ಯೋತಿಯು ಮಂದಿರದಿಂದ ಹೊರಬಂದು ಭಕ್ತರಾಜರತ್ತ ಹೊರಟಿತು. ಅಲ್ಲಿ ನೆರೆದ ಎಲ್ಲ ಜನರು ಕಣ್ಣು ಬಿಟ್ಟು ಆಶ್ಚರ್ಯದಿಂದ ಈ ಅಲೌಕಿಕ ದೃಶ್ಯವನ್ನು ನೋಡತೊಡಗಿದರು.

ಭಕ್ತರಾಜರ ಬಳಿಗೆ ತಲುಪುತ್ತಿರುವಂತೆ ಆ ಜ್ಯೋತಿಮಂಡಲದೊಳಗೆ ಭಗವಾನ್ ಮುರಳೀಮನೋಹರನ ಕಾಂತಿಯುಕ್ತ ಸ್ವರೂಪ ಕಂಡು ಬಂತು ಮತ್ತು ಭಗವಂತನು ಎಲ್ಲರೂ ನೋಡುತ್ತಿರುವಂತೆ ತನ್ನ ಕಂಠದಲ್ಲಿದ್ದ ಪುಷ್ಪಹಾರವನ್ನು ತೆಗೆದ ಭಕ್ತರಾಜನ ಕುತ್ತಿಗೆಯಲ್ಲಿ ತೊಡಿಸಿದನು. ಹಾರವು ಕತ್ತಿಗೆ ಬೀಳುತ್ತಿರುವಂತೆ ಭಕ್ತರಾಜನು ಗಟ್ಟಿಯಾಗಿ ಹೇಳಿದನು - ಭಗವಾನ್ ಶ್ರೀಕೃಷ್ಣಚಂದ್ರನಿಗೆ ಜಯವಾಗಲೀ.

ಭಕ್ತ ಮತ್ತು ಭಗವಂತ

ಭಕ್ತನ ಮುಂದೆ ಭಗವಂತನು ಪ್ರಕಟನಾದಾಗ ಭಕ್ತನ ಸ್ಥಿತಿ ಹೇಗಿರುತ್ತದೆ ಇದರ ವರ್ಣನೆ ಯಾರು ಮಾಡಬಲ್ಲರು? ಭಕ್ತರಾಜರು ತಮ್ಮ ಕಣ್ಣುಗಳಿಂದ ಆ ಮಂಗಳಮಯ ದಿವ್ಯ ರೂಪ ರಸವನ್ನು ಪಾನ ಮಾಡತೊಡಗಿದರು. ಅದರಿಂದಲೂ ತೃಪ್ತಿಯಾಗದಿದ್ದಾಗ ಭಗವಂತನ ಚರಣಕಮಲಗಳನ್ನು ಅಪ್ಪಿಕೊಂಡರು.

ಭಗವಂತನು ನಗುತ್ತ ಪ್ರೇಮ ತುಂಬಿದ ದನಿಯಲ್ಲಿ ಹೇಳಿದನು- ನರಸೀಮೆಹತಾ ! ಇಂದು ನಾನು ವಿನೋದವಶನಾಗಿ ನಿನಗೆ ತುಂಬಾ ಹೆಚ್ಚು ದುಃಖಕೊಟ್ಟೆ.

ಹೇ ಕೃಪಾನಿಧಾನ ! ಕ್ಷಮಿಸು ನಿನ್ನ ಮಾಯೆಯ ವಶನಾಗಿ ಇನ್ನು ಹೆಚ್ಚು ಈ ಅಸಾರ-ಸಂಸಾರದಲ್ಲಿ ಇರಲು ನಾನು ಬಯಸುವುದಿಲ್ಲ. ಸ್ವಾಮಿ ! ಈ ಜಗತ್ತಿನಲ್ಲಿ ಮೋಸಗಾರರು, ಕುಟಿಲರು, ಅನ್ಯಾಯಿಗಳು ಮತ್ತು ನಾಸ್ತಿಕ ಜನರಿಗೆ ಸ್ಥಾನಕೊಡುವುದೇ ಉಚಿತವಾಗಿದೆ. ಯಾವ ಪ್ರಕಾರ ಎತ್ತಿನಗಾಡಿಯ ಕೆಳಗೆ ನಡೆಯುವ ನಾಯಿಯು ಗಾಡಿಯ ಹೊರೆಯು ನನ್ನ ಮೇಲೆಯೇ ಇದೆ ಎಂದು ತಿಳಿದುಕೊಂಡು ನಡೆಯುತ್ತಿರುತ್ತದೋ ಅದೇ ರೀತಿ ಇಲ್ಲಿ ಸಮಸ್ತ ಪ್ರಾಣಿಗಳು ತಮ್ಮ ಅಭಿಮಾನಕ್ಕೆ ವಶರಾಗಿ ಜಗತ್ತಿನ ಎಲ್ಲ ಭಾರವನ್ನು ತನ್ನ ಮೇಲೆ ತಿಳಿದುಕೊಂಡು ನಾನಾ ಪ್ರಕಾರದ ದುಃಖಗಳನ್ನು ಭೋಗಿಸುತ್ತಿದ್ದಾರೆ. ನಾನಾದರೋ ಈ ವಿಥ್ಯಾ ಜಗತ್ತಿನಿಂದ ಬೇಸರ ಗೊಂಡಿರುವೆ. ನನಗೆ ಈ ಅಯೋಗ್ಯವಾದ ಜಗತ್ತಿನಿಂದ ಯಾವುದೇ ಪ್ರಯೋಜನವಿಲ್ಲ. ನಾನಾದರೋ ನಿನ್ನ ಚರಣವಲ್ಲದೆ ಬ್ರಹ್ಮ ಪದವನ್ನೂ ಕೂಡ ಬಯಸುವುದಿಲ್ಲವೆಂದು ಗದ್ಗದಿತನಾಗಿ ಭಕ್ತರಾಜರು ಪ್ರಾರ್ಥಿಸಿಕೊಂಡರು.

ಭಕ್ತರಾಜಾ ! ಪ್ರೇಮಮಗ್ನನಾಗಿ ಈ ಸರಸ ಪ್ರಪಂಚಕ್ಕೆ ದೋಷ ಕೊಡುವುದು ಉಚಿತವಲ್ಲ. ಹಿಂದಿನ ಕಾಲದಲ್ಲಿ ಭಕ್ತಬಾಲಕ ಪ್ರಹ್ಲಾದ, ತಪಸ್ವೀ ಬಾಲಕ ಧ್ರುವ, ರಾಜಾ ಅಂಬರೀಷ, ಮಹಾತ್ಮಾವಿದುರ, ಭಕ್ತಿಮತಿಯರಾದ ಗೋಪಾಂಗನೆಯರು ಮೊದಲಾದ ಎಲ್ಲ ಭಕ್ತರೂ ಇದೇ ಜಗತ್ತಿನಲ್ಲಿದ್ದು ನನ್ನನ್ನು ಪಡೆದು ಕೊಂಡಿದ್ದರು. ಮಗು ! ನನ್ನನ್ನು ಪಡೆದುಕೊಳ್ಳಲು ಅರಣ್ಯವಾಸ, ತೀವ್ರ ತಪಶ್ಚರ್ಯ ಮೊದಲಾದ ಯವುದರ ಮುಖ್ಯ ಆವಶ್ಯಕತೆಯೂ ಇಲ್ಲ.

ಮಹಾಭಾರತದಲ್ಲಿ ಹೇಳಲಾಗಿದೆ —

ವನೇಽಪಿ ದೋಷಾಃ ಪ್ರಭವಂತಿ ರಾಗಿಣಾಂ
ಗೃಹೇಽಪಿ ಪಂಚೇಂದ್ರಿಯನಿಗ್ರಹಸ್ತಪಃ ।
ಅಕುತ್ಸಿತೇ ಕರ್ಮಣಿ ಯಃ ಪ್ರವರ್ತತೇ
ನಿವೃತ್ತರಾಗಸ್ಯ ಗೃಹಂ ತಪೋವನಮ್ ॥

ಕಾಮ-ಕ್ರೋಧಾದಿ ಷಡ್‌ವಿಕಾರಗಳಲ್ಲಿ ಸಿಲುಕಿರುವ ವಿರಾಗೀ ವನವಾಸಿಗಳಿಗಿಂತ, ಸಂಸಾರದಲ್ಲಿದ್ದು ಪಂಚೇಂದ್ರಿಯಗಳನ್ನು ನಿಗ್ರಹಿಸುವ ತಪಸ್ವೀ ಗೃಹಸ್ಥನೇ ಹೆಚ್ಚು ಉತ್ತಮನಾಗಿದ್ದಾನೆ. ಹಾಗಿರುವಾಗ ಸಂಸಾರವನ್ನು ತ್ಯಜಿಸಿ ನನ್ನನ್ನು ಪ್ರಸನ್ನ ಗೊಳಿಸುವವನಿಗಿಂತ, ಸಂಸಾರದಲ್ಲಿದ್ದು ನನ್ನಲ್ಲಿ ಪ್ರೇಮವಿಡುವ ಭಕ್ತನು ನನಗೆ ಹೆಚ್ಚು ಪ್ರಿಯನಾಗಿದ್ದಾನೆ ಎಂಬುದು ಸಿದ್ಧವಾಗುತ್ತದೆ. ಆದುದರಿಂದ ಇದರಿಂದ ಓಡಿಹೋಗುವ ಪ್ರಯತ್ನವನ್ನು ಮಾಡಬಾರದು. ಈ ಪ್ರಕಾರ ಭಗವಂತನು ಸಂಸಾರದ ಮಹತ್ವವನ್ನು ತೋರಿಸುತ್ತಾ ಹೇಳಿದನು.

ಆದರೆ ಭಗವಂತಾ ! ನಾನಾದರೋ ಜಗತ್ತಿನಲ್ಲಿದ್ದು ಭಕ್ತಿಮಾಡಿಯೂ ನಿನಗೆ ಸದಾಕಾಲ ನನ್ನ ಸಂಸಾರಿಕ ಕಾರ್ಯಗಳಿಗಾಗಿ ಕಷ್ಟಕೊಡುತ್ತಾ ಇದ್ದು, ಈ ರೀತಿ ದೋಷಭಾಗಿ ಆಗುತ್ತಾ ಇದ್ದೇನೆ. ಈ ವಿಷಯಕ್ಕಾಗಿ ನನಗೆ ತುಂಬಾ ಪಶ್ಚಾತ್ತಾಪವಾಗುತ್ತದೆ ಎಂದು ಭಕ್ತರಾಜರು ನಿವೇದಿಸಿಕೊಂಡರು.

ಮಗು ! ನಾನು ನಿನ್ನ ಯಾವ ದುಷ್ಕರ ಕಾರ್ಯ ಮಾಡಿರುವೆ ? ಈ ಸಣ್ಣ -ಪುಟ್ಟ ಕಾರ್ಯಗಳನ್ನು ಮಾಡಿ ನಿನ್ನ ಭಕ್ತಿಯ ಸಾಲತೀರಿಸಬಹುದೇ? ನೀನಾದರೋ ನಿನ್ನ ತನು, ಮನ, ಧನ ಅಲ್ಲದೆ ತನ್ನ ಸರ್ವಸ್ವವನ್ನೂ ನನಗಾಗಿ ನಿವಾಳಿಸಿ ನನ್ನ ಭಜನೆ ಮಾಡಿದ್ದೀಯೆ. ಪ್ರಾಣಹೋಗುವ ಸಂದರ್ಭ ಬಂದೊದಗಿ ದಾಗಲೂ ನೀನು ನನ್ನ ಭಜನೆಯಿಂದ ವಿಚಲಿತನಾಗುವುದನ್ನು ಮೆಚ್ಚಲಿಲ್ಲ, ಇದಕ್ಕೆ ಬದಲಾಗಿ ನಾನು ಏನು ಮಾಡಿರುವೆ ? ನಿನ್ನ ಪುತ್ರನ ವಿವಾಹ, ತಂದೆಯ ಶ್ರಾದ್ಧ, ಮಗಳ ಬಳುವಳಿ ಮತ್ತು ಒಂದು ಕಾಸಿನ ತುಚ್ಛವಾದ ಈ ಮಾಲೆ ಇದಕ್ಕಾಗಿ ಏನು ನೀನು ಹೀಗೆ ಹೇಳುತ್ತಿರುವೆಯಾ ? ಈ ಕಾರ್ಯವಾದರೋ ಓರ್ವ ಸಾಧಾರಣ ಶ್ರೀಮಂತನೂ ಮಾಡಬಲ್ಲನು. ಭಕ್ತರಾಜಾ ! ಈ ತುಚ್ಛವಾದ ಕಾರ್ಯಗಳನ್ನು ನೆರವೇರಿಸಿ ನಾನು ನಿನ್ನ ಬಹುಮೂಲ್ಯ ಭಕ್ತಿಯ ಒಂದು ಶತಾಂಶವನ್ನೂ ವಿನಿಮಯವಾಗಿಸಲಾರೆನು. ಏನು ಮಾಡಲಿ, ನನಗೆ ನನ್ನ ಭಕ್ತರ

ಸಾಲಗಾರನಾಗಿರುವುದರಲ್ಲೇ ಸಂತೋಷ ಸಿಗುತ್ತದೆ. ಭಕ್ತಿಯ ವಿನಿಮಯಗೈದು ನಾನು ಅದರ ಮಹತ್ವವನ್ನು ಕಡಿಮೆಮಾಡಲು ಬಯಸುವುದಿಲ್ಲವೆಂದು ಭಗವಂತನು ಉದಾರತೆಯಿಂದ ಹೇಳಿದನು.

ಆದರೆ ಸ್ವಾಮಿ ! ನಾನು ನಿನ್ನ ಚರಣರಜವನ್ನು ನಿತ್ಯ ಧಾರಣೆ ಮಾಡುವಂತಹ ಸಮಯ ಎಂದು ಬಂದೀತು ? ಎಂದು ಭಕ್ತರಾಜರು ನಿರಾಶರಾಗಿ ಕೇಳಿದರು.

ಮಗು ! ನಾನು ನಿನಗೆ ಈ ಮನುಷ್ಯದೇಹವು ನಿನ್ನ ಇಚ್ಛೆಯಿಂದಲೇ ಕೊಟ್ಟಿರುವೆನು. ನನ್ನ ಮಾಯೆಯ ಆವರಣ ಬಿದ್ದಿರುವುದರಿಂದ ನೀನು ಆ ಮಾತನ್ನು ಮರೆತಿರುವೆ. ನಾನು ನಿನಗೆ ನೆನಪುಮಾಡಿ ಕೊಡುತ್ತಿದ್ದೇನೆ. ನೀನು ಹಿಂದಿನ ಜನ್ಮದಲ್ಲಿ ಭೀಷಣ ದೇವಾಸುರರ ಸಂಗ್ರಾಮದಲ್ಲಿ ವಿಜಯ ಮಾಲೆಯನ್ನು ಧರಿಸುವಂತಹ ಮಾಂಧಾತಾ ಪುತ್ರ ಮುಚುಕುಂದ ಎಂಬರಾಜನಾಗಿದ್ದೆ. ಇದೇ ಗಿರಿನಾರ ಪ್ರದೇಶಾಂತರ್ಗತ ಮುಚುಕುಂದ * ಗುಹೆಯಲ್ಲಿ ನಾನು ಕಾಲಯವನನ ನೆಪಮಾಡಿ ನಿನಗೆ ದರ್ಶನ ಕೊಟ್ಟಿದ್ದೆ. ನಾನು ಪ್ರಸನ್ನನಾದಾಗ ನೀನು ಮೋಕ್ಷವನ್ನು ಕೇಳಿಕೊಂಡಿದ್ದರೆ ನೀನು ಈ ಆಪತ್ತಿನಲ್ಲಿ ಖಂಡಿತವಾಗಿ ಬೀಳುತ್ತಿರಲಿಲ್ಲ. ಆದರೆ ನನ್ನ ಹತಮಾರಿ ಭಕ್ತರಾದರೋ ಮೋಕ್ಷವನ್ನೂ ತುಚ್ಛವೆಂದೇ ತಿಳಿಯುತ್ತಾರೆ. ಇದರಿಂದ ನೀನು ಹೇಳಿದೆ –

ನ ಕಾಮಯೇಽನ್ಯಂ ತವ ಪಾದಸೇವನಾ-
ದಕಿಂಚನ ಪ್ರಾರ್ಥ್ಯತಮಾದ್ ವರಂ ವಿಭೋ ।
ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ
ವೃಣೀತ ಆರ್ಯೋ ವರಮಾತ್ಮಬಂಧನಮ್ ॥

(ಶ್ರೀಮದ್ಭಾಗವತ ೧೦/೫೧/೫೬)

ಹೇ ವಿಭೋ ! ಅಕಿಂಚನರ ಪರಮ ಪ್ರಾರ್ಥನೀಯ ನಿನ್ನ ಚರಣಗಳ ಸೇವೆಯಲ್ಲದೆ ಬೇರೆ ಯಾವುದೇ ವಸ್ತುವನ್ನು ನಾನು ಇಚ್ಛಿಸುವುದಿಲ್ಲ. ಹೇ ಹರೇ ! ಮೋಕ್ಷಕೊಡುವಂತಹ ನಿನ್ನ ಆರಾಧನೆ ಮಾಡಿ ಯಾವ ಸತ್ಪುರುಷನು ತನಗಾಗಿ ಬಂಧನರೂಪೀ ವರವನ್ನು ಕೇಳಬಲ್ಲನು?

ಹಾಗಿರುವಾಗ ನಾನು ನಿನ್ನ ಇಚ್ಛೆಯ ವಿರುದ್ಧವಾದ ವರದಾನವನ್ನು ಹೇಗೆ

* ಮುಚುಕುಂದ ಗುಹೆಯೂ ಇಂದೂ ಕೂಡಾ ಗಿರಿನಾರ ಪ್ರದೇಶಾಂತರ್ಗತ ದಮೋದರ ಕುಂಡದ ಬಳಿಯಲ್ಲಿದೆ. ಈ ಸ್ಥಾನವು ತುಂಬಾ ರಮ್ಯ ಮತ್ತು ಏಕಾಂತ ವಾಸ, ತಪಶ್ಚರ್ಯಕ್ಕೆ ಯೋಗ್ಯವಾಗಿದೆ.

ಕೊಡುತ್ತಿದ್ದೆ ? ನಾನು ಹೇಳಿದೆ —

ಕ್ಷಾತ್ರಧರ್ಮಸ್ಥಿತೋ ಜಂತೂನ್ ನ್ಯವಧೀರ್ಮೃಗಯಾದಿಭಿಃ ।
ಸಮಾಹಿತಸ್ತತ್ತಪಸಾ ಜಹ್ಯಘಂ ಮದುಪಾಶ್ರಿತಃ ॥೬೩॥
ಜನ್ಮನ್ಯನಂತರೇ ರಾಜನ್ ಸರ್ವಭೂತಸುಹೃತ್ತಮಃ ।
ಭೂತ್ವಾ ದ್ವಿಜವರಸ್ತ್ವಂ ವೈ ಮಾಮುಪೈಷ್ಯಸಿ ಕೇವಲಮ್ ॥೬೪॥

ಅರ್ಥಾತ್ – ಕ್ಷತ್ರಿಯ ಧರ್ಮದಲ್ಲಿದ್ದುಕೊಂಡು ನೀನು ಮೃಗಯಾದಿಗಳ ಮೂಲಕ ಅನೇಕ ಜೀವಿಗಳ ವಧೆ ಮಾಡಿರುವೆ, ಅದಕ್ಕಾಗಿ ಈಗ ಸಮಾಧಿನಿಷ್ಠ ತಪದಿಂದ ಮತ್ತು ನನ್ನ ಆಶ್ರಿತನಾಗಿ ಆ ಪಾಪಗಳ ನಾಶಮಾಡು. ಹೇ ರಾಜನೇ! ಮುಂದಿನ ಜನ್ಮದಲ್ಲಿ ನೀನು ಎಲ್ಲ ಭೂತರ ಹಿತಕಾರಿ ಬ್ರಾಹ್ಮಣ ಶ್ರೇಷ್ಠನಾಗಿ ಏಕಮಾತ್ರ ನನ್ನನ್ನೇ ಪಡೆಯುವೆ.

ಆ ಕ್ಷಾತ್ರಧರ್ಮದಲ್ಲಿ ಇದ್ದು ಮಾಡಿದ ಪಾಪಗಳನ್ನು ತಪಶ್ಚರ್ಯೆಯಿಂದ ನಾಶಮಾಡಿಸಿ, ನಾನು ನಿನಗೆ ಈ ಉತ್ತಮ ನಾಗರಕುಲದಲ್ಲಿ ಜನ್ಮವನ್ನು ಕೊಟ್ಟಿರುವೆನು.

ಭಕ್ತರಾಜಾ ! ಇನ್ನು ಈ ಜಗತ್ತಿನಲ್ಲಿ ನೀನು ಐದು ವರ್ಷಗಳವರೆಗೆ ಇದ್ದು ಜಗತ್ತಿನಲ್ಲಿ ನನ್ನ ಭಕ್ತಿಯ ಪ್ರಚಾರ ಕಾರ್ಯವನ್ನು ಮಾಡು. ಇಂದಿನಿಂದ ಯಾವುದೇ ಆಪತ್ತು ನಿನಗೆ ಬರಲಾರದು. ನಿನ್ನ ಈ ಜನ್ಮದ ಕೊನೆಯ ನನ್ನ ದರ್ಶನದಿಂದ ನಿನ್ನ ಮೇಲೆ ಸರಸ್ವತಿಯ ಕೃಪೆ ಉಂಟಾಗುವುದು. ನಿನ್ನ ಈ ಪಾಂಚಭೌತಿಕ ಶರೀರವು ಅಂತ್ಯವಾಗುವವರೆಗೆ ನೀನು ಸ್ವಾನುಭವದ ಆಧಾರದಿಂದ ಭಕ್ತಿಪೂರ್ಣ ಪದಗಳ ರಚನೆ ಮಾಡು. ಇದೇ ನನ್ನ ಸೇವೆ ಯಾಗಿದೆ. ಈ ಪ್ರಕಾರ ಭಗವಂತನು ತಿಳಿಸಿ ಕೊನೆಯ ಆದೇಶವನ್ನು ಹೇಳಿದನು.

ಭಕ್ತರಾಜನು ಭಗವತ್ ಆದೇಶವನ್ನು ಶಿರಸಾವಹಿಸಿ, ಅವನ ಚರಣಗಳಲ್ಲಿ ಪುನಃ ದಂಡವತ್ ನಮಸ್ಕರಿಸಿದನು. ಅವನು ಎಷ್ಟು ಹೊತ್ತು ಈ ರೀತಿ ಬಿದ್ದು ಕೊಂಡಿದ್ದರೋ ಅದರ ಅರಿವು ಅವರಿಗಿರಲಿಲ್ಲ. ಸ್ವತಃ ರಾಜರು ಯಾವಾಗ ಎಚ್ಚರಿಸಿದರೋ ಆಗ ಶ್ಯಾಮ ಸುಂದರನ ತೇಜೋಸ್ವರೂಪ ಅದೃಶ್ಯವಾಗಿತ್ತು. ಭಕ್ತ ಮತ್ತು ಭಗವಂತರ ವಾರ್ತಾಲಾಪದ ಧ್ವನಿಯಿಂದ ಅಲ್ಲಿಯ ಆಕಾಶ ಪ್ರತಿಧ್ವನಿಸುತ್ತಿತ್ತು.

ಅಂತಿಮ ಸ್ಥಿತಿ

ಭಗವಂತನ ದರ್ಶನದಿಂದ ಸಾರಂಗಧರ, ವಂಶೀಧರ ಹಾಗೂ ಅನಂತರಾಯ ಮೊದಲಾದ ಎಲ್ಲ ವಿಪಕ್ಷೀಯರ ಹೃದಯದ ಅಜ್ಞಾನನಾಶವಾಯಿತು. ಅವರೊಳಗೆ ಭಕ್ತಿಭಾವದ ಪ್ರಾದುರ್ಭಾವವಾಯಿತು. ಅವರು ಭಕ್ತರಾಜನೊಂದಿಗೆ ಮಾಡಿದ ದ್ರೋಹದಿಂದ ಅವರಿಗೆ ತುಂಬಾ ಪಶ್ಚಾತ್ತಾಪವಾಯಿತು. ಅವರು ತುಂಬಾ ನಮ್ರತೆಯಿಂದ ಭಕ್ತರಾಜನಲ್ಲಿ ನಿವೇದಿಸಿಕೊಂಡರು – ನರಸೀಮೆಹತಾರವರೇ ! ನಿಮ್ಮಂತಹ ಭಗವಂತನ ಪ್ರಿಯಭಕ್ತರನ್ನು ವ್ಯರ್ಥವಾಗಿ ಕಲಂಕಿತರಾಗಿಸಲು ನಾವು ಗೈದ ಪ್ರಯತ್ನದಿಂದ ನಾವುಗಳು ತುಂಬಾ ಲಜ್ಜಿತರಾಗಿದ್ದೇವೆ. ನಿಮ್ಮನ್ನು ದುಃಖಿಯಾಗಿಸಿದ ಮಹಾ ಅಪರಾಧದಿಂದ ನಮ್ಮಗಳಿಗೆ ನರಕದಲ್ಲಿಯೂ ಜಾಗ ಸಿಗುವುದು ಕಷ್ಟವಾಗಿದೆ. ನೀವು ದಯವಿಟ್ಟು ನಮ್ಮ ಅಪರಾಧಗಳನ್ನು ಕ್ಷಮಿಸಿಬಿಡಿ.

ಭಕ್ತರಾಜನು ಸರಳತೆಯಿಂದ ಹೇಳಿದನು–ಬಂಧುಗಳೇ ! ನಿಜವಾದ ಪಶ್ಚಾತ್ತಾಪದ ಮೂಲಕ ಭಜನೆ ಮಾಡುವುದರಿಂದ ಹಿಂದೆ ಮಾಡಿದ ಸಂಚಿತ-ಪ್ರಾರಬ್ಧ, ಸಮಸ್ತ ಪಾಪಗಳು ನಾಶವಾಗುತ್ತವೆ. ಇಂದಿನಿಂದ ನೀವುಗಳೂ ಕೂಡ ಪಾಪಕರ್ಮಗಳಿಂದ ದೂರವಿದ್ದು ಪ್ರೀತಿಪೂರ್ವಕ ಭಗವದ್ಭಜನೆ ಮಾಡಿರಿ, ನಿಮ್ಮಗಳ ಶ್ರೇಯಸ್ಸು ಖಂಡಿತವಾಗಿ ಆಗುವುದು. ನಿಮಗೆ ಉಪದೇಶ ಕೊಡುವ ಯೋಗ್ಯತೆ ನನಗಿಲ್ಲ. ಆದರೆ ಪ್ರೇವವಶನಾಗಿ ಇಷ್ಟು ನಿವೇದಿಸಿಕೊಳ್ಳುವೆ.

ಭಕ್ತರಾಜರ ನಮ್ರತೆ, ನಿರಭಿಮಾನತೆ ಹಾಗೂ ಭಗವಂತನ ಭಕ್ತಿಯ ಪ್ರಭಾವ ಎಲ್ಲರ ಮೇಲೆ ಆಳವಾಗಿ ಬಿತ್ತು. ಎಲ್ಲ ಜನರೂ ಅವರ ಪ್ರಶಂಸೆ ಮಾಡುತ್ತಾ ತಮ್ಮ-ತಮ್ಮ ಮನೆಗಳಿಗೆ ತೆರಳಿ, ಅದೇ ದಿನದಿಂದ ಭಗವದ್ಭಜನೆಯಲ್ಲಿ ಅನುರಾಗ ವಿರಿಸತೊಡಗಿದರು.

ರಾಜಾ ಮಾಂಡಲೀಕನಲ್ಲಿಯೂ ಕೂಡ ಭಕ್ತರಾಜರ ಬಗ್ಗೆ ತುಂಬಾ ಶ್ರದ್ಧೆ-ಭಕ್ತಿ ಹೆಚ್ಚಾಯಿತು. ಅವರು ನರಸೀ-ಮೆಹತಾರವರ ದೊಡ್ಡ ಸತ್ಕಾರಮಾಡಿದರು ಮತ್ತು ಭಜನಮಂಡಳಿಯ ಜೊತೆ ಮೆರವಣಿಗೆಯೊಂದಿಗೆ ಆದರ ಪೂರ್ವಕವಾಗಿ ಕಳಿಸಿಕೊಟ್ಟರು. ಆ ದಿನದಿಂದ ರಾಜನು ಭಕ್ತರಾಜನ ಮನೆಯಲ್ಲಿ ಅನ್ನಛತ್ರವನ್ನು ಏರ್ಪಡಿಸಿದನು. ಅಲ್ಲಿ ಅನೇಕ ಹಸಿದ ಜನರಿಗೆ ದಿನನಿತ್ಯವೂ ಭೋಜನ ದೊರೆಯತೊಡಗಿತು.

ಭಕ್ತರಾಜರು ಅನಂತರ ತುಂಬಾ ಶಾಂತಿಯಿಂದ ಜೀವನ ಕಳೆಯುತ್ತಾ ಭಗವದ್ಭಜನೆ ಮಾಡತೊಡಗಿದರು ಮತ್ತು ಭಗವದಾಜ್ಞೆಎಂದು ತಿಳಿದುಕೊಂಡು ಲೋಕ ಕಲ್ಯಾಣದ ದೃಷ್ಟಿಯಿಂದ ಜ್ಞಾನಭಕ್ತಿಪೂರ್ಣ ಪದಗಳನ್ನು ರಚಿಸತೊಡಗಿದರು. ಅವರ ಸೊಸೆ ಜೂಠೀಬಾಯಿ ಹಾಗೂ ಮಗಳು ಕುಂವರಬಾಯಿಯೂ ಅವರೊಂದಿಗೆ ಇರುತ್ತಿದ್ದರು. ಅವರೂ ಕೂಡ ಭಕ್ತರಾಜರೊಂದಿಗೆ ತಮ್ಮ ಸಂಯಮಪೂರ್ಣ ಅಂತಿಮ ಜೀವನವನ್ನು ಭಗವದ್ಭಜನೆಯಲ್ಲೇ ಕಳೆದರು.

ಈ ಪ್ರಕಾರ ಭಗವಂತನ ಆಜ್ಞೆಯಂತೆ ಐದು ವರ್ಷ ಜೀವನಧಾರಣೆ ಮಾಡಿದ ಬಳಿಕ ಈ ಅಶಾಶ್ವತ ಭೌತಿಕ ದೇಹವನ್ನು ಪರಿತ್ಯಾಗ ಮಾಡಿ ಸಚ್ಚಿದಾನಂದ-ಪರಮಾತ್ಮ ಪದವನ್ನು ಪಡೆದುಕೊಂಡರು. ಐದು ವರ್ಷಗಳಲ್ಲಿ ಅವರು ಸಾವಿರಾರು ಪದಗಳನ್ನು ರಚಿಸಿದರು. ಅವರ ಸ್ಥೂಲ ಶರೀರ ಈಗ ನಮ್ಮ ಮುಂದೆ ಇಲ್ಲದಿದ್ದರೂ ಅವರ ಕಾವ್ಯಮಯ ಕೀರ್ತಿ-ಶರೀರ ಇಂದೂ ಕೂಡಾ ನಮಗೆ ತನ್ನ ಸತ್ಸಂಗದ ಲಾಭವನ್ನು ಕೊಡುತ್ತಿದೆ. ಅವರ ಪದಗಳು ಸಂಸಾರಸಂತಪ್ತ ಮನುಷ್ಯರನ್ನು ಶ್ರೇಯಸ್ಸಿನ ಮಾರ್ಗದಲ್ಲಿ ತಲುಪಿಸಲು ಸದಾಕಾಲ ಸಹಾಯಮಾಡುತ್ತಾ ಬಂದಿದೆ ಮತ್ತು ಮುಂದೆಯೂ ಮಾಡುತ್ತಾ ಇರುವುದು.

॥ ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ ॥

ಭಗವಂತನಿಗೂ ಅವನ ಭಕ್ತರಿಗೂ ಜಯವಾಗಲಿ.

ಖಮಾಜ್ - ಧುಮಾಲೀ

ವೈಷ್ಣವ ಜನ ತೋ ತೇನೇರೆ ಕಹಿಯೇ ।
ಜೇ ಪೀಡ ಪರಾಯೀ ಜಾಣೇ ರೇ
ಪರದುಃಖೇ ಉಪಕಾರ ಕರೇ ತೋಯೇ
ಮನ ಅಭಿಮಾನ ನ ಆಣೇ ರೇ ॥

ಸಕಳ ಲೋಕಮಾ ಸಹುನೇ ವಂದೇ
ನಿಂದಾ ನ ಕರೇ ಕೇನಿ ರೇ
ವಾಚ ಕಾಛ ಮನ ನಿಶ್ಚಲ ರಾಖೇ
ಧನ ಧನ ಜನನೀ ತೇನೀ ರೇ ॥

ಸಮದೃಷ್ಟಿ ನೇ ತೃಷ್ಣಾ ತ್ಯಾಗೀ ।
ಪರಸ್ತ್ರೀ ಜೇನೇ ಮಾತ ರೇ
ಜಿಹ್ವಾ ಥಕೀ ಅಸತ್ಯ ನ ಬೋಲೇ
ಪರಧನ ನವ ಝೂಲೇ ಹಾಥ ರೇ ॥

ಮೋಹ ಮಾಯಾ ವ್ಯಾಪೇ ನಹಿ ಜೇನೇ ।
ದೃಢ ವೈರಾಗ್ಯ ಜೇನಾ ಮನಮಾ ರೇ
ರಾಮನಾಮಶು ತಾಳೀರೇ ಲಾಗೀ
ಸಕಳ ತೀರಥ ತೇನಾ ತನಮಾ ರೇ ॥

ವಣಲೋಭೀನೇ ಕಪಟರಹಿತ ಛೇ ।
ಕಾಮ ಕ್ರೋಧ ನಿವಾರ್ಯಾ ರೇ
ಭಣೇ ನರಸೈಯೋ ತೇನು ದರಶನ ಕರತಾ
ಕುಳ ಏಕೋತೇರ ತಾರ್ಯಾ ರೇ ॥

— ನರಸಿಂಹ ಮೆಹತಾ

ಭಗವತ್ಪ್ರಾಪ್ತಿ

೧. ಭಗವತ್ಪ್ರಾಪ್ತಿಯು ಕಷ್ಟ ಸಾಧ್ಯವೂ ಆಗಿದೆ. ಸುಖಸಾಧ್ಯವೂ ಆಗಿದೆ. ಯಾರು ಕಷ್ಟಸಾಧ್ಯವೆಂದು ತಿಳಿಯುತ್ತಾರೋ ಅವರಿಗೆ ಕಷ್ಟಸಾಧ್ಯವೇ ಆಗಿದೆ. ಯಾರು ಸುಖಸಾಧ್ಯವೆಂದು ತಿಳಿಯುತ್ತಾರೋ ಅವರಿಗೆ ಸುಖಸಾಧ್ಯವೇ ಆಗಿದೆ.

೨. ಭಗವಂತನಲ್ಲಿ ಯಾರಿಗೆ ಶ್ರದ್ಧೆ ಮತ್ತು ಪ್ರೇಮ ಕಡಿಮೆ ಇದೆಯೋ ಅವರಿಗಾಗಿ ಭಗವತ್ಪ್ರಾಪ್ತಿಯು ಕಷ್ಟಸಾಧ್ಯವಾಗಿದೆ ಮತ್ತು ಯಾರಿಗೆ ಭಗವಂತನಲ್ಲಿ ಪ್ರೇಮ ಮತ್ತು ವಿಶ್ವಾಸವು ಹೆಚ್ಚಾಗಿ ಇದೆಯೋ ಅವರಿಗೆ ಭಗವಂತನ ಪ್ರಾಪ್ತಿಯು ಸುಲಭವಾಗಿದೆ.

೩.. ಭಗವತ್ಪ್ರಾಪ್ತಿಯಲ್ಲಿ ಶ್ರದ್ಧೆ ಮತ್ತು ಪ್ರೇಮವೇ ಪ್ರಧಾನವಾಗಿದೆ.

೪. ನಿತ್ಯ ನಿರಂತರ ಚಿಂತೆ ಮಾಡುವ ಭಕ್ತರಿಗಾಗಿಯಾದರೋ ಭಗವಂತನ ಪ್ರಾಪ್ತಿಯು ಸುಲಭ ಹಾಗೂ ಸುಖಸಾಧ್ಯವೇ ಆಗಿದೆ.

೫. ಭಗವಂತನು ತನ್ನ ಪ್ರಾಪ್ತಿಯ ಸುಲಭ ಉಪಾಯವನ್ನು ತನ್ನನ್ನು ನಿರಂತರವಾಗಿ ಚಿಂತನೆ ಮಾಡುವುದನ್ನೇ ತಿಳಿಸಿದ್ದಾನೆ. ಯಾವ ಮನುಷ್ಯನು ಯಾವುದೇ ಕೆಲಸವನ್ನು ಅಸಂಭವಲ್ಲವೆಂದು ತಿಳಿಯುತ್ತಾನೋ, ಅವನಿಗೆ ಕಷ್ಟಸಾಧ್ಯ ಕಾರ್ಯವು ಕೂಡ ಸುಖಸಾಧ್ಯವಾಗುತ್ತದೆ.

೬. ಪುರುಷರಿಗೆ ಪ್ರಯತ್ನ ಸಾಧ್ಯವಾದ ಯಾವುದೇ ಎಂಥಹ ಕಠಿಣಕಾರ್ಯವೇ ಆಗಲೇಕೆ ? ಅದನ್ನು ಅಸಾಧ್ಯವೆಂದು ತಿಳಿಯುವುದು ಬಿಟ್ಟು ಬಿಡುವುದು ತನ್ನ ಹೇಡಿತನ ಮತ್ತು ಮೂರ್ಖತೆಯ ಪರಿಚಯ ಮಾಡಿಕೊಡುವುದೇ ಆಗಿದೆ.

೭. ನೆಪೋಲಿಯನ್‌ನು ಜಗತ್ತಿನ ವಿಜಯಕ್ಕಾಗಿ ಹೇಗೆ ಪ್ರಯತ್ನವನ್ನು ಮಾಡಿದ್ದನೋ, ಹಾಗೆಯೇ ಕಲ್ಯಾಣವನ್ನು ಇಚ್ಛಿಸುವ ಸಹೋದರರಿಗೆ ತುಂಬಾ ಉತ್ಸಾಹದ ಜೊತೆಗೆ ಭಗವತ್ಪ್ರಾಪ್ತಿಗಾಗಿ ತತ್ಪರರಾಗಿ ಸಾಧನೆಯ ಪ್ರಯತ್ನವನ್ನು ಮಾಡಬೇಕು.

— ಸಾಧನ ನವನೀತ ಎಂಬ ಗ್ರಂಥದಿಂದ

ಗೀತಾ ಪ್ರೆಸ್ ಗೋರಖಪುರ (ಉ.ಪ) 273005

(ನಮ್ಮ ಕನ್ನಡ ಪ್ರಕಟನೆಗಳು)

ಪಾರಾಯಣ ಗ್ರಂಥಗಳು

೧ ಶ್ರೀಮದ್ಭಗವದ್ಗೀತೆ (ತತ್ತ್ವವಿವೇಚನೀ ಟೀಕೆ)

೨ ಶ್ರೀಮದ್ಭಗವದ್ಗೀತೆ (ಸಾಧಕ ಸಂಜೀವನೀ ಟೀಕೆ)
(ಎರಡು ಭಾಗಗಳಲ್ಲಿ)

೩ ಶ್ರೀಮದ್ಭಗವದ್ಗೀತೆ (ಶ್ಲೋಕ, ಅನ್ವಯ, ಪದಚ್ಛೇದ, ತಾತ್ಪರ್ಯಸಹಿತ)

೪ ಶ್ರೀಮದ್ಭಗವದ್ಗೀತೆ (ಶ್ಲೋಕ, ತಾತ್ಪರ್ಯ ಸಹಿತ)

೫ ಶ್ರೀಮದ್ಭಗವದ್ಗೀತೆ (ಶ್ಲೋಕ, ತಾತ್ಪರ್ಯ ಸಹಿತ-ಪಾಕೆಟ್ ಸೈಜ್)

೬ ಶ್ರೀಮದ್ಭಗವದ್ಗೀತೆ - ವಿಷ್ಣು ಸಹಸ್ರನಾಮ (ಮೂಲ)

೭ ವಿಷ್ಣು ಸಹಸ್ರನಾಮ (ತಾತ್ಪರ್ಯ, ನಾಮಾವಳಿ ಸಹಿತ)

೮ ವಿಷ್ಣು ಸಹಸ್ರನಾಮ ನಾಮಾವಳಿ ಸಹಿತ (ಮೂಲ)

೯ ಹನುಮತ್ ಸ್ತೋತ್ರಾವಳಿ- ಹನುಮಾನ್ ಚಾಲೀಸಾ

೧೦ ನಿತ್ಯ ಸ್ತುತಿ-ಆದಿತ್ಯ ಹೃದಯ

೧೧ ಶ್ರೀದುರ್ಗಾ ಸಪ್ತ ಶತಿ (ಮೂಲ)

೧೨ ಶ್ರೀಲಲಿತಾ ಸಹಸ್ರನಾಮ ಸ್ತೋತ್ರ-ನಾಮಾವಳಿ ಸಹಿತ

೧೩ ರಾಮಚರಿತ ಮಾನಸ ಸುಂದರ ಕಾಂಡ (ಅರ್ಥಸಹಿತ)

೧೪ ಗಜೇಂದ್ರ ಮೋಕ್ಷ

೧೫ ಗೀತಾಮಹಾತ್ಮ್ಯದ ಕಥೆಗಳು

೧೬ ಈಶಾವಾಸ್ಯೋಪನಿಷತ್

೧೭ ವಾಲ್ಮೀಕೀಯ ಸಂಕ್ಷಿಪ್ತ ರಾಮಾಯಣ

೧೮ ರಾಮಚರಿತ ಮಾನಸ (ಮೂಲ ಅರ್ಥ ಸಹಿತ)

೧೯ ಸಾರ್ಥ ಜ್ಞಾನೇಶ್ವರಿ (ಮೂಲ ಅರ್ಥ ಸಹಿತ)

ಕಥಾ ಗ್ರಂಥಗಳು

೧. ಮಹಾಭಾರತದ ಕೆಲವು ಆದರ್ಶ ಪಾತ್ರಗಳು
೨. ರಾಮಾಯಣದ ಕೆಲವು ಆದರ್ಶ ಪಾತ್ರಗಳು
೩. ಶಿಕ್ಷಾಪ್ರದ ಹನ್ನೊಂದು ಕಥೆಗಳು
೪. ಭಕ್ತ ಬಾಲಕ
೫. ಸಾವಿತ್ರಿ ಸತ್ಯವಾನ್ ಮತ್ತು ಆದರ್ಶನಾರೀ ಸುಶೀಲಾ
೬. ಉಪಯೋಗೀ ಕಥೆಗಳು
೭. ರಾಮಭಕ್ತ ಹನುಮಾನ್
೮. ನಳದಮಯಂತಿ
೯. ಭಗವಂತನ ಐದು ಆವಾಸ ಸ್ಥಾನಗಳು
೧೦. ಆದರ್ಶ ಭಕ್ತ
೧೧. ಭಕ್ತ ಸಪ್ತರತ್ನ
೧೨. ಭಗವಾನ್ ಶ್ರೀಕೃಷ್ಣ
೧೩. ಗೋಸೇವೆಯ ಚಮತ್ಕಾರ
೧೪. ಭಕ್ತ ಚಂದ್ರಿಕಾ
೧೫. ಪ್ರೇಮಿ ಭಕ್ತರು
೧೬. ಭೀಷ್ಮ ಪಿತಾಮಹ
೧೭. ಕೃಷ್ಣ ಪ್ರೇಮಿ ಉದ್ಧವ
೧೮. ಮಹಾತ್ಮಾ ವಿದುರ
೧೯. ಭಕ್ತ ನರಸಿಂಹ ಮೆಹತಾ

ವರ್ಣಚಿತ್ರ ಕಥಾ

೧. ನವದುರ್ಗಾ
೨. ಓಂ ನಮಃ ಶಿವಾಯ

ಕಥಾ ಗ್ರಂಥಗಳು

೧. ಮಹಾಭಾರತದ ಕೆಲವು ಆದರ್ಶ ಪಾತ್ರಗಳು
೨. ರಾಮಾಯಣದ ಕೆಲವು ಆದರ್ಶ ಪಾತ್ರಗಳು
೩. ಶಿಕ್ಷಾಪ್ರದ ಹನ್ನೊಂದು ಕಥೆಗಳು
೪. ಭಕ್ತ ಬಾಲಕ
೫. ಸಾವಿತ್ರಿ ಸತ್ಯವಾನ್ ಮತ್ತು ಆದರ್ಶನಾರೀ ಸುಶೀಲಾ
೬. ಉಪಯೋಗೀ ಕಥೆಗಳು
೭. ರಾಮಭಕ್ತ ಹನುಮಾನ್
೮. ನಳದಮಯಂತಿ
೯. ಭಗವಂತನ ಐದು ಆವಾಸ ಸ್ಥಾನಗಳು
೧೦. ಆದರ್ಶ ಭಕ್ತ
೧೧. ಭಕ್ತ ಸಪ್ತರತ್ನ
೧೨. ಭಗವಾನ್ ಶ್ರೀಕೃಷ್ಣ
೧೩. ಗೋಸೇವೆಯ ಚಮತ್ಕಾರ
೧೪. ಭಕ್ತ ಚಂದ್ರಿಕಾ
೧೫. ಪ್ರೇಮಿ ಭಕ್ತರು
೧೬. ಭೀಷ್ಮ ಪಿತಾಮಹ
೧೭. ಕೃಷ್ಣ ಪ್ರೇಮಿ ಉದ್ಧವ
೧೮. ಮಹಾತ್ಮಾ ವಿದುರ
೧೯. ಭಕ್ತ ನರಸಿಂಹ ಮೆಹತಾ

ವರ್ಣಚಿತ್ರ ಕಥಾ

೧. ನವದುರ್ಗಾ
೨. ಓಂ ನಮಃ ಶಿವಾಯ